ಮಂಗಳವಾರ, ಏಪ್ರಿಲ್ 18, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 107 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಪರಿಪೂರ್ಣತೆಯ
ಗೀಳು ನಮ್ಮ ಸಾಧನೆಗೆ
ಅಡ್ಡಿಯಾಗದಿರಲಿ

ಆಳ-ಅಗಲ
ಪ್ರಧಾನಿಯ ಪದವಿ ಪ್ರಮಾಣ ಪತ್ರದ ಸುತ್ತ...

ಸಗಟು ಹಣದುಬ್ಬರ 29 ತಿಂಗಳ ಕನಿಷ್ಠ 11

ಜನಗಣತಿ ನಡೆಸಿ: ಪ್ರಧಾನಿಗೆ ಖರ್ಗೆ ಪತ್ರ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,911	17,707	₹60,550 (ಬೆಂಗಳೂರು)	₹77,300 (ಬೆಂಗಳೂರು)	82.01

ಕಮಲ ಪಕ್ಷದ 3ನೇ ಪಟ್ಟಿ ಬಿಡುಗಡೆ ◆ ಶೆಟ್ಟರ್ ವಿರುದ್ಧ ಟೆಂಗಿನಕಾಯಿ ◆ ಸಂಗಣ್ಣ ಕರಡಿ ಸೊಸೆ ಕಣಕ್ಕೆ ◆ ರಾಮದಾಸ್‌ಗೆ ಅವಕಾಶ ಇಲ್ಲ ◆ ಲಿಂಬಾವಳಿ ಬದಲು ಹೆಂಡತಿಗೆ ಅದೃಷ್ಟ

ವಂಶಾಡಳಿತ: ಬಿಜೆಪಿಗಿಲ್ಲ ಹಿಂಜರಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಿಸುವ ಮತ್ತು ನಾಯಕರ ಕುಟುಂಬದವರಿಗೆ ಟಿಕೆಟ್ ನೀಡುವ ಬಿಜೆಪಿಯ ಪ್ರವೃತ್ತಿ ಮುಂದುವರಿದಿದೆ. ಮತ್ತೆ 10 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಸೋಮವಾರ ಪ್ರಕಟಿಸಿರುವ ಬಿಜೆಪಿ, ಕೊಪ್ಪಳದಲ್ಲಿ ಸಂಸದ ಸಂಗಣ್ಣ ಕರಡಿ ಸೊಸೆ ಹಾಗೂ ಮಹದೇವಪುರದಲ್ಲಿ ಹಾಲಿ ಶಾಸಕ ಅರವಿಂದ ಲಿಂಬಾವಳಿ ಪತ್ನಿಗೆ ಮಣೆ ಹಾಕಿದೆ. ಆದರೆ, ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್‌.ಎ. ರಾಮದಾಸ್‌ಗೆ ಅವರಿಗೆ ಟಿಕೆಟ್ ನಿರಾಕರಿಸಿದೆ.

ಮೊದಲ ಪಟ್ಟಿಯಲ್ಲಿ ಎಂಟು ಶಾಸಕರಿಗೆ ಟಿಕೆಟ್ ನೀಡದೇ, ಹೊಸಮುಖಗಳಿಗೆ ಮಣೆ ಹಾಕಲಾಗಿತ್ತು. ಎರಡನೇ ಪಟ್ಟಿಯಲ್ಲಿ ಏಳು ಶಾಸಕರಿಗೆ ಟಿಕೆಟ್ ನಿರಾಕರಿಸಲಾಗಿತ್ತು. ಈ ಪಟ್ಟಿಗಳು ಬಿಡುಗಡೆಯಾದ ಬೆನ್ನಲ್ಲೇ ಬಂಡಾಯವೂ ಭುಗಿಲೆದ್ದಿತ್ತು. ಸ್ಪರ್ಧೆಗೆ ಅವಕಾಶ ಸಿಗದ ಕಾರಣಕ್ಕೆ ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ, ಎಂ.ಪಿ. ಕುಮಾರಸ್ವಾಮಿ, ನೆಹರೂ ಓಲೇಕಾರ್ ಸೇರಿದಂತೆ ಹಲವು ಮುಖಂಡರು ಪಕ್ಷ ತೊರೆದಿದ್ದರು. ಮೊದಲ ಎರಡು ಪಟ್ಟಿಗಳಲ್ಲಿ ಒಂದೇ ಕುಟುಂಬಕ್ಕೆ ಸೇರಿದ ಹಲವರಿಗೆ ಟಿಕೆಟ್ ನೀಡಲಾಗಿತ್ತು. ಮೂರನೇ ಪಟ್ಟಿಯಲ್ಲಿ ಈ ಪರಂಪರೆಯನ್ನು ಪಕ್ಷ ಮುಂದುವರಿಸಿದೆ. ಇನ್ನಷ್ಟು ನಾಯಕರು ಬಂಡಾಯ ಏಳುವುದನ್ನು ತಪ್ಪಿಸಲು ಮೂರನೇ ಪಟ್ಟಿ ಘೋಷಣೆಯ ವೇಳೆ ಪಕ್ಷವು ಎಚ್ಚರಿಕೆಯ ನಡೆ ಇಟ್ಟಿದೆ. ಇಬ್ಬರು ಹಾಲಿ ಶಾಸಕರಿಗೆ ಟಿಕೆಟ್ ಕೊಟ್ಟಿದೆ.

ಪಕ್ಷವು ಮೊದಲ ಪಟ್ಟಿಯಲ್ಲಿ 189 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿತ್ತು. ಎರಡನೇ ಪಟ್ಟಿಯಲ್ಲಿ 23 ಹುರಿಯಾಳುಗಳ ಹೆಸರನ್ನು ಘೋಷಿಸಲಾಗಿತ್ತು. ಕಮಲ ಪಾಳಯವು ಈ ವರೆಗೆ ಒಟ್ಟು 222 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ್ದು, ಮಾನ್ವಿ ಹಾಗೂ ಶಿವಮೊಗ್ಗ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಅಖೈರುಗೊಳಿಸಿಲ್ಲ.

6ನೇ ಪುಟ ನೋಡಿ

ಬಿಜೆಪಿ ಮೂರನೇ ಪಟ್ಟಿ

ಕ್ಷೇತ್ರ	ಅಭ್ಯರ್ಥಿ
ನಾಗಠಾಣ	ಸಂಜೀವ್ ಐಹೊಳೆ
ಸೇಡಂ	ರಾಜಕುಮಾರ್ ಪಾಟೀಲ
ಕೊಪ್ಪಳ	ಮಂಜುಳಾ ಅಮರೇಶ್
ರೋಣ	ಕಳಕಪ್ಪ ಬಂಡಿ
ಹುಬ್ಬಳ್ಳಿ–ಧಾರವಾಡ ಕೇಂದ್ರ	ಮಹೇಶ್ ಟೆಂಗಿನಕಾಯಿ
ಹಗರಿಬೊಮ್ಮನಹಳ್ಳಿ	ಬಿ.ರಾಮಣ್ಣ
ಹೆಬ್ಬಾಳ	ಕಟ್ಟಾ ಜಗದೀಶ್
ಗೋವಿಂದರಾಜ ನಗರ	ಉಮೇಶ್ ಶೆಟ್ಟಿ
ಮಹದೇವಪುರ	ಮಂಜುಳಾ ಅರವಿಂದ ಲಿಂಬಾವಳಿ
ಕೃಷ್ಣರಾಜ	ಶ್ರೀವತ್ಸ

ಮುಗಿಯದ ಬಂಡಾಯ– ಪಕ್ಷಾಂತರ

ಬೆಂಗಳೂರು: ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿ ಟಿಕೆಟ್ ಸಿಗದೇ ಬಂಡಾಯ ಘೋಷಿಸಿದವರು ಸೋಮವಾರವೂ ರಾಜೀನಾಮೆ ನೀಡಿ ಅನ್ಯ ಪಕ್ಷಗಳಿಗೆ ಸೇರುವ ಮೂಲಕ ತಮ್ಮ ಆಕ್ರೋಶವನ್ನು ಹೊರ ಹಾಕಿದರು.

ಬಿಜೆಪಿ ತನ್ನ ಮೂರನೇ ಪಟ್ಟಿಯನ್ನು ಅತ್ಯಂತ ಎಚ್ಚರಿಕೆಯಿಂದ ರೂಪಿಸಿದ ಕಾರಣ, ಸಂಭಾವ್ಯ ಬಂಡಾಯಕ್ಕೆ ಬಹುತೇಕ ಕಡಿವಾಣ ಹಾಕಿದೆ. ಟಿಕೆಟ್ ಕೈ ತಪ್ಪಿ ಬಂಡಾಯ ಸಾರಬಹುದಾದ ಶಾಸಕರು ಹೇಳಿದವರಿಗೇ ಟಿಕೆಟ್ ನೀಡಿ ಬಂಡಾಯ ಉಪಶಮನದ ಕಸರತ್ತು ನಡೆಸಿದೆ.

ಆದರೂ ಕೊಪ್ಪಳ ಕ್ಷೇತ್ರದ ಬಿಜೆಪಿ ಟಿಕೆಟ್ ಕೈ ತಪ್ಪಿದ್ದರಿಂದ ಸಿ.ವಿ.ಚಂದ್ರಶೇಖರ್ ಅವರು ಬಂಡಾಯ ಎದ್ದಿದ್ದಾರೆ. 'ಸಂಸದ ಸಂಗಣ್ಣ ಕರಡಿ ವರಿಷ್ಠರಿಗೆ ಬ್ಲಾಕ್‌ಮೇಲ್ ಮಾಡಿ ನನಗೆ ಟಿಕೆಟ್ ಸಿಗದಂತೆ ಮಾಡಿದ್ದಾರೆ. ಅವರ ತಂತ್ರಕ್ಕೆ ವರಿಷ್ಠರು ಕೂಡ ಮಣಿದಿದ್ದು ಬೇಸರವಾಗಿದೆ' ಎಂದು ಹೇಳಿರುವ ಅವರು ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿದ್ದಾರೆ. ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ರಾಮದಾಸ್ ಅವರು ತೀವ್ರ ಅಸಮಾಧಾನಗೊಂಡಿದ್ದಾರೆ.

ಪುಲಕೇಶಿ ನಗರದ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಕಾಂಗ್ರೆಸ್ ಟಿಕೆಟ್‌ಗಾಗಿ ಕಾದು ಯಾವುದೇ ಭರವಸೆ ಸಿಗದ ಕಾರಣ, ಪಕ್ಷಕ್ಕೆ ರಾಜೀನಾಮೆ ನೀಡಿ ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದರು. ಚಿತ್ತಾಪುರ ಕ್ಷೇತ್ರದ ಮಾಜಿ ಶಾಸಕ ವಿಶ್ವನಾಥ ಪಾಟೀಲ ಹೆಬ್ಬಾಳ ಬಿಜೆಪಿಗೆ ರಾಜೀನಾಮೆ ನೀಡಿದ್ದಾರೆ. ಈ ಕ್ಷೇತ್ರದಿಂದ ರೌಡಿ ಶೀಟರ್ ಮಣಿಕಂಠ ರಾಠೋಡಗೆ ಟಿಕೆಟ್ ನೀಡಿದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದ ವಿಶ್ವನಾಥ ಪಾಟೀಲ ಅವರು ಈಗಾಗಲೇ ಸಕ್ರಿಯರಾಗಿರುವ ಅರವಿಂದ ಚವ್ಹಾಣ ಅವರಿಗೆ ನೀಡಬೇಕು ಎಂದು ಮನವಿ ಮಾಡಿದ್ದರು. ಹೈಕಮಾಂಡ್ ನಿಲುವಿಗೆ ಬೇಸತ್ತು ರಾಜೀನಾಮೆ ನೀಡಿದ್ದಾರೆ. ವಿಶ್ವನಾಥ ಪಾಟೀಲ ಅವರು ಕಾಂಗ್ರೆಸ್ ಸೇರುವ ಸಾಧ್ಯತೆ ಇದೆ.

ವಿಧಾನ ಪರಿಷತ್ ಮಾಜಿ ಸದಸ್ಯ ಕರಿಯಣ್ಣ ಸಂಗಟಿ ಕಾಂಗ್ರೆಸ್ ಪಕ್ಷ ತೊರೆದು ಜನಾರ್ದನ ರೆಡ್ಡಿ ಅವರ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ ಸೇರ್ಪಡೆಗೊಂಡರು. ಬಳ್ಳಾರಿ ನಗರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಮಾಜಿ ಶಾಸಕ ಅನಿಲ್ ಲಾಡ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ.

'ಕೈ' ಹಿಡಿದ ತಕ್ಷಣವೇ ಶೆಟ್ಟರ್‌ಗೆ ಬಿ–ಫಾರಂ

ಬೆಂಗಳೂರು: ಬಿಜೆಪಿ ತ್ಯಜಿಸಿ ಕಾಂಗ್ರೆಸ್ ಪಕ್ಷಕ್ಕೆ ಸೋಮವಾರ ಸೇರಿದ ಜಗದೀಶ ಶೆಟ್ಟರ್ ಅವರಿಗೆ ಪಕ್ಷ ಸೇರ್ಪಡೆ ವೇದಿಕೆಯಲ್ಲೇ ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದ ಬಿ–ಫಾರಂ ನೀಡಲಾಯಿತು.

ಶಾಸಕ ಸ್ಥಾನಕ್ಕೆ ಭಾನುವಾರ ರಾಜೀನಾಮೆ ನೀಡಿದ್ದ ಶೆಟ್ಟರ್, ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ನೀಡಿದ್ದಲ್ಲದೇ, ತಮ್ಮ ಮೂರು ದಶಕದ ಬಿಜೆಪಿ ಜತೆಗಿನ ನಂಟಿಗೆ ವಿದಾಯ ಹಾಡಿದರು.

ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಪತ್ರವನ್ನು ತಮ್ಮ ಆಪ್ತ ಸಹಾಯಕರ ಮೂಲಕ ಭಾನುವಾರ ರಾತ್ರಿಯೇ ಬಿಜೆಪಿ ಕಚೇರಿಗೆ ರವಾನಿಸಿದ್ದ ಶೆಟ್ಟರ್, ಕೆಪಿಸಿಸಿ ಕಚೇರಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಮ್ಮುಖದಲ್ಲಿ 'ಕೈ' ಹಿಡಿದರು. ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಇದ್ದರು.

ಸೋಮವಾರ 842 ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಾಮಪತ್ರ ಸಲ್ಲಿಕೆ ಬಿರುಸಾಗಿದ್ದು, ಸೋಮವಾರ ಒಂದೇ ದಿನ 842 ಮಂದಿ ನಾಮಪತ್ರ ಸಲ್ಲಿಸಿದ್ದಾರೆ. ವಿವಿಧ ಪಕ್ಷಗಳ ಘಟಾನುಘಟಿ ನಾಯಕರು ಅಖಾಡಕ್ಕೆ ಧುಮುಕಿರುವುದರಿಂದ ಚುನಾವಣಾ ಕಣ ರಂಗೇರುತ್ತಿದೆ.

ಗುರುವಾರದಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿತ್ತು. ಸರ್ಕಾರಿ ರಜಾ ದಿನಗಳ ಕಾರಣದಿಂದ ಎರಡು ದಿನ ಮಾತ್ರ ನಾಮಪತ್ರ ಸಲ್ಲಿಕೆಗೆ ಅವಕಾಶ ಲಭಿಸಿತ್ತು. ಮೊದಲ ದಿನ 221 ಮಂದಿ ನಾಮಪತ್ರ ಸಲ್ಲಿಸಿದ್ದರೆ, ಎರಡನೇ ದಿನವಾದ ಶನಿವಾರ 200 ನಾಮಪತ್ರ ಸಲ್ಲಿಕೆಯಾಗಿದ್ದವು. ಮೊದಲ ಎರಡು ದಿನ ನಾಮಪತ್ರ ಸಲ್ಲಿಸಿದ್ದವರೂ ಸೇರಿದಂತೆ 782 ಪುರುಷರು ಮತ್ತು 60 ಮಹಿಳೆಯರು ಸೋಮವಾರ ಉಮೇದುವಾರಿಕೆ ಸಲ್ಲಿಸಿದರು.

ಬಿಜೆಪಿಯ 198, ಕಾಂಗ್ರೆಸ್‌ನ 195, ಜೆಡಿಎಸ್‌ನ 86, ಆಮ್ ಆದ್ಮಿ ಪಕ್ಷದ 50, ಬಹುಜನ ಸಮಾಜವಾದಿ ಪಕ್ಷದ 17 ಅಭ್ಯರ್ಥಿಗಳು ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ. ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳಿಂದ 134 ಮಂದಿ ಮತ್ತು 161 ಮಂದಿ ಪಕ್ಷೇತರರೂ ಕಣಕ್ಕಿಳಿದಿದ್ದಾರೆ.

6ನೇ ಪುಟ ನೋಡಿ



ಜನಾರ್ದನ ರೆಡ್ಡಿ, ನಾಗೇಂದ್ರಗೆ ಕೋರ್ಟ್ ಸಮನ್ಸ್ 5

ಮುಕ್ತ ವ್ಯಾಪಾರ ವಹಿವಾಟು ಭಾರತ, ರಷ್ಯಾ ಮಾತುಕತೆ 11

'ಕಳವು ತಪ್ಪಿಸಲು 150 ಸೀಟು ಗೆಲ್ಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತಂತ್ರ ಜನಮತ ಬಂದರೆ ಕಾಂಗ್ರೆಸ್ ಶಾಸಕರನ್ನು ಕದ್ದೊಯ್ಯಬೇಕಾಗುತ್ತದೆ. ತನಿಖಾ ಸಂಸ್ಥೆಗಳಿಂದ ಬೆದರಿಸಬೇಕಾಗುತ್ತದೆ. ಈ ಕಾರಣಕ್ಕೆ ಬಿಜೆಪಿಗೆ ಪೂರ್ಣ ಬಹುಮತ ಕೊಡಿ' ಎಂದು ಮತದಾರರಿಗೆ ಅಮಿತ್ ಶಾ ಹೇಳಿದ್ದಾರೆ. ಅದಕ್ಕೆ ನಾವು, ನಮಗೆ 150ಕ್ಕೂ ಹೆಚ್ಚು ಸೀಟು ಕೊಡಿ ಎಂದು ಮನವಿ ಮಾಡುತ್ತಿದ್ದೇವೆ. ಅವರು ಒಂದೆರಡು ಕಳ್ಳತನ ಮಾಡಿದರೂ ಸರ್ಕಾರ ಉಳಿಸಿಕೊಳ್ಳಬಹುದಲ್ಲವೇ?'

– ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮಾತಿದು.

'ಪ್ರಜಾವಾಣಿ'ಗೆ ಸೋಮವಾರ ನೀಡಿದ ಸಂದರ್ಶನದಲ್ಲಿ ಅವರು, 'ನಮ್ಮ ಶಾಸಕರನ್ನು ಕದ್ದು, ಒಯ್ದು ಸರ್ಕಾರ ಮಾಡಿದ ಶಾ ಅವರಿಗೆ ಈ ಬಾರಿಯೂ ಅತಂತ್ರ ವಿಧಾನಸಭೆ ಸೃಷ್ಟಿಯಾದರೆ ಮತ್ತೆ ಕಳ್ಳತನ ಮಾಡಬೇಕಾಗುತ್ತದೆ ಎಂದು ಅನಿಸಿದೆ. ಅದಕ್ಕೆ, ಪೂರ್ಣ ಬಹುಮತ ಕೊಡಿ ಎನ್ನುತ್ತಿದ್ದಾರೆ. ಜನ ಅದಕ್ಕೆ ಅವಕಾಶ ಕೊಡುವುದಿಲ್ಲ' ಎಂದರು.

'ಈ ಬಾರಿ ಅತಂತ್ರ ವಿಧಾನಸಭೆ ಮಾಡಬೇಡಿ ಎಂದು ಅಮಿತ್ ಶಾ ಮನವಿ ಮಾಡಿದ್ದಾರೆ. ಆದರೆ, ಕಾಂಗ್ರೆಸ್ಸಿನ ಯಾವ ನಾಯಕರೂ ಈ ಬೇಡಿಕೆ ಇಟ್ಟಿಲ್ಲವಲ್ಲ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಖರ್ಗೆ, 'ಅಕ್ಕಪಕ್ಕದಲ್ಲಿ ಕಳ್ಳರು ಇದ್ದಾರೆಂದು ಗೊತ್ತಾದ ಮೇಲೆ ನಾವೂ ಹುಷಾರಾಗಿ ಇರಬೇಕಿದೆ. ಜೋಪಾನ ಮಾಡಿಕೊಳ್ಳಬೇಕಾಗಿದೆ. ಎಲ್ಲ ಬಿಗಿ ಮಾಡಿಕೊಂಡು ಇಟ್ಟುಕೊಳ್ಳಬೇಕೆಂದು ಈಗಿನಿಂದಲೇ ಎಚ್ಚರ ವಹಿಸಿದ್ದೇವೆ' ಎಂದರು.

'ಈಗಾಗಲೇ 210 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡಿದ್ದೇವೆ. ಅಲ್ಲಿ (ಬಿಜೆಪಿ) ಇರುವಷ್ಟು ಗೊಂದಲ, ಗದ್ದಲ ನಮ್ಮಲ್ಲಿ ಇಲ್ಲ. ಹಾಗೆಂದು, ಇಲ್ಲವೆಂದಲ್ಲ. ಎಲ್ಲೋ ಒಂದೆರಡು ಕಡೆ ಇದೆ. ಟಿಕೆಟ್ ಹಂಚಿಕೆ ಕೆಲಸವನ್ನು ಎಲ್ಲರೂ ಕೂಡಿ ಮಾಡಿರುವುದರಿಂದ ಚುನಾವಣೆ ಗೆಲ್ಲುವ ವಿಶ್ವಾಸ ಮೂಡಿದೆ. ನಮ್ಮ ನಾಯಕರೆಲ್ಲ ಹೊಂದಾಣಿಕೆ ಮಾಡಿಕೊಂಡು, ಪ್ರತಿಷ್ಠೆಗಳನ್ನು ಮರೆತು ಕೆಲಸ ಮಾಡುತ್ತಿದ್ದಾರೆ' ಎಂದೂ ಖುಷಿ ಹಂಚಿಕೊಂಡರು.

ಸಂದರ್ಶನ 7

ಸಲಿಂಗ ಮದುವೆ: ಅರ್ಜಿ ವಿಚಾರಣೆಗೆ ಕೇಂದ್ರದ ವಿರೋಧ

ನವದೆಹಲಿ (ಪಿಟಿಐ): ಸಲಿಂಗ ಮದುವೆಗೆ ಮಾನ್ಯತೆ ನೀಡಬೇಕು ಎಂದು ಕೋರಿರುವ ಅರ್ಜಿಗಳು ನಗರಗಳಲ್ಲಿ ನೆಲೆಸಿರುವ ಒಂದು ವರ್ಗದ ಜನರ ಮನಃಸ್ಥಿತಿಯಾಗಿದೆ. ಮದುವೆಗೆ ಮಾನ್ಯತೆ ನೀಡುವುದು ಶಾಸಕಾಂಗದ ಕೆಲಸ. ಹಾಗಾಗಿ, ಇಂತಹ ವಿಚಾರಗಳಲ್ಲಿ ತೀರ್ಪು ನೀಡುವುದರಿಂದ ನ್ಯಾಯಾಲಯವು ಹಿಂದಕ್ಕೆ ಸರಿಯಬೇಕು ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸೋಮವಾರ ಹೇಳಿದೆ.

ಈ ಅರ್ಜಿಗಳು ವಿಚಾರಣೆಗೇ ಅರ್ಹವಲ್ಲ. ಸಾಮಾಜಿಕ ಸ್ವೀಕೃತಿಯನ್ನು ಪಡೆದುಕೊಳ್ಳುವ ಉದ್ದೇಶದಿಂದ ಈ ಅರ್ಜಿಗಳನ್ನು ಸಲ್ಲಿಸಲಾಗಿದೆ ಎಂದು ಕೇಂದ್ರವು ವಾದಿಸಿದೆ.

'ಗ್ರಾಮೀಣ, ಅರೆ ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನರ ನಿಲುವುಗಳು, ಧಾರ್ಮಿಕ ನಿಲುವುಗಳು, ವೈಯಕ್ತಿಕ ಕಾನೂನುಗಳು, ಮದುವೆಗೆ ಸಂಬಂಧಿಸಿದ ಪದ್ಧತಿಗಳು, ಇತರ ಕಾನೂನುಗಳ ಮೇಲೆ ಈ ಕಾನೂನು (ಸಲಿಂಗ ಮದುವೆ ಮಾನ್ಯತೆ) ಬೀರಬಹುದಾದ ಪರಿಣಾಮಗಳ ಕುರಿತು ಶಾಸಕಾಂಗವು ವಿಸ್ತಾರ ನೆಲೆಯಲ್ಲಿ ಚಿಂತಿಸಿ, ಕ್ರಮ ಕೈಗೊಳ್ಳಲಿದೆ' ಎಂದು ಕೇಂದ್ರ ಹೇಳಿದೆ.

ಸರ್ಕಾರವು ಸಲ್ಲಿಸಿದ ಪ್ರಮಾಣಪತ್ರದಲ್ಲಿ ಇದನ್ನು ವಿವರಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠವು ಈ ಅರ್ಜಿಗಳ ವಿಚಾರಣೆ ನಡೆಸುತ್ತಿದೆ. ವಿಚಾರಣೆಯು ಮಂಗಳವಾರವೂ ಮುಂದುವರಿಯಲಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪ್ರಜಾ ಮತ

ಜನತಂತ್ರದ ಹಬ್ಬ

ಶೆಟ್ಟರ್ ಸ್ವಾಗತಿಸುವಾಗ ಕಣ್ಣೀರಿಟ್ಟ ಪತ್ನಿ ಶಿಲ್ಪಾ 6

'ನಾಯಕತ್ವವು ಸ್ಥಾನದಿಂದ ಬರಲ್ಲ' 6

ಶೆಟ್ಟರ್ ಸೇರ್ಪಡೆಯಿಂದ 'ಕೈ'ಗೆ ಬಲ– ಖರ್ಗೆ 6

ಎಂಟು ಪಟ್ಟು ಏರಿದ ಅಬಕಾರಿ ಸಚಿವರ ಆಸ್ತಿ! 6

#GetYourSelfPlaced™

First Choice
For the Brightest of Minds

GALGOTIAS UNIVERSITY

offers edge to its students with **Top-Notch Placements, World Class Research Environment & Academic Excellence**

₹1.5 CRORE	₹44 LACS	₹36 LACS	₹33 LACS
OpenZeppelin	Microsoft	AUTODESK	COMMVAULT
Record Breaking Package			
Suryansh Pratap B.Tech, CSE Student	**Guru Prakash Singh** B.Tech, CSE Student	**Tanishk Merothiya** B.Tech, CSE Student	**Sakshi Gaur** B.Tech, CSE Student

We are committed to **carry forward the vision** of our Visionary Honourable Prime Minister **Shri Narendra Modi Ji** of **making India a Vishvaguru** and the dream of our Dynamic Honourable Chief Minister of Uttar Pradesh **Shri Yogi AdityaNath Ji** for making the **State of UP a truly Global Knowledge Superpower.**

ADMISSION OPEN 2023-24 for CAREER-FOCUSED UG / PG / Ph.D. DEGREES in

- Computing Science and Engineering
- Electrical Engineering
- Electronics & Communication Engineering
- Mechanical Engineering
- Civil Engineering
- Design
- Education
- Nursing
- Liberal Education
- Media and Communications Studies
- Law
- Agriculture
- Basic & Applied Science
- Finance & Commerce
- Pharmacy
- Medical & Allied Sciences
- Business
- Hospitality & Tourism
- Polytechnic

GALGOTIAS UNIVERSITY
(Under the Uttar Pradesh Private Universities Act No. 12 of 2019)

For the complete list of programmes offered and to apply online visit:
https://admissions.galgotiasuniversity.edu.in
www.galgotiasuniversity.edu.in

Scan to know more

Plot No.2, Sector 17-A,
Yamuna Expressway, Greater Noida,
Gautam Buddh Nagar, Uttar Pradesh, India.

Call @ 0120-4370000,
+91-97173 00418, +91-95828 47072
+91 99710 26125

NAAC A+
Accreditation in First Cycle

This makes Galgotias University the **only private university in Uttar Pradesh** with the **highest NAAC score** and the **second highest amongst state private universities in the entire country** with a NAAC score of 3.37 out of 4 awarded by NAAC in the **First Cycle of NAAC Accreditation.**

Strategic Location

Galgotias University is located in the **midst of a Commercial/Industrial hub** & is located minutes away from upcoming **Noida International Airport.** The strategic location will help students gain access to opportunities as new investments to the tune of **35 Lakh Crore are planned, which shall create over 25 Lakh jobs in the Greater Noida region alone.**

Record Breaking Placements

Galgotias University has **broken all previous records** for placements with **800+ recruiters** giving Galgotias students multiple job offers: some of the recruiters are Infosys, Cognizant, Wipro and more.

Research Excellence & Awards

Galgotias University **Ranked Top 5 in India** as per the Indian Patent office Report for Academic Institutes and Universities, **filled 417 patents**

Galgotias University **Ranked in PLATINUM BAND (GRADE A++)** for **Institution of Academic Excellence** OBE Rankings 2022

Grade PLATINUM BAND A++ OBE RANKINGS 2022

Achieves excellence in quality education, & implementation of the latest teaching-learning methodologies, including the outcome-based education models.

The **Highest Benchmark** of **Academic Excellence, Placements & Research** for **Computer Science Engineering, Mechanical Engineering, Electronics & Communications, Engineering, B.Pharm** and **MBA**

NBA National Board of Accreditation — ACCREDITED Tier 1

Students who graduate in the above mentioned NBA accredited programmes during the validity period of accreditation will be deemed to have graduated with an NBA accredited degree.

Galgotias University **Ranked #59 in India** (Pharmacy Category) by NIRF (National Institutional Ranking Framework) 2022

#93 Management **#147** Engineering

TOP RANKED BY INDIA TODAY

Galgotias University **Ranked#1** in India in Academic and Research Excellence as per India Today - **MDRA Best Universities Survey 2022.**

Galgotias University **School of Law Ranked #3** in India in Academic Excellence by **INDIA TODAY-MDRA Survey - July 2022**

Galgotias University has been listed in the Band **"Excellent" for "Innovation & Entrepreneurship Development".** Under University & Deemed to be University (Private / Self Financed) (Technical) in the AIIRA Ranking 2021.

ARIIA — Atal Ranking of Institutions on Innovation Achievements

Ranking#2 in Uttar Pradesh **Ranking#46** in India

Thank You India! for your **continuous trust** in us, **Yet another milestone in our glorious success story.**

राष्ट्रीय परीक्षा एजेंसी National Testing Agency

Galgotias University is amongst **top 8 most preferred universities** in the country as per **CUET (Common University Entrance Test) applications.** Galgotias University **received record breaking 399,373 applications.**

School of Business Galgotias University **Ranked#2 in North India by TOP B-Schools Under Private Universities (Zonewise)**

OPEN

Galgotias University has been awarded **IAR-Placement Audit (5 stars) indicating HIGHEST performance capability in placing its students.**

Infomerics Analytics & Research

Galgotias University, School of Hospitality & Tourism, India is ranked among the **TOP 50 Best Hospitality and Hotel Management Schools** in the World for 2023 as per CEOWORLD, USA

CEOWORLD Magazine

Galgotias University awarded as the star performing institute in internships with an **All India 6th Rank in AICTE - EduSkills virtual internship programme 2022.**

EduSkills Nation Building Through Skills

National Employability Award 2023 (AMCAT Test) for School of Computing Science and Engineering, Galgotias University on account of students performance being among the top 10% Nationally.

ಪ್ರಜಾವಾಣಿ @75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ರೈಸ್ ಪುಲ್ಲಿಂಗ್ ಹೆಸರಿನಲ್ಲಿ ₹ 2.88 ಕೋಟಿ ವಂಚನೆ

ಮಾಜಿ ಕಾನ್‌ಸ್ಟೆಬಲ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಸ್ ಪುಲ್ಲಿಂಗ್ ಹೆಸರಿನಲ್ಲಿ ತಾಮ್ರದ ಚೆಂಬು ತೋರಿಸಿ ಜನರಿಂದ ₹ 2.88 ಕೋಟಿ ಪಡೆದು ವಂಚಿಸುತ್ತಿದ್ದ ಮಾಜಿ ಕಾನ್‌ಸ್ಟೆಬಲ್ ಸೇರಿದಂತೆ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ವಿಜಯನಗರದ ವಿ.ಆರ್. ನಟೇಶ್ ಅಲಿಯಾಸ್ ವೆಂಕಟರಮಣ (44), ಬಿಡದಿಯ ವೆಂಕಟೇಶ್ (47) ಹಾಗೂ ಸೋಮಶೇಖರ್ (47) ಬಂಧಿತರು. ಇವರಿಂದ ಕಪ್ಪುಬಣ್ಣದ ಚೆಂಬು, 1 ಕೆ.ಜಿ 332 ಗ್ರಾಂ ಚಿನ್ನಾಭರಣ ಹಾಗೂ ಮೂರು ಕಾರು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಆರೋಪಿ ನಟೇಶ್, ನಗರ ಸಶಸ್ತ್ರ ಮೀಸಲು (ಸಿಎಆರ್) ಪೊಲೀಸ್ ಪಡೆಯಲ್ಲಿ ಕಾನ್‌ಸ್ಟೆಬಲ್ ಆಗಿ

ಸಿಸಿಬಿ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ಚೆಂಬು

ಕೆಲಸ ಮಾಡುತ್ತಿದ್ದ. ಕೆಲ ವರ್ಷಗಳ ಹಿಂದೆಯಷ್ಟೇ ಸ್ವಯಂ ನಿವೃತ್ತಿ ಪಡೆದಿದ್ದ. ಹೆಚ್ಚು ಹಣ ಸಂಪಾದನೆಗಾಗಿ ಲಾರಿ ಚಾಲಕ ವೆಂಕಟೇಶ್, ಆಟೊ ಚಾಲಕ ಸೋಮಶೇಖರ್ ಹಾಗೂ ಇತರರ ಜೊತೆ ಸೇರಿ ತಂಡ ಕಟ್ಟಿಕೊಂಡಿದ್ದ.'

'ತಾಮ್ರದ ಚೆಂಬು ಹಾಗೂ ಇತರೆ ಸಲಕರಣೆಗಳನ್ನು ತಮ್ಮ ಬಳಿ ಇರಿಸಿಕೊಂಡಿದ್ದ ಆರೋಪಿಗಳು, ಅವುಗಳನ್ನು ಜನರಿಗೆ ತೋರಿಸಿ ನಂಬಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಸಿಡಿಲು ಬಡಿದು ಕಪ್ಪು ಬಣ್ಣಕ್ಕೆ ತಿರುಗಿರುವ ಹಾಗೂ ಹಿಡಿಕೆ ಉದ್ದವಾಗಿರುವ ತಾಮ್ರದ ಚೆಂಬು ನಮ್ಮ ಬಳಿ ಇದೆ. ಇದಕ್ಕೆ ವಿದೇಶದಲ್ಲಿ ನೂರಾರು ಕೋಟಿ ರೂಪಾಯಿ ಬೆಲೆ ಇದೆ. ವಿದೇಶಕ್ಕೆ ಕಳುಹಿಸುವ ಮುನ್ನ ಕೆಲ ಪರೀಕ್ಷೆಗಳನ್ನು ಮಾಡಿಸಬೇಕು. ಅದಕ್ಕಾಗಿ ವಿದೇಶದಿಂದ ಪರಿಣಿತ ವಿಜ್ಞಾನಿಗಳನ್ನು ನಗರಕ್ಕೆ ಕರೆಸಬೇಕು. ಈ ಪ್ರಕ್ರಿಯೆಗೆ ಹಣ ಖರ್ಚಾಗುತ್ತದೆ. ನಿಮ್ಮ ಬಳಿ ಇರುವ ಹಣವನ್ನು ನೀಡಿದರೆ, ಚೆಂಬು ಮಾರಿದ ಬಳಿಕ ದುಪ್ಪಟ್ಟು ಹಣ ನೀಡುತ್ತೇವೆ' ಎಂಬುದಾಗಿ ಆರೋಪಿಗಳು ಜನರಿಗೆ ತಿಳಿಸುತ್ತಿದ್ದರು.'

'ಆರೋಪಿ ಮಾತು ನಂಬಿದ್ದ ಹಲವರು, ₹ 10 ಲಕ್ಷದಿಂದ ₹ 30 ಲಕ್ಷದವರೆಗೂ ಹಣ ನೀಡಿದ್ದರು. ಅದನ್ನು ಪಡೆದ ನಂತರ ಆರೋಪಿಗಳು ನಾಪತ್ತೆಯಾಗುತ್ತಿದ್ದರು. ಇವರ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಇತ್ತೀಚೆಗೆ ಪ್ರಕರಣ ದಾಖಲಾಗಿತ್ತು. ಇದರ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದು ಪೊಲೀಸರು ತಿಳಿಸಿದರು.

'ನಂಜನಗೂಡು, ಕೋಣನಕುಂಟೆ, ಮಾದನಾಯಕನಹಳ್ಳಿ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಕೃತ್ಯ ಎಸಗಿದ್ದರು. ಈ ಸಂಬಂಧ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ವಂಚನೆಯಿಂದ ಬಂದಿದ್ದ ಹಣದಲ್ಲಿ ಆರೋಪಿಗಳು, ಕಾರು ಹಾಗೂ ಚಿನ್ನಾಭರಣ ಖರೀದಿಸಿದ್ದರು' ಎಂದು ಹೇಳಿದರು.

ವೀರಪ್ಪನ್ ಸಹಚರ ನಿಮ್ಹಾನ್ಸ್‌ನಲ್ಲಿ ಸಾವು

ಬೆಂಗಳೂರು: ತಮಿಳುನಾಡಿನ ಪಾಲಾರ್ ನಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿ 34 ವರ್ಷಗಳಿಂದ ಮೈಸೂರು ಜೈಲಿನಲ್ಲಿದ್ದ ವೀರಪ್ಪನ್ ಸಹಚರ ಮೀಸೆಕಾರ್ ಮಾದಯ್ಯ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಭಾನುವಾರ ಅಸುನೀಗಿದ್ದಾನೆ.

'ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಮಾದಯ್ಯನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನಿಂದ ನಿಮ್ಹಾನ್ಸ್ ಆಸ್ಪತ್ರೆಗೆ ಇತ್ತೀಚೆಗೆ ಸ್ಥಳಾಂತರಿಸಲಾಗಿತ್ತು. ಆಸ್ಪತ್ರೆಯಲ್ಲಿ ಅವರು ತೀರಿಕೊಂಡಿದ್ದು, ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಸಂಬಂಧಿಕರಿಗೆ ಸೋಮವಾರ ಹಸ್ತಾಂತರಿಸಲಾಗಿದೆ' ಎಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೂಲಗಳು ತಿಳಿಸಿವೆ.

'ಪಾಲಾರ್ ನಲ್ಲಿ 1993ರಲ್ಲಿ ವೀರಪ್ಪನ್ ಹಾಗೂ ಆತನ ಸಹಚರರು ನಡೆಸಿದ್ದ ಬಾಂಬ್ ಸ್ಫೋಟದಲ್ಲಿ ವಿಶೇಷ ಕಾರ್ಯಪಡೆಯ ಅಧಿಕಾರಿ ಗೋಪಾಲಕೃಷ್ಣನ್ ಸೇರಿದಂತೆ 22 ಮಂದಿ ಮೃತಪಟ್ಟಿದ್ದರು. ಇದೇ ಪ್ರಕರಣದಲ್ಲಿ ಮೀಸೆಕಾರ್ ಮಾದಯ್ಯನನ್ನು ಬಂಧಿಸಲಾಗಿತ್ತು. ಈತನಿಗೆ ಗಲ್ಲು ಶಿಕ್ಷೆಯಾಗಿತ್ತು. ಇದನ್ನು ಪ್ರಶ್ನಿಸಿ ಮಾದಯ್ಯ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಜೀವಾವಧಿ ಶಿಕ್ಷೆಯಾಗಿ ಮಾರ್ಪಡಿಸಿತ್ತು' ಎಂದು ಹೇಳಿವೆ.

ಹಣ ಹೊಂದಿಸಲು ಪರದಾಟ: 'ಮೀಸೆಗಾರ್ ಮಾದಯ್ಯ ಮೃತದೇಹ ತೆಗೆದುಕೊಂಡು ಹೋಗಲು ತಮಿಳುನಾಡಿನ ಈರೋಡ್‌ನಿಂದ ಸಂಬಂಧಿಕರು ಬಂದಿದ್ದರು. ಆದರೆ, ಮೃತದೇಹ ಸಾಗಿಸಲು ಅಗತ್ಯವಿದ್ದ ಹಣ ಅವರ ಬಳಿ ಇರಲಿಲ್ಲ. ಆಸ್ಪತ್ರೆ ಆವರಣದಲ್ಲಿದ್ದ ಹಲವರ ಬಳಿ ಹಣಕ್ಕಾಗಿ ಬೇಡಿಕೊಂಡರು. ಕೆಲವರು ಹಣದ ಸಹಾಯ ಮಾಡಿದರು. ನಂತರವೇ ಅವರು ಮೃತದೇಹ ಕೊಂಡೊಯ್ದರು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ

ಬೆಂಗಳೂರು: ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿದ್ದು, ವಿನೋದ್ ರಾಥೋಡ್ ಎಂಬುವವರು ಗಾಯಗೊಂಡಿದ್ದಾರೆ. ಮನೆಯ ಗೋಡೆಗಳು ಕುಸಿದುಬಿದ್ದಿವೆ.

'ಭದ್ರಪ್ಪ ಬಡಾವಣೆಯ 5ನೇ ಅಡ್ಡರಸ್ತೆ ನಿವಾಸಿ ವಿನೋದ್ ಮನೆಯಲ್ಲಿ ಸೋಮವಾರ ಸ್ಫೋಟ ಸಂಭವಿಸಿದೆ. ಗಾಯಗೊಂಡಿರುವ ವಿನೋದ್ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ' ಎಂದು ಪೊಲೀಸರು ಹೇಳಿದರು.

'ಅಡುಗೆ ಕೋಣೆಯಲ್ಲಿ ಬೆಳಿಗ್ಗೆಯಿಂದಲೇ ನಿಧಾನವಾಗಿ ಅನಿಲ ಸೋರಿಕೆಯಾಗುತ್ತಿತ್ತು ಎಂಬುದು ಗೊತ್ತಾಗಿದೆ. ಇದು ವಿನೋದ್ ಗಮನಕ್ಕೆ ಬಂದಿರಲಿಲ್ಲ. ಬೆಳಿಗ್ಗೆ 7 ಗಂಟೆ ಸುಮಾರಿಗೆ ಏಕಾಏಕಿ ಸ್ಫೋಟ ಸಂಭವಿಸಿ, ಬೆಂಕಿ ಹೊತ್ತಿಕೊಂಡಿತ್ತು. ವಿನೋದ್ ಅವರಿಗೆ ಬೆಂಕಿ ತಾಗಿತ್ತು. ಅವರ ಕೂಗಾಟ ಕೇಳಿ ಮನೆಯೊಳಗೆ ಹೋಗಿದ್ದ ಸ್ಥಳೀಯರು, ರಕ್ಷಣೆ ಮಾಡಿ ಆಸ್ಪತ್ರೆಗೆ ದಾಖಲಿಸಿದ್ದಾರೆ.'

'ಸ್ಫೋಟದಿಂದಾಗಿ ಕೋಣೆಯ ಎರಡು ಗೋಡೆಗಳು ಕುಸಿದು ಬಿದ್ದಿವೆ. ಕೆಲ ಗೋಡೆಗಳು ಬಿರುಕು ಬಿಟ್ಟು ವಾಲಿವೆ. ಅಡುಗೆ ಮನೆಯಲ್ಲಿದ್ದ ವಸ್ತುಗಳು ಹಾಗೂ ಪೀಠೋಪಕರಣಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಘಟನೆ ಬಗ್ಗೆ ಮನೆ ಮಾಲೀಕರಿಂದ ದೂರು ಪಡೆದು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.



ಸ್ಫೋಟದಿಂದ ಕುಸಿದುಬಿದ್ದಿರುವ ಮನೆ ಗೋಡೆಗಳು ಹಾಗೂ ಚೆಲ್ಲಾಪಿಲ್ಲಿಯಾಗಿರುವ ವಸ್ತುಗಳು

30ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿಯಾದ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಮಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮನೆಗಳಿಗೆ ನುಗ್ಗಿ ಚಿನ್ನಾಭರಣ ಕಳವು ಸೇರಿದಂತೆ 30ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿಯಾದ ಆರೋಪಿ ಮೈಸೂರಿನ ಮೇಟಗಳ್ಳಿಯ ಸಿದ್ಧರಾಜು (52) ಎಂಬಾತನನ್ನು ನಗರ ಅಪರಾಧ ಪತ್ತೆ ವಿಭಾಗದ (ಸಿಸಿಬಿ) ಪೊಲೀಸರು ಬಂಧಿಸಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದ ನಗರ ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಆರ್ ಜೈನ್, 'ನಗರದ ಕಾವೂರು ಠಾಣೆಯ ವ್ಯಾಪ್ತಿಯ ಮನೆಯೊಂದರಲ್ಲಿ 2022ರ ಜೂನ್‌ನಲ್ಲಿ ನಡೆದ ಕಳವು ಪ್ರಕರಣ ಸಂಬಂಧ ಸಿಸಿಬಿ ಪೊಲೀಸರು ಆರೋಪಿಯನ್ನು ಬೆಂಗಳೂರಿನ ಹೊರವಲಯದಲ್ಲಿ ಬಂಧಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ಆಗುಂಬೆ, ತೀರ್ಥಹಳ್ಳಿ, ಮಾಲೂರು, ಕಾರ್ಗಲ್ ಸೇರಿದಂತೆ 8 ಕಡೆ ನಡೆದಿದ್ದ ಕಳವು ಪ್ರಕರಣಗಳು, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಹರಿಹರಪುರ, ಉಡುಪಿ ಜಿಲ್ಲೆಯ ಮಣಿಪಾಲ ಮತ್ತು ಕಾರ್ಕಳದಲ್ಲಿ ನಡೆದಿದ್ದ ಕಳವು ಪ್ರಕರಣಗಳಲ್ಲಿ ಆರೋಪಿ ಭಾಗಿಯಾಗಿದ್ದಾನೆ. ಈ 13 ಪ್ರಕರಣಗಳಲ್ಲಿ ಒಟ್ಟು 400 ಗ್ರಾಂ ಚಿನ್ನಾಭರಣಗಳು ಕಳವಾಗಿದ್ದವು. ಅದರಲ್ಲಿ 270 ಗ್ರಾಂ ಚಿನ್ನಾಭರಣಗಳನ್ನು, ಕೃತ್ಯಕ್ಕೆ ಬಳಸಿದ್ದ ಬೈಕ್ ಹಾಗೂ ಎರಡು ಮೊಬೈಲ್‌ಗಳನ್ನು ಆರೋಪಿಯಿಂದ ವಶಪಡಿಸಿಕೊಂಡಿದ್ದೇವೆ. ಇವುಗಳ ಅಂದಾಜು ಮೌಲ್ಯ ₹ 15 ಲಕ್ಷ' ಎಂದರು.

ಸಿದ್ಧರಾಜು

'ಆರೋಪಿಯು ಮೈಸೂರು ವಿಜಯ ನಗರ ಠಾಣಾ ವ್ಯಾಪ್ತಿಯಲ್ಲಿ 2005ರಲ್ಲಿ ಗಂಗಮ್ಮ ಎಂಬ ಮಹಿಳೆಯನ್ನು ಅಪಹರಿಸಿ ಕೊಲೆ ಮಾಡಿ ನದಿಗೆ ಬಿಸಾಡಿದ ಪ್ರಕರಣದಲ್ಲಿ ಬಂಧಿತನಾಗಿದ್ದ. ಆಗ ಆತನ ಹೆಸರು ರೌಡಿ ಸಿದ್ಧ ಎಂದಿತ್ತು. 2006ರಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಲು ಕರೆದೊಯ್ಯುವಾಗ ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ಪೊಲೀಸರಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದ. ಈ ಪ್ರಕರಣದಲ್ಲಿ ಕೊಲೆ ಪ್ರಕರಣದಲ್ಲಿ ಇತರ ಆರೋಪಿಗಳಿಗೆ ಶಿಕ್ಷೆಯಾಗಿದೆ. ತಲೆಮರೆಸಿಕೊಂಡಿದ್ದ ಸಿದ್ದರಾಜು ವಿರುದ್ಧ 12 ಪ್ರಕರಣಗಳಲ್ಲಿ ಬಹುಕಾಲದಿಂದ ತಲೆ ಮರೆಸಿಕೊಂಡ ಆರೋಪಿ ಎಂದು ಗುರುತಿಸಿ, ದಸ್ತಗಿರಿ ವಾರಂಟ್ ಜಾರಿಗೊಳಿಸಲಾಗಿತ್ತು' ಎಂದರು.

'ಆರೋಪಿಯು ಮೈಸೂರಿನ ಹೂಟಗಳ್ಳಿ ಮಾರಿಗುಡಿ ದೇವಸ್ಥಾನದ ಬಳಿ ಹಾಗೂ ಬೆಂಗಳೂರಿನ ಚಿಕ್ಕಬಾಣಾವರದಲ್ಲಿ ವಾಸವಾಗಿದ್ದ. ಮೂರ್ತಿ, ಸೋನು ರಾಜ್, ಸುಂದರ್ ರಾಜ್, ಸಿದ್ದ ಹಾಗೂ ರೌಡಿ ಸಿದ್ದ ಎಂಬ ಹೆಸರುಗಳಿಂದಲೂ ಗುರುತಿಸಿಕೊಂಡಿದ್ದ. ಆರೋಪಿಯ ಸಹಚರನಾದ ಹಾಸನ ಜಿಲ್ಲೆಯ ಅರಕಲಗೂಡಿನ ಪುನೀತ್ ಎಂಬಾತನ ಜೊತೆ ಸೇರಿ ಹಲವಾರು ಕಡೆ ಮನೆಯ ಬೀಗ ಒಡೆದು ಚಿನ್ನಾಭರಣ ಕಳವು ಮಾಡಿದ್ದ. ಪುನೀತ್‌ನನ್ನೂ ಬಂಧಿಸಲಾಗಿದೆ' ಎಂದರು.

'ಆರೋಪಿಯನ್ನು ಉಡುಪಿ ಜಿಲ್ಲೆಯ ಕೋಟ ಮತ್ತು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ಠಾಣೆಗಳ ವ್ಯಾಪ್ತಿಯಲ್ಲಿ ನಡೆದ ಕಳವು ಪ್ರಕರಣಗಳಲ್ಲಿ ಪೊಲೀಸರು ಬಂಧಿಸಿದ್ದರು. ಬಳಿಕ ಜಾಮೀನಿನಲ್ಲಿ ಬಿಡುಗಡೆ ಹೊಂದಿದ್ದ. ಆಗ ಬೇರೆ ಹೆಸರು ಹೇಳಿದ್ದ' ಎಂದು ಅವರು ಮಾಹಿತಿ ನೀಡಿದರು.

ರೌಡಿಶೀಟರ್: ಆರೋಪಿ ವಿರುದ್ಧ ಮೈಸೂರು ನಗರದ ಮೇಟಗಳ್ಳಿ ಠಾಣೆಯ ವ್ಯಾಪ್ತಿಯಲ್ಲಿ ಅತ್ಯಾಚಾರ ಮತ್ತು ಕೊಲೆ ಯತ್ನ ಪ್ರಕರಣ ದಾಖಲಾಗಿತ್ತು. ನಜರಬಾದ್ ಮತ್ತು ಅಶೋಕಪುರ ಠಾಣೆಯ ವ್ಯಾಪ್ತಿಯಲ್ಲಿ ವಾಹನ ಕಳವು ಮತ್ತು ಮನೆಗೆ ನುಗ್ಗಿ ಕಳವು, ಕುವೆಂಪು ನಗರ ಠಾಣೆಯಲ್ಲಿ ಸುಲಿಗೆ ಪ್ರಕರಣ, ಲಕ್ಷ್ಮೀಪುರ ಠಾಣೆಯಲ್ಲಿ ಕಳವು ಹಾಗೂ ವಿಜಯ ನಗರ ಠಾಣೆಯಲ್ಲಿ ಕೊಲೆ ಮತ್ತು ಕಳವು ಪ್ರಕರಣಗಳು ದಾಖಲಾಗಿದ್ದವು. ಮೇಟಗಳ್ಳಿ ಠಾಣೆಯ ರೌಡಿ ಪಟ್ಟಿಯಲ್ಲಿ ಆತನ ಹೆಸರು ಸೇರ್ಪಡೆಯಾಗಿತ್ತು' ಎಂದರು.

ಡಿಕೆಶಿ ಪ್ರಕರಣ: ತೀರ್ಪು ಕಾಯ್ದಿರಿಸಿದ ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆದಾಯ ಮೀರಿ ಆಸ್ತಿಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆಗೆ ಶಿಫಾರಸು ಮಾಡಿ ರಾಜ್ಯ ಸರ್ಕಾರ ಹೊರಡಿಸಿದ ಅಧಿಸೂಚನೆ ಪ್ರಶ್ನಿಸಿ, ಕನಕಪುರ ಶಾಸಕ ಡಿ.ಕೆ. ಶಿವಕುಮಾರ್ ಸಲ್ಲಿಸಿರುವ ಅರ್ಜಿ ವಿಚಾರಣೆ ಮುಕ್ತಾಯಗೊಳಿಸಿರುವ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.

ಈ ಕುರಿತಂತೆ ಡಿ.ಕೆ.ಶಿವಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣ'ಗಳ ಹೈಕೋರ್ಟ್‌ನ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪೂರ್ಣಗೊಳಿಸಿತು.

ಬಾಕಿ ಉಳಿದಿದ್ದ ತಮ್ಮ ವಾದ ಮುಂದುವರಿಸಿದ ಸಿಬಿಐ ಪರ ವಕೀಲ ಪಿ.ಪ್ರಸನ್ನಕುಮಾರ್, 'ಇಂತಹುದೇ ತನಿಖಾ ಸಂಸ್ಥೆಯು ತನಿಖೆ ನಡೆಸಬೇಕು ಎಂದು ಹೇಳುವುದಾಗಲೀ ಅಥವಾ ಇಂತಹುದೇ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಬೇಕು ಎಂದು ಆಗ್ರಹಿಸುವ ಹಕ್ಕನ್ನಾಗಲೀ ಆರೋಪಿ ಹೊಂದಿಲ್ಲ. ವಿಶೇಷ ಅಧಿನಿಯಮವಾದ, ದೆಹಲಿ ಪೊಲೀಸ್ ಸ್ಥಾಪನಾ ಕಾಯ್ದೆ-1947ರ ಕಲಂ 6ರ ಅಡಿಯಲ್ಲಿ ತನಿಖೆಗೆ ನೀಡಲಾದ ಒಪ್ಪಿಗೆಯ ಕಾರಣಗಳನ್ನು ಸಿಬಿಐ ವಿವರಿಸುವ ಅಗತ್ಯವೇ ಇಲ್ಲ' ಎಂದರು.

'ಈಗಾಗಲೇ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ಇಂತಹದೇ ಮೇಲ್ಮನವಿಯನ್ನು ರಾಜ್ಯ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ 2020ರಲ್ಲೇ ವಜಾಗೊಳಿಸಿದೆ. ಈ ಅರ್ಜಿಯನ್ನು 2020ರಲ್ಲೇ ಸಲ್ಲಿಸಿದ್ದರೂ ಇದಕ್ಕೆ ತಡೆ ಸಿಕ್ಕಿಲ್ಲ. ಆದಕಾರಣ ಕಾನೂನು ರೀತ್ಯಾ ಶಿವಕುಮಾರ್ ಅವರ ಈ ಅರ್ಜಿ ಊರ್ಜಿತವಾಗುವುದಿಲ್ಲ' ಎಂದು ವಿವರಿಸಿದರು.

'ಎರಡೂವರೆ ವರ್ಷಗಳಲ್ಲಿ ಸಿಬಿಐ ಈಗಾಗಲೇ ಶೇ 90ರಷ್ಟು ತನಿಖೆ ಪೂರ್ಣಗೊಳಿಸಿದೆ. ಈ ಕುರಿತಂತೆ ತನಿಖೆಯ ವಸ್ತುಸ್ಥಿತಿ ವರದಿಯನ್ನು ಕೋರ್ಟ್‌ಗೂ ಸಲ್ಲಿಸಲಾಗಿದೆ. ಇಷ್ಟೆಲ್ಲಾ ಸಮಯ ಕಳೆದ ಮೇಲೆ ಅರ್ಜಿದಾರರು ಅಧಿಸೂಚನೆ ಪ್ರಶ್ನಿಸುವುದಾಗಲೀ ಅಥವಾ ರದ್ದುಗೊಳಿಸಿ ಎಂದು ಕೋರುವುದಾಗಲಿ ಕಾನೂನು ಪ್ರಕಾರ ಸಾಧ್ಯವಿಲ್ಲ. ಇದು ಆದಾಯ ತೆರಿಗೆ ಕಾನೂನುಗಳ ಪ್ರಕಾರ ದಾಖಲಾಗಿಸಿರುವ ವಿಶೇಷ ಕ್ರಿಮಿನಲ್ ಪ್ರಕರಣ. ಹೀಗಾಗಿ, ಡಿ.ಕೆ. ಶಿವಕುಮಾರ್ ಸಿಬಿಐ ಮುಂದೆ ಹಾಜರಾಗಿ ಕೋಟ್ಯಂತರ ರೂಪಾಯಿಗಳನ್ನು ಎಲ್ಲಿಂದ, ಹೇಗೆ ಸಂಪಾದಿಸಿದರು ಎಂಬುದನ್ನು ವಿವರಿಸಲೇಬೇಕಿದೆ' ಎಂದು ಪ್ರತಿಪಾದಿಸಿದರು.

ಇದನ್ನು ಬಲವಾಗಿ ಅಲ್ಲಗಳೆದ ಶಿವಕುಮಾರ್ ಪರ ಹಿರಿಯ ವಕೀಲ ಉದಯ ಹೊಳ್ಳ ಅವರು, 'ಈ ಪ್ರಕರಣವನ್ನು ದಾಖಲಿಸಿರುವ ಹಿಂದೆ ರಾಜಕೀಯ ಪಿತೂರಿ ಅಡಗಿದೆ. ಈಗಾಗಲೇ ಆದಾಯ ತೆರಿಗೆಗೆ ಸಂಬಂಧಿಸಿದ ಮೂರು ಪ್ರಕರಣಗಳಲ್ಲಿ ಶಿವಕುಮಾರ್ ಗೆದ್ದಿದ್ದಾರೆ. ಇದು ನಾಲ್ಕನೇ ಎಫ್‌ಐಆರ್. ಜನಪ್ರತಿನಿಧಿಗಳ ವಿರುದ್ಧದ ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣ ದಾಖಲಿಸುವ ಮುನ್ನ ವಿಧಾನಸಭಾಧ್ಯಕ್ಷರ ಅನುಮತಿ ಪಡೆಯಬೇಕಿತ್ತು. ಅಂತೆಯೇ, ತನಿಖೆಗೆ ನೀಡಲಾಗಿರುವ ಆಡಳಿತಾತ್ಮಕ ನಿರ್ಧಾರಕ್ಕೆ ಸಕಾರಣವೂ ಇಲ್ಲ. ಹೀಗಾಗಿ, ತನಿಖೆಗೆ ಶಿಫಾರಸು ಮಾಡಲಾದ ಕ್ರಮವನ್ನು ರದ್ದುಗೊಳಿಸಬೇಕು' ಎಂದು ಕೋರಿದರು.

ವಾದ ಪ್ರತಿವಾದ ಆಲಿಸಿದ ನ್ಯಾಯಪೀಠ ತೀರ್ಪು ಕಾಯ್ದಿರಿಸಿರುವುದಾಗಿ ಪ್ರಕಟಿಸಿತು. ಇದೇ ವೇಳೆ ಸಿಬಿಐ ತನಿಖೆಗೆ ಹೈಕೋರ್ಟ್ 2023ರ ಫೆಬ್ರುವರಿ 10ರಂದು ನೀಡಿರುವ ಮಧ್ಯಂತರ ತಡೆಯನ್ನು ವಿಸ್ತರಿಸಿತು.

ಪ್ರಕರಣವೇನು?: 'ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 13 (2), 13 (1)(ಇ) ಅಡಿಯಲ್ಲಿ 2020ರ ಅಕ್ಟೋಬರ್ 3ರಂದು ಸಿಬಿಐ ಪ್ರಕರಣ ದಾಖಲಿಸಿದ್ದು; ಸಿಬಿಐ ತನಿಖೆಗೆ ಒಪ್ಪಿಸಲಾದ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಶಿವಕುಮಾರ್ ಈ ಅರ್ಜಿ ಸಲ್ಲಿಸಿದ್ದಾರೆ.

ಮುಖ್ಯಾಂಶಗಳು

- ಆದಾಯ ಮೀರಿ ಆಸ್ತಿ ಗಳಿಸಿದ ಆರೋಪ
- ಕಾನೂನು ರೀತ್ಯಾ ಶಿವಕುಮಾರ್ ಅವರ ಅರ್ಜಿ ಊರ್ಜಿತವಲ್ಲ

ನೆನಪಿನ ಕಾಣಿಕೆ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲ ಕ್ಲಬ್‌ನಲ್ಲಿ ಈಚೆಗೆ ನಡೆದಿದ್ದ ಭೂಮಿಕಾ ಕ್ಲಬ್‌ನ ಕಾರ್ಯಕ್ರಮದಲ್ಲಿ ಎವಿಆರ್ ಸ್ವರ್ಣ ಮಹಲ್ ಜ್ಯೂವೆಲರ್ಸ್‌ನ ಎಜಿಎಂ (ಜಾಹೀರಾತು) ಡಿ.ಈಶ್ವರನ್ ಅವರು ಪಾಲ್ಗೊಂಡು, ಗಣ್ಯರಿಗೆ ನೆನಪಿನ ಕಾಣಿಕೆ ವಿತರಿಸಿದ್ದರು. ಭಾನುವಾರದ ಸಂಚಿಕೆಯಲ್ಲಿ ಅವರ ಹೆಸರು ತಪ್ಪಾಗಿ ಪ್ರಕಟವಾಗಿತ್ತು.

'ಬಂಡಾಯ ಸಾಹಿತ್ಯ ಸಂಘಟನೆ ಮತ್ತೆ ಪುಟಿದೇಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಾತ್ವಿಕ ಚಿಂತನೆಯ ಆಶಯದೊಂದಿಗೆ ಅಸ್ತಿತ್ವಕ್ಕೆ ಬಂದಿದ್ದ ಬಂಡಾಯ ಸಾಹಿತ್ಯ ಸಂಘಟನೆಯು ಮತ್ತೆ ಪುಟಿದೇಳಬೇಕು. ಮತ್ತಷ್ಟು ಪ್ರಜಾಸತ್ತಾತ್ಮಕಗೊಳ್ಳಬೇಕು' ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಸಲಹೆ ನೀಡಿದರು.

ಬಂಡಾಯ ಸಾಹಿತ್ಯ ಸಂಘಟನೆ ಭಾನುವಾರ ಆಯೋಜಿಸಿದ್ದ ತಿಂಗಳ ಕಾರ್ಯಕ್ರಮ ಉದ್ಘಾಟನೆ ಹಾಗೂ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ 'ಮನುಷ್ಯ ಜಾತಿ ತಾನೊಂದೆ ವಲಂ' ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ನಗರದಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಆಯೋಜಿಸಿದ್ದ 'ಮನುಷ್ಯ ಜಾತಿ ತಾನೊಂದೆ ವಲಂ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ (ಎಡದಿಂದ) ಸಾಹಿತಿ ಬರಗೂರು ರಾಮಚಂದ್ರಪ್ಪ, ಡಾ.ಸಬಿತಾ ಬನ್ನಾಡಿ, ಕರೀಗೌಡ ಬೀಚನಹಳ್ಳಿ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಹಾಗೂ ಬಿ.ರಾಜಶೇಖರಮೂರ್ತಿ ಇದ್ದರು — ಪ್ರಜಾವಾಣಿ ಚಿತ್ರ

'ಜನರ ಸಂಕಷ್ಟಗಳು ಪರಿಹಾರವಾಗಬೇಕು; ಅದಕ್ಕೆ ಪೂರಕವಾದ ಸಾಹಿತ್ಯ ರಚನೆ ಆಗಬೇಕು ಎಂಬ ಉದ್ದೇಶದೊಂದಿಗೆ ಬಂಡಾಯ ಸಾಹಿತ್ಯ ಸಂಘಟನೆ ಈ ಹಿಂದೆ ರೂಪುಗೊಂಡಿತ್ತು. ಸಂಘಟನೆಯು ಸಾಕಷ್ಟು ಏಳುಬೀಳನ್ನೂ ಕಂಡಿದೆ. ರೈತರು, ಕಾರ್ಮಿಕರ ಏಳಿಗೆಗಾಗಿ ಉದಯವಾಗಿದ್ದ ಸಂಘಟನೆಯು ಮತ್ತಷ್ಟು ಮೌಲ್ಯೀಕರಣಗೊಳ್ಳಬೇಕು' ಎಂದು ಕರೆ ನೀಡಿದರು.

'ಈ ಸಂಘಟನೆಯು ಪ್ರಜಾಸತ್ತಾತ್ಮಕ ಚಳವಳಿಗೆ ದಿಕ್ಕು ತೋರಿಸುವಂತೆ ಬೆಳೆಯಬೇಕು. ಸಂಘಟನೆಯು ಎಲ್ಲರನ್ನೂ ಒಳಗೊಳ್ಳಬೇಕಿದೆ' ಎಂದು ಕರೆ ನೀಡಿದರು.

'ರಾಜಕೀಯ ಕ್ಷೇತ್ರದಲ್ಲಿ ಸರ್ವಾಧಿಕಾರಿ ಧೋರಣೆ ನುಸುಳಿ ಆಕ್ರಮಣಕಾರಿ ದಾಳಿಗಳು ನಡೆಯುತ್ತಿವೆ' ಎಂದು ಬೇಸರ ವ್ಯಕ್ತಪಡಿಸಿದರು. ಲೇಖಕಿ ಡಾ.ಸಬಿತಾ ಬನ್ನಾಡಿ ಕೃತಿ ಕುರಿತು ಮಾತನಾಡಿದರು.

ಅಪಘಾತ ರಹಿತ ಚಾಲಕರಿಗೆ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವದೆಹಲಿಯ ಎಎಸ್‌ಆರ್‌ಟಿಯು-(ಅಸೋಸಿಯೇಷನ್ ಆಫ್ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಅಂಡರ್‌ಟೇಕಿಂಗ್) ಅಪಘಾತ ರಹಿತ ಚಾಲಕರಿಗೆ ನೀಡುವ ರಾಷ್ಟ್ರೀಯ ಪ್ರಶಸ್ತಿಗೆ ಕೆಎಸ್‌ಆರ್‌ಟಿಸಿಯ ಇಬ್ಬರು ಮತ್ತು ಬಿಎಂಟಿಸಿಯ ಒಬ್ಬ ಚಾಲಕರು ಆಯ್ಕೆಯಾಗಿದ್ದಾರೆ.

ಇಶಾಕ್ ಶರೀಫ್

ಎಜಾಜ್

ಲಕ್ಷ್ಮಣ ರೆಡ್ಡಿ

ಕೆಎಸ್‌ಆರ್‌ಟಿಸಿ ಚಾಲಕರಾದ ಎಜಾಜ್ ಅಹಮದ್ ಷರೀಫ್, ಇಶಾಕ್ ಶರೀಫ್ ಅವರು ಆಯ್ಕೆಯಾಗಿದ್ದು, ಈ ಇಬ್ಬರು 33 ವರ್ಷಗಳಿಂದ ಅಪಘಾತ ರಹಿತ ಚಾಲನೆ ಮಾಡಿದ್ದಾರೆ.

ಬಿಎಂಟಿಸಿ ಚಾಲಕ ಲಕ್ಷ್ಮಣ ರೆಡ್ಡಿ ಅವರು 35 ವರ್ಷಗಳಿಂದ ಅಪಘಾರ ರಹಿತ ಚಾಲನೆ ಮಾಡಿದ್ದು, ಬೆಳ್ಳಿ ಮತ್ತು ಚಿನ್ನದ ಪದಕಗಳನ್ನು ಪಡೆದಿದ್ದಾರೆ.

ಈ ಮೂವರಿಗೆ ನವದೆಹಲಿಯಲ್ಲಿ ಮಂಗಳವಾರ ಪ್ರಶಸ್ತಿ ಪ್ರದಾನ ವಾಗಲಿದೆ ಎಂದು ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಪ್ರಕಟಣೆಗಳು ತಿಳಿಸಿವೆ.

ಚಿತ್ರದುರ್ಗದ ಮುರುಘಾ ಮಠಕ್ಕೆ ಆಡಳಿತಾಧಿಕಾರಿ ನೇಮಕ

ರಿಟ್ ಅರ್ಜಿ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಮುರುಘಾ ಮಠಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶ ಪ್ರಶ್ನಿಸಲಾದ ರಿಟ್ ಅರ್ಜಿ ಮೇಲಿನ ತೀರ್ಪನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಈ ಕುರಿತಂತೆ ಎಸ್‌ಜೆಎಂ ವಿದ್ಯಾಪೀಠದ ಅಧ್ಯಕ್ಷ, ಮಠದ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ಮತ್ತು ಭಕ್ತರು ಸಲ್ಲಿಸಿರುವ ರಿಟ್ ಅರ್ಜಿ ಅಂತೆಯೇ, ಪೀಠಾಧಿಪತಿ ಶಿವಮೂರ್ತಿ ಶರಣರ ಅಧಿಕಾರ ಚಲಾವಣೆಗೆ ನಿರ್ಬಂಧ ವಿಧಿಸಿರುವ ಚಿತ್ರದುರ್ಗ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶ ಪ್ರಶ್ನಿಸಲಾದ ಮತ್ತೊಂದು ರಿಟ್ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪೂರ್ಣಗೊಳಿಸಿತು.

ಇದೇ ವೇಳೆ, 'ಚಿತ್ರದುರ್ಗ ಮುರುಘಾ ಮಠದ ಆಡಳಿತಾಧಿಕಾರಿ ಪಿ.ಎಸ್. ವಸ್ತ್ರದ ಅವರು, ಶ್ರೀ ಜಗದ್ಗುರು ಮುರುಘರಾಜೇಂದ್ರ (ಎಸ್‌ಜೆಎಂ) ವಿದ್ಯಾಪೀಠಕ್ಕೆ ಕೆ.ವಿ.ಪ್ರಭಾಕರ್ ಅವರನ್ನು ಕಾರ್ಯದರ್ಶಿಯನ್ನಾಗಿ, ವೃತ್ತಿಪರ ಕಾಲೇಜುಗಳ ಆಡಳಿತ ಉಸ್ತುವಾರಿಗಾಗಿ ಮಾಜಿ ಸಚಿವ ಎಚ್.ಏಕಾಂತಯ್ಯ ಹಾಗೂ ಬಸವರಾಜ್ ಪಾಟೀಲ ಅವರನ್ನು ನೇಮಕ ಮಾಡಿರುವ ಆದೇಶ ಹಿಂಪಡೆಯಲು ನಿರ್ದೇಶಿಸಬೇಕು' ಎಂದು ಕೋರಲಾಗಿರುವ ಮಧ್ಯಂತರ ಅರ್ಜಿಯನ್ನೂ ನ್ಯಾಯಪೀಠ ಅಂಗೀಕರಿಸಿದ್ದು ಇದರ ಮೇಲಿನ ಆದೇಶವೂ ಕಾಯ್ದಿರಿಸಲಾಗಿರುವ ತೀರ್ಪಿನಲ್ಲಿ ಅಡಕಗೊಳ್ಳಲಿದೆ.

ನಗರದಲ್ಲಿ ಇಂದು

ಪ್ರವಚನ ವಾಹಿನಿ: 'ಶಂಕರ ಭಗವತ್ಪಾದರ ಸ್ತೋತ್ರ ಸಾಹಿತ್ಯ'ದ ಕುರಿತು ಉಪನ್ಯಾಸ: ಸುದರ್ಶನ ಶರ್ಮ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಬೆಂಗಳೂರು ನಾಗರತ್ನಮ್ಮ' ಸಂಗೀತ ನಾಟಕ ರೂಪಕ ಪ್ರದರ್ಶನ: ನಿರ್ದೇಶನ: ಟಿ.ಎಸ್. ನಾಗಾಭರಣ, ನಿರ್ಮಾಣ: ಪಿ.ರಮಾ, ರಂಗರೂಪ: ಹೂಲಿ ಶೇಖರ್, ಪ್ರತಿಭಾ ನಂದಕುಮಾರ್, ಮೂಲ ಕಥೆ: ಮಲೆಯೂರು ಗುರುಸ್ವಾಮಿ, ಆಯೋಜನೆ: ಬೆನಕ ಮತ್ತು ಸಂಗೀತ ಸಂಭ್ರಮ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ರಾಮೋತ್ಸವ ವಿಶೇಷ

ವಿದ್ಯಾಭೂಷಣ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ರಶ್ಮಿ ಆರ್. ಮತ್ತು ತಂಡ, ಗಾಯನ: ವಿದ್ಯಾಭೂಷಣ, ಪಿಟೀಲು: ಪ್ರಾದೇಶಾಚಾರ್, ಮೃದಂಗ: ಬಿ.ಸಿ. ಮಂಜುನಾಥ್, ಘಟಂ: ಬಿ.ಆರ್. ರವಿಕುಮಾರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಇಶಾನ್ ಐಯ್ಯರ್, ವೀಣೆ: ಯೋಗವಂದನಾ, ರಕ್ಷಿತಾ ರಮೇಶ್, ಮೃದಂಗ: ಜಿ.ಎಸ್. ನಾಗರಾಜ್, ಘಟಂ: ಸುಕನ್ಯಾ ರಾಮಗೋಪಾಲ್, ಕೃಷ್ಣ, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ನಿಶಾ ರಾಜಗೋಪಾನ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಬಿ.ಸಿ. ಮಂಜುನಾಥ್, ಖಂಜೀರಾ: ಗುರುಪ್ರಸನ್ನ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಸ್ಪೇಸ್‌ಎಕ್ಸ್ 'ಸ್ಟಾರ್‌ಶಿಪ್' ಉಡಾವಣೆ ಸ್ಥಗಿತ

ದಕ್ಷಿಣ ಪಡ್ರೆ ದ್ವೀಪ (ಎಪಿ): ಮೆಕ್ಸಿಕನ್ ಗಡಿಯ ಸಮೀಪವಿರುವ ಟೆಕ್ಸಾಸ್‌ನ ದಕ್ಷಿಣ ತುದಿಯಲ್ಲಿನ ಉಡಾವಣಾ ನೆಲೆಯಲ್ಲಿ ಸ್ಪೇಸ್ ಎಕ್ಸ್ ತನ್ನ ಮೊದಲ ಪರೀಕ್ಷಾರ್ಥ ಪ್ರಯತ್ನದ ದೈತ್ಯ ರಾಕೆಟ್ 'ಸ್ಟಾರ್‌ಶಿಪ್' ಉಡಾವಣೆಯನ್ನು ಕೊನೆ ಗಳಿಗೆಯಲ್ಲಿ ಕಾಣಿಸಿದ ತಾಂತ್ರಿಕ ಸಮಸ್ಯೆಯಿಂದಾಗಿ ಸೋಮವಾರ ಸ್ಥಗಿತಗೊಳಿಸಿತು.

ಎಲಾನ್ ಮಸ್ಕ್ ಅವರ ಸ್ಪೇಸ್‌ಎಕ್ಸ್ ಕಂಪನಿಯು 400 ಅಡಿಯ ಸ್ಟಾರ್‌ಶಿಪ್ ರಾಕೆಟ್ ಉಡಾವಣೆಗೆ ಸಿದ್ಧತೆ ಮಾಡಿತ್ತು. ಉಡಾವಣೆಗೆ 40 ಸೆಕೆಂಡು ಇರುವಾಗ ತಾಂತ್ರಿಕ ಸಮಸ್ಯೆ ಕಾಣಿಸಿತು. ಇಂಧನ ಭರ್ತಿ ವೇಳೆ, ಕವಾಟನ್ನು ನಿಗದಿತ ಸಮಯದಲ್ಲಿ ಸಕ್ರಿಯಗೊಳಿಸಲು ಉಡಾವಣಾ ನಿಯಂತ್ರಕಗಳಿಗೆ ಸಾಧ್ಯವಾಗಲಿಲ್ಲ. ಹಾಗಾಗಿ ಉಡಾವಣೆ ರದ್ದುಗೊಂಡಿತು.

PUBLIC NOTICE

NOTICE is hereby given that, Dhishan Realty Private Limited, having its registered office at 86/1, First Floor, 11th Cross, Temple Road, Malleshwaram, Bangalore-560003 ("**Dhishan**"), is the present owner of the converted land totally measuring 2 acres, situated in Survey No 17/2 of Thornahalli Agrahara Village, Kasaba Hobli, Malur Taluk, Kolar District ("**said Land**"), having purchased said Land in terms of the Sale Deed dated 27 February 2023 registered as document No MLR-1-10918/22-23 stored in CD No MLRD1224 at the office of the Sub-Registrar Maluru, from its owner Ms Sujatha C, wife of Mr Ganesh Kumar (daughter of Late Mr. Nanjundappa alias Chikkananjundaiah H B and Late Ms Shivamma) and that the Gift Deed dated May 8, 1973 registered as document No 446/73-74, volume 1005, pages 57 to 59, at the office of the Sub-Registrar, Malur, ("**Original Deed**") in relation to the said land has been misplaced and are not traceable. A Lost Report has been lodged with the Crime Branch Bengaluru City Police Station regarding the loss of the Original Deed and an Endorsement, numbered 0531001/2023 and dated April 12, 2023, has been issued.

Any person having any share, right, title, interest, claim, and/or demand in respect of the said Land or any part thereof, in any manner whatsoever or otherwise howsoever ("Claim"), by virtue of having custody or possession of the Original Deed are hereby requested to contact the undersigned within 10 (ten) days from the date of publication, of this notice, failing which, the Claim shall be considered to have been waived and/or abandoned. If any person has found the Original Deed, they are requested to return the Original Deed to Dhishan at its Office described above, or to the undersigned Advocate at the address described below. Further, the public is hereby cautioned not to deal with the said Land based on the missing Original Deed other than with Dhishan and it is also notified that any such transactions entered into in respect of the said Land shall be considered illegal.

ILP
INDIA LAW PRACTICE

Praveen Prabhakar/ Prashanth Mirle
India Law Practice – ILP
Advocates and Attorneys
4th Floor, JP Square, No.190,
Sankey Road, Sadashivanagar,
Bangalore 560080
B: +91 80 2361 2770/3770
F: +91 80 2361 4770
e-mail: contact@ilplaw.co.in
Date : 18.04.2023, Bangalore

₹3.83 ಕೋಟಿ ಮೌಲ್ಯದ ನಗದು, ಸ್ವತ್ತು ವಶ

ಬೆಂಗಳೂರು: ಜಾಗೃತ ದಳಗಳು ಹಾಗೂ ತನಿಖಾ ಠಾಣೆಗಳಲ್ಲಿ ಸೋಮವಾರ ₹3.83 ಕೋಟಿ ಮೌಲ್ಯದ ನಗದು ಮತ್ತು ಇತರ ಸ್ವತ್ತು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡ ಮೊತ್ತ ಇಲ್ಲಿಯವರೆಗೆ ₹ 174 ಕೋಟಿ ತಲುಪಿದೆ.

ಆದಾಯ ತೆರಿಗೆ ಇಲಾಖೆ ಒಂದೇ ದಿನ ರಾಜ್ಯದ ವಿವಿಧೆಡೆ ₹ 65.97 ಲಕ್ಷ ನಗದು ವಶಪಡಿಸಿಕೊಂಡಿದೆ.

₹36.14 ಲಕ್ಷ ಮೌಲ್ಯದ ಉಚಿತ ಕೊಡುಗೆ, ₹ 1.14 ಕೋಟಿ ಮೌಲ್ಯದ 29,032 ಲೀಟರ್ ಮದ್ಯ, ₹ 1.66 ಕೋಟಿ ಮೌಲ್ಯದ 166.67 ಕೆ.ಜಿ. ಮಾದಕ ವಸ್ತು ವಶಕ್ಕೆ ಪಡೆಯಲಾಗಿದೆ.

ಈವರೆಗೆ 1,490 ಎಫ್‌ಐಆರ್ ದಾಖಲಿಸಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿ–ಕೇಂದ್ರ,
ಅನೆಕ್ಸ್–1, ಕಟ್ಟಡ, ಬಿಬಿಎಂಪಿ, ಎನ್‌ಆರ್ ಚೌಕ, ಬೆಂಗಳೂರು–560 002.

ಸಂ: ಎಲೆಕ್ಷನ್/ಕೇಂದ್ರ/ಪಿಆರ್/75/2023–24 ದಿನಾಂಕ:15.04.2023

ಟೆಂಡರ್‌ಗಾಗಿ ಆಹ್ವಾನ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿ–ಕೇಂದ್ರ ಬಿಬಿಎಂಪಿ, ಇವರು ಅರ್ಹ ಟೆಂಡರ್‌ದಾರರಿಂದ ಕೆಳಕಂಡ ಸೇವೆಗಳನ್ನು ಒದಗಿಸಲು ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಸೇವೆಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ	ಇಎಂಡಿ (ರೂ.ಗಳಲ್ಲಿ)
1	2023ರ ಕರ್ನಾಟಕ ವಿಧಾನಸಭಾ ಚುನಾವಣೆಗಾಗಿ ADEO BBMP (ಕೇಂದ್ರ) ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ SST ತಂಡಕ್ಕೆ ಚೆಕ್‌ಪೋಸ್ಟ್‌ಗಳನ್ನು ಒದಗಿಸುವುದು.	ರೂ. 50 ಲಕ್ಷಗಳು	1,25,000/–

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ದಿನಾಂಕ: **16.04.2023ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) **ಪೂರ್ವಬಾವಿ ಸಭೆಯ ದಿನಾಂಕ: 17.04.2023ರ ಮಧ್ಯಾಹ್ನ 3.00 ಗಂಟೆಗೆ,** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **23.04.2023ರ ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **24.04.2023ರ ಸಂಜೆ 5.00 ಗಂಟೆಗೆ.** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **25.04.2023ರ ಮಧ್ಯಾಹ್ನ 12.00 ಗಂಟೆಗೆ.**

ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಸಹಾಯಕ ಆಯುಕ್ತರು (ಚುನಾವಣೆ–ಕೇಂದ್ರ), ಬಿಬಿಎಂಪಿ

ನಿಧನ

ಶ್ರೀಮತಿ ಆರ್. ರಾಜೇಶ್ವರಿ
ಜನನ: 10-04-1974 ನಿಧನ: 17-04-2023
ಇವರು ದಿ:17-4-2023 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂತ್ಯಕ್ರಿಯೆಯನ್ನು ದಿ: 18-4-20203 ರಂದು ಮಧ್ಯಾಹ್ನ 2ಕ್ಕೆ ಮಾಗಡಿ ರಸ್ತೆ, ಸೀಗೇಹಳ್ಳಿಯ ಜಿ. ಕೋಮಲಮ್ಮ-ಟಿ.ಎಂ.ರಂಗೇಗೌಡ ಫಾರಂನಲ್ಲಿ ನಡೆಸಲಾಗುವುದು.
ದುಃಖತಪ್ತರು: ಪತಿ ತುಳಸಿರಾಮ್
ಮಗ ಬ್ರಿಜೇಶ್, ಮಗಳು ನಿಧಿ,
ಟಿ.ತಿಮ್ಮಯ್ಯ ಮತ್ತು ಕುಟುಂಬ,
ಟಿ. ಎಂ. ರಂಗೇಗೌಡ ಮತ್ತು ಕುಟುಂಬ,
ಅಣ್ಣಂದಿರು-ಆರ್. ಪ್ರಕಾಶ್ ಜೆ.ಡಿ.ಎಸ್. ಮುಖಂಡರು ಮತ್ತು ಕುಟುಂಬ, ಮೋಹನ್ ಕುಮಾರ್ ಮತ್ತು ಕುಟುಂಬ
ಅಕ್ಕ-ಪ್ರಭ ಮತ್ತು ಕುಟುಂಬ ಹಾಗು ಅಪಾರ ಬಂಧುವರ್ಗ

ಇಸ್ರೊ isro
ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಎಲೆಕ್ಟ್ರೋ–ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (LEOS) ಪೀಣ್ಯ, ಬೆಂಗಳೂರು–560058
ಲಿಯೋಸ್ ನಿರ್ಮಾಣ ಮತ್ತು ನಿರ್ವಹಣೆ ಗುಂಪು (LCMG)
[ಫೋನ್: (080) – 22685088, 5193, 5093, 5086– Fax– (080) – 28392310]

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ (ಎನ್‌ಐಇಟಿ)
ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಗಳಿಗಾಗಿ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಕೆಲಸದ ಹೆಸರು; ಎನ್‌ಐಇಟಿ ಸಂಖ್ಯೆ ಮತ್ತು ದಿನಾಂಕ : ಲಿಯೋಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–560058 ರಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕದ ಉನ್ನತ–ದರ್ಜೆಯ ಪ್ರಸ್ತಾವನೆ (ಎಸ್ ಟಿಪಿ) ಎನ್‌ಐಇಟಿ ಸಂಖ್ಯೆ: ಸಿ&ಎಂಜಿ/ಲಿಯೋಸ್/2022–23/ಎಲ್‌ಎಮ್‌ಎನ್–18 ದಿನಾಂಕ: 10.04.2023 **ಟೆಂಡರ್ ಮತ್ತು ಇಎಮ್‌ಡಿಗೆ ಅಂದಾಜು ವೆಚ್ಚ ರೂ.** 14.56 ಲಕ್ಷ ಇಎಂಡಿ : ರೂ: 29,128/– **ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ** :06 ತಿಂಗಳು **ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ** : 12.04.2023 **ಮುಕ್ತಾಯದ ದಿನಾಂಕ:** 25.04.2023

ಕೆಲಸದ ಹೆಸರು; ಎನ್‌ಐಇಟಿ ಸಂಖ್ಯೆ ಮತ್ತು ದಿನಾಂಕ : ಲಿಯೋಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–560058 ರಲ್ಲಿ ಅಸ್ತಿತ್ವದಲ್ಲಿರುವ ಚಿಲ್ಲರ್ ಅನ್ನು ಪಂಪ್‌ಗಳು ಮತ್ತು ಪ್ಯಾನೆಲ್‌ನೊಂದಿಗೆ ಪರಿಸರ ಸ್ನೇಹಿ ಏರ್–ಕೂಲ್ಡ್ ಸ್ಕ್ರೂ ಚಿಲ್ಲರ್‌ನೊಂದಿಗೆ ಬದಲಾಯಿಸುವುದು ಎನ್‌ಐಇಟಿ ಸಂಖ್ಯೆ: ಲಿಯೋಸ್/ಸಿ&ಎಂಜಿ/ಏರ್–ಕೂಲ್ಡ್ ಚಿಲ್ಲರ್/ಇಟಿಎನ್–01ಎ/2023–24 **ದಿನಾಂಕ:** 06.04.2023 **ಟೆಂಡರ್ ಮತ್ತು ಇಎಮ್‌ಡಿಗೆ ಅಂದಾಜು ವೆಚ್ಚ ರೂ.**265.40 ಲಕ್ಷ ಇಎಂಡಿ ರೂ: 5,30,800/– **ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ** : 06 ತಿಂಗಳು **ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ:**18.04.2023 **ಮುಕ್ತಾಯದ ದಿನಾಂಕ:** 02.05.2023

ಆಸಕ್ತ ಟೆಂಡರುದಾರರು ಇ–ಟೆಂಡರ್**ಎನ್‌ಐಇಟಿ** ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು **www.isro.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಬಹುದು.

– ಸಹಿ/–
ಸಮೂಹ ನಿರ್ದೇಶಕ [ನಿರ್ಮಾಣ ಮತ್ತು ನಿರ್ವಹಣಾ ಸಮೂಹ]ಯುಆರ್ ಎಸ್ ಸಿ, ಬೆಂಗಳೂರು

ಚಿಲುಮೆ ಟ್ರಸ್ಟ್ ನಡೆಸಿದ ಅಕ್ರಮಕ್ಕೆ ಸಾಕ್ಷ್ಯ ಲಭ್ಯ: ತನಿಖಾ ವರದಿ

ಮತದಾರರ ಮಾಹಿತಿ ಕಳವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಿದೇಶಿ ಸರ್ವರ್‌ನಲ್ಲಿ ದತ್ತಾಂಶ ಅಕ್ರಮ ಸಂಗ್ರಹ
- ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ವೆಬ್‌ಸೈಟ್‌ನಲ್ಲಿ ಸಮಗ್ರ ವರದಿ
- ಪೊಲೀಸರಿಂದ ಪ್ರತ್ಯೇಕ ತನಿಖೆಯ ಅಗತ್ಯವೆಂದ ಪ್ರಾದೇಶಿಕ ಆಯುಕ್ತ

ಬೆಂಗಳೂರು: ಮತದಾರರ ಮಾಹಿತಿ ಕಳವು ಮಾಡಿ ವಾಣಿಜ್ಯ ಉದ್ದೇಶಕ್ಕೆ ಚಿಲುಮೆ ಟ್ರಸ್ಟ್ ಸಂಗ್ರಹಿಸುತ್ತಿದೆ ಎಂಬ ಆರೋಪಕ್ಕೆ ಸಾಕ್ಷ್ಯ ದೊರೆತಿದ್ದು, ವಿದೇಶಿ ಸರ್ವರ್‌ನಲ್ಲಿ ಅಕ್ರಮವಾಗಿ ದತ್ತಾಂಶ ಶೇಖರಿಸಿಡಲಾಗಿದೆ ಎಂಬುದು ಸಮಗ್ರ ತನಿಖಾ ವರದಿ ತಿಳಿಸಿದೆ.

ಈ ಮಾಹಿತಿಯನ್ನು ತೆರಿಗೆ ವಂಚನೆಯ ಅನುಮಾನಾಸ್ಪದ ಹಲವು ಬ್ಯಾಂಕ್‌ಗಳ ಖಾತೆಯನ್ನು ಸೃಷ್ಟಿಸಲು ಮತ್ತು ರಾಜಕೀಯ ಪಕ್ಷಗಳಿಗೆ ದತ್ತಾಂಶ ಮಾರಾಟ ಮಾಡಲು ಬಳಸಿಕೊಳ್ಳಲಾಗುತ್ತಿತ್ತು. ಚುನಾವಣೆ ಇಲ್ಲದ ಸಂದರ್ಭದಲ್ಲೂ ಆರ್‌.ಓ.ಗಳು ನಗರದಲ್ಲಿ ಮತದಾರರ ಜಾಗೃತಿ ಕಾರ್ಯಕ್ರಮಕ್ಕೆ ಈ ಸಂಸ್ಥೆಯನ್ನು ಬಿಬಿಎಂಪಿ ನಿಯೋಜಿಸಿತ್ತು ಎಂದು 49 ಪುಟಗಳ ತನಿಖಾ ವರದಿಯಲ್ಲಿ ತಿಳಿಸಲಾಗಿದೆ.

ಕರ್ನಾಟಕದ ಮುಖ್ಯ ಚುನಾವಣಾ ಅಧಿಕಾರಿ ವೆಬ್‌ಸೈಟ್‌ನಲ್ಲಿ ಸಮಗ್ರ ವರದಿಯನ್ನು ಅಪ್‌ಲೋಡ್ ಮಾಡಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಚಿಲುಮೆ ಟ್ರಸ್ಟ್ ಮತದಾರರ ಗುರುತಿನ ಚೀಟಿಯನ್ನು ಸಂಗ್ರಹಿಸಿ, ದುರ್ಬಳಕೆ ಮಾಡಿಕೊಂಡಿರುವ ಪ್ರಕರಣವನ್ನು ತನಿಖೆ ನಡೆದ ನಂತರ ಈ ವರದಿಯನ್ನು ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಸಿದ್ಧಪಡಿಸಿದ್ದಾರೆ.

'ಡಿಜಿಟಲ್ ಸಮೀಕ್ಷಾ ಎಂಬ ಅನಧಿಕೃತ ಖಾಸಗಿ ಡಿಜಿಟಲ್ ಆ್ಯಪ್ ಮೂಲಕ ಎಎಪಿ ಚಿಲುಮೆ ಅಕ್ರಮವಾಗಿ ಮತದಾರರ ಮಾಹಿತಿ ಸಂಗ್ರಹಿಸಿದೆ. ಇದನ್ನು ವಿದೇಶಿ ಸರ್ವರ್‌ನಲ್ಲಿ ಶೇಖರಿಸಿಡಲಾಗಿದ್ದು, ಈ ಮಾಹಿತಿಯನ್ನು ದುರುದ್ದೇಶ ಮತ್ತು ತಮ್ಮ ಲಾಭಕ್ಕೆ ಬಳಸಿಕೊಳ್ಳಲಾಗುತ್ತಿತ್ತು. 'ಈ ಬಗ್ಗೆ ಪೊಲೀಸರಿಂದ ಪ್ರತ್ಯೇಕ ತನಿಖೆ ಅಗತ್ಯವಿದೆ' ಎಂದು ವರದಿಯಲ್ಲಿ ತಿಳಿಸಲಾಗಿದೆ. ಅವರು ಪಡೆದಿರುವ ದತ್ತಾಂಶವನ್ನು ಕೂಡಲೇ ಮರು ಪಡೆದುಕೊಳ್ಳಬೇಕು ಎಂದು ಹೇಳಿದೆ.

ಶಿವಾಜಿನಗರ, ಚಿಕ್ಕಪೇಟೆ, ಮಹದೇವಪುರ ವಿಧಾನಸಭೆ ಕ್ಷೇತ್ರಗಳಲ್ಲಿ ಮತದಾರರ ಪಟ್ಟಿಯಲ್ಲಿ ವಂಚನೆ ಅಥವಾ ಅಕ್ರಮ ನಡೆದಿಲ್ಲ ಎಂದು ತನಿಖಾ ವರದಿ ತಿಳಿಸಿದೆ. 'ಗರುಡಾ ಆ್ಯಪ್ ಅಥವಾ ero.net ಮೂಲಕ ಮಾಹಿತಿ ಕಳವು ಅಥವಾ ತಿದ್ದುವುದಕ್ಕೆ ಯಾವುದೇ ಸಾಕ್ಷಿಗಳಿಲ್ಲ' ಎಂದಿದೆ.

ಸಮನ್ವಯ ಟ್ರಸ್ಟ್ ಪ್ರಥಮವಾಗಿ ಎಎಪಿಯ ಚಿಲುಮೆ ವಿರುದ್ಧ ದೂರು ಸಲ್ಲಿಸಿದ್ದರೂ, ಬಿಬಿಎಂಪಿಯ ಚುನಾವಣೆ ವಿಭಾಗದ ವಿಶೇಷ ಆಯುಕ್ತ ಎಸ್‌. ರಂಗಪ್ಪ ತಡವಾಗಿ ಕ್ರಮ ಕೈಗೊಂಡಿದ್ದಾರೆ. ಈ ವಿಳಂಬದಿಂದ, 2019ರಿಂದ ಹಲವು ಸಂದರ್ಭಗಳಲ್ಲಿ ಚಿಲುಮೆಯ ಪ್ರಸ್ತಾವಗಳು ಮತ್ತು ಬಿಲ್‌ಗಳ ಪ್ರಕ್ರಿಯೆ ವಿರೂಪಗೊಂಡಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

2018ರ ನವೆಂಬರ್‌ನಿಂದ 2022ರ ಆಗಸ್ಟ್‌ವರೆಗೆ ಮತದಾರರ ಜಾಗೃತಿ ಚಟುವಟಿಕೆಗಳಲ್ಲಿ ಚಿಲುಮೆ ಟ್ರಸ್ಟ್ ಭಾಗವಹಿಸಲು ಆದೇಶ ನೀಡಿದ್ದ ಮಂಜುನಾಥ ಪ್ರಸಾದ್ ಹಾಗೂ ತುಷಾರ್ ಗಿರಿನಾಥ್ ಅವರಿಗೆ ಈ ಪ್ರಕರಣದಲ್ಲಿ ಕ್ಲೀನ್ ಚಿಟ್ ನೀಡಲಾಗಿದೆ. ತಮ್ಮ ಅಧೀನ ಅಧಿಕಾರಿಗಳ ಅಸಮರ್ಥ ವಿಮರ್ಶೆಯಿಂದ ಈ ದುರುದ್ದೇಶಪೂರ್ವಕವಲ್ಲದ ಆದೇಶಗಳನ್ನು ಇವರು ಹೊರಡಿಸಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಚುನಾವಣೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಎನ್‌ಜಿಒಗಳ ಬಳಕೆಯಲ್ಲಿ ಸ್ಪಷ್ಟ ಮಾರ್ಗಸೂಚಿಗಳನ್ನು ನೀಡಿ, ಪ್ರಕ್ರಿಯೆಗಳನ್ನು ಅನುಸರಿಸಬೇಕು. ಉಚಿತ ಸೇವೆ ಎಂಬ ನೆಪದಲ್ಲಿ ಹಲವು ಎನ್‌ಜಿಒಗಳು ಬೇರೆ ರೀತಿ ಹೆಜ್ಜೆಗಳನ್ನು ಇರಿಸಬಹುದು. ಇವು ಅತ್ಯಂತ ಸೂಕ್ಷ್ಮವಾಗಿರುತ್ತವೆ. ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ.

49 ಪುಟಗಳ ವರದಿಯಲ್ಲಿ ಸಿ.ಎಸ್‌. ಅಶ್ವತ್ಥನಾರಾಯಣ ಫೌಂಡೇಷನ್, ಮಲ್ಲೇಶ್ವರ ಸ್ಪೋರ್ಟ್ಸ್ ಫೌಂಡೇಷನ್ ಮತ್ತು ಡಿಎಪಿ ಹೊಂಬಾಳೆ ಪ್ರೈ. ಲಿ., ಉಲ್ಲೇಖವಿದೆ. ಎಎಪಿಯ ಚಿಲುಮೆಯ ಸಹವರ್ತಿಗಳು ಮತ್ತು ನಿರ್ದೇಶಕರು ಶೆಲ್ ಕಂಪನಿಗಳನ್ನು ತೆರೆದು ಅಕ್ರಮ ಹಣ ವರ್ಗಾವಣೆಗೆ ಹಲವು ರೀತಿಯ ಕಂಪನಿ ಮತ್ತು ಬ್ಯಾಂಕ್ ಖಾತೆಗಳನ್ನು ಸೃಷ್ಟಿಸಿದ್ದಾರೆ. 'ಡಿಜಿಟಲ್ ಸಮೀಕ್ಷಾ ಖಾತೆಗೆ ಹೊಂಬಾಳೆ ಫ್ಲೆಕ್ಸ್‌ನಿಂದ ಬೃಹತ್ ಮೊತ್ತ ಜಮೆಯಾಗಿದೆ' ಎಂದು ವರದಿ ತಿಳಿಸಿದೆ.

ಅಭಿವೃದ್ಧಿ ಕೆಲಸ ಶ್ರೀರಕ್ಷೆ: ಸತೀಶ್ ರೆಡ್ಡಿ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: 'ಕ್ಷೇತ್ರದಲ್ಲಿ ಮೂರು ಅವಧಿಯಲ್ಲಿ ಮಾಡಿರುವ ಜನಪರ ಅಭಿವೃದ್ಧಿ ಕಾರ್ಯಗಳೇ ನನಗೆ ಗೆಲುವು ತಂದುಕೊಡಲಿವೆ' ಎಂದು ಬಿಜೆಪಿ ಅಭ್ಯರ್ಥಿ ಎಂ.ಸತೀಶ್ ರೆಡ್ಡಿ ವಿಶ್ವಾಸ ವ್ಯಕ್ತಪಡಿಸಿದರು.

ಸೋಮವಾರ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದದಿಂದ ನಾಲ್ಕನೇ ಬಾರಿ ಉಮೇದುವಾರಿಕೆ ಸಲ್ಲಿಸಿ ಅವರು ಮಾತನಾಡಿದರು.

'ಚುನಾವಣೆ ಸಂದರ್ಭದಲ್ಲಿ ಬಂದು ಹೋಗುವ ಕಾಂಗ್ರೆಸ್ ಅಭ್ಯರ್ಥಿಗಳ ಬಗ್ಗೆ ಹೆಚ್ಚು ಗಮನವನ್ನು ನೀಡುವ ಅವಶ್ಯಕತೆ ಇಲ್ಲ. ಇದುವರೆಗೂ ಜನರಿಗೆ ಕಾಣಿಸಿಕೊಳ್ಳದ, ಕೋವಿಡ್ ವೇಳೆ ಎಲ್ಲಿದ್ದರೂ ಎಂದು ಯಾರಿಗೂ ಗೊತ್ತಿಲ್ಲದ ಕಾಂಗ್ರೆಸ್ ಅಭ್ಯರ್ಥಿ ಈ ಬಾರಿ ಕಣದಲ್ಲಿದ್ದಾರೆ. ಅವರಿಗೆ ಠೇವಣಿ ಇಲ್ಲದಂತೆ ಈ ಬಾರಿ ಬೊಮ್ಮನಹಳ್ಳಿಯ ಜನರು ಮಾಡಲಿದ್ದಾರೆ' ಎಂದರು.

'ಮೂರು ಬಾರಿ ಆಯ್ಕೆಯಾಗುವ ಮೂಲಕ ನನ್ನ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದು, ಇವುಗಳ ಆಧಾರದ ಮೇಲೆ ಮತದಾರರು ಹೆಚ್ಚಿನ ಅಂತರದಿಂದ ಗೆಲ್ಲಿಸಲಿದ್ದಾರೆ' ಎಂದು ಹೇಳಿದರು.

'ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎಂದೂ ಆಗದಷ್ಟು ಅಭಿವೃದ್ಧಿ ಕಾರ್ಯವನ್ನು ಮಾಡಿವೆ. ಇದರ ಆಧಾರದಲ್ಲಿ ಮತಯಾಚನೆ ಮಾಡಲಿದ್ದೇನೆ. ಕ್ಷೇತ್ರದ ಜನ ನನ್ನ ಕೈಹಿಡಿಯಲಿದ್ದಾರೆ' ಎಂದರು.

ನಾಮಪತ್ರ ಸಲ್ಲಿಕೆಗೂ ಮೊದಲು ಬೆಂಬಲಿಗರೊಂದಿಗೆ ಬೃಹತ್ ಮೆರವಣಿಗೆಯಲ್ಲಿ ಆಗಮಿಸಿದ ಅವರು, ಹೊಂಗಸಂದ್ರದ ವೀರಾಂಜನೇಯ ಸ್ವಾಮಿ ದೇವರಿಗೆ ಪೂಜೆ ಸಲ್ಲಿಸಿದರು. ಬಳಿಕ ಬಿಬಿಎಂಪಿ ವಲಯ ಕಚೇರಿಗೆ ಆಗಮಿಸಿ ನಾಮಪತ್ರ ಸಲ್ಲಿಸಿದರು.

ಮೆರವಣಿಗೆಯಲ್ಲಿ ಬಿಜೆಪಿ ಮುಖಂಡರಾದ ಹೊಂಗಸಂದ್ರ ಶ್ರೀನಿವಾಸ್ ರೆಡ್ಡಿ, ನ್ಯಾನಪನಹಳ್ಳಿ ಮಂಜುನಾಥ್, ಸಯ್ಯದ್ ಸಲಾಂ, ರಮೇಶ್, ಕೇಬಲ್ ಶ್ರೀನಿವಾಸ್ ರೆಡ್ಡಿ ಹಾಜರಿದ್ದರು.

ಬಿಜೆಪಿ ಅಭ್ಯರ್ಥಿ ಸತೀಶ್ ರೆಡ್ಡಿ ಮೆರವಣಿಗೆ ನಡೆಸಿದರು.

₹ 81.08 ಲಕ್ಷ ಮೌಲ್ಯದ ಗೋವಾ ಮದ್ಯ ಜಪ್ತಿ

ಬೆಂಗಳೂರು: ಗೋವಾದಿಂದ ನಗರಕ್ಕೆ ಬಸ್‌ನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ₹ 81.08 ಲಕ್ಷ ಮೌಲ್ಯದ ಮದ್ಯವನ್ನು ಅಬಕಾರಿ ಇಲಾಖೆ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

'ಏಪ್ರಿಲ್ 14ರಂದು ರಾತ್ರಿ 8 ಗಂಟೆ ಸುಮಾರಿಗೆ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಹೊರಟಿದ್ದ ಬಸ್ (ಕೆಎ 51 ಎಎಫ್ 3046) ತಪಾಸಣೆ ನಡೆಸಲಾಗಿತ್ತು. ಅದರಲ್ಲಿ 47.250 ಲೀಟರ್ ಗೋವಾ ಮದ್ಯವಿತ್ತು. ಬಸ್ ಸಮೇತ ಮದ್ಯ ಜಪ್ತಿ ಮಾಡಲಾಗಿದೆ' ಎಂದು ಅಬಕಾರಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ಬಸ್ ಚಾಲಕನನ್ನು ಬಂಧಿಸಿ, ಆತನ ಮೊಬೈಲ್ ಜಪ್ತಿ ಮಾಡಲಾಗಿದೆ. ತನಿಖೆ ಮುಂದುವರಿಸಲಾಗಿದೆ' ಎಂದಿದ್ದಾರೆ. ಅಬಕಾರಿ ಜಂಟಿ ಕಮಿಷನರ್ ಎ.ಎಲ್. ನಾಗೇಶ್ ಮಾರ್ಗದರ್ಶನದಲ್ಲಿ ಅಬಕಾರಿ ಎಸ್ಪಿ ಜಿ. ವಿವೇಕ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು.

'ಕೆಆರ್‌ಎಸ್‌ಪಿಗೆ ವಾಹನ ಬಳಸಲು ಅನುಮತಿ ಕೊಡಿ'

ಬೆಂಗಳೂರು: 'ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ (ಕೆಆರ್‌ಎಸ್‌ಪಿ) ಪದಾಧಿಕಾರಿಗಳು ಹಾಗೂ ಬೆಂಗಳೂರಿನ ಯಲಹಂಕ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಜೆ.ಪಿ. ರಘುನಂದನ ಅವರು ಚುನಾವಣೆಯ ಪ್ರಚಾರ ಕಾರ್ಯದಲ್ಲಿ ವಾಹನ ಮತ್ತು ಧ್ವನಿವರ್ಧಕ ಬಳಸುವುದಕ್ಕೆ ಅನುಮತಿ ನೀಡಿ' ಎಂದು ಹೈಕೋರ್ಟ್, ಕೇಂದ್ರ ಚುನಾವಣಾ ಆಯೋಗಕ್ಕೆ ನಿರ್ದೇಶಿಸಿದೆ.

ವಾಹನ ಮತ್ತು ಧ್ವನಿವರ್ಧಕ ಬಳಸಲು ಅನುಮತಿ ನಿರಾಕರಿಸಿದ್ದ ಗದಗ, ವಿಜಯನಗರ ಜಿಲ್ಲಾ ಚುನಾವಣಾಧಿಕಾರಿ ಮತ್ತು ಯಲಹಂಕ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಗಳ ಕ್ರಮವನ್ನು ಪ್ರಶ್ನಿಸಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್ ಹಾಗೂ ಅಭ್ಯರ್ಥಿ ಜೆ.ಪಿ. ರಘುನಂದನ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠವು ಈ ಕುರಿತಂತೆ ಆದೇಶಿಸಿದೆ.

ಅರ್ಜಿಗೆ ಸಂಬಂಧಿಸಿ ಆಕ್ಷೇಪಣೆ ಸಲ್ಲಿಸುವಂತೆ ಪ್ರತಿವಾದಿಗಳಾದ ಕೇಂದ್ರ ಚುನಾವಣಾ ಆಯೋಗ, ಗದಗ, ವಿಜಯನಗರ ಮತ್ತು ಬೆಂಗಳೂರಿನ ಯಲಹಂಕ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಗೆ ಸೂಚಿಸಿರುವ ಪೀಠವು, ವಿಚಾರಣೆಯನ್ನು ಬೇಸಿಗೆ ರಜೆ ನಂತರಕ್ಕೆ ಮುಂದೂಡಿದೆ.

ಕಾಂಗ್ರೆಸ್ ಎಷ್ಟು ಲಿಂಗಾಯತರನ್ನು ಸಿ.ಎಂ ಮಾಡಿದೆ: ಬಿಜೆಪಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ 52 ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷ ಕರ್ನಾಟಕದಲ್ಲಿ ಎಷ್ಟು ಜನ ಲಿಂಗಾಯತರನ್ನು ಮುಖ್ಯಮಂತ್ರಿ ಮಾಡಿದೆ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಹಾಗೂ ರಾಜ್ಯಸಭಾ ಸದಸ್ಯ ಸುಧಾಂಶು ತ್ರಿವೇದಿ ಪ್ರಶ್ನಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ಅವಧಿಯಲ್ಲಿ ಲಿಂಗಾಯತ ಸಮುದಾಯಕ್ಕೆ ಸೇರಿದ ವಿರೇಂದ್ರ ಪಾಟೀಲ ಅವರನ್ನು ಮಾತ್ರ ಮುಖ್ಯಮಂತ್ರಿ ಮಾಡಿ ಅವಧಿಗೆ ಮುನ್ನವೇ ಅವರನ್ನು ಕೆಳಗಿಳಿಸಲಾಯಿತು. ಆ ಬಳಿಕ ಯಾರನ್ನು ಮಾಡಿದ್ದೀರಿ' ಎಂದು ಕುಟುಕಿದರು.

ನಿಜಲಿಂಗಪ್ಪನವರನ್ನು ಅಧಿಕಾರದಲ್ಲಿದ್ದ ಇಂಧಿರಾಗಾಂಧಿಯವರೇ ಸೋಲಿಸಿದ್ದರು. ಆದರೆ, ರಾಜ್ಯದಲ್ಲಿ ಬಿಜೆಪಿ ಆಡಳಿತದಲ್ಲಿ ನಾಲ್ವರು ಮುಖ್ಯಮಂತ್ರಿಗಳ ಪೈಕಿ ಮೂವರು ಮುಖ್ಯಮಂತ್ರಿಗಳು ಲಿಂಗಾಯತ ಸಮುದಾಯಕ್ಕೆ ಸೇರಿದವರೇ ಆಗಿದ್ದಾರೆ ಎಂದರು.

ಈಗ ಕಾಂಗ್ರೆಸ್ ಸೇರಿರುವ ಜಗದೀಶ ಶೆಟ್ಟರ್ ಅವರಿಗೆ ಯಾವ ಸ್ಥಾನ ನೀಡುತ್ತದೆ ಎಂಬುದನ್ನು ಆ ಪಕ್ಷದ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಬೇಕು. ಲಿಂಗಾಯತರನ್ನು ಕಡೆಗಣಿಸಲಾಗುತ್ತಿದೆ ಎಂದು ಕಾಂಗ್ರೆಸ್ ನಾಯಕರು ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಆದರೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸಬ್–ಕಾ–ಸಾತ್, ಸಬ್–ಕಾ–ವಿಶ್ವಾಸ್, ಸಬ್–ಕಾ–ವಿಕಾಸ್ ಮೇಲೆ ವಿಶ್ವಾಸವಿಟ್ಟು ರಾಜ್ಯದ ಎಲ್ಲ ಜನರನ್ನೂ ಜೊತೆಯಾಗಿ ಕೊಂಡೊಯ್ಯುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ ಎಂದು ಹೇಳಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕರ್ನಾಟಕದಲ್ಲಿ ಗ್ಯಾರಂಟಿ ಹೆಸರಿನಲ್ಲಿ ಸುಳ್ಳು ಭರವಸೆಗಳನ್ನು ನೀಡಿ, ಜನರನ್ನು ದಾರಿ ತಪ್ಪಿಸುವ ಪ್ರಯತ್ನ ನಡೆಸಿದ್ದಾರೆ. ರಾಜಸ್ಥಾನ, ಛತ್ತಿಸಗಢ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಅಧಿಕಾರಕ್ಕೆ ಬರುವುದಕ್ಕೆ ಮೊದಲೇ ಹಲವು ಭರವಸೆಗಳನ್ನು ನೀಡಿದ್ದರು. ಅದರಲ್ಲೂ ಛತ್ತಿಸಗಢದಲ್ಲಿ ಅಧಿಕಾರಕ್ಕೆ ಬಂದ ಹತ್ತೇ ದಿನಗಳಲ್ಲಿ ರೈತರ ಸಾಲ ಮನ್ನಾ ಮಾಡುವುದಾಗಿ ಹೇಳಿದ್ದರು. ಐದು ವರ್ಷವಾದರೂ ರೈತರ ಸಾಲ ಮನ್ನಾ ಮಾಡಿಲ್ಲ ಎಂದರು.

ರಾಜಸ್ಥಾನದಲ್ಲಿ ಚುನಾವಣೆಗೂ ಮುಂಚೆ ನಿರುದ್ಯೋಗಿಗಳಿಗೆ ತಿಂಗಳಿಗೆ ₹ 5 ಸಾವಿರ ನೀಡುವುದಾಗಿ ಕಾಂಗ್ರೆಸ್ ಭರವಸೆ ನೀಡಿತ್ತು. ಅದೂ ಈಡೇರಿಲ್ಲ. ಹಿಮಾಚಲ ಪ್ರದೇಶದಲ್ಲಿ ಪೆಟ್ರೋಲ್ ಉತ್ಪನ್ನಗಳ ದರಗಳನ್ನು ಇಳಿಸುವುದಾಗಿ ಭರವಸೆ ನೀಡಿತ್ತು. ಆದರೆ, ಅಲ್ಲಿ ದರ ಇಳಿಕೆ ಬದಲು ಪೆಟ್ರೋಲ್ ಲೀಟರ್‌ಗೆ ₹3 ಏರಿಕೆಯಾಗಿದೆ. ಹೀಗೆ ಚುನಾವಣೆ ವೇಳೆ ಪೊಳ್ಳು ಭರವಸೆ ನೀಡಿ, ಜನರ ದಾರಿ ತಪ್ಪಿಸಿ ಅಧಿಕಾರಕ್ಕೇರುವ ಆಸೆಯನ್ನು ಕಾಂಗ್ರೆಸ್ ಹೊಂದಿದೆ. ಕರ್ನಾಟಕ ಮತ್ತು ಬೆಂಗಳೂರು ಜನತೆಗೆ ಇವೆಲ್ಲದರ ಬಗ್ಗೆ ಅರಿವಿದೆ ಎಂದು ಹೇಳಿದರು.

ಮತ್ತಷ್ಟು ಮಂದಿ ಜೆಡಿಎಸ್‌ನತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಮಪತ್ರ ಸಲ್ಲಿಕೆಗೆ ಮೂರು ದಿನಗಳು ಬಾಕಿ ಇರುವಾಗಲೇ ಬಿಜೆಪಿ ಮತ್ತು ಕಾಂಗ್ರೆಸ್ ಟಿಕೆಟ್ ಕೈತಪ್ಪಿರುವ ಇನ್ನಷ್ಟು ಮಂದಿ ಜೆಡಿಎಸ್‌ನತ್ತ ಹೆಜ್ಜೆ ಇಟ್ಟಿದ್ದಾರೆ. ಅವರಿಗಾಗಿ ಕಾಯುತ್ತಿರುವ ಜೆಡಿಎಸ್ ವರಿಷ್ಠರು, ಅಭ್ಯರ್ಥಿಗಳ ಕೊನೆಯ ಪಟ್ಟಿ ಬಿಡುಗಡೆ ತಡೆಹಿಡಿದಿದ್ದಾರೆ.

ಬಿಜೆಪಿ ಟಿಕೆಟ್ ಕೈತಪ್ಪಿದ ಬಳಿಕ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ನೆಹರು ಓಲೇಕಾರ್ ಹಾವೇರಿ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಸಿದ್ಧತೆ ನಡೆಸಿದ್ದಾರೆ. ಶಿವಮೊಗ್ಗ ನಗರದ ಮಾಜಿ ಶಾಸಕ ಕೆ.ಬಿ. ಪ್ರಸನ್ನ ಕುಮಾರ್ ಕೂಡ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಲು ಮುಂದಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೊನೆಯ ಹಂತದಲ್ಲಿ 25ರಿಂದ 30 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಲು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸಿದ್ಧತೆ ನಡೆಸಿದ್ದಾರೆ.

ಬಿಜೆಪಿ ಹಾಗೂ ಕಾಂಗ್ರೆಸ್‌ನ ಕೆಲವು ಮಾಜಿ ಶಾಸಕರ ಹೆಸರುಗಳು ಈ ಪಟ್ಟಿಯಲ್ಲಿ ಇರುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಕೊಪ್ಪಳ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಸಂಸದ ಕರಡಿ ಸಂಗಣ್ಣ, ಪಕ್ಷ ಬೇಡಿಕೆಗೆ ಮಣಿಯದಿದ್ದರೆ ಜೆಡಿಎಸ್‌ಗೆ ಜಿಗಿಯುವ ಪ್ರಯತ್ನದಲ್ಲಿದ್ದರು. ಸೊಸೆಗೆ ಟಿಕೆಟ್ ದೊರಕಿದ ಬಳಿಕ ಅವರು ಪಕ್ಷಾಂತರದ ಪ್ರಯತ್ನದಿಂದ ಹಿಂದೆ ಸರಿದಿದ್ದಾರೆ. ಕೊಪ್ಪಳ ಕ್ಷೇತ್ರಕ್ಕೂ ಪ್ರಬಲ ಅಭ್ಯರ್ಥಿ ಕಣಕ್ಕಿಳಿಸಲು ಜೆಡಿಎಸ್ ಸಿದ್ಧತೆ ನಡೆಸಿದೆ ಎಂದು ಪಕ್ಷದ ಮುಖಂಡರೊಬ್ಬರು ತಿಳಿಸಿದರು.

ಬಿಬಿಎಂಪಿ: ವೋಟ್- ಎ- ಥಾನ್ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ನಗರ ಜಿಲ್ಲೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಮತದಾನವಾಗಬೇಕೆಂಬ ದೃಷ್ಟಿಯಿಂದ ಬಿಬಿಎಂಪಿ 'ವೋಟ್–ಎ–ಥಾನ್' ಸ್ಪರ್ಧೆಯನ್ನು ಆಯೋಜಿಸಿದೆ.

ಚುನಾವಣೆ ಕುರಿತು ರೀಲ್ಸ್, ಪೋಸ್ಟರ್ಸ್, ಸ್ಲೋಗನ್ ಮತ್ತು ಜಿಂಗಲ್ಸ್‌ಗಳನ್ನು ಮತದಾರರು ಮಾಡುವ 'ವೋಟ್-ಎ-ಥಾನ್ ಸ್ಪರ್ಧೆ'ಯಲ್ಲಿ ಭಾಗವಹಿಸಬಹುದು ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಹೇಳಿದರು.

'ವೋಟ್-ಎ-ಥಾನ್' ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಅವರು, ಮತದಾನ ಪ್ರಮಾಣವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಚುನಾವಣಾ ಆಯೋಗ ಹಾಗೂ ಪಾಲಿಕೆ ವತಿಯಿಂದ ಸಾಕಷ್ಟು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಾಗರಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ. ಇದೀಗ ವೋಟ್-ಎ-ಥಾನ್ ಎಂಬ ವಿನೂತನ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

'ವೋಟ್-ಎ-ಥಾನ್' ಸ್ಪರ್ಧೆ ಬೆಂಗಳೂರು ಜಿಲ್ಲೆಯ ಎಲ್ಲಾ 28 ವಿಧಾನಸಭೆ ಕ್ಷೇತ್ರಗಳಲ್ಲಿ ಏ.17ರಿಂದ ಏ.30ರವರೆಗೆ ನಡೆಯಲಿದೆ. ಸೃಜನಶೀಲ ಆಲೋಚನೆಗಳ ಮೂಲಕ ರೀಲ್ಸ್, ಪೋಸ್ಟರ್ಸ್, ಸ್ಲೋಗನ್ ಮತ್ತು ಜಿಂಗಲ್ಸ್‌ಗಳನ್ನು ಮಾಡಿ ಹ್ಯಾಶ್ ಟ್ಯಾಗ್ (#Vote-A-Thon) ಬಳಸಿ ಸಾಮಾಜಿಕ ಜಾಲತಾಣದಲ್ಲಿ ಹಾಕಬಹುದು ಅಥವಾ ಇ-ಮೇಲ್ contact-us@bbmp.gov.inಗೆ ಏ.30ರೊಳಗೆ ಕಳುಹಿಸಬೇಕು ಎಂದರು.

ಕ್ರಿಯಾತ್ಮಕವಾಗಿ ರಚಿಸಿದ ರೀಲ್ಸ್, ಪೋಸ್ಟರ್ಸ್, ಸ್ಲೋಗನ್ ಮತ್ತು ಜಿಂಗಲ್ಸ್‌ಗಳಿಗೆ ನಗದು ಬಹುಮಾನ, ಪ್ರಮಾಣ ಪತ್ರ ಹಾಗೂ ಆಕರ್ಷಕ ಬಹುಮಾನಗಳನ್ನು ವಿತರಿಸಲಾಗುವುದು ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

CONNECT ಕ್ಲಾಸಿಫೈಡ್ಸ್

BUSINESS
Business Offers
Finance
NRI'S INVESTMENT/FINANCE available on low-interest for properties,land& building,sites flats,converted lands also personal,educational call pengana-7204995189

ಇಂಡಿಯನ್ ಆರ್ಟಿಸನ್ ಬಜಾರ್
INDIAN ARTISAN BAZAAR
Arts | Crafts | Handlooms & Lifestyle Exhibition
10 DAYS EXHIBITION
GO VOCAL FOR LOCAL
Event Details
14th April to 23rd April 2023
11.00 AM to 7.00 PM
Organized By: Grand Flea Market
100+ Shopping Stalls | Live Performance & More!
Djembe Live Performance 22nd April 2023 Timings: 5pm - 7pm Venue: Karnataka Chitrakala Parishath Kumara Krupa Road, Bengaluru-01 Entry Free..!
Fire Show Live Performance Date: 23rd April 2023 Timings: 6 PM TO 7.30 PM Venue: Karnataka Chitrakala Parishath Kumara Krupa Road Bengaluru Entry Free
Free Entry /GrandFleaMarket
For Details Contact 9036658774 / 6364685716
KARNATAKA CHITRAKALA PARISHATH Kumara Krupa Road, Near Shivananda Circle, Bangalore - 560 001

PERSONAL
Announcements

ANNOUNCEMENT
I, **THARAMANI** M/o No.JC-342922H, Ex-Nb Sub (CLK/SD) Praveen N Residing at at No. 743, 6th Cross, Ramabai Nagar, Mysore-570008, my D.O.B. is worngly mentioned in my son's service record as 11-03-1972. my correct D.O.B. is **01-01-1962.** vide affidavit dated 15.04.2023 before Notary Meer Hassan, Bangalore.

Change of Name

I, RISHITA R TELI, residing at Belagavi City-591103 have changed my name as RISHITA TELI, vide affidavit dated 17/04/2023 before Notary P.C.Ramaiah, Bengaluru

I, FARZANA, residing at No.3/1,'A' Street, Nanjappa Circle,Shanthinagar, Bangalore-560027,have changed my daughter's name from SAFA AFSHEEN to SAFA SARWAT,vide affidavit dated 17.04.2023, sworn before the Notary, B.Chitra.

CHANGE OF NAME
I, **NAGENDRA** Father of No.JC-342922H, Ex-Nb Sub (CLK/SD) Praveen N Residing at No. 743, 6th Cross, Ramabai Nagar, Mysore-570008, have changed my name Nagendra to **NAGENDRA N,** my D.O.B. is worngly mentioned in my son's service record as 19-08-1964. my correct D.O.B. is **01-07-1954.** vide affidavit dated 15.04.2023 before Notary Meer Hassan, Bangalore.

I, KHUSHI, resident of No. 97, 13th Main, 30th Cross, Banashankari 2nd Stage, Bangalore-560070, have changed my name to KHUSHI MEHTA Vide affidavit dated 13-04-2023 sworn before Advocate & Notary L.Shankaranarayana, Bengaluru

I, RISHI MEHTA, resident of No. 97, 13th Main, 30th Cross, Banashankari 2nd Stage, Bangalore-560070, have changed my name to RISHI K MEHTA Vide affidavit dated 13-04-2023 sworn before Advocate & Notary L.Shankaranarayana, Bengaluru

CHANGE OF NAME
I, **H.M. HRUTHIK**, Residing at Kurubarapet, Hoskote Town, Bangalore Rural- 562114, have changed my name to **HETVIK H.M.** vide affidavit dated V. Sadappa, Hoskote. Henceforth I shall be called **HETVIK H.M.** only.

SUMANGALA ,# 36,5th main,9th cross,srinidhi layout,chunchagatta near maruti school,bangalore 560062 ,Changed my name to Sumangala Devaraju Dated 15.04.2023 before notary by B.K.R.Krishnamurthy

I, VINU JOHNY R/o#254, Skanda Sky Kaverappa Layout,Gear Road, Kadubeesanahalli, Bengaluru- 560103.Have Changed My Name to VINU JOHNY JOSEPH vide Affidavit Dated 17-4-2023 Before Notary Hemalatha, Bangalore.

WE, BHAGYASHREE D R & MADHUSUDHAN K, residing at No-52 1st Main, 3rd Cross, Nrupatunga Layout, R.T.Nagar, Bengaluru-560032 have changed our son's name from AVADHOOTH M, to AWADHUTA M, vide affidavit dated:12-04-2023 before Notary D.Sarala Kumari Bengaluru

DH To Place your ad in Deccan Herald & Prajavani Classifieds
For details contact : 9886213331 : 9901641752 9845114560 : 9731810277 080 - 45557163 / 164
E-mail: dhclassifieds@deccanherald.co.in

JOB OPPORTUNITIES
Accounts & Finance

HIRING
Milroc Good Earth Developers - Panjim - Goa is looking for Senior Accountant preferably B.com with 5-6 years experience in the field of Construction and having knowledge of Income Tax, TDS, GST filling returns.
Interested candidates
Contact: mail@milrocgoodearth.in or Call: 0832-2230536/2224708
MILROC GoodEarth

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt Ltd. Bengaluru

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ಗುರುದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿ ಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ, ಮದುವೆ ಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮೀ ಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ: ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಶ್ರೀ ಗುರೂಜಿ ಜಿ.ಕೆ.ಡಿ. ಗುರುದಾಸನ್ (ಕೇರಳ)
Mob.: 98441 06430 / 81579 14600

1. ನಾಮಪತ್ರ ಸಲ್ಲಿಸುವ ಮುನ್ನ ಸೋಮವಾರ ನಡೆದ ಮೆರವಣಿಗೆಯಲ್ಲಿ ಕಾರ್ಯಕರ್ತರು ಶಾಸಕ ಉದಯ ಬಿ.ಗರುಡಾಚಾರ್ ಅವರನ್ನು ಹೊತ್ತುಕೊಂಡು ಸಾಗಿದರು 2. ಅನೂಪ ಅಯ್ಯಂಗಾರ್ ಅವರು ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಸಾಗಿದರು 3. ಮಹಾಲಕ್ಷ್ಮಿ ಲೇಔಟ್ ಬಿಜೆಪಿ ಅಭ್ಯರ್ಥಿ ಕೆ. ಗೋಪಾಲಯ್ಯ ನೂರಾರು ಬೆಂಬಲಿಗರೊಂದಿಗೆ ಕುರುಬರಹಳ್ಳಿಯ ಚಾಲುಕ್ಯ ವೃತ್ತದಿಂದ ನಾಗಪುರ ವಾರ್ಡ್‌ನ ಬಿಬಿಎಂಪಿ ಕಚೇರಿವರೆಗೆ ಮೆರವಣಿಗೆ ಮೂಲಕ ತೆರಳಿದರು 4. ಬಸವನಗುಡಿ ವಿಧಾನಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯು.ಬಿ. ವೆಂಕಟೇಶ್ ಅವರು ಗವಿಗಂಗಾಧರೇಶ್ವರ ದೇವಸ್ಥಾನದಿಂದ ನೂರಾರು ಕಾರ್ಯಕರ್ತರೊಂದಿಗೆ ಮೆರವಣಿಗೆ ಮೂಲಕ ತೆರಳಿ ನಾಮಪತ್ರ ಸಲ್ಲಿಸಿದರು.

– ಪ್ರಜಾವಾಣಿ ಚಿತ್ರಗಳು

ರಂಗೇರಿದ ಚುನಾವಣೆ ಕಣ • ಅಭ್ಯರ್ಥಿಗಳ ಶಕ್ತಿ ಪ್ರದರ್ಶನ • ದೇವಸ್ಥಾನಗಳಲ್ಲಿ ವಿಶೇಷ ಪೂಜೆ • ಉಮೇದುವಾರಿಕೆ ಸಲ್ಲಿಕೆಗೆ ಮೂರು ದಿನ ಬಾಕಿ

ಪ್ರಮುಖರ ನಾಮಪತ್ರ ಸಲ್ಲಿಕೆ: ಎಲ್ಲೆಡೆ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ನಾಮಪತ್ರ ಸಲ್ಲಿಕೆಗೆ ಮೂರು ದಿನ ಬಾಕಿ ಇದ್ದು, ಸಚಿವ ಎಸ್.ಟಿ.ಸೋಮಶೇಖರ್, ಆರ್.ಅಶೋಕ್, ಸಿ.ಎನ್.ಅಶ್ವತ್ಥನಾರಾಯಣ ಸೇರಿ ಪ್ರಮುಖರು ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಕೆಗೆ ಗುರುವಾರ ಕಡೆ ದಿನವಾಗಿದ್ದರೂ ಸೋಮವಾರವೇ ಅತೀ ಹೆಚ್ಚಿನ ನಾಮಪತ್ರ ಸಲ್ಲಿಕೆಯಾದವು. ಬಹುತೇಕ ಅಭ್ಯರ್ಥಿಗಳು ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಬಳಿಕ ಬೆಂಬಲಿಗರೊಂದಿಗೆ ಭಾರಿ ಮೆರವಣಿಗೆ ನಡೆಸಿ ಶಕ್ತಿ ಪ್ರದರ್ಶನ ಮಾಡಿದರು.

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಮಲ್ಲೇಶ್ವರದ ಮಾರಮ್ಮ ಸರ್ಕಲ್‌ನಲ್ಲಿ ಪೂಜೆ ಸಲ್ಲಿಸಿ, ಸಾವಿರಾರು ಕಾರ್ಯಕರ್ತರೊಂದಿಗೆ ಪಾದಯಾತ್ರೆ ಮೂಲಕ ಚುನಾವಣಾಧಿಕಾರಿ ಕಚೇರಿಗೆ ಸಾಗಿದರು.

ಮಲ್ಲೇಶ್ವರ ಕ್ಷೇತ್ರದ ವ್ಯಾಪ್ತಿಯ ಯದುಗಿರಿ ಯತಿರಾಜ ಮಠ, ಬಡಗನಾಡು ಬ್ರಾಹ್ಮಣ ಮಹಾಸಭಾ, ಸಿರಿನಾಡು ಬ್ರಾಹ್ಮಣ ಸಭಾ, ಅಕ್ಷಯ ಬ್ರಾಹ್ಮಣ ಸಭಾ, ಮಹಾತ್ಮ ಮಹಾ ಮಂಡಲ, ಮಾಧ್ವ ಮಹಾಮಂಡಲ, ವಿಪ್ರತ್ರಯ ಪರಿಷತ್, ಸುಧೀಂದ್ರ ನಗರದ ಮಾಧ್ವ ಸಂಘ ಮತ್ತು ಸಂದೀಪನಿ ಗುರುಕುಲದ ಪದಾಧಿಕಾರಿಗಳು ನಾಮಪತ್ರದ ಜತೆ ಸಲ್ಲಿಸಬೇಕಾದ ₹10 ಸಾವಿರ ಠೇವಣಿ ಮೊತ್ತವನ್ನು ಅಶ್ವತ್ಥನಾರಾಯಣ ಅವರಿಗೆ ದೇಣಿಗೆಯಾಗಿ ಹಸ್ತಾಂತರಿಸಿದರು. ಇದೇ ಹಣವನ್ನು ಸಚಿವರು ನಾಮಪತ್ರದ ಜತೆ ಚುನಾವಣಾ ಅಧಿಕಾರಿಗಳಿಗೆ ಠೇವಣಿಯಾಗಿ ನೀಡಿದರು.

ಕಾಂಗ್ರೆಸ್ ಅಭ್ಯರ್ಥಿ ಅನೂಪ್ ಅಯ್ಯಂಗಾರ್ ಅವರು ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಸಾಗಿ ಉಮೇದುವಾರಿಕೆ ಸಲ್ಲಿಸಿದರು. ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಜತೆಗಿದ್ದರು.

ಬನಶಂಕರಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಮೆರವಣಿಗೆ ಪ್ರಾರಂಭಿಸಿದ ಕಂದಾಯ ಸಚಿವ ಆರ್. ಅಶೋಕ ಅವರು, ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಿಂದ ಸಾವಿರಾರು ಬೆಂಬಲಿಗರೊಂದಿಗೆ ತೆರಳಿ ನಾಮಪತ್ರ ಸಲ್ಲಿಸಿದರು. ಬಳಿಕ ಮಾತನಾಡಿ, 'ಈ ಬಾರಿ 1 ಲಕ್ಷ ಮತಗಳ ಅಂತರದಿಂದ ಗೆಲುವು ಸಾಧಿಸುತ್ತೇನೆ' ಎಂದರು.

'ನಾಳೆ ಕನಕಪುರದಲ್ಲಿ ನಾಮಪತ್ರ ಸಲ್ಲಿಸಲಿದ್ದೇನೆ. ನಾನು ಬಿಜೆಪಿಯ ಸೈನಿಕ. ಪಕ್ಷದ ಕಮಾಂಡರ್‌ಗಳು ಏನು ಹೇಳುತ್ತಾರೋ ಅದನ್ನು ಮಾಡುತ್ತೇನೆ' ಎಂದು ಹೇಳಿದರು.

ಇಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಆಗಿದೆ. ಮಾದರಿ ಎನಿಸುವಂತಹ ಪಾರ್ಕ್‌ಗಳನ್ನು ನಿರ್ಮಾಣ ಮಾಡಿದ್ದೇವೆ. ಸ್ವಚ್ಛ, ಸುಂದರ, ಹಸಿರು ಪದ್ಮನಾಭನಗರ ನಮ್ಮ ಗುರಿ. ಎಲ್ಲರೂ ಶಾಂತಿ, ಸಹಬಾಳ್ವೆಯಿಂದ ಬದುಕುತ್ತಿರುವ ಪದ್ಮನಾಭನಗರ ಮಾದರಿ ಕ್ಷೇತ್ರ. ಕಾರ್ಯಕರ್ತರೇ ನನ್ನ ಶಕ್ತಿ, ಆಸ್ತಿ ಎಲ್ಲವೂ ಆಗಿದ್ದಾರೆ.

ಕ್ಷೇತ್ರ	ಶಾಂತಿನಗರ
ಅಭ್ಯರ್ಥಿ	ಕೆ.ಶಿವಕುಮಾರ್ (45)
ಪಕ್ಷ	ಬಿಜೆಪಿ
ಒಟ್ಟು ಆಸ್ತಿ	₹ 29 ಕೋಟಿ
ಶಿಕ್ಷಣ	ಬಿ.ಕಾಂ
ಚರಾಸ್ತಿ	₹ 39.35 ಲಕ್ಷ
ಸ್ಥಿರಾಸ್ತಿ	₹ 28 ಕೋಟಿ
ವಾಹನ	₹ 71 ಲಕ್ಷ ಮೌಲ್ಯದ ಮೂರು ಕಾರು
ಪತ್ನಿ ಬಿಂದುಶ್ರೀ ಹೆಸರಿನಲ್ಲಿರುವ ಆಸ್ತಿ	₹ 68.70 ಲಕ್ಷ, ಕಾರಿನ ಸಾಲ ₹25.67 ಲಕ್ಷ

ಕ್ಷೇತ್ರ	ಜಯನಗರ
ಅಭ್ಯರ್ಥಿ	ಸೌಮ್ಯ ರೆಡ್ಡಿ (40)
ಪಕ್ಷ	ಕಾಂಗ್ರೆಸ್
ಒಟ್ಟು ಆಸ್ತಿ	₹2.11 ಕೋಟಿ
ಅಪರಾಧ ಪ್ರಕರಣ	5
ಶಿಕ್ಷಣ	ಕೆಮಿಕಲ್ ಎಂಜಿನಿಯರ್
ಚರಾಸ್ತಿ	₹2.11 ಕೋಟಿ
ಸಾಲ	₹1.38 ಕೋಟಿ
ವಾಹನಗಳು	ಇನ್ನೋವಾ ಕಾರು

ಕ್ಷೇತ್ರ	ರಾಜರಾಜೇಶ್ವರಿನಗರ
ಅಭ್ಯರ್ಥಿ	ಕುಸುಮಾ ಎಚ್.
ಪಕ್ಷ	ಕಾಂಗ್ರೆಸ್
ಒಟ್ಟು ಆಸ್ತಿ	₹4.77 ಕೋಟಿ
ಅಪರಾಧ ಪ್ರಕರಣ	ಮೂರು ಪ್ರಕರಣ
ಶಿಕ್ಷಣ	ಎಂ.ಎಸ್ (ಮಾಹಿತಿ ತಂತ್ರಜ್ಞಾನ, ಅಮೆರಿಕ)
ಚರಾಸ್ತಿ	₹2.80 ಕೋಟಿ
ಸ್ಥಿರಾಸ್ತಿ	₹1.97 ಕೋಟಿ
ಸಾಲ	₹1.22 ಕೋಟಿ
ವಾಹನಗಳು	ಇಲ್ಲ

ಕ್ಷೇತ್ರ	ಮಲ್ಲೇಶ್ವರ
ಅಭ್ಯರ್ಥಿ	ಡಾ.ಸಿ.ಎನ್. ಅಶ್ವತ್ಥನಾರಾಯಣ
ಪಕ್ಷ	ಬಿಜೆಪಿ
ಒಟ್ಟು ಆಸ್ತಿ	₹17.20 ಕೋಟಿ
ಅಪರಾಧ ಪ್ರಕರಣ	ಇಲ್ಲ (ಖಾಸಗಿ ದೂರು ದಾಖಲಾಗಿವೆ)
ಶಿಕ್ಷಣ	ಎಂಬಿಬಿಎಸ್
ಚರಾಸ್ತಿ	₹3.78 ಕೋಟಿ
ಸ್ಥಿರಾಸ್ತಿ	₹13.41 ಕೋಟಿ
ವಾಹನಗಳು	ಹ್ಯುಂಡೈ ಕಾರು
ಆಭರಣ	(ವಜ್ರಾಭರಣ) ₹1.59 ಕೋಟಿ
ಪತ್ನಿ ಹೆಸರಲ್ಲಿ ಇರುವ ಆಸ್ತಿ	₹13.12 ಕೋಟಿ

ಕ್ಷೇತ್ರ	ದಾಸರಹಳ್ಳಿ
ಅಭ್ಯರ್ಥಿ	ಆರ್.ಮಂಜುನಾಥ್ (63)
ಪಕ್ಷ	ಜೆಡಿಎಸ್
ಒಟ್ಟು ಆಸ್ತಿ	₹34.29 ಕೋಟಿ
ಹಿಂದೆ ಘೋಷಿಸಿದ್ದ ಒಟ್ಟು ಆಸ್ತಿ	₹27.46ಕೋಟಿ
ಅಪರಾಧ ಪ್ರಕರಣ	ಕ್ರಿಮಿನಲ್ ಮೊಕದ್ದಮೆ ಇಲ್ಲ
ಶಿಕ್ಷಣ	ಎಸ್ಸೆಸ್ಸೆಲ್ಸಿ
ಚರಾಸ್ತಿ	₹3.39 ಕೋಟಿ
ಸ್ಥಿರಾಸ್ತಿ	₹29.24ಕೋಟಿ
ವಾಹನಗಳು	ಟೊಯೊಟೊ ಇನ್ನೋವಾ ಕಾರು, ಕಿಯಾ ಕಾರು, ಹೊಂಡಾ ಆಕ್ಟಿವಾ
ಸಾಲ	₹4.35 ಕೋಟಿ
ಪತ್ನಿಯ ಹೆಸರಿನಲ್ಲಿ ಇರುವ ಆಸ್ತಿ	₹1.76 ಕೋಟಿ

ಕ್ಷೇತ್ರ	ಗಾಂಧಿನಗರ
ಅಭ್ಯರ್ಥಿ	ದಿನೇಶ್ ಗುಂಡೂರಾವ್
ಪಕ್ಷ	ಕಾಂಗ್ರೆಸ್
ಒಟ್ಟು ಆಸ್ತಿ	₹49.9 ಕೋಟಿ
ಅಪರಾಧ ಪ್ರಕರಣ	ಇಲ್ಲ
ಶಿಕ್ಷಣ	ಬಿ.ಇ
ಚರಾಸ್ತಿ	₹5.70 ಕೋಟಿ
ಸ್ಥಿರಾಸ್ತಿ	₹42 ಕೋಟಿ
ಸಾಲ	₹95 ಲಕ್ಷ
ವಾಹನಗಳು	ಒಂದು ಬಿಎಂಡಬ್ಲ್ಯು ಮತ್ತು ಒಂದು ಫಾರ್ಚುನರ್
ಪತ್ನಿ ಹೆಸರಲ್ಲಿರುವ ಆಸ್ತಿ	₹7.34 ಕೋಟಿ

ಕ್ಷೇತ್ರ	ದಾಸರಹಳ್ಳಿ
ಅಭ್ಯರ್ಥಿ	ಎಸ್. ಮುನಿರಾಜು (64)
ಪಕ್ಷ	ಬಿಜೆಪಿ
ಒಟ್ಟು ಆಸ್ತಿ	₹28.33ಕೋಟಿ
ಹಿಂದೆ ಘೋಷಿಸಿದ್ದ ಒಟ್ಟು ಆಸ್ತಿ	₹16.54ಕೋಟಿ
ಅಪರಾಧ ಪ್ರಕರಣ	ಕ್ರಿಮಿನಲ್ ಮೊಕದ್ದಮೆ ಇಲ್ಲ
ಶಿಕ್ಷಣ	ಎಸ್ಸೆಸ್ಸೆಲ್ಸಿ
ಚರಾಸ್ತಿ	₹5.11 ಕೋಟಿ
ಸ್ಥಿರಾಸ್ತಿ	₹4.86 ಕೋಟಿ
ವಾಹನಗಳು	₹89.34 ಲಕ್ಷ ಮೌಲ್ಯದ ಮರ್ಸಿಡೀಸ್ ಬೆಂಜ್
ಸಾಲ	₹6.89 ಕೋಟಿ
ಪತ್ನಿಯ ಹೆಸರಿನಲ್ಲಿ ಇರುವ ಆಸ್ತಿ	₹13.86 ಕೋಟಿ

ಕ್ಷೇತ್ರ	ಬಸವನಗುಡಿ
ಅಭ್ಯರ್ಥಿ	ಯು.ಬಿ. ವೆಂಕಟೇಶ್
ಪಕ್ಷ	ಕಾಂಗ್ರೆಸ್
ಒಟ್ಟು ಆಸ್ತಿ	₹52 ಕೋಟಿ
ಚರಾಸ್ತಿ	₹36.53 ಕೋಟಿ
ಸ್ಥಿರಾಸ್ತಿ	₹13.19 ಕೋಟಿ
ಸಾಲ	₹31.27 ಕೋಟಿ
ವಾಹನಗಳು	₹ 99.76 ಲಕ್ಷ ಮೌಲ್ಯ ವಾಹನಗಳು (ಎರಡು ಕಾರು ಹಾಗೂ ಒಂದು ಹೊಂಡಾ ಆಕ್ಟಿವಾ ಸ್ಕೂಟಿ)
ಪತ್ನಿ ಹೆಸರಿನಲ್ಲಿರುವ ಆಸ್ತಿಗಳು (ಚರಾಸ್ತಿ ಹಾಗೂ ಸ್ಥಿರಾಸ್ತಿ)	₹ 2.38 ಕೋಟಿ

ಕ್ಷೇತ್ರ	ಚಿಕ್ಕಪೇಟೆ
ಅಭ್ಯರ್ಥಿ	ಉದಯ ಗರುಡಾಚಾರ್
ಪಕ್ಷ	ಬಿಜೆಪಿ
ಒಟ್ಟು ಆಸ್ತಿ	₹ 241.58 ಕೋಟಿ
ಅಪರಾಧ ಪ್ರಕರಣ	2 (ಚುನಾವಣೆ ಪ್ರಮಾಣ ಪತ್ರದಲ್ಲಿ ಮಾಹಿತಿ ಮರೆಮಾಚಿದ ಆರೋಪದ ಅಡಿ ನ್ಯಾಯಾಲಯ ಶಿಕ್ಷೆ ವಿಧಿಸಿದೆ)
ಚರಾಸ್ತಿ	₹ 123.19 ಕೋಟಿ
ಸ್ಥಿರಾಸ್ತಿ	₹ 77.25 ಕೋಟಿ
ಸಾಲ	₹ 47.63 ಕೋಟಿ
ವಾಹನಗಳು	ಒಂದು ಬಲೊನೊ ಕಾರು
ಪತ್ನಿ ಹೆಸರಿನಲ್ಲಿರುವ ಆಸ್ತಿಗಳು (ಚರಾಸ್ತಿ ಹಾಗೂ ಸ್ಥಿರಾಸ್ತಿ)	₹ 41.14 ಕೋಟಿ
ಸಾಲ	₹ 97.65 ಲಕ್ಷ

ಕ್ಷೇತ್ರ	ಬೆಂಗಳೂರು ದಕ್ಷಿಣ
ಅಭ್ಯರ್ಥಿ	ಎಂ.ಕೃಷ್ಣಪ್ಪ(61)
ಪಕ್ಷ	ಬಿಜೆಪಿ
ಒಟ್ಟು ಆಸ್ತಿ	₹89.99 ಕೋಟಿ
ಹಿಂದೆ ಘೋಷಿಸಿದ್ದ ಒಟ್ಟು ಆಸ್ತಿ	₹81.85 ಕೋಟಿ
ಅಪರಾಧ ಪ್ರಕರಣ	ಇಲ್ಲ
ಶಿಕ್ಷಣ	ಎಸ್‌ಎಸ್‌ಎಲ್‌ಸಿ
ಚರಾಸ್ತಿ	₹20.26 ಕೋಟಿ (13.5 ಕೆ.ಜಿ ಚಿನ್ನಾಭರಣ)
ಸ್ಥಿರಾಸ್ತಿ	₹ 69.72 ಕೋಟಿ
ಸಾಲ	₹ 20.30 ಕೋಟಿ
ವಾಹನಗಳು	ಮೂರು
ಪತ್ನಿ ಹೆಸರಿನಲ್ಲಿ ಇರುವ ಆಸ್ತಿ	₹ 36.74 ಕೋಟಿ
ಸಾಲ	₹ 14.24 ಕೋಟಿ
ಕುಟುಂಬದ ಇತರರ ಹೆಸರಿನಲ್ಲಿರುವ ಆಸ್ತಿ	ಇಲ್ಲ

ಕ್ಷೇತ್ರ	ಪದ್ಮನಾಭನಗರ
ಅಭ್ಯರ್ಥಿ	ಆರ್. ಅಶೋಕ
ಪಕ್ಷ	ಬಿಜೆಪಿ
ಒಟ್ಟು ಆಸ್ತಿ	₹87.27 ಕೋಟಿ
ಅಪರಾಧ ಪ್ರಕರಣ	ಒಂದು
ಶಿಕ್ಷಣ	ಬಿ.ಎಸ್ಸಿ
ಚರಾಸ್ತಿ	₹2.18 ಕೋಟಿ
ಸ್ಥಿರಾಸ್ತಿ	₹3.10 ಕೋಟಿ
ಸಾಲ	₹97.78 ಲಕ್ಷ
ವಾಹನಗಳು	2 ಇನ್ನೋವಾ ಕಾರು
ಪತ್ನಿ ಹೆಸರಿನಲ್ಲಿ ಇರುವ ಆಸ್ತಿ	₹11.62 ಕೋಟಿ
ಸಾಲ	₹64.04 ಲಕ್ಷ
ಕುಟುಂಬದ ಆಸ್ತಿ	₹70.37 ಕೋಟಿ
ಸಾಲ	₹7.95 ಕೋಟಿ

ಮಲ್ಲೇಶ್ವರ ವಿಧಾನಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಅಶ್ವತ್ಥನಾರಾಯಣ ನಾಮಪತ್ರ ಸಲ್ಲಿಸುವ ಮುನ್ನ ಕಾರ್ಯಕರ್ತರೊಂದಿಗೆ ಮೆರವಣಿಗೆ ನಡೆಸಿದರು. ಅವರ ಪತ್ನಿ ಶ್ರುತಿ ಇದ್ದಾರೆ. ಪ್ರಜಾವಾಣಿ ಚಿತ್ರ

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶಾಸಕ ಎಂ.ಕೃಷ್ಣಪ್ಪ ಅವರ ನಾಮಪತ್ರ ಸಲ್ಲಿಕೆಯ ಸಂದರ್ಭದಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತರು

ಪದ್ಮನಾಭನಗರ: ಕಾದು ನೋಡಲು 'ಕೈ' ತಂತ್ರ

ಬೆಂಗಳೂರು: ಪದ್ಮನಾಭನಗರದಲ್ಲಿ ಬಿಜೆಪಿಯಿಂದ ಆರ್. ಅಶೋಕ ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ. ಬಿ ಫಾರಂ ಪಡೆದಿರುವ ಕಾಂಗ್ರೆಸ್ ಅಭ್ಯರ್ಥಿ ರಘುನಾಥ ನಾಯ್ಡು ಇನ್ನೂ ಕಾದುನೋಡುವ ತಂತ್ರದ ಅನುಸರಿಸಿದ್ದಾರೆ. ಜೆಡಿಎಸ್ ಇನ್ನೂ ಅಭ್ಯರ್ಥಿಯನ್ನೇ ಪ್ರಕಟಿಸಿಲ್ಲ.

'ಸೋಮವಾರ ನಾಮಪತ್ರ ಸಲ್ಲಿಸಬೇಕಿತ್ತು. ಆದರೆ, ಒಂದೆರಡು ದಿನ ತಡೆಯಿರಿ ಎಂಬ ಸೂಚನೆ ಹಿರಿಯ ನಾಯಕರಿಂದ ಬಂದಿದೆ. ಹೀಗಾಗಿ ಅವರ ಆದೇಶಕ್ಕೆ ಕಾಯುತ್ತಿದ್ದೇನೆ' ಎಂದು ರಘುನಾಥ ನಾಯ್ಡು ತಿಳಿಸಿದರು.

ಸಂಸದ ಡಿ.ಕೆ. ಸುರೇಶ್ ಅವರನ್ನು ಪದ್ಮನಾಭನಗರದಲ್ಲಿ ಕಣಕ್ಕಿಳಿಸುವ ವಿಚಾರ ಇನ್ನೂ ಚಾಲನೆಯಲ್ಲಿದೆ ಎನ್ನಲಾಗಿದೆ.

ಹ್ಯಾರಿಸ್ ಆಸ್ತಿ ₹439 ಕೋಟಿ, ಸ್ವಂತ ಕಾರಿಲ್ಲ

ಬೆಂಗಳೂರು: ಶಾಂತಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎನ್.ಎ. ಹ್ಯಾರಿಸ್ (56) ಸೋಮವಾರ ನಾಮಪತ್ರ ಸಲ್ಲಿಸಿದ್ದು, ₹ 439 ಕೋಟಿ ಆಸ್ತಿ ಘೋಷಿಸಿದ್ದಾರೆ.

2018ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಹ್ಯಾರಿಸ್ ₹ 190.24 ಕೋಟಿ ಆಸ್ತಿ ಘೋಷಿಸಿದ್ದರು. ಶಾಸಕರಾಗಿ ಗೆದ್ದ ನಂತರ ಐದು ವರ್ಷಗಳಲ್ಲಿ ಅವರ ಆಸ್ತಿ ₹ 248.76 ಕೋಟಿಯಷ್ಟು ಹೆಚ್ಚಳವಾಗಿದೆ.

ಮುಕ್ತ ವಿಶ್ವವಿದ್ಯಾಲಯದಿಂದ ಇತಿಹಾಸ ವಿಷಯದಲ್ಲಿ ಎಂ.ಎ ವ್ಯಾಸಂಗ ಮಾಡಿರುವ ಹ್ಯಾರಿಸ್, ನಲಪಾಡ್ ಗ್ರೂಪ್ ಆಫ್ ಕಂಪನಿ ವ್ಯವಸ್ಥಾಪಕ ನಿರ್ದೇಶಕರೆಂದು ಹೇಳಿಕೊಂಡಿದ್ದಾರೆ.

2017-18ರಲ್ಲಿ ₹ 7.40 ಕೋಟಿ ವಾರ್ಷಿಕ ಆದಾದ ಘೋಷಿಸಿದ್ದ ಹ್ಯಾರಿಸ್, 2021-22ರಲ್ಲಿ ₹ 6.48 ಕೋಟಿ ವಾರ್ಷಿಕ ಆದಾಯಕ್ಕೆ ಲೆಕ್ಕ ನೀಡಿದ್ದಾರೆ.

ಹ್ಯಾರಿಸ್ ಹೆಸರಿನಲ್ಲಿ ₹ 167.10 ಕೋಟಿ ಚರಾಸ್ತಿ ಹಾಗೂ ₹ 41.82 ಕೋಟಿ ಸ್ಥಿರಾಸ್ತಿ ಇದೆ. ಜೊತೆಗೆ, ₹ 28.29 ಕೋಟಿ ಸಾಲವಿದೆ. ಪತ್ನಿ ತಾಹೀರಾ ಹ್ಯಾರಿಸ್ ಹೆಸರಿನಲ್ಲಿ ₹ 8.27 ಲಕ್ಷ ಚರಾಸ್ತಿ ಹಾಗೂ ₹ 41.82 ಕೋಟಿ ಸ್ಥಿರಾಸ್ತಿ ಇದೆ. ಇಬ್ಬರ ಬಳಿಯೂ ಸ್ವಂತ ಕಾರಿಲ್ಲ.

ಅಕ್ರಮ ಗುಂಪು ಕಟ್ಟಿಕೊಂಡು ಪ್ರತಿಭಟನೆ ನಡೆಸಿ ಸಾರ್ವಜನಿಕರ ಆಸ್ತಿಗೆ ಹಾನಿ ಮಾಡಿದ್ದ ಆರೋಪದಡಿ ಸಿದ್ದಾಪುರ ಠಾಣೆಯಲ್ಲಿ ಹ್ಯಾರಿಸ್ ವಿರುದ್ಧ ಪ್ರಕರಣ ದಾಖಲಾಗಿದ್ದು, ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ.

ರಘು ಆಸ್ತಿ ₹10.15 ಕೋಟಿ ಹೆಚ್ಚಳ

ಬೆಂಗಳೂರು: ಸಿ.ವಿ.ರಾಮನ್ ನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್. ರಘು (53) ಸೋಮವಾರ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದು, ಒಟ್ಟು ₹ 41.91 ಕೋಟಿ ಆಸ್ತಿ ಘೋಷಿಸಿಕೊಂಡಿದ್ದಾರೆ.

ರಘು ಅವರು 2018ರಲ್ಲಿ ₹ 31.76 ಕೋಟಿ ಆಸ್ತಿ ಘೋಷಿಸಿದ್ದರು. ಚುನಾವಣೆಯಲ್ಲಿ ಗೆದ್ದು ಶಾಸಕರಾದ ಬಳಿಕ ಐದು ವರ್ಷಗಳಲ್ಲಿ ₹ 10.15 ಕೋಟಿ ಆಸ್ತಿ ಹೆಚ್ಚಳವಾಗಿದೆ. 2016- 17ರಲ್ಲಿ ₹ 22.02 ಲಕ್ಷ ವಾರ್ಷಿಕ ಆದಾಯ ಘೋಷಿಸಿದ್ದ ಅವರು, 2021-22ರಲ್ಲಿ ₹ 1.30 ಕೋಟಿ ವಾರ್ಷಿಕ ಆದಾಯ ಇರುವುದಾಗಿ ಹೇಳಿದ್ದಾರೆ. ಸಿವಿಲ್ ಎಂಜಿನಿಯರಿಂಗ್ ಪದವೀಧರರಾದ ರಘು ಹೆಸರಿನಲ್ಲಿ ₹ 3.08 ಕೋಟಿ ಚರಾಸ್ತಿ ಹಾಗೂ ₹ 38.34 ಕೋಟಿ ಸ್ಥಿರಾಸ್ತಿಯಿದೆ. ₹ 2.75 ಕೋಟಿ ಸಾಲವೂ ಇದೆ. ₹ 1.16 ಕೋಟಿ ಮೌಲ್ಯದ ಬೆಂಜ್ ಸೇರಿ ಐದು ಕಾರುಗಳು ರಘು ಬಳಿಯಿದೆ.

ರಿಜ್ವಾನ್ ಆಸ್ತಿ: 4 ವರ್ಷಗಳಲ್ಲಿ ₹ 5.80 ಕೋಟಿ ಹೆಚ್ಚಳ

ಬೆಂಗಳೂರು: ಶಿವಾಜಿನಗರ ವಿಧಾನಸಭೆ ಕ್ಷೇತ್ರ ಕಾಂಗ್ರೆಸ್ ಅಭ್ಯರ್ಥಿಯಾಗಿ ರಿಜ್ವಾನ್ ಅರ್ಷದ್ ಸೋಮವಾರ ನಾಮಪತ್ರ ಸಲ್ಲಿಸಿದ್ದು, ಒಟ್ಟು ₹ 21.15 ಕೋಟಿ ಆಸ್ತಿ ಘೋಷಿಸಿಕೊಂಡಿದ್ದಾರೆ.

2019 ಉಪಚುನಾವಣೆ ಸಂದರ್ಭದಲ್ಲಿ ರಿಜ್ವಾನ್ ₹ 15.35 ಕೋಟಿ (₹ 1.36 ಕೋಟಿ ಚರಾಸ್ತಿ, ₹ 13.99 ಕೋಟಿ ಸ್ಥಿರಾಸ್ತಿ) ಘೋಷಿಸಿದ್ದರು. ನಾಲ್ಕು ವರ್ಷಗಳಲ್ಲಿ ₹ 5.80 ಕೋಟಿ ಆಸ್ತಿ ಹೆಚ್ಚಳವಾಗಿದೆ.

ಬಿ.ಕಾಂ ಪದವೀಧರಾದ ರಿಜ್ವಾನ್, ತಾವೊಬ್ಬ ಉದ್ಯಮಿ ಎಂದಿದ್ದಾರೆ. 2021-22ರಲ್ಲಿ ₹ 17.58 ಲಕ್ಷ ವಾರ್ಷಿಕ ಆದಾಯ ಘೋಷಿಸಿದ್ದಾರೆ. ಜೊತೆಗೆ ₹ 7.01 ಕೋಟಿ ಸಾಲವಿರುವುದಾಗಿ ಹೇಳಿದ್ದಾರೆ. 2019ರಲ್ಲಿ ₹ 4.44 ಕೋಟಿ ಸಾಲವಿತ್ತು.

ವೈಯಕ್ತಿಕವಾಗಿ ರಿಜ್ವಾನ್ ಹೆಸರಿನಲ್ಲಿ ₹ 1 ಕೋಟಿ ಚರಾಸ್ತಿ ಹಾಗೂ ₹ 19.15 ಕೋಟಿ ಸ್ಥಿರಾಸ್ತಿ ಇದೆ. ಪತ್ನಿ ನಜಿಹಾ ಬಾನು ಹೆಸರಿನಲ್ಲಿ ಒಟ್ಟು ₹ 1.15 ಕೋಟಿ ಇದೆ. ಪತ್ನಿ 2021-22ರಲ್ಲಿ ₹ 13.73 ಲಕ್ಷ ವಾರ್ಷಿಕ ಆದಾಯ ತೋರಿಸಿದ್ದಾರೆ.

ಮಹಾಲಕ್ಷ್ಮಿ ಗ್ಯಾಸ್ ಏಜೆನ್ಸಿ ಸೇರಿ ಹಲವರಿಗೆ ರಿಜ್ವಾನ್ ಹಾಗೂ ಅವರ ಪತ್ನಿ ಸಾಲ ನೀಡಿದ್ದಾರೆ. ಇವರ ಬಳಿಯೂ 2 ಕೆ.ಜಿ 108 ಗ್ರಾಂ ಚಿನ್ನಾಭರಣಗಳಿವೆ. ಆದರೆ, ಯಾವುದೇ ಸ್ವಂತ ವಾಹನವಿಲ್ಲವೆಂದು ಪ್ರಮಾಣಪತ್ರದಲ್ಲಿ ಘೋಷಿಸಲಾಗಿದೆ.

ನಾಲ್ಕು ಎಫ್‌ಐಆರ್: ಕೋವಿಡ್ ನಿಯಮ ಉಲ್ಲಂಘನೆ ಸಂಬಂಧ ರಿಜ್ವಾನ್ ವಿರುದ್ಧ ಸಾತನೂರು, ಕನಕಪುರ, ಹಲಸೂರು ಗೇಟ್ ಹಾಗೂ ಶಿವಾಜಿನಗರ ಠಾಣೆಯಲ್ಲಿ ನಾಲ್ಕು ಎಫ್‌ಐಆರ್ ದಾಖಲಾಗಿವೆ.

ಭಾಸ್ಕರ್‌ರಾವ್‌ಗಿಂತ ಪತ್ನಿಯೇ ಶ್ರೀಮಂತೆ

ಬೆಂಗಳೂರು: ಚಾಮರಾಜಪೇಟೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್‌ರಾವ್ ಅವರ ಒಟ್ಟು ಆಸ್ತಿಯ ಮೌಲ್ಯ ₹ 23.92 ಕೋಟಿಯಾಗಿದೆ.

ಪತ್ನಿ ಡಾ.ಚಂದ್ರಿಕಾರಾವ್ ಅವರು ₹ 2.38 ಕೋಟಿ ಚರಾಸ್ತಿ, ₹ 13.99 ಕೋಟಿ ಸ್ಥಿರಾಸ್ತಿ ಹೊಂದಿದ್ದಾರೆ. ಭಾಸ್ಕರ್‌ರಾವ್ ಅವರು ₹2.81 ಕೋಟಿಯ ಚರಾಸ್ತಿ ಹಾಗೂ ₹4.75 ಕೋಟಿ ಮೌಲ್ಯದ ಸ್ಥಿರಾಸ್ತಿ ಹೊಂದಿದ್ದಾರೆ. ಪತಿಗಿಂತಲೂ ಪತ್ನಿಯೇ ಶ್ರೀಮಂತೆಯಾಗಿದ್ದಾರೆ.

₹ 35.48 ಲಕ್ಷ ಮೌಲ್ಯದ ಮೂರು ಕಾರು, ಒಂದು ಸ್ಕೂಟಿಯಿದೆ. ಪತ್ನಿಯ ಬಳಿ ₹ 37.50 ಲಕ್ಷದ ಚಿನ್ನ, ಬೆಳ್ಳಿ ಹಾಗೂ ವಜ್ರಾಭರಣಗಳಿದ್ದರೆ, ಭಾಸ್ಕರ್‌ರಾವ್ ಬಳಿ ₹ 5 ಲಕ್ಷದ ಚಿನ್ನಾಭರಣಗಳಿವೆ ಎಂದು ಘೋಷಿಸಿಕೊಂಡಿದ್ದಾರೆ.

ಸೆಲೆಬ್ರಿಟಿ ಮಾತು

'ಕಡಿಮೆ ಮತದಾನ: ಅವಮಾನಕರ'

ಪಿ.ಡಿ.ಸತೀಶ್, ಕಿರುತೆರೆ ನಟ

ಪ್ರಜಾತಂತ್ರ ದೇಶ ನಮ್ಮದು. ಅದರಲ್ಲಿ ಬಾಧ್ಯತೆಗಳಿವೆ. ಹಕ್ಕುಗಳಿವೆ. ನಾವು ಹಕ್ಕು ಕೇಳಬೇಕೆಂದರೆ ನಮ್ಮ ಬಾಧ್ಯತೆಗಳನ್ನು ನಿಭಾಯಿಸಲೇಬೇಕು. ಮತದಾನ ನಮ್ಮ ಹಕ್ಕು ಹೇಗೋ, ಹಾಗೆಯೇ ಬಾಧ್ಯತೆ ಕೂಡ. ಬುಧವಾರ, ವಾರದ ನಡುವೆ ರಜಾ ಸಿಕ್ಕಿದೆ ಎಂದು ಎಲ್ಲಿಯೂ ಹೋಗದೆ ಮತದಾನ ಕೇಂದ್ರಕ್ಕೆ ಹೋಗಿ, ಮತ ಚಲಾಯಿಸಿ. ಮತದಾನದ ಪ್ರಮಾಣವನ್ನು ಹಿಂದಿನ ಸಲಕ್ಕಿಂತ ಹೆಚ್ಚು ಮಾಡೋಣ. ಅತ್ಯಂತ ಕಡಿಮೆ ಪ್ರಮಾಣದ ಮತದಾನ ನಮ್ಮಂತಹ ಬೆಂಗಳೂರಿಗರಿಗೆ ಅವಮಾನಕರ. ವಿದ್ಯಾವಂತರೆಂದು ಹೇಳಿಕೊಳ್ಳಲು ನಾಚಿಕೆಯಾಗುವ ಸಂಗತಿ. ರಾಜಕೀಯ, ರಾಜಕೀಯದವರ ಮೇಲಿನ ಸಿಟ್ಟನ್ನು ಮತದಾನ ಮೇಲೆ ತೀರಿಸಿಕೊಳ್ಳಬೇಡಿ. ಬನ್ನಿ, ಮತಹಾಕಿ.

ಕುಸುಮಾ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಎಚ್.ಕುಸುಮಾ ಅವರು ಬೆಂಬಲಿಗರೊಂದಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ರಾಜರಾಜೇಶ್ವರಿನಗರ ಪ್ರವೇಶದ್ವಾರದಿಂದ ಚುನಾವಣಾಧಿಕಾರಿ ಕಚೇರಿಗೆ ತೆರೆದ ವಾಹನದಲ್ಲಿ ಮೆರವಣಿಗೆಯಲ್ಲಿ ಸಾಗಿಬಂದು ನಾಮಪತ್ರ ಸಲ್ಲಿಸಿದರು.

'ಈ ನೆಲದ, ಕ್ಷೇತ್ರದ ನಿಮ್ಮ ಮನೆಯ ಮಗಳು ನಾನು. ಸರ್ವ ಜನಾಂಗದವರನ್ನು ಒಗ್ಗೂಡಿಸಿಕೊಂಡು ಹೋಗುತ್ತೇನೆ. ಬಡವ-ಶ್ರೀಮಂತ ಎಂಬ ಬೇಧವಿಲ್ಲದೆ ಕೆಲಸ ಮಾಡುತ್ತೇನೆ. ಮನೆ ಮಗಳಿಗೆ ಮತ ನೀಡುವ ಮೂಲಕ ಆಶೀರ್ವಾದ ಮಾಡಿ' ಎಂದು ಮನವಿ ಮಾಡಿದರು.



ಬಿಜೆಪಿ ಅಭ್ಯರ್ಥಿಯಾಗಿ ಎಸ್ ಮುನಿರಾಜು ಅವರು ನಾಮಪತ್ರ ಸಲ್ಲಿಸಲು ಎಂಟನೇ ಮೈಲಿಯಿಂದ ರೋಡ್ ಶೋ ಮೂಲಕ ಆಗಮಿಸಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜೆ. ಮರಿಸ್ವಾಮಿ, ಗಾಯಕ ಚಂದನ್ ಶೆಟ್ಟಿ, ಶರತ್ ಹೊಂಬಾಳೆ ಇದ್ದರು.

'ತಾಯಿಗೆ ದ್ರೋಹ ಬಗೆದ ಶೆಟ್ಟರ್, ಸವದಿ'

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: 'ಬಿಜೆಪಿಯಿಂದ ಮುಖ್ಯಮಂತ್ರಿಯಾಗಿದ್ದ ಜಗದೀಶ ಶೆಟ್ಟರ್ ಹಾಗೂ ಉಪ ಮುಖ್ಯಮಂತ್ರಿಯಾಗಿದ್ದ ಲಕ್ಷ್ಮಣ ಸವದಿ ಅವರು ಹೆತ್ತ ತಾಯಿಗೆ ಮೋಸ ಮಾಡಿದ್ದಾರೆ. ಅವರು ಎಲ್ಲಿ ಹೋದರೂ ಒಳ್ಳೆಯದಾಗಲ್ಲ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಿಡಿಕಾರಿದರು.

ದಾಸರಹಳ್ಳಿ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಎಸ್ ಮುನಿರಾಜು ಅವರು ನಾಮಪತ್ರ ಸಲ್ಲಿಕೆಗೆ ಆಗಮಿಸಿದ್ದ ಶೋಭಾ ಕರಂದ್ಲಾಜೆ, 'ಜಗದೀಶ ಶೆಟ್ಟರ್ ಅವರಿಗೆ ನಾವೇ ಬೆಂಬಲ ನೀಡಿ ಮುಖ್ಯಮಂತ್ರಿಯನ್ನಾಗಿ ಮಾಡಿದ್ದೆವು. ಲಕ್ಷ್ಮಣ ಸವದಿ ಅವರನ್ನು ಉಪಮುಖ್ಯಮಂತ್ರಿ ಮಾಡಲಾಗಿತ್ತು. ಈಗ 10 ತಿಂಗಳ ಹಿಂದೆ ವಿಧಾನ ಪರಿಷತ್ ಸದಸ್ಯರನ್ನಾಗಿ ಬಿಜೆಪಿ ಮಾಡಿದೆ. ಇವರಿಗೆ ಇನ್ನೂ ಏನು ಮಾಡಬೇಕಿತ್ತು. ಇವರಿಬ್ಬರೂ ಹೆತ್ತ ತಾಯಿಗೆ ದ್ರೋಹ ಮಾಡಿದ್ದು, ಪ್ರತಿಫಲ ಅನುಭವಿಸುತ್ತಾರೆ' ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ಅಭ್ಯರ್ಥಿ ಎಸ್. ಮುನಿರಾಜು ಮಾತನಾಡಿ, 'ಈಗಾಗಲೇ ಮನೆಮನೆಗೂ ಎರಡು ಮೂರು ಸುತ್ತಿನ ಪ್ರಚಾರ ಮಾಡಿದ್ದೇವೆ. ದಾಸರಹಳ್ಳಿ ಕ್ಷೇತ್ರದಲ್ಲಿ ಬಿಜೆಪಿ- ಕಾಂಗ್ರೆಸ್ ನಡುವೆ ನೇರ ಸ್ಪರ್ಧೆ ನಡೆಯಲಿದೆ. ಜೆಡಿಎಸ್ ಮೂರನೇ ಸ್ಥಾನ ಪಡೆಯಲಿದೆ' ಎಂದು ಹೇಳಿದರು.

'ನಾನು ಕಣ್ಣೀರು ಹಾಕುವವನಲ್ಲ; ಕಣ್ಣೀರು ಒರೆಸುವವನು'

ಪ್ರಜಾವಾಣಿ ವಾರ್ತೆ

ಕೆಂಗೇರಿ: '₹205 ಕೋಟಿ ಒಡೆಯರಾಗಿರುವ ವ್ಯಕ್ತಿ ಕಣ್ಣೀರು ಹಾಕುವ ಬದಲು ಕೊಂಚವಾದರೂ ಖರ್ಚು ಮಾಡಿ ಜನರ ಕಣ್ಣೀರು ಒರೆಸುವ ಕೆಲಸ ಮಾಡಬೇಕಿತ್ತು. ನಾನು ಕಣ್ಣೀರು ಹಾಕುವವನಲ್ಲ. ಕಣ್ಣೀರು ಒರೆಸುವವನು' ಎಂದು ಯಶವಂತಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಟಿ. ಸೋಮಶೇಖರ್ ಅವರು ಜೆಡಿಎಸ್ ಅಭ್ಯರ್ಥಿ ಜವರಾಯಿಗೌಡ ಅವರಿಗೆ ಕುಟುಕಿದರು.

ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ತೆರೆದ ವಾಹನದಲ್ಲಿ ತೆರಳಿ ನಾಮಪತ್ರ ಸಲ್ಲಿಸಿದ ಅವರು, 'ಸರ್ಕಾರಿ ಜಮೀನು ಕೊಳ್ಳೆ ಹೊಡೆದ ರಿಯಲ್ ಎಸ್ಟೇಟ್ ಮಂದಿ ನನ್ನನ್ನು ಹಣಿಯಲು ಸಂಚು ರೂಪಿಸಿದ್ದಾರೆ. ಜನತೆಯ ಬೆಂಬಲ ನನಗಿದೆ. ಮೇ 13ರಂದು ನನ್ನ ರಾಜಕೀಯ ವಿರೋಧಿಗಳಿಗೆ ತಕ್ಕ ಉತ್ತರ ದೊರಕಲಿದೆ. 50 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದು ವಿಧಾನಸೌಧ ಪ್ರವೇಶಿಸಿಯೇ ತೀರುತ್ತೇನೆ' ಎಂದರು.

'ಅಧಿಕಾರ ಇರದ ವೇಳೆಯಲ್ಲೂ ಜನರ ಸಂಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡಿದ್ದೇನೆ. ನನ್ನ ಮೇಲೆ ಬೇಲಿ ಹಾಕಿದ ಆರೋಪಗಳಿಲ್ಲ. ಸರ್ಕಾರಿ ಜಮೀನು ಕಬಳಿಕೆ ಮಾಡಿಲ್ಲ. ಹತಾಶೆಯಿಂದ ನನ್ನ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ. ಸಕಾರಣವಿಲ್ಲದೆ ಎಫ್‌ಐಆರ್ ದಾಖಲು ಮಾಡಿಸಿದ್ದಾರೆ' ಎಂದು ದೂರಿದರು.

'ಯಾರೋ ಮೂರು ಮಂದಿ ಕ್ಷೇತ್ರಕ್ಕೆ ಭೇಟಿ ನೀಡಿ ಅಬ್ಬರಿಸಿದರೆ ಜನರ ಬೆಂಬಲ ದೊರೆಯುವುದಿಲ್ಲ. ಫಲಿತಾಂಶ ಬದಲಾಗುವುದಿಲ್ಲ' ಎಂದು ಜೆಡಿಎಸ್ ನಾಯಕರನ್ನು ಕುಟುಕಿದರು.

'ಕಾಂಗ್ರೆಸ್ ಪಕ್ಷದಲ್ಲಿನ ಉಸಿರುಗಟ್ಟುವ ವಾತಾವರಣದಿಂದಾಗಿ ಪಕ್ಷ ಬಿಡಬೇಕಾಯಿತು. ವೈಯಕ್ತಿಕ ಲಾಲಸೆಯಿಂದಲ್ಲ' ಎಂದು ಅವರು ಹೇಳಿದರು.

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಿಜ್ವಾನ್ ಅರ್ಷದ್ ಅವರು ನಾಮಪತ್ರ ಸಲ್ಲಿಕೆಗೂ ಮುನ್ನ ಹಜರತ್ ತವಕ್ಕಲ್ ಮಸ್ತಾನ್ ದರ್ಗಾ, ಸೇಂಟ್ ಬಿಸಿಲಿಕಾ ಚರ್ಚ್, ಮುತ್ಯಾಲಮ್ಮ ದೇವಸ್ಥಾನಕ್ಕೆ ಭೇಟಿ ನೀಡಿದರು. ಎಸ್. ಆರ್. ನಗರದಲ್ಲಿರುವ ಗಣಪತಿ ದೇವಸ್ಥಾನಕ್ಕೂ ತೆರಳಿ ಪೂಜೆ ಸಲ್ಲಿಸಿದರು

ದೊಡ್ಡ ನಾಯಕರೊಬ್ಬರು ಟಿಕೆಟ್ ತಪ್ಪಿಸಿದರು: ಅಖಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೊಡ್ಡ ನಾಯಕರೊಬ್ಬರು ಟಿಕೆಟ್ ತಪ್ಪಿಸಿದ್ದಾರೆ. ಈ ಬೆಳವಣಿಗೆಯಿಂದ ನನಗೆ ತುಂಬಾ ನೋವಾಗಿದೆ' ಎಂದು ಪುಲಕೇಶಿನಗರ ಕ್ಷೇತ್ರದ ಶಾಸಕರಾಗಿದ್ದ ಅಖಂಡ ಶ್ರೀನಿವಾಸಮೂರ್ತಿ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿ, 'ಹಾಲಿ ಶಾಸಕನಾಗಿದ್ದರೂ ನನಗೆ ಟಿಕೆಟ್ ಕೊಟ್ಟಿಲ್ಲ. ನಾನು ಎಲ್ಲ ಸಮುದಾಯದವರ ಜೊತೆ ಚೆನ್ನಾಗಿದ್ದೇನೆ. ಕ್ಷೇತ್ರದಲ್ಲಿ ಹಿಂದೂ- ಮುಸ್ಲಿಂ ಅಣ್ಣ ತಮ್ಮಂದಿರಂತೆ ಇದ್ದಾರೆ' ಎಂದರು.

'ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಜಮೀರ್ ಅಹ್ಮದ್ ಖಾನ್ ಕೂಡಾ ನನ್ನ ಪರವಾಗಿಯೇ ಇದ್ದಾರೆ' ಎಂದರು.

'ನಾನಿನ್ನೂ ಪಕ್ಷಕ್ಕೆ ರಾಜೀನಾಮೆ ಕೊಟ್ಟಿಲ್ಲ. ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುತ್ತೇನೆ. ಜನರೇ ನನ್ನನ್ನು ಗೆಲ್ಲಿಸುತ್ತಾರೆ' ಎಂದರು.

ವೆರಿಕೋಸ್ ವೇನ್

ರಕ್ತನಾಳಗಳಲ್ಲಿ ಟ್ರಾಫಿಕ್ ಸಮಸ್ಯೆ

ಡಾ. ಕುಶ್ವಂತ್ ಕೋಳಿಬೈಲು

ಮನುಷ್ಯನ ವೃತ್ತಿ ಅವನ ಕಾಯಿಲೆಗಳನ್ನೂ ನಿರ್ಧರಿಸುತ್ತದೆ. ವೈದ್ಯರು ರೋಗಿಯ ಆದಾಯವನ್ನು ಅಳೆಯುವ ಸಲುವಾಗಿ ರೋಗಿಗಳ ವೃತ್ತಿಯನ್ನು ವಿಚಾರಿಸುತ್ತಾರೆಂಬ ಆರೋಪವಿದೆ. ಆದರೆ ಸತ್ಯಸಂಗತಿಯೇನೆಂದರೆ ಕೆಲವೊಂದು ವೃತ್ತಿಯಲ್ಲಿ ಕೆಲವು ಕಾಯಿಲೆಗಳು ಹೆಚ್ಚು ಪ್ರಮಾಣದಲ್ಲಿ ಕಂಡುಬರುತ್ತವೆ. ಆಳಕ್ಕೆ ಇಳಿದು ವಿಶ್ಲೇಷಣೆ ಮಾಡಿದಾಗ ಮಾತ್ರ ಮನುಷ್ಯ ಮಾಡುವ ವೃತ್ತಿಗೂ ಮತ್ತು ಅತನಿಗೆ ಬರುವ ಕಾಯಿಲೆಗೂ ಇರುವ ವೈಜ್ಞಾನಿಕ ಕಾರಣಗಳು ಸ್ಪಷ್ಟವಾಗುತ್ತವೆ. ಟ್ರಾಫಿಕ್ ಪೊಲೀಸರು, ಬಸ್ ಕಂಡಕ್ಟರ್‌ಗಳು ಮತ್ತು ಹೊಟೇಲ್ ಸರ್ವರ್‌ಗಳು ತಮ್ಮ ದಿನದ ಹೆಚ್ಚಿನ ಸಮಯವನ್ನು ನಿಂತುಕೊಂಡೆ ಕಳೆಯುತ್ತಾರೆ. ಇಂಥವರಲ್ಲಿ ಸಂಜೆಯ ವೇಳೆಗೆ ಪಾದದ ಬಳಿ ಊತ ಮತ್ತು ನೋವು ಕಾಣಿಸಿಕೊಳ್ಳುತ್ತವೆ. ಇವರ ಕಾಲಿನ ಭಾಗದಲ್ಲಿನ ರಕ್ತನಾಳಗಳು ಸುರುಳಿಯಾಕಾರದಲ್ಲಿ ಊದಿಕೊಂಡಿರುವುದೂ ಕಂಡುಬರುತ್ತದೆ. ಕಾಯಿಲೆಯು ಇನ್ನೂ ತೀವ್ರವಾದಲ್ಲಿ ಕಾಲಿನ ಚರ್ಮದಲ್ಲಿ ಕಪ್ಪುಕಲೆಗಳು ಮತ್ತು ದೀರ್ಘಕಾಲದಿಂದ ಒಣಗದಿರುವ ಗಾಯಗಳೂ ಕಂಡುಬರಬಹುದು. ಊದಿಕೊಂಡಿರುವ ಕಾಲಿನ ರಕ್ತನಾಳಗಳ ಅಸಮರ್ಪಕ ಕಾರ್ಯದಿಂದಾಗಿ ಕಾಲಿನಲ್ಲಿ ಊತ ಮತ್ತು ವಾಸಿಯಾಗದಿರುವ ಹುಣ್ಣುಗಳಿರುವ ರೋಗವನ್ನು 'ವೆರಿಕೋಸ್ ವೇನ್' (Varicose Veins) ಎಂದು ಕರೆಯಲಾಗುತ್ತದೆ. ಈ ವೆರಿಕೋಸ್ ವೇನ್ ಇಂದು ನಿನ್ನೆ ಪತ್ತೆಯಾದ ಹೊಸ ಕಾಯಿಲೆಯಲ್ಲ. ಈ ಕಾಯಿಲೆ ಮತ್ತು ಅದರ ಚಿಕಿತ್ಸೆಗೆ ಬಹಳ ಪ್ರಾಚೀನವಾದ ಇತಿಹಾಸವಿದೆ. ಈ ಕಾಯಿಲೆಯು ಹಿಂದಿನ ಕಾಲದಲ್ಲಿ ರಾಜರ ಆಸ್ಥಾನದಲ್ಲಿ ನಿಂತುಕೊಂಡೆ ಕೆಲಸ ಮಾಡುತ್ತಿದ್ದ ಕಾವಲುಗಾರರಲ್ಲಿ ಮತ್ತು ಸೈನಿಕರಲ್ಲಿ ಹೆಚ್ಚಾಗಿ ಕಂಡುಬರುತ್ತಿತ್ತು.

ಮನುಷ್ಯನ ದೇಹದಲ್ಲಿ ರಕ್ತಸಂಚಾರದ ನಿಯಮಗಳು ಅರ್ಥವಾದರಷ್ಟೆ ವೆರಿಕೋಸ್ ವೇನ್ ರೋಗದ ಕಾರಣಗಳು ಅರ್ಥವಾಗಬಹುದು. ಹೃದಯದಿಂದ ವಿವಿಧ ಅಂಗಾಂಗಗಳಿಗೆ ರಕ್ತವನ್ನು ತಲುಪಿಸಲು ದೇಹದಲ್ಲಿ 'ಒನ್ ವೇ ಟ್ರಾಫಿಕ್' ವ್ಯವಸ್ಥೆಯಿದೆ. ಹೃದಯದಿಂದ ರಕ್ತವು ದೇಹದ ಮೂಲೆ ಮೂಲೆಗೂ ಅಪಧಮನಿಗಳ (Artery) ಮೂಲಕ ತಲುಪಿ ವಿವಿಧ ಅಂಗಾಂಗಗಳಿಗೆ ಆಮ್ಲಜನಕದ ಸರಬರಾಜು ಮಾಡುತ್ತವೆ. ವಿವಿಧ ಅಂಗಾಂಗಗಳಿಂದ ರಕ್ತವು ಹೃದಯಕ್ಕೆ ಅಭಿಧಮನಿಗಳ (Vein) ಮೂಲ ಮರಳುತ್ತದೆ. ರಕ್ತಸಂಚಾರದ ಈ ಏಕಮುಖ ಟ್ರಾಫಿಕ್ಕಿನ ನಿಯಮದ ಉಲ್ಲಂಘನೆಯಾಗದಿದ್ದಲ್ಲಿ ಮನುಷ್ಯರಿಗೆ ಯಾವುದೇ ಸಮಸ್ಯೆಗಳು ಕಂಡು ಬರುವುದಿಲ್ಲ. ಅಭಿಧಮನಿಗಳಲ್ಲಿ ರಕ್ತವು ಹೃದಯದ ಕಡೆಗೆ ಮಾತ್ರ ಏಕಮುಖವಾಗಿ ಚಲಿಸುವಂತೆ ಮಾಡಲು ವಾಲ್ವ್ (valve) ವ್ಯವಸ್ಥೆಯಿದೆ. ಈ ವಾಲ್ವುಗಳು ರಕ್ತವು ಹಿಮ್ಮುಖವಾಗಿ ಚಲಿಸದಂತೆ ತಡೆಹಿಡಿಯುವ ಕೆಲಸವನ್ನು ಮಾಡುತ್ತವೆ.

ಹೆಚ್ಚಿನ ಸಮಯ ನಿಂತುಕೊಂಡೆ ಕೆಲಸ ಮಾಡುವ ಜನರ ಕಾಲುಗಳಲ್ಲಿರುವ ಅಭಿಧಮನಿಗಳ ಮೇಲೆ ಹೆಚ್ಚಿನ ಒತ್ತಡ ಬೀಳುತ್ತದೆ. ಕಾಲಿನಲ್ಲಿ ಎರಡು ಮಾದರಿಯ ಅಭಿಧಮನಿಗಳು ಪ್ರಮುಖವಾಗಿ ಕಂಡುಬರುತ್ತವೆ. ಮಾಂಸಖಂಡಗಳ ಒಳಗೆ ಆಳದಲ್ಲಿರುವ ಅಭಿಧಮನಿಗಳು ಮತ್ತು ಚರ್ಮದ ಬಳಿಯಿರುವ ಮೇಲ್ಪದರದ ಅಭಿಧಮನಿಗಳು ರಕ್ತವನ್ನು ಹೃದಯದತ್ತ ಸಾಗಿಸುವ ಕೆಲಸವನ್ನು ಮಾಡುತ್ತವೆ. ಕಾಲಿನ ಚರ್ಮದಿಂದ ಸ್ವಲ್ಪ ಒಳಗಿರುವ ಈ ಮೇಲ್ಪದರದ ಅಭಿಧಮನಿಗಳು ಊದಿಕೊಂಡು ಅವುಗಳಲ್ಲಿರುವ ವಾಲ್ವುಗಳು ನಿಷ್ಕ್ರಿಯಗೊಳ್ಳುವುದು ವೆರಿಕೋಸ್ ವೇನ್ ರೋಗಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಈ ರೋಗಿಗಳ ಕಾಲುಗಳಲ್ಲಿರುವ ಅಭಿಧಮನಿಗಳಲ್ಲಿ ರಕ್ತವು ಹೃದಯದ ವಿರುದ್ಧ ದಿಕ್ಕಿನಲ್ಲಿ ಚಲಿಸಲು ತೊಡಗುತ್ತದೆ. ಇಂತಹ ರೋಗಿಗಳ ಕಾಲುಗಳ ಅಭಿಧಮನಿಗಳು ಶೇಖರಣೆಯ ಕಾರಣದಿಂದಾಗಿ ನಿರಂತರವಾಗಿ ಊದಿಕೊಂಡಿರುತ್ತದೆ.

ರೋಗಿಯು ರಾತ್ರಿ ಮಲಗಿರುವ ವೇಳೆಯಲ್ಲಿ ಕಾಲುಗಳ ಅಭಿಧಮನಿಯಲ್ಲಿನ ರಕ್ತವು ಹೃದಯದತ್ತ ಸಮರ್ಪಕವಾಗಿ ಹರಿದ ಕಾರಣದಿಂದಾಗಿ ಮುಂಜಾನೆ ಏಳುವ ಸಮಯದಲ್ಲಿ ರೋಗಿಯ ಕಾಲುಗಳ ಅಭಿಧಮನಿಗಳು ಊದಿಕೊಂಡಿರುವುದಿಲ್ಲ. ಆದರೆ ದಿನವಿಡೀ ನಿಂತುಕೊಂಡು ಕೆಲಸ ಮಾಡುತ್ತಿದ್ದಂತೆ ಕಾಲಿನ ಅಭಿಧಮನಿಗಳಲ್ಲಿ ರಕ್ತವು ಹೃದಯದತ್ತ ಸಂಚರಿಸದೆ ಶೇಖರಣೆಗೊಂಡು ಕಾಲಿನ ರಕ್ತನಾಳಗಳು ಊದಿಕೊಳ್ಳುತ್ತವೆ; ಸಂಜೆಯ ವೇಳೆ ಕಾಲಿನಲ್ಲಿ ನೋವು ಕೂಡ ಕಾಣಿಸಿಕೊಳ್ಳುತ್ತದೆ. ರಕ್ತದ ಅಸಮರ್ಪಕ ಸಂಚಾರದಿಂದಾಗಿ ಕಾಲಿನ ಚರ್ಮವು ಸಾಯುವುದರ ಜೊತೆಗೆ ಡಯಾಬಿಟಿಸ್ ರೋಗಿಗಳಲ್ಲಿ ಕಂಡುಬರುವಂತೆ ಈ ವೆರಿಕೋಸ್ ವೇನ್ ರೋಗಿಗಳ ಕಾಲಿನಲ್ಲಿಯೂ ವಾಸಿಯಾಗದ ಹುಣ್ಣುಗಳು ಕಂಡುಬರಬಹುದು. ಊದಿಕೊಂಡಿರುವ ಈ ನಿಷ್ಕ್ರಿಯ ಅಭಿಧಮನಿಗಳನ್ನು ಆಂಗ್ಲಭಾಷೆಯಲ್ಲಿ 'ವೆರಿಕೋಸ್ ವೇನ್' ಎಂದು ಕರೆಯುತ್ತಾರೆ. ಈ ನಿಷ್ಕ್ರಿಯ ಅಭಿಧಮನಿಗಳು ಕೆಲಸಕ್ಕೆ ಬಾರದ ಅಭಿಧಮನಿಗಳಾಗಿದ್ದು ಅವುಗಳಲ್ಲಿ ರಕ್ತ ಶೇಖರಣೆಯಾಗಿ ಕಾಲಿನ ಆರೋಗ್ಯಕ್ಕೆ ತೊಂದರೆಯುಂಟಾಗುತ್ತದೆ. ವೆರಿಕೋಸ್ ವೇನ್ ಸಮಸ್ಯೆಯಿರುವ ಕಾಲಿಗೆ ಮೃದುವಾಗಿ 'ಕ್ರೇಪ್ ಬ್ಯಾಂಡೇಜ'ನ್ನು ಕಟ್ಟುವುದರಿಂದ ಮತ್ತು ರೋಗಿಯು ಹೆಚ್ಚು ಸಮಯ ನಿಂತಿರದಂತೆ ಎಚ್ಚರ ವಹಿಸುವುರಿಂದ ರೋಗಲಕ್ಷಣಗಳು ಹೆಚ್ಚಾಗದಂತೆ ನೋಡಿಕೊಳ್ಳಬಹುದು. ಆದರೆ ಈ ಕಾಯಿಲೆಯನ್ನು ಶಾಶ್ವತವಾಗಿ ಬಗೆಹರಿಸಬೇಕೆಂದರೆ ಈ ನಿಷ್ಕ್ರಿಯ ಅಭಿಧಮನಿಗಳನ್ನು ಕಾಲಿನಿಂದ ಶಸ್ತ್ರಚಿಕಿತ್ಸೆಯ ಮೂಲಕ ಹೊರಗೆ ತೆಗೆಯುವುದು ಅಥವಾ ಬೇರೆ ತಂತ್ರಜ್ಞಾನದ ಮೂಲಕ ಈ ಅಭಿಧಮನಿಗಳನ್ನು ಮುಚ್ಚಿಸಬೇಕಾಗುತ್ತದೆ.

ನಿಷ್ಕ್ರಿಯ ಅಭಿಧಮನಿಗಳನ್ನು ಕಾಲಿನಿಂದ ಕಿತ್ತು ತೆಗೆಯುವ ಕ್ರಮವನ್ನು ವೈದ್ಯಕೀಯ ವಿಜ್ಞಾನ ಕ್ಷೇತ್ರ ಕಳೆದ ಶತಮಾನದಲ್ಲಿ ಪಾಲಿಸಿಕೊಂಡು ಬಂದಿತ್ತು. ಈ ಚಿಕಿತ್ಸೆಯ ಸಂದರ್ಭದಲ್ಲಿ ರೋಗಿಯು ಹಲವು ದಿನಗಳ ಕಾಲ ಆಸ್ಪತ್ರೆಯಲ್ಲಿ ಉಳಿಯಬೇಕಾಗುತ್ತಿತ್ತು; ಶಸ್ತ್ರಚಿಕಿತ್ಸೆಯ ನೋವನ್ನು ಅನುಭವಿಸಬೇಕಾಗುತ್ತಿತ್ತು. ಇದೇ ನಿಷ್ಕ್ರಿಯ ಅಭಿಧಮನಿಗಳನ್ನು ಯಾವುದೇ ಗಾಯವಿಲ್ಲದ ಈಗ ಲೇಸರ್ ಮೂಲಕವೂ ಮುಚ್ಚುವ ತಜ್ಞವೈದ್ಯರಿದ್ದಾರೆ. ವರ್ಷಾನುಗಟ್ಟಲೆ ನಿಂತ ಕಾರಣದಿಂದ ಬಂದಿರಬಹುದಾದ ಈ ಕಾಯಿಲೆಯನ್ನು ರೋಗಿಯು ಆಸ್ಪತ್ರೆಯಲ್ಲಿ ಒಂದು ದಿನವೂ ನಿಲ್ಲದೆ ಲೇಸರ್ ಮೂಲಕ ಕೆಲವೇ ಗಂಟೆಗಳಲ್ಲಿ ಸರಿಪಡಿಸುವಷ್ಟರ ಮಟ್ಟಿಗೆ ವೈದ್ಯಕೀಯ ವಿಜ್ಞಾನವು ಪ್ರಗತಿಯನ್ನು ಸಾಧಿಸಿದೆ.

ಪರಿಪೂರ್ಣತೆಯ ಹಂಬಲ

ಇರುವ ಸಾಮರ್ಥ್ಯವನ್ನು ಅನುಮಾನಿಸುತ್ತ, ಕೆಲಸವನ್ನು ಮುಂದೂಡುತ್ತಲೇ ಇದ್ದರೆ ಸಾಧಿಸುವುದು ಹೇಗೆ?

ರಮ್ಯಾ ಶ್ರೀಹರಿ

ಯಾವುದೇ ಕೆಲಸವನ್ನು ಮಾಡುವ ಮೊದಲು ನಾವು ಆ ಕೆಲಸವನ್ನು ಸಾಧಿಸಬಹುದೇ, ಅದಕ್ಕೆ ಬೇಕಾದ ಸಿದ್ಧತೆ, ಸಾಮರ್ಥ್ಯಗಳು ನಮ್ಮಲ್ಲಿವೆಯೇ - ಎಂದು ಪ್ರಶ್ನಿಸಿಕೊಳ್ಳುವುದು ಸರಿಯಾದ ನಡೆಯೇ ಹೌದು. ಆದರೆ ಹೀಗೇ ಪ್ರಶ್ನೆಮಾಡಿಕೊಳ್ಳುತ್ತಾ, ನಮ್ಮ ಸಾಮರ್ಥ್ಯವನ್ನು ಅನುಮಾನಿಸುತ್ತಾ, ಇನ್ನಷ್ಟು ಸಿದ್ಧತೆ ಮಾಡಿಕೊಂಡು ನಂತರ ಪ್ರಯತ್ನಿಸೋಣ ಎನ್ನುತ್ತಾ ಕೆಲಸವನ್ನು ಮುಂದೂಡುತ್ತಲೇ ಬರುತ್ತಿದ್ದರೆ ಏನನ್ನಾದರೂ ಸಾಧಿಸುವುದು ಹೌದೇ?

ನಾವು ಮಾಡುವ ಕೆಲಸ ಅತ್ಯುತ್ತಮವಾಗಿರಬೇಕು, ಅದು ನಮ್ಮತನದ ಅಭಿವ್ಯಕ್ತಿಯಾಗಿರಬೇಕು, ನಮಗೆ ತೃಪ್ತಿ ತರುವಂತಿರಬೇಕು, ನಮ್ಮ ಸುತ್ತಲಿನ ಸಮಾಜಕ್ಕೆ ಅದರಿಂದ ಏನಾದರೂ ಉಪಯೋಗವಾಗಬೇಕು, ಇವೆಲ್ಲವನ್ನೂ ಗೌಣ ಮಾಡಿ ನಾವು ಮಾಡುವ ಕೆಲಸ ನಮಗೆ ಮೆಚ್ಚುಗೆ, ಮನ್ನಣೆಯನ್ನು ಗಳಿಸಿಕೊಡುವುದು ಮತ್ತು ನಮ್ಮ 'ಯೋಗ್ಯತೆ'ಗೆ ಅಳತೆಗೋಲಾಗುವುದೇ ಮುಖ್ಯವಾದಾಗ 'ನಾನು ಪರಿಪೂರ್ಣವಾಗಿರಬೇಕು, ತಪ್ಪೇ ಮಾಡದಂತೆ ನನ್ನ ನಡೆ-ನುಡಿ ಇರಬೇಕು' ಎನ್ನುವುದೇ ಒಂದು ಗೀಳಾಗಿ ಬದುಕಿನ ಚಲನಶೀಲತೆಗೆ, ಕೆಲಸಕಾರ್ಯಗಳಿಗೆ ಪ್ರತಿಬಂಧಕವಾಗುತ್ತದೆ.

ಯಾವುದೋ ಹೊಸ ಆಲೋಚನೆಯೊಂದು ಮೂಡುತ್ತದೆ, ಸೃಜನಶೀಲತೆಯ ಕಡೆಗೆ ಪ್ರಚೋದಿಸುತ್ತದೆ, ಏನನ್ನಾದರೂ ಬರೆಯಬೇಕೆನಿಸುತ್ತದೆ, ಕಲಿಯಬೇಕೆನಿಸುತ್ತದೆ, ಕಲಿತದ್ದನ್ನು ಹಂಚಿಕೊಳ್ಳಬೇಕೆನಿಸುತ್ತದೆ, ಯಾವುದೋ ಕನಸೊಂದನ್ನು ನನಸು ಮಾಡಿಕೊಳ್ಳಬೇಕೆನಿಸುತ್ತದೆ. ಆಗೆಲ್ಲಾ ನಮ್ಮೊಳಗೇ ಒಂದು ಟೀಕಾತ್ಮಕ ಧ್ವನಿ ಮಾತನಾಡತೊಡಗುತ್ತದೆ 'ನನಗೆ ಯಾವುದರಲ್ಲೂ ಪರಿಣತಿಯಿಲ್ಲ, ಬೇರೆಯವರು ಈ ಕ್ಷೇತ್ರದಲ್ಲಿ ಎಷ್ಟೆಲ್ಲಾ ಸಾಧಿಸಿದ್ದಾರೆ, ಅವರ ಸಾಧನೆಯ ಮುಂದೆ ನಾನೇನು ಮಾಡಿದರೂ ನಗಣ್ಯ, ನನ್ನಲ್ಲಿ ಪ್ರತಿಭೆಯಿಲ್ಲ....' ಹೀಗೇ ಸಾಗುತ್ತದೆ.

ಇದೆಲ್ಲದರ ಹಿಂದಿರುವ ಭಾವ 'ನಾನೇನೇ ಮಾಡಿದರೂ ಅದು ಏನೊಂದೂ ಲೋಪದೋಷವಿರದ ನೂರಕ್ಕೆ ನೂರು ಪ್ರತಿಶತ ಪರಿಪೂರ್ಣವಾಗಿರಬೇಕು, ಎಲ್ಲರೂ ನಿಬ್ಬೆರಗಾಗುವ ಅತಿಶಯವಾದ ಏನನ್ನೋ ಸಾಧಿಸಬೇಕು, ಆಗ ಮಾತ್ರ ನಾನು ಎಲ್ಲ ಪ್ರೀತಿಗೆ, ಗೌರವಕ್ಕೆ, ಮನ್ನಣೆಗೆ ಅರ್ಹತೆ ಪಡೆದುಕೊಳ್ಳುವುದು ಮತ್ತು ಹೀಗೆ ಪರಿಪೂರ್ಣವಾಗಿ ಇರುವುದರಿಂದ ಮಾತ್ರವೇ ಎಲ್ಲ ರೀತಿಯ ಟೀಕೆಯಿಂದ, ಅವಮಾನದಿಂದ, ನೋವಿನಿಂದ ತಪ್ಪಿಸಿಕೊಳ್ಳುವುದು ಸಾಧ್ಯ' ಎಂಬ ಪೂರ್ವಗ್ರಹ. ಇದನ್ನೇ ಪರಿಪೂರ್ಣತೆಯ ಹಂಬಲ (perfectionism) ಎನ್ನುವುದು.

ಯಾವ ಕೆಲಸವನ್ನೂ ಹೀಗೆ ಪರಿಪೂರ್ಣವಾಗಿ ಮಾಡುವುದು, ಪರಿಪೂರ್ಣವಾಗಿ ಇರುವುದು ಸುಲಭಸಾಧ್ಯವಲ್ಲ ಎನ್ನುವುದು ಎಲ್ಲರಿಗೂ ಅನುಭವವಾಗಿರುತ್ತದೆ. ಆಗೆಲ್ಲಾ ನಮಗೆ 'ನನ್ನಲ್ಲೇನೋ ಕೊರತೆಯಿದೆ' 'I am not good enough' ಎನ್ನುವ ವಿಭ್ರಾಂತಿಯುಂಟಾಗುತ್ತದೆ.

ಇಂಥ ವಿಭ್ರಾಂತಿಯುಂಟಾದಾಗ ಎಲ್ಲಾ ಯೋಜನೆಯನ್ನೂ ನಾವು ನಮ್ಮ ತಲೆಯೊಳಗೇ ಮಾಡುತ್ತಿರುತ್ತೇವೆ, ಯಾವುದನ್ನೂ ಅನುಷ್ಠಾನಕ್ಕೆ ತರುವುದೇ ಇಲ್ಲ. ಏಕೆಂದರೆ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸಬೇಕಾಗಿ ಬಂದಾಗ, ಯಾವುದೂ ನಮ್ಮ ಆಲೋಚನೆಯಂತೆ ಮೂಡಿಬರುವುದಿಲ್ಲ; ವಾಸ್ತವದೊಟ್ಟಿಗೆ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ಆಗ ಪರಿಪೂರ್ಣತೆಯ ಹಂಬಲ ಮನಸ್ಸಿಗೆ ಬಂದು ಅಸಮಾಧಾನವುಂಟಾಗುತ್ತದೆ. ಹಾಗಾಗಿ ಕೆಲಸಗಳನ್ನು 'ನಾಳೆ, ನಾಳೆ' ಎನ್ನುತ್ತಾ ಮುಂದೂಡುತ್ತಲೇ ಇರುತ್ತೇವೆ.

ಈ ವಿಳಂಬ ಪ್ರವೃತ್ತಿ ಆಲಸ್ಯದಿಂದಲೋ, ಕಾರ್ಯತಂತ್ರವನ್ನು ಸರಿಯಾಗಿ ರೂಪಿಸಲಾರದ್ದಕ್ಕೋ, ಸಮಯನಿರ್ವಹಣೆಯ ಕೌಶಲವಿಲ್ಲದ್ದಕ್ಕೋ, ಸ್ವ-ಪ್ರೇರಣೆಯಿಲ್ಲದ್ದಕ್ಕೋ ಉಂಟಾಗುವಂಥದ್ದಲ್ಲ. ಹಾಗಾಗಿಯೇ 'ನಾಳೆ ಮಾಡೋಣ' ಎಂಬ ಧೋರಣೆಗೆ ಸರಿಯಾದ ಚಿಕಿತ್ಸೆಯೆಂದರೆ ನಿರ್ವಹಣೆಯ ಕೌಶಲವನ್ನು ಕಲಿಯುವುದಲ್ಲ; ಬದಲಾಗಿ ನಮ್ಮ ಪರಿಪೂರ್ಣತೆಯ ಭ್ರಮೆಯ ಹಿಂದೆ ಅಡಗಿರುವ 'ನಾನು ಅಪರಿಪೂರ್ಣವಾಗಿರುವುದರಿಂದ ಪ್ರೀತಿಗೆ, ಗೌರವಕ್ಕೆ, ಸಮಾನತೆಗೆ, ಸಂತೋಷವಾದ ಜೀವನಕ್ಕೆ ಅನರ್ಹ' ಎಂಬ ನೋವಿಗೆ ಸ್ಪಂದಿಸುವುದು.

ನಮ್ಮ ಬಗ್ಗೆ ನಮಗೇ ಇರುವ ಇಂತಹ 'unworthiness' ಭಾವವು ನಮ್ಮನ್ನು ಹೊಸದೇನನ್ನೂ ಮಾಡಲು, ಬದಲಾಗಲು ಬಿಡದಂತೆ ಅವಮಾನದಲ್ಲಿ ಕೀಳರಿಮೆಯಲ್ಲಿ ಬಂಧಿಸಿಟ್ಟಿರುತ್ತದೆ. ಪರಿಪೂರ್ಣವಾಗಿರಬೇಕೆಂಬ ಆತಂಕದಿಂದ ನಾವು ಚೆನ್ನಾಗಿ ಮಾಡಬಹುದಾದ್ದನ್ನೂ ಕಳಪೆಯಾಗಿ ಮಾಡುವ ಸಾಧ್ಯತೆಯುಂಟು.

ಪರಿಪೂರ್ಣತೆಯ ಹಂಬಲ ಕೇವಲ ಸೃಜನಶೀಲ ಅಭಿವ್ಯಕ್ತಿಯೊಟ್ಟಿಗೆ ಮಾತ್ರ ಬರುವಂಥದ್ದಲ್ಲ. 'ನನ್ನಲ್ಲೇನೋ ಕೊರತೆಯಿದೆ; ನನಗೆ ಯಾವುದಕ್ಕೂ ಅರ್ಹತೆಯಿಲ್ಲ' ಎನ್ನುವ ಧ್ವನಿ ದಿನನಿತ್ಯದ ಅನೇಕ ಸಂದರ್ಭಗಳಲ್ಲಿ ಎದುರಾಗುತ್ತಲೇ ಇರುತ್ತದೆ. ಯಾರೊಂದಿಗಾದರೂ ಸ್ನೇಹಕ್ಕೆ ಮುಂದಾದಾಗ, ಅವರೊಂದಿಗೆ ಮನಬಿಚ್ಚಿ ಏನನ್ನಾದರೂ ಹೇಳಿಕೊಳ್ಳುವ ಮನಸ್ಸಾದಾಗ ತಿರಸ್ಕಾರದ ಭಯ ಉಂಟಾಗುತ್ತದೆ. ಅವರ ತಿರಸ್ಕಾರ ನಮ್ಮ ಅಸಮರ್ಪಕತೆಯನ್ನು ಸಾಬೀತು ಪಡಿಸೀತೆಂಬ ಭಯ! ಯಾರಾದರೂ ನಮ್ಮ ತಪ್ಪುಗಳನ್ನು ತೋರಿಸಿಕೊಟ್ಟಾಗ ವಿಪರೀತ ಅವಮಾನಿತರಾಗಿ ನಮ್ಮನ್ನು ನಾವೇ ಹೀಗೆಳೆದುಕೊಳ್ಳುತ್ತಾ, ಅಥವಾ 'ನಮ್ಮ ತಪ್ಪೇ ಇಲ್ಲ' ಎಂದು ಅತಿಯಾಗಿ ಹೋರಾಡುವುದರ ಹಿಂದೆಯೂ ಪರಿಪೂರ್ಣತೆಯ ಭ್ರಮೆ ಇರುತ್ತದೆ. ಹಾಗೆ 'ನನ್ನಲ್ಲೇನೋ ಕೊರತೆಯಿದೆ' ಎನ್ನುವ ಭಾವವಿಲ್ಲದಿದ್ದರೆ ತಪ್ಪುಗಳನ್ನು ಸಹಜವಾಗಿ ಒಪ್ಪಿಕೊಂಡು ಅಥವಾ ತಪ್ಪಿಲ್ಲದಿದ್ದರೆ ಟೀಕೆಗಳಿಗೆ ತಲೆಕೆಡಿಸಿಕೊಳ್ಳದೆ ಸುಮ್ಮನೆ ಮುಂದುವರೆಯಬಹುದು.

ಹಾಗಾದರೆ ಪರಿಪೂರ್ಣತೆಯ ಸುಳಿಯಿಂದ, ಅದರಿಂದುಂಟಾಗುವ ಅವಮಾನ, ಕೀಳರಿಮೆಯಿಂದ ಬಿಡುಗಡೆ ಹೇಗೆ?

- ನಮ್ಮನ್ನು ನಾವು ಇಷ್ಟಪಡದೇ ಇರುವಾಗಲೇ ಪರಿಪೂರ್ಣತೆಯ ಹಂಬಲ ನಮ್ಮಲ್ಲಿ ಹೆಚ್ಚಾಗುವುದು, ಪರಿಪೂರ್ಣರಾಗಿದ್ದು ಬೇರೆಯವರನ್ನು ಮೆಚ್ಚಿಸಿ ಅವರಿಂದ ಮನ್ನಣೆಯನ್ನು, ಪ್ರೀತಿಯನ್ನು ಪಡೆದುಕೊಳ್ಳುವ ಹುನ್ನಾರವದು. ನಮ್ಮ ಬಗ್ಗೆ ನಮ್ಮ ಹೃದಯ ಆರ್ದ್ರಗೊಂಡಾಗ ಇಂತಹ ಭ್ರಮೆಗಳಿಂದ ಕಳಚಿಕೊಳ್ಳುವುದು ಸುಲಭ.
- ಪರಿಪೂರ್ಣತೆಯ ಹಂಬಲ ನಮ್ಮನ್ನು ತಪ್ಪೇ ಇಲ್ಲದಂತೆ ಕೆಲಸ ಮಾಡಲು ಪ್ರೇರೇಪಿಸುವಂಥದ್ದಲ್ಲ; ಬದಲಾಗಿ ಅದು ಸೋಲಿನಿಂದ, ಅವಮಾನದಿಂದ, ಟೀಕೆಯಿಂದ ತಪ್ಪಿಸಿಕೊಳ್ಳಲು ನಾವು ಕಟ್ಟಿಕೊಂಡಿರುವ ಮಾನಸಿಕ ಚಿತ್ರಣವಷ್ಟೇ. ಪರಿಪೂರ್ಣವಾಗಿರಲಿ, ಇಲ್ಲದಿರಲಿ ಎಲ್ಲರೂ ಗೌರವಕ್ಕೆ, ಆತ್ಮೀಯತೆಗೆ ಅರ್ಹರೇ ಹೌದು ಎನ್ನುವ ನಂಬಿಕೆಯುಂಟಾದಾಗ ನಾವು ಸೋಲನ್ನು ವಸ್ತುನಿಷ್ಠವಾಗಿ ಸ್ವೀಕರಿಸುತ್ತೇವೆ. ನಮ್ಮ ಶಕ್ತಿ ಮೀರಿ ಎಷ್ಟು ಚೆನ್ನಾಗಿ ಸಾಧ್ಯವೋ ಅಷ್ಟು ಚೆನ್ನಾಗಿ, ಶ್ರದ್ಧೆಯಿಂದ ಕೆಲಸ ಮಾಡಿ ಫಲಿತಾಂಶದಿಂದ ವಿಚಲಿತರಾಗದಿರುವುದನ್ನು ಅಭ್ಯಾಸ ಮಾಡಿಕೊಳ್ಳುತ್ತೇವೆ.
- ನಮ್ಮನ್ನು ನಾವು ಇತರರೊಂದಿಗೆ ಹೋಲಿಸಿಕೊಳ್ಳುವುದು, ಅದರಲ್ಲೂ ನಮಗಿಂತ ಯಾರು ಹೆಚ್ಚಿನ ಸಾಧನೆಯನ್ನು ಮಾಡಿರುವವರು, ಪ್ರತಿಭಾವಂತರು, ಬುದ್ಧಿವಂತರು ಎಂದು ನಮಗನ್ನಿಸುತ್ತದೆಯೋ ಅವರೊಂದಿಗೆ ನಮ್ಮನ್ನು ನಾವೇ ಹೋಲಿಸಿಕೊಂಡು ಸಂಕಟಪಡುವುದು, 'ಅವರಷ್ಟು ಚೆನ್ನಾಗಿ ಮಾಡಲಾಗದ ಮೇಲೆ, ಮಾಡಿ ಏನು ಪ್ರಯೋಜನ' ಎಂದುಕೊಳ್ಳುವುದು ಎಲ್ಲವೂ ನಮ್ಮನ್ನು ನಿಷ್ಕ್ರಿಯಗೊಳಿಸುತ್ತದೆ.

ಈ ಬದುಕನ್ನು ಒಂದು ಸಂತೋಷಕೂಟ ಎಂದು ಭಾವಿಸೋಣ. ನಾವೆಲ್ಲರೂ ನಮಗೆ ವಿಶಿಷ್ಟವೆನಿಸುವ ಉಡುಗೊರೆಗಳನ್ನು, ತಿಂಡಿ, ತಿನಿಸುಗಳನ್ನು ಈ ಸಮಾರಂಭಕ್ಕೆ ತಂದಿದ್ದೇವೆ, ಯಾರು ತಂದದ್ದು ಶ್ರೇಷ್ಠ, ಯಾರದು ಕನಿಷ್ಠ ಎನ್ನುವ ಪ್ರಶ್ನೆಯೇ ಅರ್ಥವಿಲ್ಲದ್ದು.

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

PHYSICS

46) The electric field intensity produced by the radiations coming from 100 W bulb at a 3 m distance is E. The electric field intensity produced by the radiations coming from 50 W bulb at the same distance is................*(Contd)*

a) $\frac{E}{2}$ b) 2E

c) $\frac{E}{\sqrt{2}}$ d) $\sqrt{2}$E

Ans: d

47) If E and B represent electric and magnetic field vectors of the electromagnetic wave, the direction of propagation of electromagnetic wave is along..................

a) E b) B

c) B x E d) E x B

Ans:-d

48) The ratio of contributions made by the electric field and magnetic field components to the intensity of an EM wave is..................

a) c : 1 b) c^2 : 1

c) 1 : 1 d) $\sqrt{c}$: 1

49) 12. Two poles are by a distance of 3.14 m. The resolving power of human eye is minute of an arc. The maximum distance from which he can identify the two poles distinctly is

a) 376 m b) 10.8 km

c) 5.4 km d) 188 m

Ans: b

Expln:-

Given the lateral separation of the poles d=3.14 m

The resolving power of the eye is

θ=1min=π/(60×180) rad

The maximum distance from which poles are distinctly visible is D=d/θ

⇒D=(3.14×60×180)/π=10800m=10.8 km

50) A stone is thrown vertically at a speed of 30 m s^{-1} making an angle of 45^0 with the horizontal. What is the maximum height reached by the stone? Take g = 10 m s^{-2}.

a) 15m b) 30 m

c) 10 m d) 22.5 m

Soln: (d): Maximum height reached by the stone is

$$H_{max} = \frac{u^2 \sin^2\theta}{2g}$$

Here, $u = 30\ m\ s^{-1}$, $\theta = 45^0$, $g = 10\ m\ s^{-2}$

$$\therefore H_{max} = \frac{(30)^2 \sin^2 45^0}{2\times10} = \frac{30\times30\times\left(\frac{1}{\sqrt{2}}\right)^2}{2\times10}$$

$$= \frac{45}{2} = 22.5\ m$$

51) A ray light incident at an angle θ on a refracting face of a prism emerges from the other face normally. If the angle of the prism is 5^0 and the prism is made of a material of refractive index 1.5, the angle of incidence is

a) 7.5^0 b) 5^0

c) 15^0 d) 2.5^0

Ans:- a

52) A short pulse of white light is incident from air to a glass slab at normal incidence. After travelling through the slab, the first colour to emerge is

a) blue b) green

c) violet d) red

Ans:-d

53) A force $\vec{F} = 5\hat{i}+2\hat{j}-5\hat{k}$ acts on a particle whose position vector is $\vec{r} = \hat{i}+2\hat{j}+\hat{k}$ what is the torque about the origin?

(a) $8\hat{i}-10\hat{j}-8\hat{k}$ (b) $8\hat{i}+10\hat{j}+12\hat{k}$

(c) $10\hat{i}-10\hat{j}-\hat{k}$ (d) $8\hat{i}+10\hat{j}-12\hat{k}$

Soln:(b): Here, $\vec{r} = \hat{i}-2\hat{j}+\hat{k}$

$$\vec{F} = 5\hat{i}+2\hat{j}+\hat{k}$$

$$= \begin{bmatrix} \hat{i} & \hat{j} & \hat{k} \\ 1 & -2 & 1 \\ 5 & 2 & -5 \end{bmatrix}$$

$$= \hat{i}(10-2)-\hat{j}(-5-5)+\hat{k}(-2(-10))$$

$$= 8\hat{i}+10\hat{j}+12\hat{k}$$

54) An object approaches a convergent lens from the left of the lens with a uniform speed 5 m/s and stops at the focus. The image

a) moves away from the lens with an uniform speed 5 m/s.

b) moves away from the lens with an uniform acceleration.

c) moves away from the lens with a nonuniform acceleration.

d) moves towards from the lens with a non-uniform acceleration.

Ans:- c

55) A passenger in an aeroplane shall

a) never see a rainbow.

b) may see a primary and a secondary rainbow as concentric circles.

c) may see a primary and a secondary rainbow as concentric arcs.

d) shall never see a secondary rainbow.

Ans:-b

56) A focal length of a lens is 10 cm. What is power of a lens in dioptre?

a) 15 D b) 0.1 D

c) 20 D d) 10 D

Soln: (d): Power of a lens,

$$P\,(\text{in dioptre}) = \frac{1}{\text{Focal length } f(\text{in cm})}$$

$$= \frac{100}{f\,(\text{in cm})}$$

$$\therefore P = \frac{100}{10} = 10\ D$$

MATHEMATICS

MULTIPLE CHOICE QUESTIONS

54) The slant height of a cone is fixed at 7 cm. if the rate of increase of its height is 0.3 cm/sec, then the rate of increase of its volume when its height is 4 cm is

(A) $\frac{\pi}{2}$ cc/sec (B) π cc/sec

(C) $\frac{\pi}{5}$ cc/sec (D) $\frac{\pi}{10}$ cc/sec

Ans : (D) $\frac{\pi}{10}$ cc/sec

Expln:- (.......Contd)

$$\therefore \frac{r\,dr}{dt} = -h\frac{dh}{dt} \quad \text{i.e., } \frac{dV}{dt} = \frac{\pi}{3}\left(r^2\frac{dh}{dt}+2h\left(-h\frac{dh}{dt}\right)\right)$$

$$\text{i.e., } \frac{dV}{dt} = \frac{\pi}{3}\left(33\times\frac{3}{10}-2\times16\times\frac{3}{10}\right) \left(\because \frac{dh}{dt} = 0.3 = \frac{3}{10}\right)$$

$$\frac{dV}{dt} = \frac{\pi}{3}\times\frac{3}{10} = \frac{\pi}{10}.$$

55) If $S^2 = at^2 + 2bt + c$, then the acceleration is

(A) Directly proportional to S

(B) Inversely proportional to S

(C) Directly proportional to S^2

(D) Inversely proportional to S^3

Ans: (D) Inversely proportional to S^3

Expln:-

$$S^2 = at^2+2bt+C$$

$$2S\frac{dS}{dt} = 2at+2b. \quad \therefore S\frac{dS}{dt} = at+b.$$

Diff. again w.r.to.t,

$$S\frac{d^2S}{dt^2}+\left(\frac{dS}{dt}\right)^2 = a$$

$$\text{But } \frac{dS}{dt} = \frac{at+b}{S} \therefore S\frac{d^2S}{dt^2}+\left(\frac{at+b}{S}\right)^2 = a.$$

$$S\frac{d^2S}{dt^2} = a-\left(\frac{at+b}{S}\right)^2$$

$$\frac{d^2S}{dt^2} = \frac{a}{S}-\frac{(at+b)^2}{S^3}$$

$$= \frac{aS^2-(at+b)^2}{S^3} = \frac{a(at^2+2bt+C)-(at+b)^2}{S^3}$$

i.e., acceleration is inversely proportional to S^3.

56) A ladder 5 m long is leaning against a wall. The bottom of the ladder is pulled along the ground away from the wall, at the rate of 2 m/sec. the speed at which its height on the wall decreased when the foot of the ladder is 4 m away from the wall is

(A) $\frac{3}{8}$ m/sec (B) $\frac{8}{3}$ m/sec

(C) $\frac{5}{3}$ m/sec (D) $\frac{2}{3}$ m/sec

Ans : (B) $\frac{8}{3}$ m/sec



$$x^2+y^2 = 25$$

$$2x.\frac{dx}{dt}+2y\frac{dy}{dt} = 0 \quad \therefore x\frac{dx}{dt}+y\frac{dy}{dt} = 0$$

When $x = 4$, $y^2 = 25-16 = 9 \quad \therefore y = 3$

$$\therefore 4\times2+3\times\frac{dy}{dt} = 0 \Rightarrow \frac{dy}{dt} = -\frac{8}{3}$$

–ve sign denotes the decrease. $\therefore \frac{8}{3}$.

57) The angle between the curves $y^2 = 4ax$ and $ay = 2x^2$ is

(A) $\tan^{-1}\frac{3}{4}$ (B) $\tan^{-1}\frac{3}{5}$

(C) $\tan^{-1}\frac{4}{3}$ (D) $\tan^{-1}\frac{5}{3}$

Ans : (B) $\tan^{-1}\frac{3}{5}$

Expln :– $y^2 = 4ax$ ....(1),

$ay = 2x^2$ ....(2)

To get the point of intersection of the curves, solve (1) and (2)

i.e., substitute $y = \frac{2}{a}x^2$ in (1)

$$\text{i.e., } \frac{4}{a^2}x^4-4ax = 0 \quad \therefore x\left(\frac{x^3}{a^2}-a\right) = 0$$

$x = 0$ or $\frac{x^3}{a^2}-a = 0$

i.e., $x^3 = a^3$ i.e., $x = a$.

Then $y = \frac{2}{a}.a^2 = 2a$

i.e., the point of intersection is (a, 2a).

Diff. (1) w.r.to x, $2y\frac{dy}{dx} = 4a$

$$\therefore \frac{dy}{dx} = \frac{4a}{2y} = \frac{2a}{y}$$

$$\left(\frac{dy}{dx}\right)_{(a,\,2a)} = \frac{2a}{2a} = 1 = m_1$$

For (2), $a\frac{dy}{dx} = 4x$.

$$\therefore \frac{dy}{dx} = \frac{4x}{a} \quad \text{i.e., } \left(\frac{dy}{dx}\right)_{(a,\,2a)} = \frac{4a}{a} = 4 = m_2$$

Angle between curves θ is given by

$$\tan\theta = \left|\frac{m_1-m_2}{1+m_1m_2}\right| = \left|\frac{1-4}{1+4}\right| = \left|-\frac{3}{5}\right|$$

$$\therefore \theta = \tan^{-1}\frac{3}{5}.$$

17.4.23

ಸಂಕ್ಷಿಪ್ತ ಸುದ್ದಿ

'ಇಂಗ್ಲೆಂಡ್‌ಗೆ ತೆರಳಲು ಐವರು ಕುಲಪತಿಗಳು ಆಯ್ಕೆ'

ಕಲಬುರಗಿ: 'ಉನ್ನತ ಶಿಕ್ಷಣ ಸಂಬಂಧಿತ ನಿರ್ವಹಣೆ ಬಗ್ಗೆ ಅಧ್ಯಯನಕ್ಕೆ ರಾಜ್ಯದ ಐದು ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ಇಂಗ್ಲೆಂಡ್ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡುವ ಅವಕಾಶ ಲಭಿಸಿದೆ' ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ದಯಾನಂದ ಅಗಸರ ಹೇಳಿದರು.

ಸೋಮವಾರ ನಡೆದ ಸಿಂಡಿಕೇಟ್ ಸಭೆಯಲ್ಲಿ ಮಾತನಾಡಿದ ಅವರು, 'ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಲಿಂಗರಾಜ ಗಾಂಧಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ನಿರಂಜನ ವಾನಳ್ಳಿ, ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಹರೀಶ್ ರಾಮಸ್ವಾಮಿ, ತುಮಕೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ವೆಂಕಟೇಶ್ವರಲು ಅವರ ಜೊತೆ ಗುಲಬರ್ಗಾ ವಿ.ವಿ.ಗೂ ಅವಕಾಶ ಲಭಿಸಿದೆ' ಎಂದರು.

'ಮೇ 28ರ ಬಳಿಕ 10 ದಿನ ಇಂಗ್ಲೆಂಡ್‌ನಲ್ಲಿ ಉಳಿದು ಡುಂಡಿ ವಿಶ್ವವಿದ್ಯಾಲಯ, ಯುನಿವರ್ಸಿಟಿ ಆಫ್ ಬ್ರಾಡ್‌ಫೋರ್ಡ್, ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾಲಯ ಸೇರಿ 5 ವಿಶ್ವವಿದ್ಯಾಲಯಗಳಿಗೆ, ಬ್ರಿಟಿಷ್ ಕೌನ್ಸಿಲ್ ಮತ್ತು ಲಂಡನ್‌ನ ಉನ್ನತ ಶಿಕ್ಷಣ ಕೇಂದ್ರಕ್ಕೂ ಭೇಟಿ ನೀಡಲಾಗುವುದು' ಎಂದರು.

ಖಾಸಗಿ ಶಾಲೆಗಳ ಶುಲ್ಕದ ವಿವರ ಕಡ್ಡಾಯ

ಬೆಂಗಳೂರು: ವಿದ್ಯಾರ್ಥಿಗಳಿಂದ ಪಡೆಯುವ ಶುಲ್ಕದ ವಿವರಗಳನ್ನು ಕಡ್ಡಾಯವಾಗಿ ಪ್ರಕಟಿಸುವುದೂ ಸೇರಿದಂತೆ ಖಾಸಗಿ ಶಾಲೆಗಳ ಪ್ರವೇಶ ಪ್ರಕ್ರಿಯೆ ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಿದೆ.

ಏಪ್ರಿಲ್‌ನಿಂದ ಪ್ರವೇಶ ಪ್ರಕ್ರಿಯೆ ಆರಂಭಿಸಬೇಕು. ಮಗು ಹಿಂದೆ ಓದುತ್ತಿದ್ದ ಶಾಲೆ ತೊರೆದು ಬೇರೆ ಶಾಲೆಗೆ ಪ್ರವೇಶ ಪಡೆದರೆ ತಕ್ಷಣವೇ ವರ್ಗಾವಣೆ ಪತ್ರ ನೀಡಬೇಕು. ಸಿಬಿಎಸ್‌ಸಿ, ಐಸಿಎಸ್‌ಸಿ ಪಠ್ಯಕ್ರಮದ ಶಾಲೆಗಳೂ ಈ ನಿಯಮ ಪಾಲಿಸಬೇಕು. ಡೊನೇಷನ್ ಪಡೆಯಬಾರದು, ಮಗುವಿನ ಪ್ರವೇಶಕ್ಕೆ ಪೋಷಕರಿಗೆ ಪ್ರವೇಶ ಪರೀಕ್ಷೆ ನಡೆಸಬಾರದು. ನಿಯಮ ಉಲ್ಲಂಘಿಸಿದ ಶಾಲೆಗಳಿಗೆ ₹ 1 ಲಕ್ಷ ದಂಡ, ಉಲ್ಲಂಘನೆ ಪುನರಾವರ್ತಿತವಾದರೆ ದಿನಕ್ಕೆ ₹ 10 ಸಾವಿರ ದಂಡ ವಸೂಲಿ ಮಾಡಲಾಗುವುದು ಎಂದು ಆಯುಕ್ತ ಆರ್.ವಿಶಾಲ್ ವಿವರಿಸಿದ್ದಾರೆ.

ಚುನಾವಣಾ ಕರ್ತವ್ಯಲೋಪ ಆರೋಪ • ಚುನಾವಣಾ ಆಯೋಗದಿಂದ ನಿರ್ದೇಶನ

ಡಿಸಿಪಿ ಸಹಿತ 6 ಅಧಿಕಾರಿಗಳ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸುರಪುರ, ದೇವದುರ್ಗ ಕ್ಷೇತ್ರಗಳ ಗಲಾಟೆ ಪ್ರಕರಣ
- ಇಬ್ಬರು ಡಿಸಿಪಿಗಳ ವರ್ಗಾವಣೆ

ನವದೆಹಲಿ: ಚುನಾವಣಾ ಕರ್ತವ್ಯ ಲೋಪದ ಕಾರಣಕ್ಕೆ, ಬೆಂಗಳೂರು ಉತ್ತರ ಡಿಸಿಪಿ ದೇವರಾಜ್ ಸೇರಿದಂತೆ ಆರು ಪೊಲೀಸ್ ಅಧಿಕಾರಿಗಳ ಎತ್ತಂಗಡಿಗೆ ಭಾರತೀಯ ಚುನಾವಣಾ ಆಯೋಗ ಸೂಚಿಸಿದೆ. ಸುರಪುರ ಹಾಗೂ ದೇವದುರ್ಗ ಕ್ಷೇತ್ರಗಳ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಡಿವೈಎಸ್‌ಪಿಗಳ ವರ್ಗಾವಣೆಗೂ ನಿರ್ದೇಶನ ನೀಡಿದೆ.

ಚುನಾವಣಾ ನೀತಿಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಹಾಗೂ ಸುಗಮ ಚುನಾವಣೆ ನಡೆಸಲು 10 ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲು ಸೂಚಿಸಲಾಗಿದೆ ಎಂದು ಆಯೋಗದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಬೆಂಗಳೂರು ಉತ್ತರ ಡಿಸಿಪಿ ದೇವರಾಜ್, ಯಶವಂತಪುರ ಎಸಿಪಿ ಅರುಣ್ ಗೌಡ, ರಾಜರಾಜೇಶ್ವರಿನಗರ, ಯಶವಂತಪುರ, ನಂದಿನಿ ಬಡಾವಣೆ ಹಾಗೂ ರಾಜಗೋಪಾಲನಗರ ಠಾಣೆಗಳ ಇನ್‌ಸ್ಪೆಕ್ಟರ್‌ಗಳಾದ ಶಿವಣ್ಣ, ಸುರೇಶ್ ಕೆ., ಮಂಜುನಾಥ್ ಮತ್ತು ಜಗದೀಶ್ ವರ್ಗಾವಣೆಗೊಳ್ಳಲಿದ್ದಾರೆ. ಸಚಿವರೊಬ್ಬರ ಶಿಫಾರಸಿನ ಮೇರೆಗೆ ಈ ಪೊಲೀಸ್ ಅಧಿಕಾರಿಗಳನ್ನು ಈ ಠಾಣೆಗಳಿಗೆ ನೇಮಕ ಮಾಡಲಾಗಿತ್ತು ಎಂದು ಮೂಲಗಳು ಹೇಳಿವೆ.

ಕೋಮು ದ್ವೇಷದ ಭಾಷಣ ಹಾಗೂ ಕೋಮು ಗಲಭೆಗೆ ಪ್ರಚೋದನೆ ನೀಡಿದ ಆರೋಪದಡಿ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯೂ ಆಗಿರುವ ತೋಟಗಾರಿಕಾ ಸಚಿವ ಎಸ್. ಮುನಿರತ್ನ ವಿರುದ್ಧ ಇತ್ತೀಚೆಗೆ ಎಫ್‌ಐಆರ್‌ಗಳು ದಾಖಲಾಗಿದ್ದವು.

'ತಮಿಳು ಭಾಷಿಕರು ಮತ್ತು ಕನ್ನಡಿಗರ ಮಧ್ಯೆ ಸಂಘರ್ಷಕ್ಕೆ ಎಡೆಮಾಡುವಂಥ ಪ್ರಚೋದನಕಾರಿ ಭಾಷಣ ಮಾಡಿರುವ ಮುನಿರತ್ನ, ಅಲ್ಪಸಂಖ್ಯಾತ ಕ್ರೈಸ್ತ ಸಮುದಾಯದವರನ್ನು ಹೊಡೆದು ಓಡಿಸಿ ಎಂಬುದಾಗಿ ಮಾತನಾಡಿದ್ದಾರೆ. ಕೋಮು ದ್ವೇಷದ ಹೇಳಿಕೆ ನೀಡಿ ಸಮುದಾಯದ ಗೌರವ ಹಾಗೂ ಹಕ್ಕುಗಳಿಗೆ ಚ್ಯುತಿ ತಂದಿದ್ದಾರೆ' ಎಂಬುದಾಗಿ ದೂರುದಾರರು ಆರೋಪಿಸಿದ್ದರು. ಮುನಿರತ್ನ ಅವರ ಭಾಷಣದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ಈ ತಿಂಗಳ ಆರಂಭದಲ್ಲಿ, ಸುರಪುರದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಸಂಘರ್ಷ ನಡೆದಿತ್ತು. ಈ ಗಲಾಟೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡದ ಕಾರಣಕ್ಕೆ ಅಲ್ಲಿನ ಡಿಸಿಪಿ ಮಂಜುನಾಥ್, ಇನ್‌ಸ್ಪೆಕ್ಟರ್ ಆನಂದ್ ವಾಗಮೋಡೆ ಅವರನ್ನು ವರ್ಗಾಯಿಸಲಾಗುತ್ತಿದೆ. ದೇವದುರ್ಗದ ಗಲಾಟೆಗೆ ಸಂಬಂಧಿಸಿದಂತೆ ಅಲ್ಲಿನ ಡಿಸಿಪಿ ಮಂಜುನಾಥ್ ಎಸ್. ಹಾಗೂ ಇನ್‌ಸ್ಪೆಕ್ಟರ್ ಖ್ವಾಜಾ ಹುಸೇನ್ ಅವರನ್ನು ವರ್ಗಾಯಿಸಲಾಗುತ್ತಿದೆ ಎಂದು ಆಯೋಗದ ಅಧಿಕಾರಿಯೊಬ್ಬರು ತಿಳಿಸಿದರು.

'ಈ ಬಗ್ಗೆ ಆಯೋಗಕ್ಕೆ ಯಾವುದೇ ದೂರುಗಳು ಬಂದಿರಲಿಲ್ಲ. ಸುಲಲಿತವಾಗಿ ಚುನಾವಣೆ ನಡೆಸುವ ಉದ್ದೇಶದಿಂದ ಆಯೋಗ ಸ್ವಯಂಪ್ರೇರಿತವಾಗಿ ಈ ಕ್ರಮ ಕೈಗೊಂಡಿದೆ' ಎಂದೂ ಅವರು ಹೇಳಿದರು.

ಜನಾರ್ದನ ರೆಡ್ಡಿ, ಶಾಸಕ ನಾಗೇಂದ್ರಗೆ ಕೋರ್ಟ್ ಸಮನ್ಸ್

ಬೆಂಗಳೂರು: ಅಕ್ರಮವಾಗಿ ಕಬ್ಬಿಣದ ಅದಿರು ಸಾಗಣೆ ಮತ್ತು ಮಾರಾಟ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಗಾಲಿ ಜನಾರ್ದನ ರೆಡ್ಡಿ ಮತ್ತು ಕಾಂಗ್ರೆಸ್ ಶಾಸಕ ಬಿ. ನಾಗೇಂದ್ರ ಸೇರಿದಂತೆ ಒಟ್ಟು 16 ಜನ ಆರೋಪಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣದಲ್ಲಿ ಸಮನ್ಸ್ ಜಾರಿಗೊಳಿಸಲು ಜನಪ್ರತಿನಿಧಿಗಳ ಕೋರ್ಟ್ ಆದೇಶಿಸಿದೆ.

ತನಿಖಾಧಿಕಾರಿ ಮಂಜುನಾಥ್ ಅಣ್ಣಿಗೇರಿ ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ' ನಡೆಸುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಜೆ.ಪ್ರೀತ್ ಅವರು ಆರೋಪಿಗಳ ವಿರುದ್ಧ ಸಂಜ್ಞೇಯ ಅಪರಾಧವನ್ನು ಪರಿಗಣಿಸಿ ಸಮನ್ಸ್ ಜಾರಿಗೆ ಆದೇಶಿಸಿದ್ದಾರೆ. ವಿಚಾರಣೆಯನ್ನು ಜೂನ್ 24ಕ್ಕೆ ಮುಂದೂಡಿದ್ದಾರೆ.

ಆರೋಪವೇನು?: 'ಆರೋಪಿಗಳು ಕಾನೂನು ಬಾಹಿರವಾಗಿ ಕಬ್ಬಿಣದ ಅದಿರು ಸಾಗಣೆ ಮತ್ತು ಮಾರಾಟ ಮಾಡಿ ರಾಯಧನ ಪಾವತಿಸದೆ ರಾಜ್ಯದ ಬೊಕ್ಕಸಕ್ಕೆ ₹ 211 ಕೋಟಿ ನಷ್ಟ ಉಂಟು ಮಾಡಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಪ್ರಕರಣದಲ್ಲಿ ಗಾಲಿ ಜನಾರ್ದನ ರೆಡ್ಡಿ, ಮೆಹಫೂಜ್ ಅಲಿ ಖಾನ್, ಮಧುಕರ್ ವರ್ಮಾ, ಬಿ. ನಾಗೇಂದ್ರ ಸೇರಿದಂತೆ 16 ಜನರನ್ನು ಆರೋಪಿಗಳನ್ನಾಗಿ ಹೆಸರಿಸಲಾಗಿದೆ.

ಜನಗಣತಿ ನಡೆಸಿ: ಪ್ರಧಾನಿಗೆ ಖರ್ಗೆ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಮುನ್ನ ಸಾಮಾಜಿಕ ನ್ಯಾಯದ ಕಾರ್ಯಸೂಚಿ ಮುಂದಿಡಲು ಕಾಂಗ್ರೆಸ್ ಹೆಜ್ಜೆ ಇರಿಸಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ದಶವಾರ್ಷಿಕ ಜನಗಣತಿಯೊಂದಿಗೆ ಹೊಸದಾಗಿ ಜಾತಿ ಗಣತಿ ನಡೆಸಬೇಕು ಎಂದು ಆಗ್ರಹಿಸಿ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಕೋಲಾರದಲ್ಲಿ ಭಾನುವಾರ ನಡೆದ 'ಜೈ ಭಾರತ್' ಸಮಾವೇಶದಲ್ಲಿ ಮಾತನಾಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ಯುಪಿಎ-2 ಸರ್ಕಾರದ ಅವಧಿಯಲ್ಲಿ ಜಾತಿ ಜನಗಣತಿ ಮಾಡಲಾಗಿತ್ತು. ಆದರೆ, ಬಿಜೆಪಿ ಸರ್ಕಾರ ಬಂದ ಮೇಲೆ ಆ ಅಂಕಿ ಅಂಶಗಳನ್ನು ಮುಚ್ಚಿಟ್ಟಿದೆ. ನರೇಂದ್ರ ಮೋದಿ ಅವರಿಗೆ ಧೈರ್ಯ ಇದ್ದರೆ ಜಾತಿ ಜನಗಣತಿ ವರದಿಯನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದ್ದರು. ಅದರ ಬೆನ್ನಲ್ಲೇ, ಖರ್ಗೆ ಅವರು ಪ್ರಧಾನಿ ಅವರಿಗೆ ಬರೆದ ಪತ್ರವನ್ನು ತಮ್ಮ ಟ್ವಿಟರ್ ಖಾತೆಯಲ್ಲಿ ಸೋಮವಾರ ಬೆಳಿಗ್ಗೆ ಹಾಕಿಕೊಂಡಿದ್ದಾರೆ.

ಕರ್ನಾಟಕ ವಿಧಾನಸಭೆ ಚುನಾವಣೆ ಹಾಗೂ ಲೋಕಸಭಾ ಚುನಾವಣೆಗೆ ಮುನ್ನ ದಲಿತರು, ಆದಿವಾಸಿಗಳು ಹಾಗೂ ಹಿಂದುಳಿದ ವರ್ಗದವರ (ಒಬಿಸಿ) ವಿಶ್ವಾಸ ಗಳಿಸುವ ಪ್ರಯತ್ನಕ್ಕೆ ರಾಹುಲ್ ಗಾಂಧಿ ಭಾಷಣ ಹಾಗೂ ಖರ್ಗೆ ಅವರ ಪತ್ರದ ಮೂಲಕ ಕೈ ಹಾಕಿದೆ ಎಂಬ ಚರ್ಚೆಗಳು ರಾಜಕೀಯ ವಲಯದಲ್ಲಿ ನಡೆದಿವೆ.

ಇತ್ತೀಚಿನ ವರ್ಷಗಳಲ್ಲಿ ದಲಿತರು, ಆದಿವಾಸಿಗಳು ಹಾಗೂ ಹಿಂದುಳಿದ ವರ್ಗದವರು ದೊಡ್ಡ ಪ್ರಮಾಣದಲ್ಲಿ ಬಿಜೆಪಿ ಜತೆಗೆ ಗುರುತಿಸಿಕೊಂಡಿದ್ದಾರೆ. 'ಜಾತಿ ಜನಗಣತಿಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕು. ಮೀಸಲಾತಿಗೆ ಶೇ 50ರ ಮಿತಿಯನ್ನು ತೆಗೆದು ಹಾಕಬೇಕು' ಎಂದೂ ರಾಹುಲ್ ಒತ್ತಾಯಿಸಿದ್ದರು.

'ಯುಪಿಎ-2 ಸರ್ಕಾರವು 2011–12ರ ಅವಧಿಯಲ್ಲಿ ಸುಮಾರು 25 ಕೋಟಿ ಕುಟುಂಬಗಳ ಸಾಮಾಜಿಕ ಹಾಗೂ ಆರ್ಥಿಕ ಗಣತಿಯನ್ನು ನಡೆಸಿತ್ತು. ಆದರೆ, ಹಲವಾರು ಕಾರಣಗಳಿಂದ ಗಣತಿಯ ದತ್ತಾಂಶ ಬಿಡುಗಡೆ ಮಾಡಲು ಸಾಧ್ಯವಾಗಿರಲಿಲ್ಲ. ನರೇಂದ್ರ ಮೋದಿ ನೇತೃತ್ವದ ಸರ್ಕಾರವು 2014ರ ಮೇ ತಿಂಗಳಲ್ಲಿ ಅಸ್ತಿತ್ವಕ್ಕೆ ಬಂದ ಬಳಿಕ ಕಾಂಗ್ರೆಸ್ ಹಾಗೂ ಇತರ ಪಕ್ಷಗಳ ಸಂಸದರು ಜಾತಿ ಗಣತಿಯ ವರದಿ ಬಿಡುಗಡೆಗೆ ಆಗ್ರಹಿಸಿದ್ದರು' ಎಂದು ಖರ್ಗೆ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಹಿಂದುಳಿದ ವರ್ಗಗಳ ಅರ್ಥಪೂರ್ಣ ಸಬಲೀಕರಣ ಹಾಗೂ ಸಾಮಾಜಿಕ ನ್ಯಾಯ ಕಾರ್ಯಕ್ರಮಗಳಿಗೆ ವಿಶ್ವಾಸಾರ್ಹವಾದ ದತ್ತಾಂಶ ಅಗತ್ಯ. ಆದರೆ, ಈ ಕಾರ್ಯವೇ ಅಪೂರ್ಣವಾಗಿದೆ. ಜನಗಣತಿ ನಡೆಸುವುದು ಕೇಂದ್ರ ಸರ್ಕಾರದ ಜವಾಬ್ದಾರಿ. 2021ರಲ್ಲಿ ಜನಗಣತಿ ನಡೆಸಬೇಕಿತ್ತು. ಕೂಡಲೇ ಜನಗಣತಿ ನಡೆಸಬೇಕು. ಜತೆಗೆ, ಸಮಗ್ರ ಜಾತಿ ಗಣತಿಯನ್ನು ಅದರ ಅವಿಭಾಜ್ಯ ಅಂಗವನ್ನಾಗಿ ಮಾಡಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಜಲಾವೃತ ರಸ್ತೆ ಕಲಬುರಗಿಯಲ್ಲಿ ಸೋಮವಾರ ಸುರಿದ ಮಳೆಯಿಂದ ಬಸ್ ಡಿಪೋ ಬಳಿಯ ರಸ್ತೆ ಜಲಾವೃತಗೊಂಡಿತ್ತು -ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

'ಕೋಮುವಾದಿಗಳನ್ನು ಸೋಲಿಸಿ, ಸಂವಿಧಾನ ರಕ್ಷಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕೋಮುವಾದಿಗಳನ್ನು ಸೋಲಿಸುವ ಮೂಲಕ ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ರಕ್ಷಿಸಬೇಕು ಎಂದು ಸಮಾನ ಮನಸ್ಕರ ಒಕ್ಕೂಟ–ಕರ್ನಾಟಕ ತಿಳಿಸಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಾಹಿತಿ ಕೆ. ಮರುಳಸಿದ್ದಪ್ಪ 'ಸಂವಿಧಾನ ರಕ್ಷಿಸಿ ಬಹುತ್ವ ಭಾರತ ಉಳಿಸುವ ಜತೆಗೆ ನಾವೆಲ್ಲ ಸೇರಿ ಸೌಹಾರ್ದ ಕರ್ನಾಟಕ ವನ್ನು ಕಟ್ಟಬೇಕು. ಸದ್ಯ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಅಪಾಯದಲ್ಲಿದೆ. ಸಂವಿಧಾನವನ್ನು ಬಹಿರಂಗವಾಗಿ ಧಿಕ್ಕರಿಸದೆ, ಉಪಾಯವಾಗಿ ಅದನ್ನು ಅರ್ಥರಹಿತವನ್ನಾಗಿ ಮಾಡುವ ಕುತಂತ್ರ ನಡೆಯುತ್ತಿದೆ' ಎಂದರು.

'ರಾಜ್ಯದಲ್ಲಿ ಸಮುದಾಯಗಳ ಮಧ್ಯದಲ್ಲಿ ದ್ವೇಷ ಬಿತ್ತುವ ಕೆಲಸವಾಗುತ್ತಿದೆ. ಸೌಹಾರ್ದ ಕರ್ನಾಟಕದ ಪರಂಪರೆಯನ್ನು ನಾಶ ಮಾಡಲಾಗುತ್ತಿದೆ. ಆದ್ದರಿಂದ, ಈ ಚುನಾವಣೆಯಲ್ಲಿ ಕೋಮುವಾದಿಗಳಿಗೆ ಯಾವುದೇ ಕಾರಣಕ್ಕೂ ಮತ ಹಾಕಬೇಡಿ' ಎಂದು ಹೇಳಿದರು.

ಒಕ್ಕೂಟದ ಅಧ್ಯಕ್ಷ ಎಸ್.ಜಿ. ಸಿದ್ಧರಾಮಯ್ಯ ಮಾತನಾಡಿ, 'ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ವಿನಾಶದ ಅಂಚಿಗೆ ಹೋಗುತ್ತಿದೆ. ಇಂತಹ ಸಂದರ್ಭದಲ್ಲಿ ರಂಗಕರ್ಮಿಗಳು, ಸಾಹಿತಿಗಳು, ಸಾಮಾಜಿಕ ಕಾರ್ಯಕರ್ತರು, ಸಿನಿಮಾ ಕ್ಷೇತ್ರದವರು ಸೇರಿ ಈ ಒಕ್ಕೂಟವನ್ನು ರಚಿಸಿದ್ದೇವೆ. ಸೌಹಾರ್ದ ಕರ್ನಾಟಕ, ಬಹುತ್ವ ಭಾರತವನ್ನು ಕೋಮುವಾದಿಗಳ ಕೈಗಳಿಂದ ಕಾಪಾಡಬೇಕಾಗಿದೆ' ಎಂದರು.

'ದೇಶದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವಾಡುತ್ತಿದೆ. ಕನ್ನಡಿಗರ ಅಸ್ಮಿತೆ ನಂದಿನಿಯನ್ನು ಅಮೂಲ್‌ನಲ್ಲಿ ವಿಲೀನ ಮಾಡುವ ಹುನ್ನಾರ ನಡೆಯುತ್ತಿದೆ. ಸುಳ್ಳು ಇತಿಹಾಸವನ್ನು ಪಠ್ಯದಲ್ಲಿ ತುರುಕಿ ಮಕ್ಕಳಿಗೆ ಬೋಧಿಸಲಾಗುತ್ತಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರ ಜೀವನಮಟ್ಟ ಕುಸಿದಿದೆ' ಎಂದು ಹೇಳಿದರು. ಕವಿ ಬಂಜಗೆರೆ ಜಯಪ್ರಕಾಶ್ ಮಾತನಾಡಿ, 'ಸಂವಿಧಾನದ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ, ಸಹಬಾಳ್ವೆ ಮತ್ತು ಭ್ರಾತೃತ್ವ ಒಪ್ಪಿರುವ ಪಕ್ಷವನ್ನು ಆಯ್ಕೆ ಮಾಡಬೇಕು' ಎಂದರು.

ಪ್ರಜಾಪ್ರಭುತ್ವ, ಸಂವಿಧಾನ ರಕ್ಷಿಸುವ ಜತೆಗೆ ಮತದಾನದ ಕುರಿತು ಜಾಗೃತಿಗೊಳಿಸುವ ಕರಪತ್ರವನ್ನು ಈ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಯಿತು. ಸಾಹಿತಿ ಕೆ. ಶರೀಫಾ, ಶಿಕ್ಷಣ ತಜ್ಞ ಪಿ.ವಿ. ನಿರಂಜನ ಆರಾಧ್ಯ, ನಿರ್ಮಾಪಕ ರಾಜೇಂದ್ರ ಸಿಂಗ್ ಬಾಬು, ಲೀಲಾ ಸಂಪಿಗೆ, ಜಾಣಗೆರೆ ವೆಂಕಟರಾಮಯ್ಯ, ಎಸ್. ಜಾಫೆಟ್, ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಇದ್ದರು.

ಎಸ್‌ಡಿಪಿಐ ಕಚೇರಿ ಮೇಲೆ ದಾಳಿ: ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧೆಡೆ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾಗೆ (ಎಸ್‌ಡಿಪಿಐ) ಸೇರಿದ ಕಚೇರಿಗಳ ಮೇಲೆ ದಾಳಿ ನಡೆಸಿ, ಜಪ್ತಿ ಮಾಡಿ ಕಚೇರಿಗಳಿಗೆ ಬೀಗ ಹಾಕಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ ರಿಟ್ ಅರ್ಜಿ ಮೇಲಿನ ತೀರ್ಪನ್ನು ಹೈಕೋರ್ಟ್ ಕಾಯ್ದಿರಿಸಿದೆ.

ಈ ಸಂಬಂಧ ಎಸ್‌ಡಿಪಿಐನ ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನ್ವರ್ ಸಾದತ್ ಸಲ್ಲಿಸಿದ್ದ ಅರ್ಜಿಯ ಮೇಲಿನ ವಾದ ಪ್ರತಿವಾದವನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪೂರ್ಣಗೊಳಿಸಿ ತೀರ್ಪು ಕಾಯ್ದಿರಿಸಿರುವುದಾಗಿ ಪ್ರಕಟಿಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಂ. ಅರುಣ್ ಶ್ಯಾಮ್, 'ಎಸ್‌ಡಿಪಿಐ ಕಚೇರಿಗಳನ್ನು ನಿಷೇಧಿತ ಸಂಘಟನೆಗಳ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುತ್ತಿತ್ತು ಎಂಬ ಖಚಿತ ಮಾಹಿತಿ ಆಧರಿಸಿ ಕ್ರಮ ಕೈಗೊಳ್ಳಲಾಗಿದೆ. ಸಾರ್ವಜನಿಕ ಶಾಂತಿ ಭಂಗ ಹಾಗೂ ಸುವ್ಯವಸ್ಥೆ ಹಾಳುಗೆಡುಹುವ ಉದ್ದೇಶದಿಂದಲೇ ಕೆಲವು ಕುಕೃತ್ಯಗಳನ್ನು ನಡೆಸಲಾಗುತ್ತಿದೆ ಎಂಬುದನ್ನು ಮನಗಂಡು ಅವುಗಳಿಗೆ ಬೀಗಮುದ್ರೆ ಹಾಕಲಾಗಿದೆ' ಎಂದರು.

ಕೇಂದ್ರ ಸರ್ಕಾರದ ಪರ ಡೆಪ್ಯೂಟಿ ಸಾಲಿಸಿಟರ್ ಜನರಲ್ ಶಾಂತಿಭೂಷಣ್, 'ಎಸ್‌ಡಿಪಿಐ ಕಚೇರಿಗಳಲ್ಲಿ ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಚಟುವಟಿಕೆಗಳು ನಡೆಯುತ್ತಿದ್ದ ಕಾರಣಕ್ಕೆ ಸರ್ಕಾರ ಕಾನೂನು ರೀತ್ಯಾ ಕ್ರಮ ಜರುಗಿಸಿದೆ' ಎಂದರು.

ಅರ್ಜಿದಾರರ ಪರ ವಕೀಲರು, 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 200ಕ್ಕೂ ಅಧಿಕ ಚುನಾಯಿತ ಪ್ರತಿನಿಧಿಗಳಿದ್ದು, ರಾಜಕೀಯ ಚಟುವಟಿಕೆ ನಡೆಸಲು ಅವರಿಗೆ ಕಚೇರಿಯ ಅಗತ್ಯವಿದೆ. ಆದ್ದರಿಂದ, ಜಪ್ತಿ ಮಾಡಿರುವ ಕಚೇರಿಗಳಿಗೆ ಹಾಕಲಾಗಿರುವ ಬೀಗಮುದ್ರೆ ತೆರವುಗೊಳಿಸಲು ಜಿಲ್ಲಾಧಿಕಾರಿಗೆ ನಿರ್ದೇಶಿಸಬೇಕು' ಎಂದು ಕೋರಿದರು.

DH DECCAN HERALD

ಎಡ್ಯುವರ್ಸ್™

ಪ್ರಜಾವಾಣಿ

ವಿದ್ಯಾರ್ಥಿಗಳ ದಾರಿದೀಪ

ಸಮಯ: ಬೆಳಿಗ್ಗೆ 10:00 ರಿಂದ
ಸಂಜೆ 6:00 ಗಂಟೆ ವರೆಗೆ
ಉಚಿತ ಪ್ರವೇಶ

ಸಾಕಷ್ಟು ಉಡುಗೊರೆಗಳನ್ನು ಗೆಲ್ಲಿರಿ

ವಾಹಿನಿ ಪಾಲುದಾರರು NEWS 1st ಕನ್ನಡ

ಬೆಂಬಲಿಸಿದವರು AD6 advertising A Unit of Sri Sairam Enterprises

ಉದ್ಘಾಟಕರು: ಶ್ರೀ. ರಮೇಶ್ ಅರವಿಂದ್

ಸಿಇಟಿ ಮತ್ತು ಕಾಮೆಡ್–ಕೆ ಅಧಿಕಾರಿಗಳಿಂದ ಉಚಿತ ಸಮಾಲೋಚನಾ ಉಪನ್ಯಾಸಗಳು

ಬೆಂಗಳೂರು: 22-23 ಏಪ್ರಿಲ್, 2023
ತ್ರಿಪುರವಾಸಿನಿ, ಅರಮನೆ ಮೈದಾನ

ಹುಬ್ಬಳ್ಳಿ: 29-30 ಏಪ್ರಿಲ್, 2023
ರಾಯ್ಕರ್ ಪ್ರದರ್ಶನ ಮೈದಾನ

ರೂ.೧ ಲಕ್ಷವರೆಗಿನ ನಗದು ಬಹುಮಾನ ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ
ಮಾಕ್ ಸಿಇಟಿ ಮತ್ತು ಮಾಕ್ ನೀಟ್ ಪರೀಕ್ಷೆಗಳಿಗಾಗಿ ಇಂದೇ ನೋಂದಾಯಿಸಿಕೊಳ್ಳಿ

ಬೃಹತ್ ವಿದ್ಯಾರ್ಥಿ ಸಮೂಹ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಒಂದೇ ಸ್ಥಳದಲ್ಲಿ ಸೇರಿಸುವ, ಕರ್ನಾಟಕದ ಎಡ್ಯುವರ್ಸ್ ಕಾರ್ಯಕ್ರಮದ 13ನೇ ಆವೃತ್ತಿಯು ಮತ್ತೆ ಪ್ರಾರಂಭವಾಗುತ್ತಿದೆ.

ಈ ಕಾರ್ಯಕ್ರಮದಲ್ಲಿ ಲಭ್ಯವಿರುವ ಶೈಕ್ಷಣಿಕ ತಜ್ಞರು ಮತ್ತು ಅವರು ನೀಡುವ ವಿವಿಧ ವೃತ್ತಿಭವಿಷ್ಯಗಳ ಕುರಿತಾದ ಸಮಗ್ರ ಮಾಹಿತಿಯು, ತಮ್ಮ ಕನಸಿನ ವೃತ್ತಿಭವಿಷ್ಯದ ದಾರಿ ಹುಡುಕುತ್ತಿರುವ ಸಾವಿರಾರು ವಿದ್ಯಾರ್ಥಿಗಳ ಪಾಲಿನ ಮಹೋನ್ನತ ವೃತ್ತಿಜೀವನಕ್ಕೆ ದಾರಿದೀಪವಾಗಲಿದೆ.

ಹೆಚ್ಚಿನ ವಿವರಗಳಿಗಾಗಿ ಮತ್ತು ನೋಂದಣಿಗಾಗಿ ಈ QR ಕೋಡ್ ಸ್ಕ್ಯಾನ್ ಮಾಡಿರಿ!

ಯೂನಿವರ್ಸಿಟಿ ಪೆವಿಲಿಯನ್ ಸ್ಪಾನ್ಸರ್ಸ್
CHANAKYA UNIVERSITY, CMR UNIVERSITY, GALGOTIAS UNIVERSITY, ICFAI Foundation for Higher Education, RAMAIAH UNIVERSITY OF APPLIED SCIENCES, REVA UNIVERSITY, RV UNIVERSITY

ಗೋಲ್ಡ್ ಸ್ಪಾನ್ಸರ್ಸ್
ABBS Bangalore, CAMBRIDGE INSTITUTE OF TECHNOLOGY, EAST POINT GROUP OF INSTITUTIONS, KLE ACADEMY OF HIGHER EDUCATION AND RESEARCH, BELAGAVI, KSGI, MS ENGINEERING COLLEGE, NAGARJUNA COLLEGE OF ENGINEERING & TECHNOLOGY, Praxis Business School

ಸಿಲ್ವರ್ ಸ್ಪಾನ್ಸರ್ಸ್
GSSS INSTITUTE OF ENGINEERING AND TECHNOLOGY FOR WOMEN, ST JOSEPH ENGINEERING COLLEGE MANGALURU AN AUTONOMOUS INSTITUTION, RajaRajeswari Group of Institutions Bangalore, Karnataka

ಎಕ್ಸಿಬಿಟರ್ಸ್
ACHARYA, DON BOSCO INSTITUTE OF TECHNOLOGY, HARSHA INSTITUTIONS, IAS BABA, IMADE digital academy, MBAESG, HETIC, MIT-WPU, MIT WORLD PEACE UNIVERSITY PUNE, PES UNIVERSITY, Sri Chaitanya, Sri Chaitanya Techno School, SAI VIDYA INSTITUTE OF TECHNOLOGY, VVCE, SKYWAY BANGALORE Institution of Aviation

ಸ್ಪಾನ್ಸರ್‌ಶಿಪ್ ಹಾಗೂ ಸ್ಟಾಲ್ ಬುಕ್ಕಿಂಗ್‌ಗಾಗಿ ಸಂಪರ್ಕಿಸಿ: ದಿನೇಶ್ ನಾಯಕ್ – 9986006598 | ಬೆಂಗಳೂರು

‘ನಾಯಕತ್ವವು ಸ್ಥಾನದಿಂದ ಬರಲ್ಲ’

• ನೃಪತುಂಗ ಎಸ್.ಕೆ.

ಪ್ರಜಾವಾಣಿ ಸಂದರ್ಶನ
ಬಿ.ವೈ. ವಿಜಯೇಂದ್ರ

ಶಿವಮೊಗ್ಗ: ಚುನಾವಣಾ ರಾಜಕಾರಣದಿಂದ ನಿವೃತ್ತಿ ಪಡೆದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕಿರಿಯ ಪುತ್ರ ಹಾಗೂ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರೇ ತಮ್ಮ ಉತ್ತರಾಧಿಕಾರಿಯಾಗಿ ಸ್ಪರ್ಧಿಸಲಿದ್ದಾರೆ ಎಂದು ಘೋಷಿಸಿದ್ದರಿಂದ ಶಿಕಾರಿಪುರ ವಿಧಾನಸಭಾ ಕ್ಷೇತ್ರ ರಾಜ್ಯದ ಗಮನ ಸೆಳೆದಿದೆ.

ಪಕ್ಷದಿಂದ ಅಧಿಕೃತವಾಗಿ ಟಿಕೆಟ್ ಘೋಷಣೆಯಾಗುವ ಮುನ್ನವೇ ವಿಜಯೇಂದ್ರ ಕ್ಷೇತ್ರದಲ್ಲಿ ಹಲವು ಹಳ್ಳಿಗಳಿಗೆ ಭೇಟಿ ನೀಡಿ ಅನೌಪಚಾರಿಕವಾಗಿ ಸಭೆಗಳನ್ನು ನಡೆಸುವ ಮೂಲಕ ಪ್ರಚಾರ ಆರಂಭಿಸಿದ್ದರು. ತಮ್ಮ ಚೊಚ್ಚಲ ಸ್ಪರ್ಧೆಯಲ್ಲಿ ಗೆದ್ದು ವಿಧಾನಸೌಧವನ್ನು ಪ್ರವೇಶಿಸುವ ಬಯಕೆಯಿಂದ ಅವರು ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ.

ಶಿಕಾರಿಪುರದಲ್ಲಿ ವಿಜಯೇಂದ್ರ ಅವರು ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ:

• **ರಾಜಕೀಯಕ್ಕೆ ಬಂದಿರುವುದು ನಿಮ್ಮ ಆಯ್ಕೆಯಾಗಿತ್ತೋ ಅಥವಾ ತಂದೆಯ ಸಲಹೆಯಾಗಿತ್ತೋ?**

ಅಣ್ಣ ಬಿ.ವೈ. ರಾಘವೇಂದ್ರ (ಶಿವಮೊಗ್ಗ ಸಂಸದ) ಸೇರಿ ನಮ್ಮ ಕುಟುಂಬದ ಯಾರೊಬ್ಬರಿಗೂ ಯಡಿಯೂರಪ್ಪನವರು ಎಂದಿಗೂ ಸಲಹೆ ನೀಡಿಲ್ಲ. ಬಿಜೆಪಿ ರಾಷ್ಟ್ರೀಯ ಪಕ್ಷ. ಮೊದಲೇ ನಮ್ಮ ಕುಟುಂಬದ ಇಬ್ಬರು (ತಂದೆ ಹಾಗೂ ಸೋದರ) ರಾಜಕೀಯದಲ್ಲಿ ಇರುವುದರಿಂದ ಈ ಬಗ್ಗೆ ನಾನು ಯೋಚಿಸಿರಲಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಮಾಡಬೇಕು ಎಂದುಕೊಂಡಿದ್ದೆ. ಆದರೆ, ವರುಣ ಕ್ಷೇತ್ರದ ಕಾರ್ಯಕರ್ತರು ನನ್ನನ್ನು ಕರ್ನಾಟಕಕ್ಕೆ ಪರಿಚಯಿಸಿದರು. ಪಕ್ಷವೂ ನನಗೆ ಸಂಘಟನೆಯ ಜವಾಬ್ದಾರಿ ನೀಡಿತು. ತಂದೆ ಚುನಾವಣಾ ರಾಜಕೀಯದಿಂದ ನಿವೃತ್ತಿ ಪಡೆಯಲು ನಿರ್ಧರಿಸಿದಾಗ ಶಿಕಾರಿಪುರದ ಕಾರ್ಯಕರ್ತರು ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ನೀವು (ಯಡಿಯೂರಪ್ಪ) ಅಥವಾ ವಿಜಯೇಂದ್ರ ಅವರೇ ಶಿಕಾರಿಪುರದಿಂದ ಸ್ಪರ್ಧಿಸಬೇಕು ಎಂದು ಒತ್ತಡ ಹೇರಿದರು. ಈ ಬಗ್ಗೆ ಬಿಜೆಪಿಯ ಕೇಂದ್ರ ನಾಯಕರ ಜೊತೆ ಚರ್ಚಿಸಿದಾಗ ಕೊನೆಗೆ ಅವರೂ ಒಪ್ಪಿಕೊಂಡರು. ಮಕ್ಕಳು ಇಚ್ಛಿಸುವ ಕ್ಷೇತ್ರದಲ್ಲಿ ಸ್ವಸಾಮರ್ಥ್ಯದಿಂದಲೇ ಉನ್ನತ ಸ್ಥಾನಕ್ಕೇರಬೇಕು ಎಂಬುದು ತಂದೆಯವರ ಅಭಿಲಾಷೆ.

• **ಶಿಕಾರಿಪುರ 1983ರಿಂದಲೂ ನಿಮ್ಮ ತಂದೆಯ ರಾಜಕೀಯ ಜೀವನಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿದೆ. ಇದೀಗ ನೀವು ಚುನಾವಣೆಗೆ ಸ್ಪರ್ಧಿಸುವ ಮೂಲಕ ಅದೃಷ್ಟ ಪರೀಕ್ಷೆಗೆ ಇಳಿದಿದ್ದೀರಿ. ಏನನ್ನಿಸುತ್ತಿದೆ?**

ತಂದೆಯನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಕೊಂಡೊಯ್ದ ಕ್ಷೇತ್ರವನ್ನು ಪ್ರತಿನಿಧಿಸಲು ಅವಕಾಶ ಸಿಕ್ಕಿರುವುದು ನನ್ನ ಅದೃಷ್ಟವೆಂದೇ ಭಾವಿಸುತ್ತೇನೆ. ಕಾರ್ಯಕರ್ತರ ಹಾಗೂ ಮತದಾರರ ಋಣ ತೀರಿಸಲು ಎಂದಿಗೂ ಸಾಧ್ಯವಿಲ್ಲ ಎಂದು ತಂದೆ ನನಗೆ ಆಗಾಗ ಹೇಳುತ್ತಿರುತ್ತಾರೆ.

• **ಜನಪ್ರತಿನಿಧಿಯಾಗುವ ಮುನ್ನವೇ ನೀವು ಯುವಕರ ಕಣ್ಮಣಿಯಾಗಿದ್ದೀರಿ. ರಾಜ್ಯದಲ್ಲಿ ಎಲ್ಲಿಗೆ ಹೋದರೂ ಜನರನ್ನು ಸೆಳೆಯುತ್ತಿದ್ದೀರಿ. ನಿಮಗೆ ಇದು ಹೇಗೆ ಸಾಧ್ಯವಾಯಿತು?**

ನಾಯಕತ್ವ ಎಂಬುದು ಸ್ಥಾನದಿಂದ ಬರುವುದಿಲ್ಲ. ಬದಲಿಗೆ, ಜನರ ಒಪ್ಪಿಕೊಳ್ಳುವಿಕೆಯಿಂದ ಬರುತ್ತದೆ. ನಾನು ಈಗಷ್ಟೇ ರಾಜಕೀಯಕ್ಕೆ ಪದಾರ್ಪಣೆ ಮಾಡಿದವನು. ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದು, ಹಲವು ಸಮಾವೇಶಗಳನ್ನು ಯಶಸ್ವಿಯಾಗಿ ಸಂಘಟಿಸಿದ್ದೇನೆ. ವಿಧಾನಸಭೆ ಉಪಚುನಾವಣೆಯಲ್ಲಿ ಕೆ.ಆರ್. ಪೇಟೆ ಹಾಗೂ ಶಿರಾ ಕ್ಷೇತ್ರದಲ್ಲಿ ಬಿಜೆಪಿಯನ್ನು ಗೆಲ್ಲಿಸಲು ಕಠಿಣ ಪರಿಶ್ರಮ ಹಾಕಿದ್ದೆ.

• **ಬಿಜೆಪಿಯ ಒಂದು ಬಣಕ್ಕೆ ನಿಮ್ಮ ರಾಜಕೀಯ ಬೆಳವಣಿಗೆ ಇಷ್ಟವಿಲ್ಲ. ಇದನ್ನು ಹೇಗೆ ನಿಭಾಯಿಸುತ್ತೀರಿ?**

ನಾನು ಯಾರನ್ನೂ ದೂಷಿಸುವುದಿಲ್ಲ. ಅವರು ಹಿರಿಯ ನಾಯಕರು. ಅವರು ಸರಿಯಾಗಿರಬಹುದು. ಅವರ ಸಲಹೆಗಳನ್ನು ತೆಗೆದುಕೊಳ್ಳಲು ನಾನು ಸಿದ್ಧನಿದ್ದೇನೆ.

• **ವರುಣ ಹಾಗೂ ಶಿಕಾರಿಪುರ ಕ್ಷೇತ್ರದ ವಿಚಾರವಾಗಿ ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಹಾಗೂ ಯಡಿಯೂರಪ್ಪ ನಡುವೆ ರಹಸ್ಯ ಒಪ್ಪಂದ ನಡೆದಿದೆ ಎಂಬ ದೂರುಗಳು ಕೇಳಿಬರುತ್ತಿವೆ?**

ಪಕ್ಷ ನೀಡುವ ಯಾವುದೇ ಸವಾಲನ್ನು ಎದುರಿಸಲು ನಾನು ಸಿದ್ಧ ಎಂದು ಮೂರು ತಿಂಗಳ ಹಿಂದೆಯೇ ಮೈಸೂರಿನಲ್ಲಿ ಹೇಳಿದ್ದೆ. ಆದರೆ, ಪಕ್ಷವು ಶಿಕಾರಿಪುರದಿಂದಲೇ ಸ್ಪರ್ಧಿಸುವಂತೆ ಸೂಚಿಸಿದೆ. ಇದರರ್ಥ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದಲ್ಲ. ಯಡಿಯೂರಪ್ಪ ಅವರಿಗೆ ರಹಸ್ಯ ಒಪ್ಪಂದ ಮಾಡಿಕೊಳ್ಳುವ ಅಗತ್ಯವೂ ಇಲ್ಲ.

• **ಮೀಸಲಾತಿ ವಿಚಾರದಲ್ಲಿ ಬಿಜೆಪಿ ಹಾಗೂ ಯಡಿಯೂರಪ್ಪ ಅನ್ಯಾಯ ಮಾಡಿದ್ದಾರೆ ಎಂದು ಬಂಜಾರ ಸಮುದಾಯದವರು ದೂರುತ್ತಿದ್ದಾರೆ?**

ಈ ಸಮುದಾಯಕ್ಕೆ ಯಾವುದೇ ರೀತಿಯಲ್ಲೂ ಅನ್ಯಾಯವಾಗಿಲ್ಲ. ಶಿಕಾರಿಪುರದಲ್ಲಿ ನಡೆದ ಪ್ರತಿಭಟನೆ ವೇಳೆ ಕೆಲವರು ಹಿಂಸಾಚಾರದ ಮೂಲಕ ಸಮುದಾಯದದ ಘನತೆಗೆ ಚ್ಯುತಿ ತಂದಿದ್ದಾರೆ. ಒಳಮೀಸಲಾತಿ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡಿರುವ ನಿರ್ಧಾರದಿಂದ ಯಾವುದೇ ಸಮುದಾಯಕ್ಕೂ ಅನ್ಯಾಯ ಆಗುವುದಿಲ್ಲ.

• **2ಸಿ ಮತ್ತು 2ಡಿ ವರ್ಗವನ್ನು ಸೃಷ್ಟಿಸುವ ಮೂಲಕ ತಮ್ಮ ಪಾಲಿನ ಮೀಸಲಾತಿಯನ್ನು ಒಕ್ಕಲಿಗರಿಗೆ ಹಾಗೂ ವೀರಶೈವ-ಲಿಂಗಾಯತರಿಗೆ ನೀಡಲಾಗಿದೆ ಎಂದು ಮುಸ್ಲಿಮರು ದೂರುತ್ತಿದ್ದಾರಲ್ಲ?**

ಮೊದಲನೆಯದಾಗಿ ಭಾರತದ ಸಂವಿಧಾನವು ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಲು ಅವಕಾಶ ನೀಡುವುದಿಲ್ಲ. ಮುಸ್ಲಿಮರನ್ನು ಇಡಬ್ಲ್ಯುಎಸ್ ವರ್ಗಕ್ಕೆ ಸೇರಿಸಿದ್ದೇವೆ. ಇದರಿಂದ 2ಬಿ ವರ್ಗಕ್ಕಿಂತಲೂ ಹೆಚ್ಚಿನ ಅನುಕೂಲವಾಗಿದೆ. ಒಕ್ಕಲಿಗರಿಗೆ ಹಾಗೂ ವೀರಶೈವ-ಲಿಂಗಾಯತರ ಮೀಸಲಾತಿಯನ್ನು ಹೆಚ್ಚಿಸಿರುವುದರಿಂದ ಯಾವುದೇ ಸಮುದಾಯ ಹಾಗೂ ಧರ್ಮಕ್ಕೆ ಅನ್ಯಾಯವಾಗಿಲ್ಲ.

• **ಶಿಕಾರಿಪುರದಲ್ಲಿ ನಿಮಗೆ ಗೆಲುವು ಸುಲಭವೇ?**

ದೇಶದಲ್ಲಿ, ರಾಜ್ಯದಲ್ಲಿ, ಪ್ರತಿ ಕ್ಷೇತ್ರದಲ್ಲಿ ವಿರೋಧ ಪಕ್ಷ ಇರಬೇಕು ಎಂದು ನಾನು ಬಯಸುತ್ತೇನೆ. ಹೆಚ್ಚಿನ ಬಹುಮತದಿಂದ ಗೆಲ್ಲುತ್ತೇನೆ ಎಂಬ ವಿಶ್ವಾಸವಿದೆ.



ಕುಟುಂಬ ರಾಜಕಾರಣ ದೇಶಕ್ಕೆ ಅಂಟಿದ ಶಾಪ

• **ಕುಟುಂಬ ರಾಜಕಾರಣವು ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾಗಿದೆ ಎಂಬ ದೂರುಗಳಿವೆ. ನಿಮ್ಮ ಸಹೋದರ ಈಗಾಗಲೇ ಸಂಸದರಾಗಿದ್ದಾರೆ. ನಿಮ್ಮ ತಂದೆ ಬಿಟ್ಟುಕೊಟ್ಟ ಕ್ಷೇತ್ರದಲ್ಲೇ ನೀವು ಸ್ಪರ್ಧಿಸುತ್ತಿದ್ದೀರಿ. ಇದು ಕುಟುಂಬ ರಾಜಕಾರಣ ಎಂದು ನಿಮಗೆ ಅನಿಸುವುದಿಲ್ಲವೇ?**

ಯಡಿಯೂರಪ್ಪ ಅವರ ಪುತ್ರ ಎಂಬ ಒಂದೇ ಕಾರಣಕ್ಕೆ ನನಗೆ ಟಿಕೆಟ್ ಕೊಡುವುದಾದರೆ ಅದನ್ನು ವಿರೋಧಿಸುವವರಲ್ಲಿ ನನ್ನ ತಂದೆಯೇ ಮೊದಲನೆಯವರಾಗಿರುತ್ತಾರೆ. ನನ್ನಲ್ಲಿರುವ ಸಂಘಟನಾ ಕೌಶಲ ಹಾಗೂ ಉಪ ಚುನಾವಣೆಯಲ್ಲಿ ರೂಪಿಸಿದ ತಂತ್ರಗಳನ್ನು ಮೆಚ್ಚಿಯೇ ಪಕ್ಷವು ನನಗೆ ಬಿಜೆಪಿ ರಾಜ್ಯ ಉಪಾಧ್ಯಕ್ಷ ಸ್ಥಾನ ನೀಡಿದೆ. ಕುಟುಂಬ ರಾಜಕಾರಣವು ದೇಶ ಹಾಗೂ ರಾಜ್ಯಕ್ಕೆ ಅಂಟಿರುವ ಶಾಪ. ರಾಜ್ಯದಲ್ಲಿ ಪಕ್ಷವನ್ನು ಕಟ್ಟಿ ಬೆಳೆಸುವ ಯುವ ನಾಯಕರು ಬೆಳೆಯಬೇಕು ಎಂದು ಪಕ್ಷ ಬಯಸಿದೆ. ಅಂಥ ಯುವಕರ ಪೈಕಿ ನಾನೂ ಒಬ್ಬ.

ಶೆಟ್ಟರ್ ಸೇರ್ಪಡೆಯಿಂದ ‘ಕೈ’ಗೆ ಬಲ: ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ 150 ಕ್ಷೇತ್ರಗಳಲ್ಲಿ ಗೆಲ್ಲುವಂತೆ ರಾಹುಲ್ ಗಾಂಧಿ ಹೇಳಿದ್ದಾರೆ. ಜಗದೀಶ ಶೆಟ್ಟರ್ ಅವರ ಸೇರ್ಪಡೆಯಿಂದ ಆ ಸಾಧನೆ ಮಾಡುವುದರಲ್ಲಿ ಅನುಮಾನವೇ ಇಲ್ಲ. ತಮ್ಮ ಕ್ಷೇತ್ರ ಮಾತ್ರವಲ್ಲ, ರಾಜ್ಯದ ಇತರ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಸಾಮರ್ಥ್ಯ ಅವರಿಗಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶೆಟ್ಟರ್ ಅವರನ್ನು ಪಕ್ಷಕ್ಕೆ ಸೇರಿಸಿಕೊಂಡ ಬಳಿಕ ಮಾತನಾಡಿದ ಖರ್ಗೆ, ‘ಜನಸಂಘದ ಹಿನ್ನೆಲೆ ಇದ್ದರೂ ವಿವಾದವಿಲ್ಲದೇ ಶೆಟ್ಟರ್ ಕೆಲಸ ಮಾಡಿದಿದ್ದಾರೆ. ನಾವು ಸರ್ಕಾರದಲ್ಲಿದ್ದಾಗ ಅವರು ವಿರೋಧ ಪಕ್ಷದಲ್ಲಿದ್ದರು. ರಾಜಕೀಯವಾಗಿ ಜಟಾಪಟಿ ಇದ್ದರೂ ವೈಯಕ್ತಿಕವಾಗಿ ಎಂದಿಗೂ ಜಗಳವಾಡಿಲ್ಲ’ ಎಂದರು.

‘ಶೆಟ್ಟರ್ ಜೊತೆಗೆ ಮಾಜಿ ಸಂಸದರೂ, ಶಾಸಕರೂ ಆಗಿದ್ದ ಅಮರ ಸಿಂಹ ಪಾಟೀಲ ಕೂಡಾ ಕಾಂಗ್ರೆಸ್ ಸೇರಿದ್ದಾರೆ. ಈ ಇಬ್ಬರ ಸೇರ್ಪಡೆಯಿಂದ ನಮ್ಮ ಪಕ್ಷಕ್ಕೆ ಹೆಚ್ಚಿನ ಶಕ್ತಿ ಸಿಗುವ ವಿಶ್ವಾಸವಿದೆ’ ಎಂದರು.

‘ಲಿಂಗಾಯತ ಸಮುದಾಯಕ್ಕೆ ಆಗುತ್ತಿರುವ ಅಪಮಾನ ಹಾಗೂ ತಮ್ಮನ್ನು ಬಿಜೆಪಿ ನಡೆಸಿಕೊಂಡ ರೀತಿಗೆ ಬೇಸತ್ತು, ಸ್ವಾಭಿಮಾನ ರಕ್ಷಣೆಗಾಗಿ ಶೆಟ್ಟರ್ ಸೇರಿದಂತೆ ಪ್ರಮುಖ ಲಿಂಗಾಯತ ನಾಯಕರು ಬಿಜೆಪಿ ತೊರೆದು ಕಾಂಗ್ರೆಸ್ ಸೇರುತ್ತಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

> **ಕಟ್ಟಿ ಬೆಳೆಸಿದ ಮನೆಯಿಂದ ಹೊರದಬ್ಬಿದಾಗ, ಕಾಂಗ್ರೆಸ್ ಪಕ್ಷ ಸಿದ್ಧಾಂತ ನಂಬಿ ಸಂತೋಷದಿಂದ ಕಾಂಗ್ರೆಸ್ ಸೇರುತ್ತಿದ್ದೇನೆ**
> **ಜಗದೀಶ ಶೆಟ್ಟರ್,** ಹುಬ್ಬಳ್ಳಿ-ಧಾರವಾಡ ಕೇಂದ್ರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

‘ಚಾಮರಾಜನಗರದಿಂದ ಬೆಳಗಾವಿ ವರೆಗೆ ಅನೇಕ ಬಿಜೆಪಿ ನಾಯಕರು ಹಾಗೂ ಶೆಟ್ಟರ್ ಅಭಿಮಾನಿಗಳು ಕರೆ ಮಾಡಿ ಕಾಂಗ್ರೆಸ್ ಪಕ್ಷ ಸೇರಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದ್ದಾರೆ. ಜಿಲ್ಲಾಮಟ್ಟದಲ್ಲಿ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಅನುಮತಿ ನೀಡಲಾಗಿದೆ’ ಎಂದೂ ಹೇಳಿದರು.

‘ಯಾವುದೇ ಕಾರಣ ಇಲ್ಲದೇ, ಆರೋಪವಿಲ್ಲದೆ ಶೆಟ್ಟರ್ ಅವರಿಗೆ ಬಿಜೆಪಿಯವರು ಟಿಕೆಟ್ ವಂಚಿಸಿದ್ದಾರೆ. ಇದನ್ನು ಸವಾಲೆಂದು ಸ್ವೀಕರಿಸಿ ಕಾಂಗ್ರೆಸ್ ಸೇರುತ್ತಿದ್ದಾರೆ’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಕಣ್ಣೀರಿಟ್ಟ ಪತ್ನಿ ಶಿಲ್ಪಾ

ಹುಬ್ಬಳ್ಳಿ: ಕಾಂಗ್ರೆಸ್ ಸೇರಿದ ಬಳಿಕ ನಗರದಲ್ಲಿರುವ ನಿವಾಸಕ್ಕೆ ಸೋಮವಾರ ಬಂದ ಪತಿ ಜಗದೀಶ ಶೆಟ್ಟರ್ ಅವರನ್ನು ಸ್ವಾಗತಿಸುವ ವೇಳೆ ಪತ್ನಿ ಶಿಲ್ಪಾ ಶೆಟ್ಟರ್ ಭಾವುಕರಾದರು, ಅವರ ಎದೆಗೊರಗಿ ಕಣ್ಣೀರಿಟ್ಟರು. ಆಗ ಶೆಟ್ಟರ್ ಪತ್ನಿಯನ್ನು ಸಂತೈಸಿದರು.

ಶಿಲ್ಪಾ ಅವರು ಕಣ್ಣೀರಿಟ್ಟಾಗ ಅವರನ್ನು ಸಮಾಧಾನಪಡಿಸಿದ ಶೆಟ್ಟರ್ ಬೆಂಬಲಿಗರು, ಕಾಂಗ್ರೆಸ್ ಮುಖಂಡರು, ‘ನೀವೇನೂ ತಲೆ ಕೆಡಿಸಿಕೊಳ್ಳಬೇಡಿ. ಶೆಟ್ಟರ್ ಅವರನ್ನು ಏಳನೇ ಬಾರಿಗೆ ವಿಧಾನಸೌಧಕ್ಕೆ ಕಳಿಸುವ ಜವಾಬ್ದಾರಿ ನಮ್ಮದು’ ಎಂದು ಧೈರ್ಯ ಹೇಳಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಿಲ್ಪಾ, ‘ಪಕ್ಷ ಮುಖ್ಯಮಂತ್ರಿ ಸ್ಥಾನ ಕೊಟ್ಟಿದ್ದರೂ, ಶೆಟ್ಟರ್ ಬಿಜೆಪಿ ತೊರೆದಿದ್ದು ಸರಿಯಲ್ಲ ಎಂದು ಟೀಕೆ ಮಾಡುತ್ತಿದ್ದಾರೆ. ಶೆಟ್ಟರ್ ಅವರು ಅಧಿಕಾರಕ್ಕಾಗಿ ಕಾಂಗ್ರೆಸ್‌ಗೆ ಹೋಗಿಲ್ಲ. ಸ್ವಾಭಿಮಾನಕ್ಕೆ ಧಕ್ಕೆಯಾಗಿದ್ದಕ್ಕೆ ಬಿಜೆಪಿ ತೊರೆದಿದ್ದಾರೆ’ ಎಂದು ಸಮರ್ಥಿಸಿಕೊಂಡರು.

‘ಪಕ್ಷ ಟಿಕೆಟ್ ನೀಡಲು ವಿಳಂಬ ಧೋರಣೆ ಅನುಸರಿಸಿದಾಗ ಅವರು ಬೇಸರಗೊಂಡರು. ಇದೊಂದು ಬಾರಿ ಸ್ಪರ್ಧಿಸಲು ಅವಕಾಶ ನೀಡಿ ಎಂದು ಪರಿಪರಿಯಾಗಿ ಕೇಳಿಕೊಂಡರೂ, ವರಿಷ್ಠರು ಸ್ಪಂದಿಸಲಿಲ್ಲ. ಬದಲಾಗಿ, ನನಗೆ ಟಿಕೆಟ್ ಕೊಡುವುದಾಗಿ ಹೇಳಿದರು. ಪತಿಯನ್ನು ಅವಮಾನಿಸಿದವರ ಪಕ್ಷದಿಂದ ನಾನು ಸ್ಪರ್ಧಿಸುವುದು ಎಷ್ಟು ಸರಿ’ ಎಂದು ಕೇಳಿದರು.

‘ವಯಸ್ಸಿನ ಕಾರಣ ಮುಂದು ಮಾಡಿ ಟಿಕೆಟ್ ನಿರಾಕರಿಸಲಾಗಿದೆ. ಹಾಗಿದ್ದರೆ, ಪಕ್ಷದಲ್ಲಿ ಶೆಟ್ಟರ್ ಅವರಿಗಿಂತಲೂ ಹಿರಿಯರಿಗೆ ಟಿಕೆಟ್ ಕೊಟ್ಟಿಲ್ಲವೇ? ಬಿ.ಎಸ್. ಯಡಿಯೂರಪ್ಪ ಅವರ ನಂತರ, ಶೆಟ್ಟರ್ ಅವರು ಪಕ್ಷದಲ್ಲಿ ನಿರ್ಣಾಯಕ ಸ್ಥಾನದಲ್ಲಿದ್ದಾರೆ ಎಂಬ ಕಾರಣಕ್ಕಾಗಿ ಕೆಲವರು ಶೆಟ್ಟರ್ ಅವರಿಗೆ ಟಿಕೆಟ್ ತಪ್ಪಿಸಿದ್ದಾರೆ’ ಎಂದು ದೂರಿದರು.

ಜಗದೀಶ ಶೆಟ್ಟರ್ ಅವರನ್ನು ಸ್ವಾಗತಿಸುವಾಗ ಭಾವುಕರಾದ ಪತ್ನಿ ಶಿಲ್ಪಾ ಶೆಟ್ಟರ್ ಅವರು ಪತಿಯ ಎದೆಗೊರಗಿ ಕಣ್ಣೀರಿಟ್ಟರು

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸಾವಿರ ಕೋಟಿ ಒಡೆಯ: ಓಡಾಡಲು ಕಾರಿಲ್ಲ!

ಪ್ರಜಾವಾಣಿ ವಾರ್ತೆ

ಗೌರಿಬಿದನೂರು (ಚಿಕ್ಕಬಳ್ಳಾಪುರ): ಗೌರಿಬಿದನೂರು ವಿಧಾನಸಭಾ ಕ್ಷೇತ್ರದಿಂದ ಇದೇ ಮೊದಲ ಬಾರಿಗೆ ಪಕ್ಷೇತರ ಅಭ್ಯರ್ಥಿಯಾಗಿ ಸೋಮವಾರ ನಾಮಪತ್ರ ಸಲ್ಲಿಸಿದ ಉದ್ಯಮಿ ಕೆ.ಎಚ್. ಪುಟ್ಟಸ್ವಾಮಿಗೌಡ ಒಂದು ಸಾವಿರ ಕೋಟಿಯ ಒಡೆಯ. ಆದರೆ ಇವರ ಬಳಿ ಒಂದೂ ಕಾರು ಇಲ್ಲ!

ನಾಮಪತ್ರ ಸಲ್ಲಿಕೆ ವೇಳೆ ನೀಡಿದ ಆಸ್ತಿ ವಿವರದ ಪ್ರಕಾರ ಅವರ ಬಳಿ ₹9.10 ಲಕ್ಷ ಬೆಲೆಯ ಟ್ರ್ಯಾಕ್ಟರ್ ಹಾಗೂ ಇಬ್ಬರ ಮಕ್ಕಳ ಬಳಿ ಮೂರು ದ್ವಿಚಕ್ರ ವಾಹನ ಬಿಟ್ಟರೆ ಬೇರೆ ಯಾವ ವಾಹನ ಇಲ್ಲ.

ಒಟ್ಟು₹926.28 ಕೋಟಿ ಸ್ಥಿರಾಸ್ತಿ ಹೊಂದಿರುವ ಅವರು ವಿವಿಧ ಬ್ಯಾಂಕ್, ವ್ಯಕ್ತಿಗಳ ಬಳಿ ₹6.57 ಕೋಟಿ ಸಾಲ ಪಡೆದಿದ್ದಾರೆ. ಪತ್ನಿ ₹1.54 ಕೋಟಿ ಹಾಗೂ ಮಕ್ಕಳಿಬ್ಬರು ₹2.44 ಕೋಟಿ ಮತ್ತು ₹76.92 ಲಕ್ಷ ಸಾಲ ಹೊಂದಿದ್ದಾರೆ ಎಂದು ಘೋಷಿಸಿಕೊಂಡಿದ್ದಾರೆ.

ಪುಟ್ಟಸ್ವಾಮಿಗೌಡ ಕುಟುಂಬದ ಎಲ್ಲರೂ ಉದ್ಯಮಿಗಳಾಗಿದ್ದು, ಇವರ ಮಗಳನ್ನು ಹೊಸಕೋಟೆ ಕಾಂಗ್ರೆಸ್ ಅಭ್ಯರ್ಥಿ, ಶಾಸಕ ಶರತ್ ಬಚ್ಚೇಗೌಡ ವಿವಾಹವಾಗಿದ್ದಾರೆ.

ಪತ್ನಿ ಹೆಸರಲ್ಲಿ ₹38.63 ಕೋಟಿ ಹಾಗೂ ಮಕ್ಕಳಿಬ್ಬರ ಹೆಸರಿನಲ್ಲಿ ತಲಾ ₹20.67 ಕೋಟಿ ಮತ್ತು ₹4.44 ಕೋಟಿ ಮೌಲ್ಯದ ಚರಾಸ್ತಿ ಇದೆ. ₹50 ಲಕ್ಷ ಮೌಲ್ಯದ ಸ್ಥಿರಾಸ್ತಿ ಹಾಗೂ ₹221.07 ಕೋಟಿ ಮೌಲ್ಯದ ಸ್ವಯಾರ್ಜಿತ ಆಸ್ತಿಯನ್ನೂ ಗೌಡರು ಹೊಂದಿದ್ದಾರೆ. ಮಕ್ಕಳ ಹೆಸರಿನಲ್ಲಿ ₹1.65 ಕೋಟಿ ಮತ್ತು ₹ 45.84 ಕೋಟಿ ಮೌಲ್ಯದ ಸ್ವಯಾರ್ಜಿತ ಸ್ಥಿರಾಸ್ತಿ ಇದೆ ಎಂದು ಘೋಷಿಸಿದ್ದಾರೆ.

₹293 ಕೋಟಿ ಮೌಲ್ಯದ ಆಸ್ತಿಗೆ ಮುನಿರತ್ನ ಒಡೆಯ

ಬೆಂಗಳೂರು: ತೋಟಗಾರಿಕಾ ಸಚಿವ ಮುನಿರತ್ನ ಆಸ್ತಿ ಎರಡೂವರೆ ವರ್ಷದಲ್ಲಿ ಮೂರು ಪಟ್ಟು ಹೆಚ್ಚಾಗಿದೆ. ಸದ್ಯ ಅವರ ಕುಟುಂಬದ ಆಸ್ತಿ ಮೌಲ್ಯ ₹293.60 ಕೋಟಿ ಇದೆ.

60 ಕಡೆ ಕೃಷಿ ಜಮೀನು, 25 ಕಡೆ ಕೃಷಿಯೇತರ ಜಾಗ, ಎರಡು ವಾಣಿಜ್ಯ ಕಟ್ಟಡ, ಆರು ವಸತಿ ಕಟ್ಟಡಗಳಿವೆ. ಐಷಾರಾಮಿ ಕಾರು, ಟಿಪ್ಪರ್‌ಗಳು ಸೇರಿ 30 ವಾಹನಗಳಿವೆ ಎಂದು ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಸೋಮವಾರ ಸಲ್ಲಿಸಿರುವ ನಾಮಪತ್ರದ ಜತೆ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ವಿವರ ನೀಡಿದ್ದಾರೆ.

ಸ್ವತಃ ಮುನಿರತ್ನ ಅವರ ಹೆಸರಿನಲ್ಲಿ ₹31.34 ಕೋಟಿ ಮೌಲ್ಯದ ಚರಾಸ್ತಿ, ₹239.29 ಕೋಟಿ ಮೌಲ್ಯದ ಸ್ಥಿರಾಸ್ತಿ ಮತ್ತು ₹93.48 ಕೋಟಿ ಸಾಲ ಇದೆ.

ಪತ್ನಿ ಹೆಸರಿನಲ್ಲಿ ₹1.66 ಕೋಟಿ ಮೌಲ್ಯದ ಚರಾಸ್ತಿ, ₹21.29 ಕೋಟಿ ಮೌಲ್ಯದ ಸ್ಥಿರಾಸ್ತಿ ಮತ್ತು ₹8.73 ಕೋಟಿ ಸಾಲ ಇದೆ. 2020ರ ಅಕ್ಟೋಬರ್‌ನಲ್ಲಿ ನಡೆದ ಉಪ ಚುನಾವಣೆಯಲ್ಲಿ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಅವರ ಒಟ್ಟು ಆಸ್ತಿ ಮೌಲ್ಯ ₹89.13 ಕೋಟಿ ಇತ್ತು.

ಚಿಲ್ಲರೆ ಹಣ ಎಣಿಸಿ ಸುಸ್ತಾದ ಸಿಬ್ಬಂದಿ

ರಾಣೆಬೆನ್ನೂರು(ಹಾವೇರಿ ಜಿಲ್ಲೆ): ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಹನುಮಂತಪ್ಪ ಕಬ್ಬಾರ ಅವರು ಚುನಾವಣೆಗೆ ಹಣ ಠೇವಣಿ ಇಡಲು ತಾವು 5 ವರ್ಷಗಳಿಂದ ಕೂಡಿಟ್ಟ ₹10 ಸಾವಿರ ಮೌಲ್ಯದ ನಾಣ್ಯಗಳನ್ನು ತಂದಿದ್ದರು.

ಇದನ್ನು ಎಣಿಸಲು ಚುನಾವಣೆ ಸಿಬ್ಬಂದಿ ಹೈರಾಣಾದ ಘಟನೆ ನಗರದ ತಹಶೀಲ್ದಾರ್ ಕಚೇರಿಯಲ್ಲಿ ಸೋಮವಾರ ನಡೆಯಿತು. ‘ನಾನೊಬ್ಬ ಬಡ ರೈತ, ಕೂಲಿ ನಾಲಿಯಿಂದ ಬಂದ ಹಣವನ್ನು ಕಳೆದ 5 ವರ್ಷಗಳಿಂದ ಸಂಗ್ರಹಿಸಿಟ್ಟಿದ್ದೇನೆ. ಠೇವಣಿ ಇಡಲು ನನ್ನ ಹತ್ತಿರ ಗರಿ ಗರಿ ನೋಟಿಲ್ಲ. ಇದ್ದ ಚಿಲ್ಲರೆ ಹಣ ತಂದಿದ್ದೇನೆ’ ಎಂದು ಎಎಪಿ ಅಭ್ಯರ್ಥಿ ಹನುಮಂತಪ್ಪ ಕಬ್ಬಾರ ಹೇಳಿದಾಗ ಚುನಾವಣೆ ಸಿಬ್ಬಂದಿ ನಗೆಗಡಲಲ್ಲಿ ತೇಲಿದರು.

ಬೊಮ್ಮಾಯಿ ಬಂಡವಾಳ ಬಯಲು– ಸುರ್ಜೇವಾಲಾ

ಬೆಂಗಳೂರು: ‘ರಾಜ್ಯದಲ್ಲಿ ನೀತಿಸಂಹಿತೆ ಜಾರಿಯಲ್ಲಿ ಇರುವುದರಿಂದ ಯಾವುದೇ ಟೆಂಡರ್ ಪ್ರಕ್ರಿಯೆ ಮುಂದುವರಿಸದಂತೆ ರಾಜ್ಯ ಸರ್ಕಾರಕ್ಕೆ ಕೇಂದ್ರ ಚುನಾವಣಾ ಆಯೋಗ ಸೋಮವಾರ ಸೂಚನೆ ನೀಡಿದೆ. ಆಯೋಗದ ಈ ಆದೇಶದಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಂಡವಾಳ ಬಯಲಾಗಿದೆ. ಅವರು ಈಗಲಾದರೂ ರಾಜೀನಾಮೆ ನೀಡಬೇಕು’ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಎಲ್ಲ ಟೆಂಡರ್‌ಗಳಿಗೆ ಚುನಾವಣೆ ಮುಗಿಯುವವರೆಗೂ ತಡೆ ನೀಡಬೇಕು ಎಂದೂ ಆದೇಶದಲ್ಲಿದೆ. ಈಗಾಗಲೇ ಕರೆದಿರುವ ಟೆಂಡರ್ ಪ್ರಕ್ರಿಯೆ ಹಾಗೂ ಮುಂದಿನ ದಿನಗಳಲ್ಲಿ ಯಾವುದೇ ಹೊಸ ಟೆಂಡರ್ ಕರೆಯಬಾರದು ಎಂದು ತಿಳಿಸಿದೆ. ನಾವು ಅಧಿಕಾರಕ್ಕೆ ಬಂದರೆ ಅಕ್ರಮ ಟೆಂಡರ್ ಕರೆದಿರುವ ಎಲ್ಲ ಅಧಿಕಾರಿಗಳು, ಸಚಿವರ ವಿರುದ್ಧ ತನಿಖೆಗೆ ಆದೇಶಿಸುತ್ತೇವೆ’ ಎಂದರು.

‘ಚುನಾವಣೆ ದಿನಾಂಕ ಘೋಷಿಸುವ ಮೊದಲು ಅನೇಕ ಟೆಂಡರ್‌ಗಳನ್ನು ಸಮರ್ಪಕ ಪ್ರಕ್ರಿಯೆ ಮೂಲಕ ಹೊರಡಿಸಿಲ್ಲ. ಟೆಂಡರ್ ಅಂದಾಜು ಮೊತ್ತ, ಕಾಲಾವಧಿ ನಿಗದಿಪಡಿಸದೆ ಟೆಂಡರ್ ನೀಡಲಾಗಿದೆ. ಇಲಾಖಾವಾರು ಕಾಮಗಾರಿ ವೆಚ್ಚದ ಪರಿಶೀಲನೆ ಇಲ್ಲದೆ ಟೆಂಡರ್ ನೀಡಲಾಗಿದೆ. ಈ ವಿಚಾರದಲ್ಲಿ ರಾಜ್ಯ ಚುನಾವಣಾಧಿಕಾರಿ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೇವೆ’ ಎಂದರು.

‘ಶಿರಾಡಿ ಘಾಟ್ ಟೆಂಡರ್‌ಗೆ ₹ 1976 ಕೋಟಿ, ದೊಡ್ಡಬಳ್ಳಾಪುರದ ಕಾಮಗಾರಿಗೆ ₹ 1,682 ಕೋಟಿ, ಆಂಧ್ರ ಪ್ರದೇಶ-ಕರ್ನಾಟಕ ಗಡಿ ಭಾಗದ ರಾಯಚೂರಿನಲ್ಲಿ ₹ 1,633 ಕೋಟಿ, ಹಾಸನ ಚತುಷ್ಪಥ ರಸ್ತೆಗೆ ₹ 1,318 ಕೋಟಿ, ವಿವಿಧ ಬೈಪಾಸ್‌ಗಳ ಅಭಿವೃದ್ಧಿಗೆ ₹ 1,167 ಕೋಟಿ ಹೀಗೆ ದೊಡ್ಡ ಪಟ್ಟಿಗಳಿವೆ. ಒಟ್ಟು 16,516 ಕೋಟಿ ಮೊತ್ತದ ಟೆಂಡರ್‌ಗಳನ್ನು ತರಾತುರಿಯಲ್ಲಿ ನೀಡಲಾಗಿದೆ. ಈ ಬಗ್ಗೆ ದೂರಿನಲ್ಲಿ ಉಲ್ಲೇಖಿಸಲಾಗಿದೆ’ ಎಂದರು.

ಎಂಟು ಪಟ್ಟು ಏರಿದ ಅಬಕಾರಿ ಸಚಿವರ ಆಸ್ತಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಅಬಕಾರಿ ಸಚಿವ ಕೆ. ಗೋಪಾಲಯ್ಯ ಅವರ ಕುಟುಂಬದ ಒಟ್ಟು ಆಸ್ತಿ ಮೂರು ವರ್ಷಗಳಲ್ಲೇ ಎಂಟು ಪಟ್ಟು ಹೆಚ್ಚಳವಾಗಿದೆ.

ಗೋಪಾಲಯ್ಯ ಕುಟುಂಬದ ಬಳಿ 2019ರ ನವೆಂಬರ್‌ನಲ್ಲಿ ಒಟ್ಟು ₹ 11.99 ಕೋಟಿ ಮೌಲ್ಯದ ಆಸ್ತಿ ಇತ್ತು. ಈಗ ಅವರ ಕುಟುಂಬದ ಒಟ್ಟು ಆಸ್ತಿಯ ಮೌಲ್ಯ ₹ 96.15 ಕೋಟಿ. ಸಚಿವರು ಮತ್ತು ಅವರ ಪತ್ನಿ ಎಸ್.ಪಿ. ಹೇಮಲತಾ ಇಬ್ಬರೂ ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಗಳಾಗಿ ಸೋಮವಾರ ನಾಮಪತ್ರ ಸಲ್ಲಿಸಿದರು.

2019ರ ಉಪ ಚುನಾವಣೆ ಸಂದರ್ಭದಲ್ಲಿ ಗೋಪಾಲಯ್ಯ ಕುಟುಂಬ ಒಟ್ಟು ₹ 11.78 ಕೋಟಿ ಮೌಲ್ಯದ ಸ್ಥಿರಾಸ್ತಿ ಹೊಂದಿತ್ತು. ಈಗ ಅವರ ಕುಟುಂಬ ಹೊಂದಿರುವ ಒಟ್ಟು ಸ್ಥಿರಾಸ್ತಿ ₹ 95.91 ಕೋಟಿ ಮೌಲ್ಯದ್ದು ಎಂದು ಚುನಾವಣಾಧಿಕಾರಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಗೋಪಾಲಯ್ಯ

ಇಬ್ಬರ ಆದಾಯದಲ್ಲೂ ಗಣನೀಯ ಏರಿಕೆಯಾಗಿದೆ. 2019ರಲ್ಲಿ ಗೋಪಾಲಯ್ಯ ಅವರ ವಾರ್ಷಿಕ ಆದಾಯ ₹ 6.70 ಲಕ್ಷ ಇದ್ದು, ಈಗ ₹ 3.47 ಕೋಟಿಗೆ ಏರಿಕೆಯಾಗಿದೆ. ಹೇಮಲತಾ ಅವರ ವಾರ್ಷಿಕ ಆದಾಯ ₹ 5.21 ಲಕ್ಷದಿಂದ ₹ 3.37 ಕೋಟಿಗೆ ಏರಿಕೆಯಾಗಿದೆ. ಸಾಲದಲ್ಲೂ ಭಾರಿ ಏರಿಕೆಯಾಗಿದೆ. ಸಚಿವರು 2019ರಲ್ಲಿ ₹ 1.79 ಕೋಟಿ ಸಾಲ ಹೊಂದಿದ್ದರು. ಈಗ ಸಾಲದ ಮೊತ್ತ ₹ 22.49 ಕೋಟಿಗೆ ಏರಿಕೆಯಾಗಿದೆ. ಪತ್ನಿಯ ಸಾಲ ₹ 5.26 ಕೋಟಿಯಿಂದ ₹ 26.01 ಕೋಟಿಗೆ ಹೆಚ್ಚಳವಾಗಿದೆ ಎಂಬ ಮಾಹಿತಿ ಪ್ರಮಾಣ ಪತ್ರದಲ್ಲಿದೆ.

ಸಚಿವರ ಬಳಿ ಮಹೀಂದ್ರಾ ಜೀಪ್, ಟೊಯೊಟಾ ಕ್ವಾಲಿಸ್, ಟೊಯೊಟಾ ಇನ್ನೋವಾ, ಟೊಯೊಟಾ ಫಾರ್ಚೂನರ್ ಕಾರುಗಳಿವೆ. ಕುಟುಂಬದ ಬಳಿ 18 ಕೆ.ಜಿ. ಬೆಳ್ಳಿ ಮತ್ತು 2 ಕೆ.ಜಿ.ಯಷ್ಟು ಚಿನ್ನವಿದೆ.

ಅಭ್ಯರ್ಥಿಗಳ ಆಸ್ತಿ ವಿವರ

ಎಂ.ಟಿ.ಬಿ ನಾಗರಾಜ್
ಕ್ಷೇತ್ರ: ಹೊಸಕೋಟೆ
ಪಕ್ಷ: ಬಿಜೆಪಿ
ಒಟ್ಟು ಆಸ್ತಿ:₹1,510 ಕೋಟಿ
ಶಿಕ್ಷಣ: 9ನೇ ತರಗತಿ
ಅಪರಾಧ ಪ್ರಕರಣ: ಇಲ್ಲ
ಚರಾಸ್ತಿ: ₹372 ಕೋಟಿ
ಸ್ಥಿರಾಸ್ತಿ:₹792 ಕೋಟಿ
ಎಷ್ಟು ಹೆಚ್ಚಳ: ₹495 ಕೋಟಿ
ಸಾಲ: ₹71 ಕೋಟಿ
ಪತ್ನಿ ಹೆಸರಲ್ಲಿರುವ ಆಸ್ತಿ:₹439 ಕೋಟಿ

ಶರತ್ ಬಚ್ಚೇಗೌಡ
ಕ್ಷೇತ್ರ: ಹೊಸಕೋಟೆ
ಪಕ್ಷ: ಕಾಂಗ್ರೆಸ್
ಒಟ್ಟು ಆಸ್ತಿ: ₹104.74 ಕೋಟಿ
ಶಿಕ್ಷಣ: ಎಂ.ಎಸ್ (ಎಂಜಿನಿಯರಿಂಗ್)
ಅಪರಾಧ ಪ್ರಕರಣ: 1
ಚರಾಸ್ತಿ: ₹31.49 ಕೋಟಿ, **ಸ್ಥಿರಾಸ್ತಿ:** ₹60 ಕೋಟಿ
ಎಷ್ಟು ಹೆಚ್ಚಳ: ₹31 ಕೋಟಿ ಇಳಿಕೆ
ಸಾಲ: ₹1.44 ಕೋಟಿ
ಪತ್ನಿ ಹೆಸರಲ್ಲಿರುವ ಆಸ್ತಿ:₹74 ಕೋಟಿ

ಕೆ.ಎಚ್.ಪುಟ್ಟಸ್ವಾಮಿಗೌಡ
ಕ್ಷೇತ್ರ:ಗೌರಿಬಿದನೂರು
ಪಕ್ಷ: ಪಕ್ಷೇತರ
ಒಟ್ಟು ಆಸ್ತಿ: ₹1,000 ಕೋಟಿ
ಶಿಕ್ಷಣ: ಬಿ.ಕಾಂ
ಅಪರಾಧ ಪ್ರಕರಣ: ಇಲ್ಲ
ಚರಾಸ್ತಿ: ₹926.28 ಕೋಟಿ, **ಸ್ಥಿರಾಸ್ತಿ:**₹50 ಲಕ್ಷ
ಸಾಲ: ₹6.57 ಕೋಟಿ
ಪತ್ನಿ ಹೆಸರಲ್ಲಿರುವ ಆಸ್ತಿ: ₹38.63 ಕೋಟಿ
ಮಕ್ಕಳ ಹೆಸರಲ್ಲಿರುವ ಆಸ್ತಿ:₹25 ಕೋಟಿ

ಡಿ.ಕೆ. ಶಿವಕುಮಾರ್
ಕ್ಷೇತ್ರ: ಕನಕಪುರ, **ಪಕ್ಷ:** ಕಾಂಗ್ರೆಸ್
ಒಟ್ಟು ಆಸ್ತಿ: ₹1,214 ಕೋಟಿ
ಶಿಕ್ಷಣ: ಎಂ.ಎ.
ಅಪರಾಧ ಪ್ರಕರಣ: 19
ಚರಾಸ್ತಿ; ₹970 ಕೋಟಿ, ಸ್ಥಿರಾಸ್ತಿ: ₹244 ಕೋಟಿ
ಎಷ್ಟು ಹೆಚ್ಚಳ: ₹374 ಕೋಟಿ
ಸಾಲ: ₹226 ಕೋಟಿ
ಪತ್ನಿ ಹೆಸರಲ್ಲಿರುವ ಆಸ್ತಿ: ₹133 ಕೋಟಿ
ಮಕ್ಕಳ ಹೆಸರಲ್ಲಿರುವ ಆಸ್ತಿ: ₹66 ಕೋಟಿ

ಎಚ್.ಡಿ. ಕುಮಾರಸ್ವಾಮಿ
ಕ್ಷೇತ್ರ: ಚನ್ನಪಟ್ಟಣ, **ಪಕ್ಷ:** ಜೆಡಿಎಸ್
ಒಟ್ಟು ಆಸ್ತಿ: ₹46.57 ಕೋಟಿ
ಶಿಕ್ಷಣ: ಬಿಎಸ್ಸಿ
ಅಪರಾಧ ಪ್ರಕರಣ: 5
ಚರಾಸ್ತಿ; ₹10.44 ಕೋಟಿ, ಸ್ಥಿರಾಸ್ತಿ: ₹36.13 ಕೋಟಿ
ಸಾಲ: ₹17.33 ಕೋಟಿ
ಪತ್ನಿ ಹೆಸರಲ್ಲಿರುವ ಆಸ್ತಿ: ₹124.72 ಕೋಟಿ
ಮಕ್ಕಳ ಹೆಸರಲ್ಲಿರುವ ಆಸ್ತಿ: ₹77 ಕೋಟಿ

ಸಂತೋಷ ಲಾಡ್
ಕ್ಷೇತ್ರ: ಕಲಘಟಗಿ, **ಪಕ್ಷ:** ಕಾಂಗ್ರೆಸ್
ಒಟ್ಟು ಆಸ್ತಿ: ₹138.71 ಕೋಟಿ
ಶಿಕ್ಷಣ: ಬಿ.ಕಾಂ.
ಅಪರಾಧ ಪ್ರಕರಣ: 8
ಚರಾಸ್ತಿ: ₹130.23ಕೋಟಿ,
ಸ್ಥಿರಾಸ್ತಿ: ₹8.48ಕೋಟಿ
ಎಷ್ಟು ಹೆಚ್ಚಳ: – ₹49.22(ಇಳಿಕೆ)
ಸಾಲ: ₹53.17ಕೋಟಿ
ಮಕ್ಕಳ ಹೆಸರಲ್ಲಿರುವ ಆಸ್ತಿ: ₹2.75ಕೋಟಿ

ಗಾಲಿ ಲಕ್ಷ್ಮೀ ಅರುಣಾ
ಕ್ಷೇತ್ರ: ಬಳ್ಳಾರಿ ನಗರ
ಪಕ್ಷ: ಕಲ್ಯಾಣ ರಾಜ್ಯ ಪ್ರಗತಿ ಪಕ್ಷ
ಒಟ್ಟು ಆಸ್ತಿ:₹200.61 ಕೋಟಿ
ಶಿಕ್ಷಣ:ಪದವಿ ಅಪೂರ್ಣ
ಅಪರಾಧ ಪ್ರಕರಣ: ಇಲ್ಲ
ಚರಾಸ್ತಿ: ₹ 96.23 ಕೋಟಿ,
ಸ್ಥಿರಾಸ್ತಿ:₹104.38 ಕೋಟಿ
ಸಾಲ: ₹171.12 ಕೋಟಿ
ಮಕ್ಕಳ ಹೆಸರಲ್ಲಿರುವ ಆಸ್ತಿ:ಮಗ ಕಿರೀಟಿ ರೆಡ್ಡಿ ಬಳಿ ₹1.24 ಕೋಟಿ ಮೌಲ್ಯದ ಸ್ಥಿರಾಸ್ತಿ

ಬಿ.ವೈ.ವಿಜಯೇಂದ್ರ
ಕ್ಷೇತ್ರ:ಶಿಕಾರಿಪುರ,
ಪಕ್ಷ: ಬಿಜೆಪಿ
ಒಟ್ಟು ಆಸ್ತಿ: ₹ 123.74 ಕೋಟಿ
ಶಿಕ್ಷಣ: ಎಲ್‌ಎಲ್‌ಬಿ
ಅಪರಾಧ ಪ್ರಕರಣ: ಎರಡು
ಚರಾಸ್ತಿ: ₹ 67.67 ಕೋಟಿ, **ಸ್ಥಿರಾಸ್ತಿ:** ₹ 56.57 ಕೋಟಿ
ಸಾಲ: ₹ 34.52 ಕೋಟಿ
ಪತ್ನಿಯ ಹೆಸರಲ್ಲಿರುವ ಆಸ್ತಿ: ₹ 18.95 ಕೋಟಿ
ಮಕ್ಕಳ ಹೆಸರಲ್ಲಿರುವ ಆಸ್ತಿ: ₹ 1.39 ಕೋಟಿ

ಶಾಸಕ ಗೌರಿಶಂಕರ್ ಆಯ್ಕೆ ಅಸಿಂಧು ಹೈಕೋರ್ಟ್ ಆದೇಶಕ್ಕೆ ‘ಸುಪ್ರೀಂ’ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತುಮಕೂರು ಗ್ರಾಮಾಂತರ ಕ್ಷೇತ್ರದ ಶಾಸಕ ಡಿ.ಸಿ. ಗೌರಿಶಂಕರ್ ಆಯ್ಕೆಯನ್ನು ಅಸಿಂಧುಗೊಳಿಸಿದ್ದ ಕರ್ನಾಟಕ ಹೈಕೋರ್ಟ್‌ನ ಆದೇಶಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ಮಧ್ಯಂತರ ತಡೆಯಾಜ್ಞೆ ನೀಡಿದೆ. ಚುನಾವಣಾ ಅಕ್ರಮದ ಆರೋಪ ಸಾಬೀತಾದ ಕಾರಣಕ್ಕೆ ಹೈಕೋರ್ಟ್ ಈ ತೀರ್ಪು ನೀಡಿತ್ತು.

‘ಮತದಾರರಿಗೆ ಮತಯಾಚನೆ ಪತ್ರದ ಜೊತೆ ಗುಂಪು ಆರೋಗ್ಯ ವಿಮಾ ಪಾಲಿಸಿಯ ಆಮಿಷವೊಡ್ಡಿ ಅವರಿಂದ ಮತಗಳನ್ನು ಪಡೆದು ಆರಿಸಿ ಬಂದಿದ್ದಾರೆ’ ಎಂಬ ಪ್ರಕರಣದಲ್ಲಿ ಗೌರಿಶಂಕರ್ ಆಯ್ಕೆಯನ್ನು ಅಸಿಂಧುಗೊಳಿಸಲಾಗಿತ್ತು.

ಹೈಕೋರ್ಟ್‌ನ ತೀರ್ಪು ಹೊರಬೀಳುತ್ತಲೇ, ಗೌರಿಶಂಕರ್ ಪರ ವಕೀಲರು, ‘ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿರುವುದರಿಂದ ತೀರ್ಪಿಗೆ ತಡೆ ನೀಡಬೇಕು’ ಎಂದು ಕೋರಿ ಮಧ್ಯಂತರ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಮಾನ್ಯ ಮಾಡಿದ್ದ ನ್ಯಾಯಪೀಠ, 30 ದಿನಗಳ ಕಾಲ ತನ್ನ ಆದೇಶವನ್ನು ಅಮಾನತಿನಲ್ಲಿ ಇರಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಗೌರಿಶಂಕರ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಪ್ರಕರಣದ ವಿಚಾರಣೆ ನಡೆಸಿದ ದ್ವಿಸದಸ್ಯ ಪೀಠವು, ‘ಸೂಕ್ತ ಸಮಯದಲ್ಲಿ ಈ ನ್ಯಾಯಾಲಯ ನೀಡುವ ನಿರ್ದೇಶನಗಳಿಗೆ ಒಳಪಟ್ಟು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಮೇಲ್ಮನವಿದಾರರು ಅರ್ಹರು’ ಎಂದು ಹೇಳಿತು.

‘ಪೀಠದ ಮುಂದಿನ ಆದೇಶಕ್ಕೆ ಬದ್ಧರಾಗಿರಬೇಕು. ಮುಖ್ಯಮಂತ್ರಿ ಆಯ್ಕೆ ಸಮಯದಲ್ಲಿ ಮತದಾನ ಮಾಡಲು ಅನುಮತಿ ಪಡೆಯಬೇಕು’ ಎಂದು ಪೀಠವು ಷರತ್ತು ವಿಧಿಸಿತು. ‘ಮೇಲ್ಮನವಿದಾರರು ಶಾಸನಸಭೆಯ ಎಲ್ಲ ಸವಲತ್ತುಗಳು, ಭತ್ಯೆಗಳು ಹಾಗೂ ಪ್ರಯೋಜನಗಳನ್ನು ಪಡೆಯಲು ಅರ್ಹರು. ಆದರೂ, ಸದನದಲ್ಲಿ ಯಾವುದೇ ಸಮಿತಿಗಳಲ್ಲಿ ಮತ ಚಲಾಯಿಸಲು ಅರ್ಹರಾಗುವುದಿಲ್ಲ’ ಎಂದೂ ಹೇಳಿತು.

ಕರ್ನಾಟಕದ ವಿಧಾನಸಭೆಗೆ 2018ರಲ್ಲಿ ನಡೆದಿದ್ದ ಚುನಾವಣೆಯಲ್ಲಿ ಗೌರಿಶಂಕರ್ ಜಾತ್ಯತೀತ ಜನತಾ ದಳದಿಂದ (ಜೆಡಿಎಸ್) ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ 2018ರ ಮೇ 15ರಂದು ಘೋಷಿಸಿದ್ದರು.

ಗೌರಿಶಂಕರ್ 82,740 ಮತಗಳನ್ನು ಪಡೆದಿದ್ದರೆ ಬಿಜೆಪಿ ಅಭ್ಯರ್ಥಿಯಾಗಿದ್ದ ಬಿ.ಸುರೇಶ್ ಗೌಡ 77,110 ಮತಗಳನ್ನು ಪಡೆದು ಸೋತಿದ್ದರು. ‘ವಿಜೇತ ಅಭ್ಯರ್ಥಿ ಚುನಾವಣೆಯಲ್ಲಿ ಅಕ್ರಮ ಎಸಗಿ ಗೆಲುವು ಸಾಧಿಸಿದ್ದಾರೆ. ಹಾಗಾಗಿ, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು’ ಎಂದು ಕೋರಿ ಸುರೇಶ್ ಗೌಡ ಹೈಕೋರ್ಟ್‌ನಲ್ಲಿ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದರು.

ವಂಶಾಡಳಿತ: ಬಿಜೆಪಿಗಿಲ್ಲ ಹಿಂಜರಿತ

ಒಂದನೇ ಪುಟದಿಂದ....

ಬಿಜೆಪಿ ತೊರೆದು ಕಾಂಗ್ರೆಸ್ ಸೇರಿರುವ ಲಿಂಗಾಯತ ಸಮುದಾಯದ ಹಿರಿಯ ನಾಯಕ ಜಗದೀಶ ಶೆಟ್ಟರ್ ಅವರ ವಿರುದ್ಧ ಪಕ್ಷದ ಪ್ರಧಾನ ಕಾರ್ಯದರ್ಶಿ ಮಹೇಶ ಟೆಂಗಿನಕಾಯಿ ಅವರನ್ನು ಕಣಕ್ಕೆ ಇಳಿಸಲಾಗಿದೆ.

ಕರಡಿ ಬಿಗಿಪಟ್ಟು–ಸೊಸೆಗೆ ಟಿಕೆಟ್: ‘ಕೊಪ್ಪಳ ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ನನಗೇ ನೀಡಬೇಕು’ ಎಂದು ಅಲ್ಲಿನ ಸಂಸದ ಸಂಗಣ್ಣ ಕರಡಿ ಬಿಗಿಪಟ್ಟು ಹಿಡಿದಿದ್ದರು. ಅವರಿಗೆ ಟಿಕೆಟ್ ಸಿಕ್ಕಿಲ್ಲ. ಆದರೆ, ಅವರ ಹಿರಿಯ ಸೊಸೆ ಮಂಜುಳಾ ಅಮರೇಶ ಕರಡಿ ಅವರನ್ನು ಹುರಿಯಾಳುವನ್ನಾಗಿ ಮಾಡಲಾಗಿದೆ.

ಈ ಚುನಾವಣೆಯಲ್ಲಿ ಯಾವುದೇ ಸಂಸದ ಹಾಗೂ ಅವರ ಕುಟುಂಬಕ್ಕೆ ಟಿಕೆಟ್ ನೀಡದಿರುವ ತೀರ್ಮಾನಕ್ಕೆ ಪಕ್ಷ ಬಂದಿತ್ತು. ಇದರಿಂದ ಅಸಮಾಧಾನಗೊಂಡಿದ್ದ ಸಂಗಣ್ಣ ಕೊಪ್ಪಳದಲ್ಲಿ ಶಕ್ತಿ ಪ್ರದರ್ಶನ ಮಾಡಿದ್ದರು. ನನಗೆ ಟಿಕೆಟ್ ಕೊಡದಿದ್ದರೆ ಪಕ್ಷೇತರರಾಗಿ ಸ್ಪರ್ಧೆ ಮಾಡುವುದಾಗಿ ಇಲ್ಲವೇ ಜೆಡಿಎಸ್ ಸೇರ್ಪಡೆಯಾಗುವುದಾಗಿ ಎಚ್ಚರಿಸಿದ್ದರು. ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧತೆ ನಡೆಸಿದ್ದರು. ಅದಕ್ಕಾಗಿ ದೆಹಲಿಗೆ ಹೊರಟಿದ್ದ ಅವರನ್ನು ಪಕ್ಷದ ನಾಯಕರು ಬೆಂಗಳೂರಿನಲ್ಲಿ ತಡೆದು ಮಾತುಕತೆ ನಡೆಸಿದ್ದರು. ಸೊಸೆಗೆ ಅವಕಾಶ ನೀಡುವ ಭರವಸೆ ನೀಡಿದ್ದರು. ಇದಕ್ಕೆ ಸಂಗಣ್ಣ ಒಪ್ಪಿಗೆ ಸೂಚಿಸಿದ್ದರು. 2018ರ ಚುನಾವಣೆಯಲ್ಲೂ ಸಂಗಣ್ಣ ಹಟ ಹಿಡಿದು ಮಗ ಅಮರೇಶ ಅವರಿಗೆ ಟಿಕೆಟ್ ಕೊಡಿಸಿದ್ದರು. ಮಗ ಚುನಾವಣೆಯಲ್ಲಿ ಸೋತಿದ್ದರು.

ಲಿಂಬಾವಳಿ ಪತ್ನಿಗೆ ಅದೃಷ್ಟ: ಮಹದೇವಪುರದಲ್ಲಿ ಅರವಿಂದ ಲಿಂಬಾವಳಿ ಪತ್ನಿ ಮಂಜುಳಾ ಅವರಿಗೆ ಅದೃಷ್ಟ ಖುಲಾಯಿಸಿದೆ. ಅವರು ಸಿ.ವಿ.ರಾಮನ್ ನಗರದಲ್ಲಿ ಐದು ಬಾರಿ ಗೆದ್ದಿರುವ ಎಸ್. ರಘು ಅವರ ಸಹೋದರಿ.

ಆಡಳಿತ ವಿರೋಧಿ ಅಲೆ ಕಾರಣಕ್ಕೆ ಲಿಂಬಾವಳಿ ಅವರನ್ನು ಕಣಕ್ಕೆ ಇಳಿಸದಿರಲು ಪಕ್ಷ ತೀರ್ಮಾನಿಸಿತ್ತು. ಕ್ಷೇತ್ರದ ದಲಿತ ಮುಖಂಡರೊಬ್ಬರಿಗೆ ಅವಕಾಶ ನೀಡುವ ಕುರಿತು ಪಕ್ಷದ ವಲಯದಲ್ಲಿ ಗಂಭೀರ ಚರ್ಚೆಗಳು ನಡೆದಿದ್ದವು. ಈ ನಡುವೆ, ಲಿಂಬಾವಳಿ ಅವರನ್ನು ಭಾನುವಾರ ರಾತ್ರಿ ಕರೆಸಿಕೊಂಡ ಪಕ್ಷದ ನಾಯಕರು ಸಮಾಲೋಚನೆ ನಡೆಸಿದ್ದರು. ಪತ್ನಿಗೆ ಟಿಕೆಟ್ ನೀಡುವ ತೀರ್ಮಾನಕ್ಕೆ ಬಂದಿದ್ದರು.

ಹೆಬ್ಬಾಳ ಕ್ಷೇತ್ರದಲ್ಲಿ ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಆಕಾಂಕ್ಷಿಯಾಗಿದ್ದರು. ಆದರೆ, ಅವರ ಬದಲು ಪುತ್ರ ಕಟ್ಟಾ ಜಗದೀಶ್ ಅವರನ್ನು ಕಣಕ್ಕೆ ಇಳಿಸಲಾಗಿದೆ.

ಗೋವಿಂದರಾಜನಗರಕ್ಕೆ ವಸತಿ ಸಚಿವ ವಿ.ಸೋಮಣ್ಣ ಹಾಲಿ ಶಾಸಕರು. ಅವರನ್ನು ವರುಣಾದಲ್ಲಿ (ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ) ಹಾಗೂ ಚಾಮರಾಜನಗರದಲ್ಲಿ ಕಣಕ್ಕೆ ಇಳಿಸಲಾಗಿದೆ. ಗೋವಿಂದ ರಾಜನಗರದಲ್ಲಿ ಸೋಮಣ್ಣ ಸೂಚಿಸಿದ ಮುಖಂಡರಿಗೆ ಅವಕಾಶ ನೀಡಲಾಗುತ್ತದೆ ಎಂದು ಪಕ್ಷದ ನಾಯಕರು ಭರವಸೆ ನೀಡಿದ್ದರು. ಡಾ. ಅರುಣ್ ಸೋಮಣ್ಣ, ಉಮೇಶ್ ಶೆಟ್ಟಿ ಹಾಗೂ ವಿಶ್ವನಾಥ ಗೌಡ ಹೆಸರನ್ನು ಸೋಮಣ್ಣ ಶಿಫಾರಸು ಮಾಡಿದ್ದರು. ಪಾಲಿಕೆಯ ಮಾಜಿ ಸದಸ್ಯ ಉಮೇಶ್ ಶೆಟ್ಟಿ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಲಾಗಿದೆ. 2013–18ರ ಅವಧಿಯಲ್ಲಿ ಪ್ರಿಯಾಕೃಷ್ಣ ಗೋವಿಂದರಾಜನಗರದ ಶಾಸಕರಾಗಿದ್ದರು. ಈ ಅವಧಿಯಲ್ಲಿ ಪ್ರಿಯಾಕೃಷ್ಣ–ಉಮೇಶ್ ಶೆಟ್ಟಿ ಬಣಗಳ ನಡುವೆ ಸಂಘರ್ಷಗಳು ನಡೆದಿದ್ದವು. ಈಗ ಅವರಿಬ್ಬರೂ ಚುನಾವಣಾ ಅಖಾಡದಲ್ಲಿ ಎದುರಾಳಿಗಳಾಗಿದ್ದಾರೆ.

ಸೋಮವಾರ 842 ನಾಮಪತ್ರ ಸಲ್ಲಿಕೆ

ಒಂದನೇ ಪುಟದಿಂದ...

ಹಲವು ಮಂದಿ ಹಾಲಿ ಸಚಿವರು, ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಪ್ರಮುಖರು ಭಾರಿ ಶಕ್ತಿ ಪ್ರದರ್ಶನದೊಂದಿಗೆ ಉಮೇದುವಾರಿಕೆ ಸಲ್ಲಿಸಿದರು. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಮೈಸೂರು, ಮಂಡ್ಯ, ಶಿವಮೊಗ್ಗ, ಬೆಳಗಾವಿ ಸೇರಿ ಹಲವು ಜಿಲ್ಲೆಗಳಲ್ಲಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಕೆಯನ್ನೇ ಬಲ ಪ್ರದರ್ಶನಕ್ಕೆ ಬಳಸಿಕೊಂಡರು.

ಹತ್ತಾರು ಸಾವಿರ ಜನರೊಂದಿಗೆ ಬೃಹತ್ ಮೆರವಣಿಗೆಯಲ್ಲಿ ಸಾಗಿಬಂದು ನಾಮಪತ್ರ ಸಲ್ಲಿಸಿದ ಹುರಿಯಾಳುಗಳು, ಎದುರಾಳಿಗಳ ವಿರುದ್ಧ ಸವಾಲೆಸೆದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕನಕಪುರದಲ್ಲಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಚನ್ನಪಟ್ಟಣದಲ್ಲಿ ಮತ್ತು ನಿಖಿಲ್ ಕುಮಾರಸ್ವಾಮಿ ರಾಮನಗರದಲ್ಲಿ ನಾಮಪತ್ರ ಸಲ್ಲಿಕೆಗೂ ಮುನ್ನ ನಡೆದ ಮೆರವಣಿಗೆಗಳಲ್ಲಿ ಭಾರಿ ಸಂಖ್ಯೆಯಲ್ಲಿ ಬೆಂಬಲಿಗರು ಇದ್ದರು.

ವರುಣ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ನಾಮಪತ್ರ ಸಲ್ಲಿಸುವಾಗ ಮುಖ್ಯಮಂತ್ರಿ ಹಾಜರಿದ್ದರು. ಧಾರವಾಡ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿನಯ ಕುಲಕರ್ಣಿ ಪರವಾಗಿ ಅವರ ಪತ್ನಿ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಸಿದ ಪ್ರಮುಖರು

ಬಿಜೆಪಿ	
ವಿ.ಸೋಮಣ್ಣ	ವರುಣ
ಎಸ್.ಟಿ.ಸೋಮಶೇಖರ್	ಯಶವಂತಪುರ
ಎಂ.ಟಿ.ಬಿ.ನಾಗರಾಜ್	ಹೊಸಕೋಟೆ
ಶಶಿಕಲಾ ಜೊಲ್ಲೆ	ನಿಪ್ಪಾಣಿ
ಕುಮಾರ್ ಬಂಗಾರಪ್ಪ	ಸೊರಬ
ಬಿ.ವೈ.ವಿಜಯೇಂದ್ರ	ಶಿಕಾರಿಪುರ
ಕೆ.ಸಿ.ನಾರಾಯಣಗೌಡ	ಕೆ.ಆರ್.ಪೇಟೆ
ಕಾಂಗ್ರೆಸ್	
ಡಿ.ಕೆ.ಶಿವಕುಮಾರ್	ಕನಕಪುರ
ಮಧು ಬಂಗಾರಪ್ಪ	ಸೊರಬ
ಪ್ರಿಯಾಂಕ್ ಖರ್ಗೆ	ಚಿತ್ತಾಪುರ
ಶಾಮನೂರು ಶಿವಶಂಕರಪ್ಪ	ದಾವಣಗೆರೆ ದಕ್ಷಿಣ
ದರ್ಶನ್ ಧ್ರುವನಾರಾಯಣ	ನಂಜನಗೂಡು
ಜೆಡಿಎಸ್	
ಎಚ್.ಡಿ.ಕುಮಾರಸ್ವಾಮಿ	ಚನ್ನಪಟ್ಟಣ
ನಿಖಿಲ್‌ಕುಮಾರಸ್ವಾಮಿ	ರಾಮನಗರ
ಕೆಆರ್‌ಪಿಪಿ	
ಗಾಲಿ ಲಕ್ಷ್ಮೀ ಅರುಣಾ	ಬಳ್ಳಾರಿ ನಗರ

‘ಸಿಎಂ ಆಯ್ಕೆ: ಹೈಕಮಾಂಡ್ ತೀರ್ಮಾನ’

ರಾಜ್ಯ ವಿಧಾನಸಭೆ ಚುನಾವಣೆ ಗೆಲ್ಲುವುದು ಕಾಂಗ್ರೆಸ್ಸಿನ ಅತ್ಯುನ್ನತ ಹುದ್ದೆಯಲ್ಲಿರುವ ಮಲ್ಲಿಕಾರ್ಜುನ ಖರ್ಗೆ ಅವರ ಮುಂದಿರುವ ಅತಿ ದೊಡ್ಡ ಸವಾಲು. ಟಿಕೆಟ್ ಹಂಚಿಕೆ ಗೊಂದಲಕ್ಕೆ ಅವಕಾಶ ಕೊಡದೆ, ಎಲ್ಲರನ್ನೂ ಒಟ್ಟುಗೂಡಿಸಿ ಕರೆದೊಯ್ಯುತ್ತಿರುವ ಖರ್ಗೆ, ಬಿಜೆಪಿ ಸರ್ಕಾರ ಕಿತ್ತೆಸೆದು ಕಾಂಗ್ರೆಸ್ ಸರ್ಕಾರವನ್ನು ಪ್ರತಿಷ್ಠಾಪಿಸುವ ಗುರಿ ಹೊಂದಿದ್ದಾರೆ. ಚುನಾವಣೆ ಹಿನ್ನೆಲೆಯಲ್ಲಿ ‘ಪ್ರಜಾವಾಣಿ’ಗೆ ಅವರು ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

ಪ್ರಜಾವಾಣಿ ಸಂದರ್ಶನ

ಮಲ್ಲಿಕಾರ್ಜುನ ಖರ್ಗೆ

• ರವೀಂದ್ರ ಭಟ್ಟ/ರಾಜೇಶ್ ರೈ ಚಟ್ಲ

• ರಾಷ್ಟ್ರ ಮಟ್ಟದಲ್ಲಿ ಪಕ್ಷ ಕಟ್ಟುವಂಥ ಜವಾಬ್ದಾರಿ ನಿಮ್ಮ ಮೇಲಿದೆ. ಇದೇ ಸಂದರ್ಭದಲ್ಲಿ ಕರ್ನಾಟಕ ವಿಧಾನಸಭೆ ಚುನಾವಣೆ ಬಂದಿದೆ. ಈ ಚುನಾವಣೆಯನ್ನು ನೀವು ಹೇಗೆ ನೋಡುತ್ತೀರಿ? ಪಕ್ಷವನ್ನು ಹೇಗೆ ಮುಂದೆ ಕೊಂಡೊಯ್ಯುತ್ತೀರಿ?

ಪ್ರತಿ ರಾಜ್ಯಗಳಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಕಾರ್ಯಾಧ್ಯಕ್ಷರು, ಶಾಸಕಾಂಗ ಪಕ್ಷದ ನಾಯಕರು ಇದ್ದಾರೆ. ಬೇರೆಯವರಿಗೂ ಪಕ್ಷದ ಕೆಲಸ ಹಂಚಿದ್ದೇವೆ. ರಾಜ್ಯದ ಚುನಾವಣೆಗೆ ಎಐಸಿಸಿಯಿಂದ ನಾಲ್ಕೈದು ಕಾರ್ಯದರ್ಶಿಗಳು, ಉಸ್ತುವಾರಿ ಇದ್ದಾರೆ. ವೀಕ್ಷಕರನ್ನೂ ನೇಮಿಸಿದ್ದೇವೆ. ಸಂಘಟನಾತ್ಮಕವಾಗಿ ವಿವಿಧ ಹಂತಗಳಲ್ಲಿ ಪಕ್ಷದ ಕೆಲಸ ಸಾಗುತ್ತದೆ. ಒಬ್ಬ ವ್ಯಕ್ತಿ ಎಲ್ಲ ಕಡೆ ಹೋಗಿ ಕೆಲಸ ಮಾಡಲು ಸಾಧ್ಯವಿಲ್ಲ. ಎಲ್ಲರಿಂದಲೂ ಕೆಲಸ ತೆಗೆದುಕೊಳ್ಳುವ ಜವಾಬ್ದಾರಿ ನನ್ನದು. ಅದಕ್ಕಾಗಿ ಆಗಾಗ ಸಭೆಗಳನ್ನು ಮಾಡುತ್ತೇವೆ. ಸಂಘಟನೆಯಲ್ಲಿನ ಕೊರತೆ, ನ್ಯೂನತೆಗಳನ್ನು ನೋಡಿಕೊಂಡು ಸರಿಪಡಿಸಿಕೊಂಡು ಹೋಗುತ್ತೇವೆ. ಈ ಕೆಲಸ ರಾಷ್ಟ್ರೀಯಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ನಿರಂತರ ನಡೆಯುತ್ತಿರುತ್ತದೆ. ಕರ್ನಾಟಕದಲ್ಲಿಯೂ ತಳಮಟ್ಟದಿಂದಲೇ ಸಂಘಟನೆ ಬಲವಾಗಿದೆ. ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಎಂ.ಬಿ. ಪಾಟೀಲ, ಪರಮೇಶ್ವರ ಹೀಗೆ ಹಿರಿಯ ನಾಯಕರು ಸೇರಿಕೊಂಡು ಪಕ್ಷದ ಕೆಲಸ ಮಾಡುತ್ತಿದ್ದಾರೆ. ಖಂಡಿತವಾಗಿಯೂ ಇದರಲ್ಲಿ ನಮಗೆ ಯಶಸ್ಸು ಸಿಗುತ್ತದೆ. ಆ ಬಗ್ಗೆ ನನಗೆ ಸಂಪೂರ್ಣ ವಿಶ್ವಾಸವಿದೆ.

• ನೀವು ಕರ್ನಾಟಕದವರು. ಅತ್ಯಂತ ಎತ್ತರದ ಸ್ಥಾನಕ್ಕೆ ಏರಿದ್ದೀರಿ. ಈ ಚುನಾವಣೆ ಗೆದ್ದು ಅಧಿಕಾರಕ್ಕೆ ಬರುವುದು ನಿಮಗೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಎಷ್ಟು ಮುಖ್ಯ?

ನನಗೆ ವೈಯಕ್ತಿಕವಾಗಿ ಮುಖ್ಯ ಅಥವಾ ಅಲ್ಲ ಎನ್ನುವುದು ಬೇರೆ. ನನಗೆ ಪಕ್ಷ ಮುಖ್ಯ. ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡುವ ಯಾವುದೇ ವ್ಯಕ್ತಿಗೆ ಬೆಂಬಲ ಕೊಡುತ್ತೇವೆ. ಇಲ್ಲಿ ವ್ಯಕ್ತಿ ಮುಖ್ಯ ಅಲ್ಲ. ನಾನು ಪಕ್ಷದ ಸಿದ್ಧಾಂತದಲ್ಲಿ ನಂಬಿಕೆ ಇಟ್ಟವನು. 55 ವರ್ಷಗಳಿಂದ ಪಕ್ಷದಲ್ಲಿದ್ದೇನೆ. ಎಡ, ಬಲ, ಮಧ್ಯವೆಂಬ ದಾರಿಗಳಲ್ಲಿ ಅಂಬೇಡ್ಕರ್ ದಾರಿ ಆರಿಸಿಕೊಂಡು ವಿದ್ಯಾರ್ಥಿ ಜೀವನದಿಂದಲೇ ಕೆಲಸ ಮಾಡುತ್ತಾ ಬಂದಿದ್ದೇನೆ. ಈಗ ನಾವು ಜಾತಿ ಬಗ್ಗೆ ಮಾತನಾಡುತ್ತೇವೆ. ವಿದ್ಯಾರ್ಥಿಯಾಗಿದ್ದಾಗ 2,000 ವಿದ್ಯಾರ್ಥಿಗಳಿಂದ ನಾನು ಆರಿಸಿ ಬಂದಿದ್ದೇನೆ. ಜನ ಕೆಲಸಕ್ಕೆ ಮೆಚ್ಚುತ್ತಾರೆ. ನನ್ನ ಕೆಲಸ ಅಥವಾ ಗುಣದ ಕಾರಣಕ್ಕೆ ನನಗೆ ಈ ಸ್ಥಾನ (ಎಐಸಿಸಿ ಅಧ್ಯಕ್ಷ), ಅಧಿಕಾರ ಸಿಕ್ಕಿದೆಯೇ ಹೊರತು, ಅಧಿಕಾರಕ್ಕಾಗಿ ನಾನು ಎಲ್ಲಿಯೂ ಹೋಗಿಲ್ಲ. ಲಾಬಿಯೂ ಮಾಡಿಲ್ಲ. ರಾಜ್ಯದಲ್ಲಿ ಸಚಿವ, ಶಾಸಕಾಂಗ ಪಕ್ಷದ ನಾಯಕ ಸ್ಥಾನದಲ್ಲಿ ನಿಷ್ಠೆಯಿಂದ ಕೆಲಸ ಮಾಡಿದ ಕಾರಣಕ್ಕೆ ದೆಹಲಿಗೆ ಹೋಗಲು ಅವಕಾಶವಾಯಿತು. ನಮ್ಮ ನಾಯಕಿ ಸೋನಿಯಾ ಗಾಂಧಿ ಹೇಳಿದ ಮೇಲೆ ದೆಹಲಿಗೆ ಹೋದೆ. ಒಳ್ಳೆಯ ಕೆಲಸ ಮಾಡಿದ ಪರಿಣಾಮ ಕೇಂದ್ರದಲ್ಲಿ ಕಾರ್ಮಿಕ ಸಚಿವನಾದೆ. ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕನನ್ನಾಗಿ ಮಾಡಿದರು. ಆದರೆ, ಲೋಕಸಭೆ ಚುನಾವಣೆಯಲ್ಲಿ ಮೋದಿ, ಬಿಜೆಪಿ, ಆರೆಸ್ಸೆಸ್‌ನವರು ನನ್ನನ್ನು ಗುರಿ ಮಾಡಿ ಸೋಲಿಸಿದರು. ನನ್ನ ವಿಚಾರಧಾರೆಗಳಿಗೆ ಸೋಲು ಆಗಿದೆಯೇ ಹೊರತು, ನನ್ನ ಸೋಲು ಆಗಿಲ್ಲ. ನನ್ನ ವಿಚಾರಧಾರೆಗೆ ಸೋಲಾಗಿದೆಯಲ್ಲ, ಅದಕ್ಕೆ ಜೀವ ತುಂಬಬೇಕೆಂದು ನನ್ನ ಪ್ರಯತ್ನ ಮುಂದುವರಿದಿದೆ.

• ಅದೇ ಹಿನ್ನೆಲೆಯಲ್ಲಿ ಕೋಲಾರದಲ್ಲಿ ನೀವು, ಯಾರಾದರೂ ಮುಖ್ಯಮಂತ್ರಿಯಾಗಿ. ಮೊದಲು ಪಕ್ಷವನ್ನು ಅಧಿಕಾರಕ್ಕೆ ತನ್ನಿ ಎಂದು ಕರೆ ನೀಡಿದ್ರಾ?

ಬಹಳ ಜನ ತಮ್ಮ ವೈಯಕ್ತಿಕ ಮಾತು ಹೇಳಿಕೊಂಡು ಹೋಗುತ್ತಾರೆ. ನೀನು, ನಾನು, ಅವನನ್ನು ಮುಖ್ಯಮಂತ್ರಿ ಮಾಡುತ್ತೇವೆಂದು. ನಮ್ಮ ಸಿದ್ಧಾಂತಕ್ಕೆ ಅಂಟಿಕೊಂಡು, ಅದು ಯಶಸ್ವಿ ಆಗಬೇಕೆಂದರೆ ಎಲ್ಲರೂ ಕೊಡುಗೆ ನೀಡಬೇಕು.

• ‘ನಾನು ಮುಖ್ಯಮಂತ್ರಿ’ ಎಂದು ಹೇಳಬಾರದೆಂದು ನಿಮ್ಮ ನಾಯಕರಿಗೆ ಅಥವಾ ಅವರ ಬೆಂಬಲಿಗರಿಗೆ ಹೇಳುತ್ತೀರಾ?

ನಾನು ಕೋಲಾರದಲ್ಲಿ ಮಾತನಾಡಿದ್ದನ್ನು ಬಿಡಿಸಿ ಹೇಳಬೇಕಿಲ್ಲ. ಬಿಡಿಸಿ ಹೇಳಲು ಸಣ್ಣ ಮಕ್ಕಳು ಯಾರೂ ಇಲ್ಲ. ಎಲ್ಲರೂ ಪ್ರಜ್ಞಾವಂತರಿದ್ದಾರೆ. ಅವರವರ ಜವಾಬ್ದಾರಿ ಅವರಿಗೆ ಗೊತ್ತಿದೆ. ಸಾರ್ವಜನಿಕವಾಗಿ ಯಾಕೆ ಹೇಳಿದೆನೆಂದರೆ, ಕೆಲವರು ಹೀಗೂ ತಿಳಿದುಕೊಳ್ಳಬಾರದು, ಇವನು ಎಐಸಿಸಿ ಅಧ್ಯಕ್ಷ, ಈ ಕಡೆ ಬರುವ ಆಸೆ ಇವನಿಗೂ ಇದೆಯೆಂದು. ಈ ಬಗ್ಗೆ ಯಾರಿಗೂ ಕಿಂಚಿತ್ತೂ ಸಂಶಯ ಬರಬಾರದೆಂದು ಹಾಗೆ ಹೇಳಿದ್ದೇನೆ. ಮುಖ್ಯಮಂತ್ರಿ ಅವರು, ಇವರು ಎಂದಲ್ಲ. ಯಾರು ಬೇಕಾದರೂ ಆಗಬಹುದು. ಆದರೆ, ಯಾರಾಗಬೇಕೆಂದು ಶಾಸಕರು ಮತ್ತು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ನಾವು ಯಾರೂ ತೀರ್ಮಾನ ಮಾಡುವುದಿಲ್ಲ. ನಮಗೆ ಅಪೇಕ್ಷೆಗಳು ಇರಬಹುದು. ಯಾರಿಗೆ ಅಧಿಕಾರ ಕೊಡಬೇಕೆಂದು ಜನ ನಿರ್ಧರಿಸುತ್ತಾರೆ. ಮುಖ್ಯಮಂತ್ರಿ ಯಾರಾಗಬೇಕೆಂದು ಶಾಸಕರು ಅಭಿಪ್ರಾಯ ಕೊಡುತ್ತಾರೆ. ಅವರ ಅಭಿಪ್ರಾಯವನ್ನು ತೂಕ ಮಾಡಿ ಹೈಕಮಾಂಡ್ ತೀರ್ಮಾನ ಮಾಡುತ್ತದೆ.

• ನೀವೇ ಹೈಕಮಾಂಡ್ ಅಲ್ಲವೇ?

ಹೈಕಮಾಂಡ್ ಅಂದರೆ, ನಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆ. ನಾನು ಆಯ್ಕೆಯಾದ ಅಧ್ಯಕ್ಷ. ಕಾರ್ಯಕಾರಿ ಸಮಿತಿಯ ತೀರ್ಮಾನಕ್ಕೆ ನಾನೂ ತಲೆಬಾಗಲೇಬೇಕು. ನಾನೊಬ್ಬನೇ ತೀರ್ಮಾನಿಸಿದರೆ ಸರ್ವಾಧಿಕಾರವಾಗುತ್ತದೆ. ಅದನ್ನೇ ಮೋದಿ ಮಾಡುತ್ತಿರುವುದು. ಅದು ನಮಗೆ ಬೇಕಾಗಿಲ್ಲ. ಎಲ್ಲರ ವಿಶ್ವಾಸ ಬಹಳ ಮುಖ್ಯ. ವಿಶೇಷವಾಗಿ ಸೋನಿಯಾ ಗಾಂಧಿ ನನ್ನ ಮೇಲೆ ನಂಬಿಕೆ ಇಟ್ಟು ಒಂದು ಸಂಸ್ಥೆಯನ್ನು (ಕಾಂಗ್ರೆಸ್) ನನ್ನ ಕೈಯಲ್ಲಿ ಕೊಟ್ಟಾಗ, ಅದಕ್ಕೆ ಕಪ್ಪುಚುಕ್ಕೆ ಬಾರದಂತೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು. ಎಲ್ಲರನ್ನೂ ಒಗ್ಗೂಡಿಸುವುದು ನನ್ನ ಕರ್ತವ್ಯ.

• ಎಲ್ಲರನ್ನೂ ಒಗ್ಗೂಡಿಸುವಂಥದ್ದು ಕರ್ನಾಟಕದಲ್ಲಿ ಸಫಲ ಆಗಿದೆಯಾ?

ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯ ಶೇ 100ರಷ್ಟು ಒಂದೇ ಇರುವುದಿಲ್ಲ. ವ್ಯತ್ಯಾಸ ಇದ್ದೇ ಇರುತ್ತದೆ. ಕೆಲವರು ಮುನಿಸಿಕೊಳ್ಳುತ್ತಾರೆ. ವೈಮನಸ್ಸು, ಭಿನ್ನಭಿಪ್ರಾಯ ಬರುತ್ತದೆ. ಅದಕ್ಕೆ ಕಾರಣಗಳು ಹಲವು ಇರುತ್ತವೆ. ಆದರೆ, ಎಲ್ಲರ ಮನಸ್ಸಿನಲ್ಲಿ ಈ ಬಾರಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕು, ಭ್ರಷ್ಟಾಚಾರದಲ್ಲಿ ತೊಡಗಿರುವ ಸರ್ಕಾರವನ್ನು ತೆಗೆದು ಹಾಕಲೇಬೇಕೆಂಬ ಗುರಿ ಇದೆ.

*** ಹಾಗಿದ್ದರೆ, ಚುನಾವಣೆಯಲ್ಲಿ ಭ್ರಷ್ಟಾಚಾರವೇ ಪ್ರಮುಖ ವಿಷಯವೇ? ಇತರ ಯಾವುದಾದರೂ ವಿಷಯ ಇದೆಯೇ?**

ಭ್ರಷ್ಟಾಚಾರವೂ ಒಂದು. ರಾಜ್ಯದಲ್ಲಿ ಆಡಳಿತವೂ ಸರಿಯಿಲ್ಲ. ಉತ್ತಮ ಸರ್ಕಾರ ಎನಿಸಿಕೊಳ್ಳಬೇಕಾದರೆ ನಿಮ್ಮ ಅಧಿಕಾರಿಗಳೂ ಮುಖ್ಯ. ನಾನು 20 ವರ್ಷ ರಾಜ್ಯದಲ್ಲಿ ಸಚಿವನಾಗಿದ್ದೆ. 12 ಸಂಪುಟ ಉಪ ಸಮಿತಿಗಳಿಗೆ ಅಧ್ಯಕ್ಷನಾಗಿದ್ದೆ. ಯಾವಾಗಬೇಕಾದರೂ ಅಧಿಕಾರಿಗಳನ್ನು ವರ್ಗಾವಣೆ ಮಾಡಿಲ್ಲ. ಒಳ್ಳೆಯ ಅಧಿಕಾರಿಯನ್ನು ಪೂರ್ಣ ಅವಧಿವರೆಗೆ ವರ್ಗಾವಣೆ ಮಾಡುತ್ತಿರಲಿಲ್ಲ. ಕನಿಷ್ಠ ಎರಡು ವರ್ಷಕ್ಕೆ ಯಾರನ್ನೂ ವರ್ಗಾವಣೆ ಮಾಡುತ್ತಿರಲಿಲ್ಲ. ಅಭಿವೃದ್ಧಿಪರ ಇಲ್ಲದೇ ಇದ್ದಾಗ, ಸಚಿವರ ಮಾತು ಕೇಳದಿದ್ದಾಗ, ದೂರು ಬಂದಾಗ ವರ್ಗಾವಣೆ ಮಾಡಬೇಕು. ಆದರೆ, ಈ ಸರ್ಕಾರ ಮೂರು ವರ್ಷಕ್ಕೊಮ್ಮೆ ಅಧಿಕಾರಿಗಳ ವರ್ಗಾವಣೆ ಮಾಡಿದೆ. ಹೆಚ್ಚು ದುಡ್ಡು ಕೊಟ್ಟವರಿಗೆ ಆಯಕಟ್ಟಿನ ಜಾಗ ನೀಡಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

• ಈ ಸರ್ಕಾರ ಮೀಸಲಾತಿ ವಿಷಯಕ್ಕೆ ಕೈ ಹಾಕಿದೆ. ಚುನಾವಣೆ ಮೇಲೆ ಇದು ಹೇಗೆ ಪರಿಣಾಮ ಬೀರಬಹುದು?

ಮೀಸಲಾತಿ ವಿಷಯ ಸುಪ್ರೀಂ ಕೋರ್ಟ್‌ನಲ್ಲಿದೆ. ಹೀಗಾಗಿ, ಸದ್ಯಕ್ಕೆ ಈ ವಿಷಯದ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ. ಆದರೆ, ಚುನಾವಣೆಯಲ್ಲಿ ಗೊತ್ತಾಗುತ್ತದೆ. ಕೋರ್ಟ್‌ನಲ್ಲಿ ವಿಷಯ ಇರುವಾಗ ಎಐಸಿಸಿ ಅಧ್ಯಕ್ಷನಾಗಿ ನಾನು ಪ್ರತಿಕ್ರಿಯಿಸಿದರೆ ಇಡೀ ದೇಶಕ್ಕೆ ಸಂದೇಶ ಹೋಗುತ್ತದೆ.

• ಪ್ರಧಾನಿ ನರೇಂದ್ರ ಮೋದಿ ಜನಪ್ರಿಯತೆ ಬಿಜೆಪಿಗೆ ಲಾಭ ತಂದುಕೊಡಬಲ್ಲುದೇ?

ಮೋದಿ ಹೆಸರಲ್ಲಿ ನೀವು (ಬಿಜೆಪಿ) ಎಷ್ಟು ದಿನ ಹೋರಾಟ ಮಾಡುತ್ತೀರಿ? ಮೋದಿಯವರು ಕರ್ನಾಟಕದ ಮುಖ್ಯಮಂತ್ರಿ ಆಗುತ್ತಾರಾ? ಅಮಿತ್ ಶಾ ಕರ್ನಾಟಕದ ಗೃಹ ಸಚಿವ ಆಗುತ್ತಾರಾ? ಇಲ್ಲಿ ಸ್ಥಳೀಯ ಸಮಸ್ಯೆಗಳಿವೆ. ಶೇ 40 ಭ್ರಷ್ಟಾಚಾರವಿದೆ. ನೀವು (ಮೋದಿ) ರಾಜ್ಯ ಸರ್ಕಾರದ ಪರ ಎಂದು ಹೇಳುವುದಾದರೆ, ಶೇ 40 ಭ್ರಷ್ಟಾಚಾರವನ್ನು ಒಪ್ಪಿಕೊಂಡಿದ್ದಾರೆ ಎಂದಾಗುತ್ತದೆ. ‘ಮೋದಿ ಕೋ ದೇಖ್ ಕೆ ವೋಟ್ ದೋ’ (ಮೋದಿ ನೋಡಿ ಮತ ಹಾಕಿ) ಎಂದು ಹೋದ ಕಡೆಗಳಲ್ಲ ಮೋದಿ ಹೇಳುತ್ತಾರೆ. ಇದು ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ.

• ಇತ್ತೀಚಿನ ಬೆಳವಣಿಗೆಗಳಿಂದ ಲಿಂಗಾಯತ ಮತಗಳು ಕಾಂಗ್ರೆಸ್ ಪರ ಆಗಬಹುದೆಂದು ನಿರೀಕ್ಷಿಸುತ್ತೀರಾ?

ಪಕ್ಷ ಸೇರುವ ಲಿಂಗಾಯತ, ಒಕ್ಕಲಿಗ ನಾಯಕರು ತಮ್ಮ ಮತಗಳನ್ನು ಕಾಂಗ್ರೆಸ್‌ಗೆ ವರ್ಗಾಯಿಸುತ್ತಾರೆಂಬ ನಂಬಿಕೆಯಿದೆ. ಬಿಜೆಪಿಯಲ್ಲಿ ಎಲ್ಲವೂ ಸರಿಯಿಲ್ಲ ಎಂಬ ವಾಸ್ತವದ ಅರಿವಾಗಿ ಜಗದೀಶ ಶೆಟ್ಟರ್ ಅವರಂಥವರೇ ಪಕ್ಷ ತ್ಯಜಿಸಿದಾಗ, ತಮ್ಮ ನಾಯಕರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುತ್ತಿಲ್ಲವೆಂಬ ಭಾವನೆ ಅಂಥ ನಾಯಕರ ಬೆಂಬಲಿಗರಲ್ಲಿ, ಸಮುದಾಯದಲ್ಲಿ ಮೂಡುವುದು ಸಹಜ.

• ಸಿದ್ದರಾಮಯ್ಯ ಅವರಿಗೆ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಹೈಕಮಾಂಡ್ ಅವಕಾಶ ನೀಡಲಿಲ್ಲವೇಕೆ?

ತಮ್ಮ ಮೂಲ ಕ್ಷೇತ್ರ ವರುಣದಿಂದ ಸ್ಪರ್ಧಿಸುವುದಾಗಿ ಅವರೇ ಹೇಳಿದರು. ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರನ್ನು ಸೋಲಿಸಲು ಬಿಜೆಪಿ ಈಗ ಆ ಸೂತ್ರವನ್ನು (ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದು) ಅಳವಡಿಸಿಕೊಂಡಿದೆ. ಅದರಿಂದ ನಮಗೆ ಭಯ ಇಲ್ಲ. ಸಿದ್ದರಾಮಯ್ಯ ಭರ್ಜರಿ ಬಹುಮತದಿಂದ ಗೆಲ್ಲುತ್ತಾರೆ. ಇಡೀ ರಾಜ್ಯಕ್ಕೆ ಅವರ ಸೇವೆಯ ಅಗತ್ಯವಿದೆ. ಡಿ.ಕೆ. ಶಿವಕುಮಾರ್, ಜಿ. ಪರಮೇಶ್ವರ, ಎಂ.ಬಿ. ಪಾಟೀಲ ಹೀಗೆ ಎಲ್ಲರೂ ಪ್ರಚಾರಕ್ಕೆ ಬೇಕಾಗಿದ್ದಾರೆ. ಎರಡು ಸ್ಥಾನಗಳಲ್ಲಿ ಸ್ಪರ್ಧಿಸುವಂತೆ ಮಾಡಿದರೆ ಅವರು ಅಲ್ಲಿ, ಇಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ.

• ಕೇಂದ್ರ, ರಾಜ್ಯದಲ್ಲಿ ನಿಮ್ಮ ಸರ್ಕಾರ ಇದ್ದಾಗ ಜಾತಿಗಣತಿ ಆಗಿತ್ತು. ಅದನ್ನು ಬಹಿರಂಗಪಡಿಸಿಲ್ಲ. ಆದರೆ, ಈಗ ಕೇಂದ್ರಕ್ಕೆ ಪತ್ರ ಬರೆದು ಜಾತಿಗಣತಿ ಬಹಿರಂಗಕ್ಕೆ ಆಗ್ರಹಿಸಿದ್ದೀರಲ್ಲ?

ನಮ್ಮ ಸರ್ಕಾರ ಜಾತಿಗಣತಿ ಆರಂಭಿಸಿದ್ದು ನಿಜ. ನಾವು ಎಲ್ಲವನ್ನೂ ಸಿದ್ಧಪಡಿಸಿದ್ದೇವೆ. ಬಿಡುಗಡೆ ಮಾಡುವ ಉದ್ದೇಶವಿತ್ತು, ಚುನಾವಣೆ ಬಂದಿದ್ದರಿಂದ ಸಾಧ್ಯವಾಗಲಿಲ್ಲ. ಅದು ಬಹಿರಂಗ ಆಗಬೇಕಿದೆ. ಈ ವರದಿಯಿಂದಷ್ಟೆ ಪ್ರತಿ ಜಾತಿಯ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಔದ್ಯೋಗಿಕ ಸ್ಥಿತಿಗತಿ ಗೊತ್ತಾಗಲಿದೆ. ಜಾತಿಗಣತಿ ನವೀಕರಿಸದಿದ್ದರೆ, ವಿಶೇಷವಾಗಿ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಕಾರ್ಯಕ್ರಮಗಳಿಗೆ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಸಾಧ್ಯವಾಗುವುದಿಲ್ಲ. ಸರ್ಕಾರಿ, ಖಾಸಗಿ, ಸಹಕಾರ ವಲಯದ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಲು ಈ ವರದಿಯ ಅಗತ್ಯವಿದೆ. ❖

ಪ್ರಜಾ ಪತ್ರ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

‘ಪ್ರಜ್ಞಾವಂತ ನಾಯಕನನ್ನು ಆರಿಸಿ’

ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ಪಕ್ಷದ ಹಲವು ಮುಖಂಡರು ಮತದಾರರನ್ನು ಸೆಳೆಯಲು ಹಣ, ಹೆಂಡ, ಸೀರೆ, ಕುಕ್ಕರ್ ಜತೆಗೆ ಸುಳ್ಳು ಆಶ್ವಾಸನೆಗಳನ್ನು ನೀಡುತ್ತಿದ್ದಾರೆ. ಜಾತಿ- ಧರ್ಮಗಳನ್ನು ಮುಂದಿಟ್ಟುಕೊಂಡು ಮತಗಳನ್ನು ಪಡೆಯಲು ಪ್ರಯತ್ನಿಸುತ್ತಾರೆ. ಆದ್ದರಿಂದ ಪ್ರಜ್ಞಾವಂತ ಮತದಾರರು ಇಂತಹ ಯಾವುದೇ ಆಮಿಷಗಳಿಗೆ ಬಲಿಯಾಗಬಾರದು. ಜನರ ಕಷ್ಟಕ್ಕೆ ಸ್ಪಂದಿಸುವಂತಹ, ಅಭಿವೃದ್ಧಿ ಕಡೆಗೆ ಹೆಚ್ಚಿನ ಗಮನ ಹರಿಸುವಂತಹ ಪ್ರಜ್ಞಾವಂತ ನಾಯಕನನ್ನು ಆಯ್ಕೆ ಮಾಡಬೇಕಾಗಿದೆ.

ರಮೇಶ, ಕಾನಾಹೊಸಹಳ್ಳಿ, ವಿಜಯನಗರ

ಜನಪ್ರತಿನಿಧಿಗಳು ಸೆಲೆಬ್ರಿಟಿಗಳಲ್ಲ...

ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಬೇಕು. ಚುನಾವಣೆ ಸಮಯದಲ್ಲಿ ಸಾರ್ವಜನಿಕರಿಗೆ ‘ಹೌ ಆರ್ ಯು’ ಅಂತ ಕೇಳುವ ನಾಯಕರು, ಅಧಿಕಾರಕ್ಕೆ ಬಂದ ನಂತರ ‘ಹು ಆರ್ ಯು’ ಎನ್ನುವ ಧೋರಣೆ ನಿಲ್ಲಬೇಕು. ಇಲ್ಲಿ ಪ್ರಚಾರಕ್ಕೆ ಹಂಚುವ ಹಣ ಅಭಿವೃದ್ಧಿಗೆ ಬಳಸಬೇಕು. ಪ್ರಜ್ಞಾವಂತ ನಾಯಕರನ್ನು ಆಯ್ಕೆ ಮಾಡಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳು ಮತ್ತು ನಾಯಕರ ಪಾತ್ರ ಬಹಳ ಮುಖ್ಯ. ಆದರೆ, ನಮ್ಮಲ್ಲಿ ನಾಯಕರನ್ನು ದೇವರಂತೆ, ಸೆಲೆಬ್ರಿಟಿಗಳಂತೆ ನೋಡುವುದನ್ನು ನಿಲ್ಲಿಸಬೇಕು. ಅವರು ನಮ್ಮಲ್ಲೇ ಒಬ್ಬರು ಎಂಬ ಮನಸ್ಥಿತಿ ಬೆಳೆಸಿಕೊಳ್ಳಬೇಕು.

ಅನುಷಾ ಹಿರೇಮಠ, ಕೊಪ್ಪಳ

ಗಾಳಿ ಮಾತು

‘ಆಪರೇಷನ್’ ಈಗ ಇವರು, ನಂತರ ಅವರು

ರಾಜ್ಯ ರಾಜಕಾರಣದಲ್ಲಿ 2008ರ ವಿಧಾನಸಭಾ ಚುನಾವಣೆ ನಂತರ ನಡೆದಿದ್ದ ‘ಆಪರೇಷನ್’ ಅಭಿಯಾನ, 2019ರಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆದಿತ್ತು. ಕಾಂಗ್ರೆಸ್, ಜೆಡಿಎಸ್‌ನ 17 ಶಾಸಕರು ‘ಆಪರೇಷನ್ ಕಮಲ’ಕ್ಕೆ ಒಳಗಾಗಿ ಸಮ್ಮಿಶ್ರ ಸರ್ಕಾರ ಕೆಡವಲಾಗಿತ್ತು. 2023ರಲ್ಲಿ ಮತದಾನಕ್ಕೂ ಮೊದಲೇ ‘ಆಪರೇಷನ್’ ಸದ್ದು ಮಾಡುತ್ತಿದೆ.

ಟಿಕೆಟ್ ಹಂಚಿಕೆಯಲ್ಲಿ ಈ ಬಾರಿ ಬಿಜೆಪಿ ಸಾಕಷ್ಟು ಪ್ರಯೋಗಗಳನ್ನು ಮಾಡಿದೆ. ಹಲವು ಹಿರಿಯರಿಗೆ ಟಿಕೆಟ್ ನಿರಾಕರಿಸಲಾಗಿದೆ. ಬಿಜೆಪಿಯಲ್ಲಿ ಟಿಕೆಟ್ ಸಿಗದೇ ಹತಾಶೆಗೊಂಡವರನ್ನು ವಿಶೇಷ ವಿಮಾನ, ಹೆಲಿಕಾಪ್ಟರ್ ಮೂಲಕ ಕರೆ ತಂದು ಪಕ್ಷಕ್ಕೆ ಸೇರಿಸಿಕೊಳ್ಳುತ್ತಿರುವ ಕಾಂಗ್ರೆಸ್, ಅವರಿಗೆ ಪಕ್ಷದ ಟಿಕೆಟ್ ಸಹ ಖಾತ್ರಿಪಡಿಸಿದೆ. ಕಾಂಗ್ರೆಸ್‌ನ ಮಿಂಚಿನ ‘ಆಪರೇಷನ್’ನಿಂದಾಗಿ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್, ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿಯಂತಹ ಘಟಾನುಘಟಿಗಳು ಕಾಂಗ್ರೆಸ್ ಕುಟುಂಬ ಸೇರಿದ್ದಾರೆ. ಅತ್ತ ಜೆಡಿಎಸ್ ಸಹ ಬಿಜೆಪಿಯಿಂದ ಬಂದ ಹಲವರಿಗೆ ‘ಆಪರೇಷನ್’ ಮಾಡಿದೆ. ಮಾಜಿ ಸಚಿವ ಮಾಲಕರೆಡ್ಡಿ, ಮೂಡಿಗೆರೆ ಶಾಸಕ ಎಂ.ಪಿ.ಕುಮಾರಸ್ವಾಮಿ, ಯಡಿಯೂರಪ್ಪ ಸಂಬಂಧಿ ಎನ್.ಆರ್. ಸಂತೋಷ ಮೊದಲಾದವರು ಜೆಡಿಎಸ್ ತೆಕ್ಕೆಗೆ ಜಾರಿದ್ದಾರೆ.

‘ಕಾಂಗ್ರೆಸ್, ಜೆಡಿಎಸ್ ಈಗ ಆಪರೇಷನ್ ಮಾಡಲಿ. ಯಾರೊಬ್ಬರೂ ತಲೆ ಕೆಡಿಸಿಕೊಳ್ಳುವುದು ಬೇಡ. ಅತಿ ಹೆಚ್ಚು ಸ್ಥಾನ ಗೆಲ್ಲಿಸಿಕೊಂಡು ಬನ್ನಿ. ದೇಶದ ರಾಜಕಾರಣದಲ್ಲೇ ಮೊದಲ ‘ಆಪರೇಷನ್’ ಮಾಡಿದ ಖ್ಯಾತಿ ಕರ್ನಾಟಕದ ನಮ್ಮ ಪಕ್ಷದ ಹೆಸರಿನಲ್ಲಿದೆ. ನಂತರ ನಾವು ಈ ಪ್ರಯೋಗವನ್ನು ರಾಜಸ್ಥಾನ, ಮಹಾರಾಷ್ಟ್ರ, ಗೋವಾ ಮತ್ತಿತರ ರಾಜ್ಯಗಳಲ್ಲಿ ಯಶಸ್ವಿಯಾಗಿ ಪ್ರಯೋಗಿಸಿದ್ದೇವೆ. ಫಲಿತಾಂಶದ ನಂತರ ಎಷ್ಟೇ ಸ್ಥಾನ ಬಂದರೂ ಸರ್ಕಾರ ನಮ್ಮದೇ’ ಎಂದು ಆಪರೇಷನ್ ತಜ್ಞರು ರಾಜ್ಯ ನಾಯಕರಿಗೆ ಭರವಸೆ ಕೊಟ್ಟಿದ್ದಾರಂತೆ. ಅದೇ ಖುಷಿಯಲ್ಲಿ ಕೇಸರಿ ಪಡೆ ಚುನಾವಣಾ ಅಖಾಡಕ್ಕೆ ಇಳಿದಿದೆಯಂತೆ.

ವೋಟಿಗಾಗಿ... ಮಂಗಳೂರು ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಿ ವೇದವ್ಯಾಸ ಕಾಮತ್ ನಾಮಪತ್ರ ಸಲ್ಲಿಸಲು ಹೋಗುವಾಗ ಹಿರಿಯರೊಬ್ಬರ ಆಶೀರ್ವಾದ ಪಡೆದರು

ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಮಂಡಕ್ಕಿ, ಚಹಾಗೆ ಮನಸೋತ ರಾಹುಲ್

ಹುಮನಾಬಾದ್ (ಬೀದರ್): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹುಮನಾಬಾದ್ ಹಳೆಯ ತಹಶೀಲ್ದಾರ್ ಕಚೇರಿ ಬಳಿಯಿರುವ ಚಿಕ್ಕ ಹೋಟೆಲ್‌ನಲ್ಲಿ ಖೋವಾ, ಜಾಮೂನ್, ಮಂಡಕ್ಕಿ ಮತ್ತು ಚಹಾ ಸವಿದರು.

ಜನಕ್ರಾಂತಿ ಸಮಾವೇಶದಲ್ಲಿ ಪಾಲ್ಗೊಂಡ ಬಳಿಕ ಹೈದರಾಬಾದ್‌ನತ್ತ ಶಾಸಕ ರಾಜಶೇಖರ ಪಾಟೀಲ ಅವರೊಂದಿಗೆ ಕಾರಿನಲ್ಲಿ ಸಾಗುತ್ತಿದ್ದ ವೇಳೆ ಕಿಟಕಿಯಿಂದ ಹೊರಗೆ ನೋಡುತ್ತ ‘ಇಲ್ಲಿ ಚೆನ್ನಾಗಿ ಚಹಾ ಸಿಗುವುದೇ’ ಎಂದರು.

ತಕ್ಷಣವೇ ರಾಜಶೇಖರ ಪಾಟೀಲ ಅವರು ಹಳೆಯ ತಹಶೀಲ್ದಾರ್ ಕಚೇರಿ ಮುಂಭಾಗದ ಎಸ್.ಎಂ. ಸ್ವೀಟ್ಸ್ ಮತ್ತು ಟಿಫಿನ್ ಸೆಂಟರ್ ಬಳಿ ಕರೆದೊಯ್ದರು. ತಿಂಡಿ ಮತ್ತು ಚಹಾ ರುಚಿಕಟ್ಟಾಗಿರುವುದಕ್ಕೆ ಟಿಫಿನ್ ಸೆಂಟರ್ ಮಾಲೀಕರಿಗೆ ಅಭಿನಂದಿಸಿದರು.

‘ರಾಹುಲ್ ಗಾಂಧಿ ಕಾರಿನಿಂದ ಇಳಿದು ನೇರವಾಗಿ ನಮ್ಮ ಹೋಟೆಲ್‌ಗೆ ತಿಳಿಯದಾಯಿತು. ಗೌಡರು ಸಹ ಜತೆಗಿದ್ದರಿಂದ ಧೈರ್ಯ ಬಂತು. ರಾಜಶೇಖರ ಪಾಟೀಲ ಉಪಾಹಾರದ ಬಿಲ್ ಪಾವತಿಸಿದರು’ ಎಂದು ಟಿಫಿನ್ ಸೆಂಟರ್ ಮಾಲೀಕ ಸೈಯದ್ ಮೊಯಿನ್ ಅಲಿ ‘ಪ್ರಜಾವಾಣಿ’ಗೆ ತಿಳಿಸಿದರು.

ಹುಮನಾಬಾದ್‌ನಲ್ಲಿ ಮಂಡಕ್ಕಿ ಮತ್ತು ಚಹಾ ಸವಿದ ಬಳಿಕ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಟಿಫನ್ ಸೆಂಟರ್ ಮಾಲೀಕ ಸೈಯದ್ ಮೊಯಿನ್ ಅಲಿ ಜೊತೆ ಮಾತನಾಡಿದರು. ಶಾಸಕ ರಾಜಶೇಖರ ಪಾಟೀಲ, ವಿಧಾನ ಪರಿಷತ್ ಸದಸ್ಯ ಡಾ.ಚಂದ್ರಶೇಖರ ಪಾಟೀಲ ಇದ್ದಾರೆ

ಸೆಲೆಬ್ರಿಟಿ ಮಾತು

ನಿದ್ರೆ, ಆಹಾರಗಳಷ್ಟೇ ಮತದಾನ ಅನಿವಾರ್ಯ

ಡಾ.ಅಲ್ಲಮಪ್ರಭು ಸ್ವಾಮೀಜಿ
ನಾಗನೂರ ರುದ್ರಾಕ್ಷಿಮಠ, ಬೆಳಗಾವಿ

ಮತ ಚಲಾವಣೆಯು ನಮ್ಮ ನಿದ್ರೆ, ಆಹಾರಗಳಷ್ಟೇ ಅನಿವಾರ್ಯ. ಪ್ರತಿಯೊಬ್ಬರೂ ತಮ್ಮ ಹಕ್ಕು ಚಲಾಯಿಸದಿದ್ದರೆ, ಕಡಿಮೆ ಪ್ರಮಾಣದ ಮತದಾನವಾಗಿ ಉತ್ತಮ ವ್ಯಕ್ತಿ ಸೋಲುವ ಸಂದರ್ಭ ಬರಬಹುದು. ಹಣ, ತೋಳ್ಬಲ ಇದ್ದವರೇ ಗೆಲ್ಲಬಹುದು. ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು. ಜನರ ಸೇವೆಯನ್ನು ನಿಸ್ವಾರ್ಥದಿಂದ ಮಾಡುವ ಮತ್ತು ಯಾವುದೇ ಫಲಾಪೇಕ್ಷೆ ಇಲ್ಲದವರಿಗೆ ಮತ ನೀಡಬೇಕು. ‘ಜನನಾಯಕ’ ಎನ್ನುವ ಮುಖವಾಡ ಹೊಂದಿದವರಿಗಿಂತ, ‘ಜನ ಸೇವಕ’ ಎಂಬ ಆಶಯದಿಂದ ಕೆಲಸ ಮಾಡುವವರಿಗೆ ‘ಹಕ್ಕು’ ಚಲಾಯಿಸಿದರೆ ಉತ್ತಮ.

ಮಾತಿನೇಟು

ಜಗದೀಶ ಶೆಟ್ಟರ್ ರಾಜಕಾರಣಕ್ಕೆ ಬರುವಾಗ ಲಿಂಗಾಯತ ನಾಯಕ ಎಂದು ಬಿಂಬಿಸಿರಲಿಲ್ಲ. ರಾಷ್ಟ್ರೀಯತೆಯ ವಿಚಾರಧಾರೆ, ಹಿಂದುತ್ವದ ಆಧಾರದಲ್ಲಿ ಪಕ್ಷ ಅವರನ್ನು ಶಕ್ತಿಯನ್ನಾಗಿ ಮಾಡಿತ್ತು. ಅಧಿಕಾರದ ದಾಹಕ್ಕಾಗಿ ಅವರು ಆಡಿ-ಬೆಳೆದ ಪಕ್ಷ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದು ದುಃಖದ ಸಂಗತಿ.

ಅರವಿಂದ ಬೆಲ್ಲದ, ಶಾಸಕ, ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರ

ಒಂದೊಮ್ಮೆ ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾದರೆ ಸದನದಲ್ಲಿ ಚರ್ಚೆಯ ವೇಳೆ ಗೋ ಹತ್ಯೆಯನ್ನು ಸಮರ್ಥಿಸುತ್ತೀರಾ? ಪಿಎಫ್‌ಐ ಸಂಘಟನೆ ಮೇಲಿನ ನಿರ್ಬಂಧವನ್ನು ತೆರವುಗೊಳಿಸುವಂತೆ ಕೋರುತ್ತೀರಾ?

ಕೆ.ಎಸ್. ಈಶ್ವರಪ್ಪ, ಬಿಜೆಪಿ ಶಾಸಕ
(ಜಗದೀಶ ಶೆಟ್ಟರ್‌ಗೆ ಪ್ರಶ್ನೆ)



ನಮ್ಮಲ್ಲಿ ಜಗದೀಶ ಶೆಟ್ಟರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಲಾಗಿತ್ತು. ಇಷ್ಟು ದಿನ ಸಜ್ಜನರ ಸಂಗದಲ್ಲಿದ್ದ ಅವರು, ಈಗ ದುರ್ದೈವದಿಂದ ದುರ್ಜನರ ಸಂಗ ಮಾಡಿದ್ದಾರೆ. ಮುಂದಿನ ಪರಿಣಾಮವನ್ನು ಅವರೇ ಎದುರಿಸುತ್ತಾರೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಲಿಂಗಾಯತ ಸಮುದಾಯದ ನಾಯಕರಾದ ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ, ಇತರರು ಪಕ್ಷ ಬಿಟ್ಟು ಹೋಗಿದ್ದಕ್ಕೆ ಬೇಸರ ಇಲ್ಲ. ಪಕ್ಷದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಅವರ ಜಾಗದಲ್ಲಿ ಯುವ ಲಿಂಗಾಯತ ನಾಯಕರಿಗೆ ಟಿಕೆಟ್ ನೀಡುತ್ತೇವೆ. ಇಬ್ಬರೂ ನಾಯಕರಿಗೆ ಎಲ್ಲ ಸ್ಥಾನಮಾನ ಕೊಟ್ಟರೂ ಪಕ್ಷ ಬಿಟ್ಟು ಹೋಗಿದ್ದಾರೆ. ಮುಂದೆ ಅನುಭವಿಸುತ್ತಾರೆ. ಪಕ್ಷದ ಕಾರ್ಯಕರ್ತರಿಗೂ ಸ್ಥಾನಮಾನ ಸಿಗಬೇಕು. ಬಿಜೆಪಿ ಕಾರ್ಯಕರ್ತರಿಗೆ ಅವಕಾಶ ಒದಗಿಸಲಾಗುವುದು.

ಅರುಣ್ ಸಿಂಗ್, ಬಿಜೆಪಿ ರಾಜ್ಯ ಉಸ್ತುವಾರಿ

ಪಿಎಸ್‌ಐ ಹಗರಣದ ಕಿಂಗ್‌ಪಿನ್ ನಾಮಪತ್ರ ಸಲ್ಲಿಕೆ

ಅಫಜಲಪುರ (ಕಲಬುರಗಿ ಜಿಲ್ಲೆ): ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣದಲ್ಲಿ ಆರೋಪಿಯಾಗಿರುವ ಆರ್.ಡಿ.ಪಾಟೀಲ ಅವರು ಸೋಮವಾರ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು.

ಪ್ರಕರಣದ ಹಿನ್ನೆಲೆಯಲ್ಲಿ ಕಲಬುರಗಿಯ ಕಾರಾಗೃಹದಲ್ಲಿರುವ ಅವರನ್ನು ಪೊಲೀಸರು ವಾಹನದಲ್ಲಿ ಕರೆ ತಂದರು. ಅವರನ್ನು ಸ್ವಾಗತಿಸಲು ಭಾರಿ ಪ್ರಮಾಣದಲ್ಲಿ ಜನರು ಸೇರಿದ್ದರು. ವಾಹನಕ್ಕೆ ಹೂಗಳನ್ನು ಚೆಲ್ಲಿ ಸ್ವಾಗತ ಕೋರಲಾಯಿತು. ಬಿಗಿ ಭದ್ರತೆಯಲ್ಲಿ ನಾಮಪತ್ರ ಸಲ್ಲಿಸಿದ ಬಳಿಕ ಪುನಃ ಕಾರಾಗೃಹಕ್ಕೆ ಪೊಲೀಸರು ಕರೆದೊಯ್ದರು.

ಪಿಎಸ್‌ಐ, ಲೋಕೋಪಯೋಗಿ ಇಲಾಖೆಯ ಎಇ, ಜೆಇ ನೇಮಕಾತಿ ಪ್ರಕರಣದಲ್ಲಿ ಅಕ್ರಮ ಎಸಗಿದ್ದ ಆರ್.ಡಿ. ಪಾಟೀಲ ವಿರುದ್ಧ ಕಲಬುರಗಿ, ಬೆಂಗಳೂರು, ತುಮಕೂರು, ಧಾರವಾಡ, ಯಾದಗಿರಿ ಪೊಲೀಸ್ ಠಾಣೆಗಳಲ್ಲಿ 16 ಪ್ರಕರಣಗಳು ದಾಖಲಾಗಿವೆ.

ಚುನಾವಣೆ ಮುಗಿಯುವವರೆಗೆ ವಿವಿಧ ನ್ಯಾಯಾಲಯಗಳಲ್ಲಿ ನಡೆಯುತ್ತಿರುವ ವಿಚಾರಣೆಗೆ ತಡೆ ನೀಡಬೇಕು ಎಂದು ಆಗ್ರಹಿಸಿ ಆರ್.ಡಿ. ಪಾಟೀಲ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಕಲಬುರಗಿ ಪೀಠವು ಮುಂದಿನ ವಿಚಾರಣೆವರೆಗೆ ಯಾವುದೇ ಪ್ರಕರಣದ ವಿಚಾರಣೆ ನಡೆಸದಂತೆ ತಡೆಯಾಜ್ಞೆ ನೀಡಿದೆ ಎಂದು ಆರ್.ಡಿ. ಪಾಟೀಲ ಚುನಾವಣಾಧಿಕಾರಿಗಳಿಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಕಲಬುರಗಿ ಜಿಲ್ಲೆಯ ಅಫಜಲಪುರದಲ್ಲಿ ನಾಮಪತ್ರ ಸಲ್ಲಿಸಿದ ಬಳಿಕ ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣದ ಆರೋಪಿ ಆರ್.ಡಿ.ಪಾಟೀಲ ಅವರನ್ನು ಪೊಲೀಸರು ಕಾರಾಗೃಹಕ್ಕೆ ಕರೆದೊಯ್ದರು

ಕಲಬುರಗಿ: ಚಿತ್ತಾಪುರದ ಮಾಜಿ ಶಾಸಕ ವಿಶ್ವನಾಥ ಪಾಟೀಲ ಹೆಬ್ಬಾಳ ಬಿಜೆಪಿಗೆ ರಾಜೀನಾಮೆ ನೀಡಿದ್ದು, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಪಾಟೀಲ ಅವರಿಗೆ ರವಾನಿಸಿದ್ದಾರೆ.

ಚಿತ್ತಾಪುರ ವಿಧಾನಸಭಾ ಕ್ಷೇತ್ರದಿಂದ ರೌಡಿಶೀಟರ್ ಮಣಿಕಂಠ ರಾಠೋಡಗೆ ಬಿಜೆಪಿ ಟಿಕೆಟ್ ನೀಡಿತ್ತು. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದರು

ಸಂಸದ ಸಂಗಣ್ಣ ಬದಲು ಸೊಸೆಗೆ ಟಿಕೆಟ್

ಕೊಪ್ಪಳ: ತೀವ್ರ ಕುತೂಹಲಕ್ಕೆ ಕಾರಣವಾಗಿದ್ದ ಕೊಪ್ಪಳ ಕ್ಷೇತ್ರದ ಬಿಜೆಪಿ ಟಿಕೆಟ್ ಸಂಸದ ಸಂಗಣ್ಣ ಕರಡಿ ಅವರ ಸೊಸೆ ಮಂಜುಳಾ ಅಮರೇಶ ಕರಡಿ ಅವರಿಗೆ ನೀಡಲಾಗಿದೆ.

ಪಂಚಮಸಾಲಿ ಸಮುದಾಯಕ್ಕೆ ಸೇರಿದ 39 ವರ್ಷದ ಮಂಜುಳಾ ಬಿ.ಎಸ್ಸಿ ಪದವೀಧರೆ. ಇವರ ಪತಿ ಹಾಗೂ ಸಂಸದರ ಹಿರಿಯ ಪುತ್ರ ಅಮರೇಶ ಕರಡಿ 2018ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಕೊಪ್ಪಳ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. ಮಂಜುಳಾ ಅವರು ಕೊಪ್ಪಳ ಕ್ಷೇತ್ರದಿಂದ ಬಿಜೆಪಿಯಿಂದ ಟಿಕೆಟ್ ಗಿಟ್ಟಿಸಿದ ಎರಡನೇ ಮಹಿಳೆ ಆಗಿದ್ದಾರೆ. 1994ರಲ್ಲಿ ಕಾಶಮ್ಮ ಶಂಕರಗೌಡ ಎಂಬುವರು ಬಿಜೆಪಿಯಿಂದ ಸ್ಪರ್ಧಿಸಿ, ಸೋತಿದ್ದರು.

‘ಕೊಪ್ಪಳ ಕ್ಷೇತ್ರದ ಟಿಕೆಟ್ ನನಗೆ ನೀಡಬೇಕು’ ಎಂದು ಸಂಗಣ್ಣ ಬಿಗಿಪಟ್ಟು ಹಿಡಿದಿದ್ದರು. ಮೊದಲು ಸಂಸದರು ಮತ್ತು ಅವರ ಕುಟುಂಬದವರಿಗೆ ಟಿಕೆಟ್ ನೀಡುವುದಿಲ್ಲ ಎಂದು ಪಕ್ಷದ ವರಿಷ್ಠರು ಹೇಳಿದ್ದರು.

ಮಂಜುಳಾ ಕರಡಿ

ಇದರಿಂದ ಸಿಟ್ಟಿಗೆದ್ದ ಅವರು ಭಾನುವಾರ ನಗರದಲ್ಲಿ ಶಕ್ತಿ ಪ್ರದರ್ಶನ ಮಾಡಿ, ‘ಪಕ್ಷ ನನಗೆ ಟಿಕೆಟ್ ಕೊಡದಿದ್ದರೆ, ಪಕ್ಷೇತರ ಅಥವಾ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸುವೆ’ ಎಂದಿದ್ದರು.

ದೆಹಲಿಗೆ ಹೋಗಲು ಸಿದ್ಧತೆ ನಡೆಸಿದ್ದ ಅವರನ್ನು ಪಕ್ಷದ ವರಿಷ್ಠರು ಬೆಂಗಳೂರಿನಲ್ಲೇ ತಡೆದು, ಮತ್ತೊಂದು ಸುತ್ತು ಚರ್ಚೆಗೆ ಆಹ್ವಾನಿಸಿದ್ದರು. ‘ನಿಮ್ಮ ಕುಟುಂಬದವರಿಗೆ ಟಿಕೆಟ್ ನೀಡಲಾಗುವುದು’ ಎಂದು ಪಕ್ಷದ ವರಿಷ್ಠರು ಹೇಳಿ ಕಗ್ಗಂಟು ಪರಿಹರಿಸಿದರು.

ಪತಿ ಪರವಾಗಿ ಪತ್ನಿ ನಾಮಪತ್ರ ಸಲ್ಲಿಕೆ

ಧಾರವಾಡ: ಧಾರವಾಡ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿನಯ ಕುಲಕರ್ಣಿ ಪರವಾಗಿ ಪತ್ನಿ ಶಿವಲೀಲಾ ಕುಲಕರ್ಣಿ ಸೋಮವಾರ ನಾಮಪತ್ರ ಸಲ್ಲಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ ‘ಪತಿ ಪರವಾಗಿ ಕಾನೂನಿನನ್ವಯ ನಾಮಪತ್ರ ಸಲ್ಲಿಸಿದ್ದೇನೆ. ಮಂಗಳವಾರ ಅವರ ಜಿಲ್ಲಾ ಪ್ರವೇಶ ಕುರಿತಂತೆ ಕೋರ್ಟ್ ಆದೇಶ ಹೊರಬೀಳಲಿದೆ. ಜಿಲ್ಲಾ ಪ್ರವೇಶಕ್ಕೆ ಅವಕಾಶ ಸಿಕ್ಕರೆ ಪತಿ ಬೆಂಬಲಿಗರೊಂದಿಗೆ ಮತ್ತೊಮ್ಮೆ ನಾಮಪತ್ರ ಸಲ್ಲಿಸಲಿದ್ದಾರೆ’ ಎಂದು ತಿಳಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾ ಚುನಾವಣಾಧಿಕಾರಿ ಗುರುದತ್ತ ಹೆಗಡೆ, ‘ವಿನಯ ಕುಲಕರ್ಣಿ ಜಿಲ್ಲಾ ಪ್ರವೇಶಕ್ಕೆ ಕೋರ್ಟ್ ನಿಷೇಧ ಹೇರಿದೆ. ಆದರೆ, ಸೂಚಕರ ಮೂಲಕ ಅಥವಾ ಆನ್‌ಲೈನ್ ಮೂಲಕ ಅವರಿಗೆ ನಾಮಪತ್ರ ಸಲ್ಲಿಸಲು ಅವಕಾಶ ಇದೆ’ ಎಂದರು.

ಇಂದು ರಾಮದಾಸ್ ನಿರ್ಧಾರ

ಮೈಸೂರು: ‘30 ವರ್ಷಗಳಿಂದ ಇದ್ದ ತಾಯಿ ಮನೆಯಿಂದ ಓಡಿಸಿದ್ದಾರೆ. ಪಕ್ಷದಲ್ಲಿ ಇರುತ್ತೇನೆಯೋ, ಇಲ್ಲವೋ ಎನ್ನುವುದನ್ನು ಮಂಗಳವಾರ ಸಂಜೆ ತಿಳಿಸುತ್ತೇನೆ’ ಎಂದು ಕೃಷ್ಣರಾಜ ಕ್ಷೇತ್ರದ ಬಿಜೆಪಿ ಟಿಕೆಟ್ ವಂಚಿತರಾದ, ಶಾಸಕ ಎಸ್.ಎ.ರಾಮದಾಸ್ ಸುದ್ದಿಗಾರರಿಗೆ ತಿಳಿಸಿದರು.

ರಾಮದಾಸ್ ಭೇಟಿಗೆಂದು ಅವರ ಮನೆಗೆ ಪಕ್ಷದ ಟಿಕೆಟ್ ಪಡೆದಿರುವ ಟಿ.ಎಸ್. ಶ್ರೀವತ್ಸ, ಸಂಸದ ಪ್ರತಾಪ ಸಿಂಹ, ಮುಖಂಡ ಮೈ.ವಿ.ರವಿಶಂಕರ್ ಬಂದಿದ್ದರು. ಆದರೆ ರಾಮದಾಸ್ ಅವರು ಭೇಟಿಗೆ ಒಪ್ಪಲಿಲ್ಲ.

ಸುಭಾಷಿತ

ಪ್ರತಿ ಮುಂಜಾವಿನಲ್ಲೂ ನಮಗೆ ಮರುಹುಟ್ಟು. ಇಂದು ನಾವು ಏನು ಮಾಡುತ್ತೇವೆ ಎಂಬುದು ಅತ್ಯಂತ ಮುಖ್ಯವಾಗುತ್ತದೆ. **-ಗೌತಮ ಬುದ್ಧ**

ಉತ್ತರಪ್ರದೇಶದಲ್ಲಿ ಎನ್‌ಕೌಂಟರ್ ಹತ್ಯೆ: ದಿಗಿಲುಗೊಳಿಸುವ ವಿದ್ಯಮಾನ

ಉತ್ತರಪ್ರದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದುಬಿದ್ದಿದೆ ಎಂಬುದಕ್ಕೆ, ಪೊಲೀಸರ ಸುಪರ್ದಿಯಲ್ಲಿದ್ದ ಪಾತಕಿ ಮತ್ತು ರಾಜಕಾರಣಿ ಅತೀಕ್ ಅಹಮದ್ ಹಾಗೂ ಆತನ ತಮ್ಮನನ್ನು ಸಾರ್ವಜನಿಕವಾಗಿ ಮಾಧ್ಯಮ ಪ್ರತಿನಿಧಿಗಳ ಎದುರಿನಲ್ಲೇ ಗುಂಡು ಹೊಡೆದು ಸಾಯಿಸಿರುವುದಕ್ಕಿಂತ ಒಳ್ಳೆಯ ಪುರಾವೆ ಬೇಕಿಲ್ಲ. ಇದು ಪ್ರಯಾಗರಾಜ್‌ನಲ್ಲಿ ಶನಿವಾರ ನಡೆದಿದೆ. ಅತೀಕ್‌ನ ಮಗ ಅಸದ್ ಅಹಮದ್ ಮತ್ತು ಅವನ ಗೆಳೆಯ ಗುಲಾಂ ಹಸನ್‌ನನ್ನು ಪೊಲೀಸ್ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದ ಎರಡು ದಿನಗಳ ಬಳಿಕ ಈ ಜೋಡಿ ಹತ್ಯೆ ಆಗಿದೆ. ಕಾನೂನಿಗೆ ಕಿಮ್ಮತ್ತೇ ಇಲ್ಲ ಎಂಬ ವ್ಯವಸ್ಥೆಯ ಪ್ರತೀಕವಾಗಿ ಈ ಹತ್ಯೆಗಳು ಕಾಣಿಸುತ್ತಿವೆ. ಇಂತಹ ಸರಣಿ ದಾಳಿಗಳು ಮುಖ್ಯವಾಗಿ ಅಲ್ಪಸಂಖ್ಯಾತ ಸಮುದಾಯದ ವ್ಯಕ್ತಿಗಳನ್ನು ಗುರಿಯಾಗಿಸಿಕೊಂಡೇ ನಡೆಯುತ್ತಿವೆ ಎಂಬುದು ಗಮನಾರ್ಹ. ಈ ರೀತಿಯ ದಾಳಿಗಳು ಸರ್ಕಾರಕ್ಕೆ ಕೆಟ್ಟ ಹೆಸರು ತರುತ್ತವೆ. ಎನ್‌ಕೌಂಟರ್‌ಗಳು ಮತ್ತು ಸರಿಯಾದ ಪ್ರಕ್ರಿಯೆ ಅನುಸರಿಸದೆ ಕೈಗೊಳ್ಳುವ ಕ್ರಮಗಳ ಕುರಿತಂತೆ ಟೀಕೆ ಬಂದರೂ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರವು ಇಂತಹ ಕ್ರಮಗಳಿಂದ ಹಿಂದಕ್ಕೆ ಸರಿಯುವ ಪ್ರಶ್ನೆಯೇ ಇಲ್ಲ ಎಂಬಂತೆ ವರ್ತಿಸುತ್ತಿದೆ. ಅಲ್ಪಸಂಖ್ಯಾತ ಸಮುದಾಯದವರ ಹತ್ಯೆ ಮತ್ತು ಅವರ ಮೇಲೆ ಕೈಗೊಳ್ಳುವ ಹಗೆತನದ ಕ್ರಮಗಳು ಈ ಸರ್ಕಾರದ ಸಾರ್ವಜನಿಕ ನೀತಿಯೇ ಆಗಿವೆ.

ಪೊಲೀಸರೇ ಕಾನೂನನ್ನು ಕೈಗೆತ್ತಿಕೊಂಡರೆ, ಸಂವಿಧಾನದ ಮೂಲಕ ಸ್ಥಾಪಿತವಾದ ಕಾನೂನು ಮತ್ತು ಸುವ್ಯವಸ್ಥೆಯೇ ಬಿದ್ದುಹೋಗುತ್ತದೆ

ಎರಡೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಹುಸಂ ಸರಿಯಾದ ಉತ್ತರಗಳು ಸಿಗದ ಹಲವು ಪ್ರಶ್ನೆಗಳು ಹುಟ್ಟಿಕೊಂಡಿವೆ. ಅತೀಕ್ ಮತ್ತು ಆತನ ತಮ್ಮನನ್ನು ರಾತ್ರಿಯ ಹೊತ್ತಿನಲ್ಲಿ ಸಮರ್ಪಕ ಭದ್ರತೆ ಇಲ್ಲದೆ ವೈದ್ಯಕೀಯ ಪರೀಕ್ಷೆಗೆ ಒಯ್ಯುವ ಅಗತ್ಯ ಏನಿತ್ತು ಎಂಬ ಪ್ರಶ್ನೆ ಇದೆ. ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕಿದ್ದ ಅತೀಕ್ ಅಹಮದ್, ಭದ್ರತೆ ಒದಗಿಸಬೇಕು ಎಂದು ಕೆಲವೇ ದಿನಗಳ ಹಿಂದೆ ಕೋರಿದ್ದ. 'ರಾಜ್ಯದ ಆಡಳಿತ ವ್ಯವಸ್ಥೆಯು ಭದ್ರತೆಯನ್ನು ನೋಡಿಕೊಳ್ಳುತ್ತದೆ' ಎಂದು ಕೋರ್ಟ್ ಹೇಳಿತ್ತು. ಅತೀಕ್ ಮತ್ತು ಆತನ ಸಹೋದರನ ಮೇಲೆ ಅಪರಾಧ ಪ್ರಕರಣಗಳು ಇವೆ. ಆದರೆ, ಅಪರಾಧಿ ಆಗಿರಲಿ ಅಲ್ಲದಿರಲಿ, ಯಾವುದೇ ವ್ಯಕ್ತಿಯನ್ನು ಕೊಲ್ಲುವ ಅಧಿಕಾರ ಸರ್ಕಾರಕ್ಕೆ ಇಲ್ಲ. ಎಷ್ಟೇ ಹೀನ ಕೃತ್ಯ ಎಸಗಿದವರೇ ಆಗಿರಲಿ, ಕಾನೂನಿನ ಪ್ರಕ್ರಿಯೆಯ ಅವಕಾಶ ಅವರಿಗೆ ದೊರೆಯಬೇಕು. ಇಲ್ಲದಿದ್ದರೆ, ಸಮಾಜವು ಅರಾಜಕತೆಯತ್ತ ಸಾಗುತ್ತದೆ. ಈಗಿನ ಕೊಲೆ ಸರಣಿಯು ಬಿಎಸ್‌ಪಿ ಶಾಸಕ ರಾಜು ಪಾಲ್ ಕೊಲೆಯೊಂದಿಗೆ 2005ರಲ್ಲಿ ಆರಂಭವಾಯಿತು. ಈ ಪ್ರಕರಣದಲ್ಲಿ ಅತೀಕ್ ಅಹಮದ್ ಆರೋಪಿ. ಆತ ಮತ್ತು ಆತನ ಸಹೋದರನ ಮೇಲೆ ಹಲವಾರು ಪ್ರಕರಣಗಳು ಇದ್ದವು.

ಎನ್‌ಕೌಂಟರ್ ಹತ್ಯೆಗಳು ಉತ್ತರಪ್ರದೇಶದಲ್ಲಿ ಈಗ ರೂಢಿಯೇ ಆಗಿಬಿಟ್ಟಿವೆ. ಅತೀಕ್ ಅಹಮದ್ ಮಗನ ಹತ್ಯೆಯೊಂದಿಗೆ ಈ ತಿಂಗಳಲ್ಲಿ ಉತ್ತರಪ್ರದೇಶದಲ್ಲಿ ಮೂರು ಎನ್‌ಕೌಂಟರ್ ಹತ್ಯೆಗಳು ನಡೆದಂತಾಗಿದೆ. ಆದಿತ್ಯನಾಥ ನೇತೃತ್ವದ ಸರ್ಕಾರವು ಅಸ್ತಿತ್ವಕ್ಕೆ ಬಂದ ಬಳಿಕ ರಾಜ್ಯದಲ್ಲಿ 183 ಪೊಲೀಸ್ ಎನ್‌ಕೌಂಟರ್ ಹತ್ಯೆಗಳು ನಡೆದಿವೆ. ಸರ್ಕಾರವು ನ್ಯಾಯಾಂಗ ತನಿಖೆಗೆ ಈಗ ಆದೇಶಿಸಿದೆ; ಕೆಲವು ಅಧಿಕಾರಿಗಳನ್ನು ಅಮಾನತು ಮಾಡಿದೆ. ಆದರೆ, ಈ ಸರ್ಕಾರಕ್ಕೆ ಸಹಾನುಭೂತಿ ಇರುವುದು ಯಾರ ಕುರಿತು ಎಂಬುದು ಈವರೆಗಿನ ನಡವಳಿಕೆಯಿಂದ ಸ್ಪಷ್ಟವಾಗಿದೆ. ಎನ್‌ಕೌಂಟರ್ ನಡೆಸಿದ ಪೊಲೀಸರನ್ನು ಸರ್ಕಾರವು ಹಿಂದೆ ಹೊಗಳಿತ್ತು ಮತ್ತು ಪ್ರತೀಕಾರ ಕ್ರಮಗಳಿಂದ ಅವರನ್ನು ರಕ್ಷಿಸಿತ್ತು. ಪೊಲೀಸರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ, ಕಾನೂನನ್ನು ಕೈಗೆತ್ತಿಕೊಂಡರೆ ಸಂವಿಧಾನದ ಮೂಲಕ ಸ್ಥಾಪಿತವಾದ ಕಾನೂನು ಮತ್ತು ಸುವ್ಯವಸ್ಥೆಯೇ ಬಿದ್ದುಹೋಗುತ್ತದೆ. ಬುಲ್ಡೋಜರ್‌ಗಳು ಮತ್ತು ಬಂದೂಕುಗಳೇ ಉತ್ತರಪ್ರದೇಶದ ಆಳ್ವಿಕೆಯ ಸಾಧನಗಳು. ಇವುಗಳ ಬಳಕೆಯನ್ನು ಸಾಂಸ್ಥಿಕಗೊಳಿಸಲಾಗಿದೆ ಮತ್ತು ಯಾವುದೇ ಎಗ್ಗಿಲ್ಲದೆ ಅದನ್ನು ಸಮರ್ಥನೆ ಮಾಡಿಕೊಳ್ಳಲಾಗುತ್ತಿದೆ. ಸರ್ಕಾರವು ಪೌರರ ಮೇಲೆ ಕಾನೂನನ್ನು ಮೀರಿ ನಡೆಸುವ ಹಿಂಸಾಚಾರವು ವಿನಾಶಕಾರಿ. ಇದರಿಂದ ಸಮಾಜಕ್ಕೆ ಆಗುವ ಹಾನಿ ಅಪಾರ.

ದಿನದ ಟ್ವೀಟ್

ಆತ್ಮಗೌರವಕ್ಕೆ ಧಕ್ಕೆಯಾದರೆ...

ನಗರಸಭೆ ಚುನಾವಣೆಯಲ್ಲಿ ಗೆಲ್ಲುವ ಸಾಮರ್ಥ್ಯ ಇಲ್ಲದಂತಹವರೂ ಶೆಟ್ಟರ್ ಅವರಂತಹ ಹಿರಿಯ ನಾಯಕನನ್ನು ಪ್ರಶ್ನಿಸುತ್ತಿದ್ದಾರೆ. ಇದಕ್ಕಿಂತ ತಮಾಷೆಯ ಸಂಗತಿ ಮತ್ತೊಂದಿಲ್ಲ... ಆತ್ಮಗೌರವ ಎಂಬುದು ನಂಬಿಕೆ ಮತ್ತು ಸಿದ್ಧಾಂತಕ್ಕಿಂತ ದೊಡ್ಡದು. ಅದಕ್ಕೆ ಧಕ್ಕೆಯಾದರೆ, ಜನ ಸಿದ್ಧಾಂತವನ್ನು ಬದಿಗೆ ಸರಿಸುತ್ತಾರೆ.

ಅಮರನಾಥ್ ಶಿವಶಂಕರ್, ವಾಸ್ತುಶಿಲ್ಪಿ

ಕಿಡಿನುಡಿ

ಜಗದೀಶ ಶೆಟ್ಟರ್ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದು ದುರದೃಷ್ಟಕರ. ಕಾಂಗ್ರೆಸ್ ಪಕ್ಷವು ಕೋಮಾ ಸ್ಥಿತಿಯಲ್ಲಿದೆ, ಐಸಿಯುನಲ್ಲಿದೆ ಎಂದು ಅವರೇ ಹೇಳಿದ್ದರು. ಆ ಪಕ್ಷವನ್ನೇ ಸೇರಿದ್ದಾರೆ. ಜನಸಂಘ, ಬಿಜೆಪಿ ಮನೆತನದವರೆಂಬ ಹೆಗ್ಗಳಿಕೆ ಕಳೆದುಕೊಂಡಿದ್ದಾರೆ.

ಸಿ.ಟಿ.ರವಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

25 ವರ್ಷಗಳ ಹಿಂದೆ

ಶನಿವಾರ, 18-4-1998

- **ರಾವ್, ಬೂಟಾ ವಿರುದ್ಧ ಕ್ರಮ: ಸುಪ್ರೀಂ ಕೋರ್ಟ್ ಆದೇಶ**

ನವದೆಹಲಿ, ಏ. 17 (ಪಿಟಿಐ, ಯುಎನ್‌ಐ)– ಜಾರ್ಖಂಡ್ ಮುಕ್ತಿ ಮೋರ್ಚಾ ಲಂಚ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಪ್ರಧಾನಿ ಪಿ.ವಿ.ನರಸಿಂಹ ರಾವ್, ಕೇಂದ್ರದ ಸಂಪರ್ಕ ಖಾತೆ ಸಚಿವ ಬೂಟಾ ಸಿಂಗ್, ಕರ್ನಾಟಕದ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಮತ್ತಿತರ ಆರೋಪಿಗಳ ವಿರುದ್ಧ ಶಿಕ್ಷಾರ್ಹ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸುಪ್ರೀಂ ಕೋರ್ಟ್ ಇಂದು ಆದೇಶಿಸಿದೆ.

ಪ್ರಕರಣದ ಬಗ್ಗೆ ತನಿಖೆ ನಡೆಸಿದ ನ್ಯಾಯಮೂರ್ತಿ ಎಸ್.ಸಿ.ಅಗರ್‌ವಾಲ್ ಅವರ ನೇತೃತ್ವದ 5 ಮಂದಿ ನ್ಯಾಯಮೂರ್ತಿಗಳ ಸುಪ್ರೀಂ ಕೋರ್ಟ್ ಪೀಠ ತೀರ್ಪು ನೀಡಿ, ಪ್ರಕರಣದಲ್ಲಿ ಲಂಚ ನೀಡಿದವರು ಎಂದು ಗುರುತಿಸಲಾದ ಎಲ್ಲ ಆರೋಪಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿತು.

- **'ಮರಳಿ ಬನ್ನಿ': ಪಕ್ಷ ಬಿಟ್ಟವರಿಗೆ ಸೋನಿಯಾ ಕರೆ**

ಮೊತಿಹಾರಿ (ಬಿಹಾರ), ಏ. 17 (ಪಿಟಿಐ)– ಪಕ್ಷದ ಹಿರಿಯ ನಾಯಕರಿಗೆ ಸಾಮಾನ್ಯ ಕಾರ್ಯಕರ್ತರ ಜೊತೆ ಸಂಪರ್ಕವೇ ಇಲ್ಲ ಎಂದು ಛೇಡಿಸಿರುವ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು, ಕಾಂಗ್ರೆಸ್ ಪಕ್ಷವನ್ನು ಪುನರ್ ಸಂಘಟಿಸುವುದಕ್ಕಾಗಿ, ಈಚೆಗೆ ಪಕ್ಷವನ್ನು ತ್ಯಜಿಸಿರುವ ಎಲ್ಲ ನಾಯಕರು ಪಕ್ಷಕ್ಕೆ ಮರಳಬೇಕೆಂದು ಕರೆ ನೀಡಿದ್ದಾರೆ.

ಇಲ್ಲಿನ ಗಾಂಧಿ ಮೈದಾನದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಬ್ಲಾಕ್ ಮಟ್ಟದಿಂದ ಎಐಸಿಸಿ ಮಟ್ಟದವರೆಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಪಕ್ಷದ ಸಾಮಾನ್ಯ ಕಾರ್ಯಕರ್ತರು ಸಕ್ರಿಯವಾಗಿ ಪಾಲ್ಗೊಳ್ಳಬೇಕು' ಎಂದರು.

50 ವರ್ಷಗಳ ಹಿಂದೆ

ಬುಧವಾರ, 18-4-1973

- **ಯುದ್ಧ ಕೈದಿಗಳ ಜತೆಗೇ ಬಂಗಾಳಿಗಳ ಬಿಡುಗಡೆ: ಭಾರತ–ಬಾಂಗ್ಲಾ ಕರೆ**

ನವದೆಹಲಿ, ಏ. 17– ಭಾರತ ಉಪಖಂಡದಲ್ಲಿ ತಲೆದೋರಿರುವ ಮಾನವೀಯ ಸಮಸ್ಯೆಗಳನ್ನು ಪರಿಹರಿಸಲು ಪಾಕ್ ಯುದ್ಧಕೈದಿಗಳನ್ನು (ಯುದ್ಧಾಪರಾಧಕ್ಕಾಗಿ ವಿಚಾರಣೆ ಎದುರಿಸಬೇಕಾದವರ ವಿನಾ) ಮತ್ತು ಸಿವಿಲಿಯನ್ನರನ್ನು, ಪಾಕಿಸ್ತಾನದಲ್ಲಿ ಬಲಾತ್ಕಾರವಾಗಿ ತಡೆಹಿಡಿದಿರುವ ಬಂಗಾಳೀಯರನ್ನು, ಬಾಂಗ್ಲಾದೇಶದಲ್ಲಿರುವ ಪಾಕಿಸ್ತಾನೀಯರನ್ನು ಏಕಕಾಲದಲ್ಲಿ ಬಿಡುಗಡೆ ಮಾಡಬೇಕೆಂದು ಭಾರತ ಮತ್ತು ಬಾಂಗ್ಲಾದೇಶ ಇಂದು ಜಂಟಿ ಘೋಷಣೆಯಲ್ಲಿ ಪಾಕಿಸ್ತಾನಕ್ಕೆ ಸಲಹೆ ಮಾಡಿವೆ.

ಭಾರತ ಮತ್ತು ಬಾಂಗ್ಲಾದೇಶದ ವಿದೇಶಾಂಗ ಸಚಿವರುಗಳಾದ ಸ್ವರಣ್ ಸಿಂಗ್ ಮತ್ತು ಡಾ. ಕಮಾಲ್ ಹುಸೇನ್ ಅವರು ನಡೆಸಿದ ನಾಲ್ಕು ದಿನಗಳ ದೀರ್ಘ ಮಾತುಕತೆಯ ನಂತರ ಈ ಜಂಟಿ ಘೋಷಣೆ ಹೊರಬಿದ್ದಿದೆ.

ಪಾಕ್ ಬಗ್ಗೆ ಆಶಯ: ಉಪಖಂಡದಲ್ಲಿನ 3 ದೇಶಗಳು ಎದುರಿಸುತ್ತಿರುವ ಮಾನವೀಯ ಸಮಸ್ಯೆಗಳ ಪರಿಹಾರಕ್ಕೆ ತಾವು ವಹಿಸಿದ ಆಸಕ್ತಿಗೆ ಪಾಕಿಸ್ತಾನ ಸುಮುಖವಾಗಿ ಉತ್ತರಿಸುವುದೆಂದು ಎರಡೂ ಸರ್ಕಾರಗಳು ಆಶಿಸಿವೆ.

- **ಮೇ ಕೊನೆಗೆ ಢಾಕಾದಲ್ಲಿ 195 ಮಂದಿ ಪಾಕಿಸ್ತಾನಿ ಯುದ್ಧಬಂದಿಗಳ ವಿಚಾರಣೆ**

ಢಾಕಾ, ಏ. 17– ಜನಾಂಗ ಹತ್ಯೆಯೂ ಸೇರಿದಂತೆ ತೀವ್ರ ಅಪರಾಧಗಳ ಆಪಾದನೆ ಮೇಲೆ 195 ಮಂದಿ ಪಾಕಿಸ್ತಾನಿ ಯುದ್ಧ ಬಂದಿಗಳ ವಿಚಾರಣೆಯನ್ನು ಮೇ ಅಂತ್ಯದ ಹೊತ್ತಿಗೆ ನಡೆಸುವುದಾಗಿ ಬಾಂಗ್ಲಾ ದೇಶದ ಸರ್ಕಾರ ಇಂದು ಪ್ರಕಟಿಸಿತು.

ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಗಳ ಸ್ಥಾನಮಾನ ಹೊಂದಿದ ನ್ಯಾಯಮೂರ್ತಿಗಳನ್ನು ಒಳಗೊಂಡ ವಿಶೇಷ ನ್ಯಾಯಮಂಡಳಿ ಮುಂದೆ ಇಲ್ಲಿ ವಿಚಾರಣೆ ನಡೆಯುವುದು.

ಎರಡು ದಶಕಗಳ ಹಿಂದಿನ 'ಭೂತ': ವರ್ತಮಾನದಲ್ಲಿ ಕುಣಿತ

ಬ್ರಾಹ್ಮಣ್ಯಕ್ಕೆ ಬಲ: ಕನಲಿದ ಕಮಲ



ಗತಿಬಿಂಬ

ವೈ.ಗ.ಜಗದೀಶ್

2003–2023; ಸರಿಯಾಗಿ ಇಪ್ಪತ್ತು ವರ್ಷಗಳ ಹಿಂದೆ ಬಿಜೆಪಿಯೊಳಗೆ ಇದೇ ರೀತಿಯ ಕಿಚ್ಚು ಹೊತ್ತಿಕೊಂಡಿತ್ತು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಎಚ್.ಎನ್.ಅನಂತಕುಮಾರ್ ಅವರು 2004ರಲ್ಲಿ ನಡೆಯಬೇಕಿದ್ದ ವಿಧಾನಸಭೆ ಚುನಾವಣೆಗೆ ರಂಗ ಸಜ್ಜುಗೊಳಿಸತೊಡಗಿದ್ದರು.

ದೆಹಲಿ ರಾಜಕಾರಣದಲ್ಲಿ ಅಷ್ಟೊತ್ತಿಗೆ ಪಳಗಿದ್ದ, ರಾಜ್ಯದ ಚುಕ್ಕಾಣಿ ಹಿಡಿಯಲೇಬೇಕೆಂಬ ಛಲ ಹೊತ್ತ ಅನಂತಕುಮಾರ್ ತಮ್ಮ ಎಲ್ಲ ಅಸ್ತ್ರಗಳನ್ನು ಬಳಸತೊಡಗಿದರು. ಇದರಿಂದ ಸಿಟ್ಟಿಗೆದ್ದ ಕೆಲವರು, ಲಿಂಗಾಯತರನ್ನು ತುಳಿಯಲಾಗುತ್ತಿದೆ ಎಂದು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದುಂಟು. ಬ್ರಾಹ್ಮಣರಾಗಿದ್ದ ಅನಂತಕುಮಾರ್ ಅವರನ್ನೇ ಗುರಿಯಾಗಿಸಿ, 'ಲಿಂಗಾಯತ ರಾಜಕಾರಣ' ದೊಡ್ಡ ಸದ್ದು ಮಾಡಿತು.

ಧಾರವಾಡ ಲೋಕಸಭಾ ಕ್ಷೇತ್ರದಿಂದ ಮೂರು ಬಾರಿ ಬಿಜೆಪಿ ಸಂಸದರಾಗಿ ಆರಿಸಿಬಂದಿದ್ದ ಉದ್ಯಮಿ ವಿಜಯ-ಸಂಕೇಶ್ವರ ಅವರು ಪಕ್ಷ ತೊರೆದು, 'ಕನ್ನಡನಾಡು' ಪಕ್ಷ ಕಟ್ಟಿದರು. ಅಧಿಕಾರ ಹಿಡಿದೇಬಿಡುವ ಗುಂಗಿನಲ್ಲಿದ್ದ ಅನಂತಕುಮಾರ್, ಎಸ್.ಎಂ.ಕೃಷ್ಣ ಅವರ ನಡೆಯಿಂದ ಬೇಸತ್ತಿದ್ದ, ಹಿಂದುಳಿದ ಸಮುದಾಯ ಮಾತ್ರವಲ್ಲದೆ ಎಲ್ಲರನ್ನೂ ಮೋಡಿ ಮಾಡುವ ಶಕ್ತಿ ಹೊಂದಿದ್ದ ಎಸ್. ಬಂಗಾರಪ್ಪ ಅವರ ಮನವೊಲಿಸಿ ಬಿಜೆಪಿಗೆ ಕರೆತರುವಲ್ಲಿ ಯಶಸ್ವಿಯಾದರು. ಅಲ್ಲಿಯವರೆಗೆ ಬಂಗಾರಪ್ಪನವರ ಎದುರು ಸ್ಪರ್ಧಿಸಿ ಸೋತು–ಗೆದ್ದಿದ್ದ ಆಯನೂರು ಮಂಜುನಾಥ್ ಅವರು ಲಿಂಗಾಯತರಿಗೆ ಪಕ್ಷದಲ್ಲಿ ಬೆಲೆ ಇಲ್ಲ ಎಂದು ಹೊರನಡೆದರು. ಉದ್ಯಮಿ ವಿಜಯ ಮಲ್ಯ ಆಗಷ್ಟೇ ಜನತಾ ಪಕ್ಷವನ್ನು ಖರೀದಿಸಿದ್ದರು. ಪಕ್ಷ ತೊರೆದಿದ್ದ ಆಯನೂರು, ಜನತಾ ಪಕ್ಷ ಸೇರಿ, ರಾಜ್ಯ ಘಟಕದ ಅಧ್ಯಕ್ಷರೂ ಆದರು. ಇದೇ ಬಗೆಯ ವ್ಯಾಕುಲದಲ್ಲಿದ್ದ ಬಿ.ಎಸ್.ಯಡಿಯೂರಪ್ಪ, ಬಂಗಾರಪ್ಪನವರು ಪಕ್ಷಕ್ಕೆ ಬಂದಿದ್ದೇ ತಡ, ಬಿಜೆಪಿ ಅಧಿಕಾರಕ್ಕೆ ಬರುತ್ತದೆ ಎಂಬ ತರ್ಕದಲ್ಲಿ ಪಕ್ಷದಲ್ಲೇ ಉಳಿದರು.

ತಮ್ಮ ಜನಪ್ರಿಯತೆಯನ್ನು ಪಣಕ್ಕಿಡುವ ಜತೆಗೆ, ಲೋಕಸಭೆ ಚುನಾವಣೆ ನಡೆಯುತ್ತಿರುವಾಗಲೇ ವಿಧಾನಸಭೆ ಚುನಾವಣೆಗೆ ಹೋದರೆ ಗೆಲುವು ಸಲೀಸು ಎಂದು ಜ್ಯೋತಿಷಿಯೊಬ್ಬರು ಹೇಳಿದ ಮಾತನ್ನು ನಂಬಿದ ಎಸ್.ಎಂ.ಕೃಷ್ಣ, ಅವಧಿ ಮುಗಿಯುವ ಆರು ತಿಂಗಳ ಮೊದಲೇ ಚುನಾವಣೆಗೆ ಹೋದರು. ಕರ್ನಾಟಕದಲ್ಲಿ ತಮಗಿಂತ ಒಂದು ಗುಲಗಂಜಿ ತೂಕದಷ್ಟು ಹೆಚ್ಚಿನ ಪ್ರಭಾವಳಿ ಹೊಂದಿರುವ ಎಸ್.ಬಂಗಾರಪ್ಪನವರು ಪಕ್ಷ ಬಿಟ್ಟು ಹೋಗುತ್ತಾರೆ ಎಂಬ ಅರಿವು ಕೃಷ್ಣರಿಗೆ ಇದ್ದಿರಲಿಕ್ಕಿಲ್ಲ. ಆದರೆ, ಅನಂತಕುಮಾರ್ ಉರುಳಿಸಿದ ದಾಳ, ಆಟದಲ್ಲಿ ಕಾಂಗ್ರೆಸ್ಸನ್ನು ಕಟ್ಟಿಹಾಕಿತು. ಕರ್ನಾಟಕದ ರಾಜಕೀಯ ಇತಿಹಾಸದಲ್ಲೇ ಮೊದಲ ಬಾರಿ ಬಿಜೆಪಿಗೆ 79 ಸ್ಥಾನಗಳು ದಕ್ಕಿ, ಸಂಖ್ಯಾಬಲದಲ್ಲಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಅಧಿಕಾರಾರೂಢ ಕಾಂಗ್ರೆಸ್ 65 ಸ್ಥಾನ ಪಡೆದರೆ, ಘಟಾನುಘಟಿ ನಾಯಕರಿದ್ದ ಜೆಡಿಎಸ್ 58ಕ್ಕೆ ಸೀಮಿತಗೊಂಡಿತು. ಬಳಿಕ, ಅನಂತಕುಮಾರ್ ಕರ್ನಾಟಕ ರಾಜಕಾರಣದಿಂದ ದೂರವಾದರು.

2008ರಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾದ ಬಳಿಕವಷ್ಟೇ ಮತ್ತೆ ಕರ್ನಾಟಕದ ರಾಜಕಾರಣದ ಮೇಲೆ ಅನಂತಕುಮಾರ್ ಅವರಿಗೆ ಆಸೆ ಮೊಳೆಯಿತು. ಅಷ್ಟರಲ್ಲೇ, ಪಕ್ಷವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದ ಯಡಿಯೂರಪ್ಪ ಅದಕ್ಕೆ ಅವಕಾಶವನ್ನೇ ಕೊಡಲಿಲ್ಲ. ಈ ಜಿದ್ದು, 2011ರಲ್ಲಿ ಸಮಾಪ್ತಿಯಾಗಿ, ಯಡಿಯೂರಪ್ಪ ರಾಜೀನಾಮೆ ಕೊಟ್ಟು ಮನೆಯಲ್ಲಿ ಕೂರುವ ಪರಿಸ್ಥಿತಿ ನಿರ್ಮಾಣವಾಯಿತು. 2013ರ ಚುನಾವಣೆಗೆ ಮುನ್ನ (2012ರ ಡಿಸೆಂಬರ್) ಅವರು ಪಕ್ಷ ತೊರೆದು ಕೆಜೆಪಿ ಕಟ್ಟಿದರು. ಇದು ಮೊದಲ ಅಧ್ಯಾಯ.

ಎರಡನೇ ಅಧ್ಯಾಯ; ಮುಖ್ಯಮಂತ್ರಿ ಕುರ್ಚಿಯಿಂದ ಇಳಿಯಲು ವರಿಷ್ಠರೇ ಕಾರಣ ಎಂಬುದು ಸ್ಪಷ್ಟವಾಗಿ ಗೊತ್ತಿದ್ದ ಯಡಿಯೂರಪ್ಪ ಕೆಜೆಪಿ ಕಟ್ಟಿ, ಚುನಾವಣೆಗೆ ನುಗ್ಗಿ ಕೈಸುಟ್ಟುಕೊಂಡರು. 2014ರ ಲೋಕಸಭೆ ಚುನಾವಣೆ ಹೊತ್ತಿಗೆ, ನರೇಂದ್ರ ಮೋದಿಯವರನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಲಾಯಿತು. ತಾವು ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಅನಂತಕುಮಾರ್ ತಮಗೆ ಅಸಹಕಾರ ನೀಡಿದ್ದನ್ನು ಮೋದಿಯವರು ಮರೆತಿರಲಿಲ್ಲ. ಅವರನ್ನು ಬದಿಗೆ ಸರಿಸುವ ಸಂಕಲ್ಪವನ್ನೂ ಹೊಂದಿದ್ದರು. ಆದರೆ, ಪ್ರಧಾನಿಯಾಗಬೇಕಾದರೆ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಸದರು ಗೆಲ್ಲುವುದು ಬೇಕಿತ್ತು. ಇದರ ಪರಿಣಾಮವಾಗಿ ಯಡಿಯೂರಪ್ಪ ಮತ್ತೆ ಬಿಜೆಪಿಗೆ ವಾಪಸ್ ಆದರು.

2018ರ ಹೊತ್ತಿಗೆ ನರೇಂದ್ರ ಮೋದಿಯವರ ಪ್ರಭಾವಳಿ ಪ್ರಜ್ವಲಿಸುತ್ತಿತ್ತು. ಯಡಿಯೂರಪ್ಪನವರ ಲಿಂಗಾಯತ ರಾಜಕಾರಣದ ಜತೆಗೆ, ಮೋದಿಯವರ ಜನಪ್ರಿಯತೆಯ ಊರುಗೋಲು ಕರ್ನಾಟಕದಲ್ಲಿ ಕೈಹಿಡಿಯಬಹುದು ಎಂಬ ಲೆಕ್ಕಾಚಾರ ಬಿಜೆಪಿ ವರಿಷ್ಠರದ್ದಾಗಿತ್ತು. ಆದರೆ, ಅದು ಕೈಗೂಡಲಿಲ್ಲ. ಹಾಗಂತ ಯಡಿಯೂರಪ್ಪ ಸುಮ್ಮನೆ ಕೂರಲಿಲ್ಲ. 'ಆಪರೇಷನ್ ಕಮಲ' ನಡೆಸಿ 2019ರಲ್ಲಿ ಬಿಜೆಪಿ ನೇತೃತ್ವದ ಸರ್ಕಾರವನ್ನು ಅಧಿಕಾರಕ್ಕೆ ತಂದರು. ಆ ಖುಷಿ ಪೂರ್ಣಾವಧಿ ಇರಲಿಲ್ಲ. ಮಗನ ವಿರುದ್ಧ ಕೇಳಿಬಂದ ಭ್ರಷ್ಟಾಚಾರದ ಆರೋಪ ಹಾಗೂ ವಯಸ್ಸಿನ ಕಾರಣ ನೀಡಿ ಅವರಿಂದ ರಾಜೀನಾಮೆ ಕೊಡಿಸಲಾಯಿತು. ಕಣ್ಣೀರಿಡುತ್ತಲೇ ಅವರು ಮುಖ್ಯಮಂತ್ರಿ ಗಾದಿಯಿಂದ ಇಳಿದರು. ಅದಾದ ಬಳಿಕ ಮಗ ಬಿ.ವೈ.ವಿಜಯೇಂದ್ರ ಅವರನ್ನು ಬಸವರಾಜ ಬೊಮ್ಮಾಯಿ ಸಂಪುಟಕ್ಕೆ ಸೇರಿಸಬೇಕೆಂಬ ಅವರ ಪ್ರಯತ್ನವೂ ಈಡೇರಲಿಲ್ಲ.

ಬಿಜೆಪಿಯೆಂದರೆ ಲಿಂಗಾಯತರ ಪಕ್ಷ ಎಂಬ ನಂಬುಗೆಯ ಜಾಗದಲ್ಲಿ ಪ್ರಖರ ಹಿಂದುತ್ವವಾದಿ ಪಕ್ಷವೆಂದು ಬಿಂಬಿಸುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಲಾಯಿತು. ಬೊಮ್ಮಾಯಿ ಮುಖ್ಯಮಂತ್ರಿಯಾದ ಬಳಿಕ ಒಂದೊಂದೇ ಅಸ್ತ್ರಗಳು 'ವರಿಷ್ಠ'ರ ಬತ್ತಳಿಕೆಯಿಂದ ಹೊರಬಿದ್ದವು. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಅನುಷ್ಠಾನವಾಗದ ಕಾರ್ಯಸೂಚಿಗೆ ಬೊಮ್ಮಾಯಿ ನೇತೃತ್ವದ ಸರ್ಕಾರ ಸಕಲ ಬೆಂಬಲ ನೀಡಿತು. ಬಿಜೆಪಿಯ ಲಿಂಗಾಯತ ವರ್ಚಸ್ಸನ್ನು ಕಳೆದು, ಹಿಂದುತ್ವವಾದಿಗಳ ಪಕ್ಷ ಎಂಬುದನ್ನು ದೃಢಪಡಿಸುವ ಯತ್ನದ ಹಿಂದೆ ಬಿ.ಎಲ್.ಸಂತೋಷ್ ಅವರು ಇರುವುದು ರಹಸ್ಯವೇನಲ್ಲ.

ಕರ್ನಾಟಕದಲ್ಲಿ ತಮ್ಮದೇ ಪ್ರಭಾವ ಹೊಂದಿರುವ ಸಂತೋಷ್, 2018ರ ವಿಧಾನಸಭೆ, 2019ರ ಲೋಕಸಭೆ ಚುನಾವಣೆಯ ಅಭ್ಯರ್ಥಿ ಆಯ್ಕೆಯಲ್ಲಿ ಪ್ರಧಾನ ಪಾತ್ರ ವಹಿಸಿದ್ದರು. 2023ರ ಚುನಾವಣೆಗೆ ಮುನ್ನ ಬಿಜೆಪಿಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡ ಸಂತೋಷ್ ಮತ್ತು ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಟಿಕೆಟ್ ಹಂಚಿಕೆಯಲ್ಲಿ ತಮ್ಮ ಮಾತು ನಡೆಯುವಂತೆ ನೋಡಿಕೊಂಡರು. ವಯಸ್ಸಿನ ಕಾರಣ ನೀಡಿ, ಹಿಂದುಳಿದ ಕುರುಬ ಸಮುದಾಯದ ಕೆ.ಎಸ್.ಈಶ್ವರಪ್ಪ, ದಲಿತ ಸಮುದಾಯದ ಎಸ್.ಅಂಗಾರ ಅವರಿಗೆ ನಿವೃತ್ತಿಯಾಗುವಂತೆ ಸೂಚಿಸಲಾಯಿತು. ಅವರೇನೋ ಒಪ್ಪಿಕೊಂಡರು; ತಿರುಗಿಬಿದ್ದ ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ, 'ಲಿಂಗಾಯತರನ್ನು ವ್ಯವಸ್ಥಿತವಾಗಿ ತುಳಿಯಲಾಗುತ್ತಿದೆ' ಎಂದು ಆರೋಪಿಸಿದರು.

ಒಂದುವೇಳೆ ಬಿಜೆಪಿಗೆ ಅಧಿಕಾರ ಸಿಗುವಷ್ಟು ಬಹುಮತ ದೊರೆತರೆ ಮುಖ್ಯಮಂತ್ರಿಯಾಗುವ ಹಂಬಲ ಬಿ.ಎಲ್.ಸಂತೋಷ್ ಮತ್ತು ಪ್ರಲ್ಹಾದ ಜೋಶಿ ಅವರಿಗೆ ಇದೆ. ಈ ಬಾರಿ ಟಿಕೆಟ್ ಕೊಡುವುದರಲ್ಲಿ ನಿರ್ಣಾಯಕ ಪಾತ್ರ ವಹಿಸಿದವರು ಸಂತೋಷ್. ಬಿಜೆಪಿಗೆ ಬಹುಮತ ಸಿಕ್ಕಿ, ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಸಭೆ ನಡೆದರೆ, ಟಿಕೆಟ್ ಕೊಟ್ಟ ಸಂತೋಷ್ ಬೆಂಬಲಕ್ಕೆ ಶಾಸಕರು ನಿಲ್ಲುವುದು ದಿಟ. ಇದು ಗೊತ್ತಾಗಿಯೇ, ಮುಖ್ಯಮಂತ್ರಿ ಗಾದಿಗೆ ಬೇಡಿಕೆ ಇಡುವಷ್ಟು ಜಾತಿ ಹಾಗೂ ರಾಜಕೀಯ ಪ್ರಭಾವ ಇರುವವರಿಗೆ ಟಿಕೆಟ್ ನೀಡಿಲ್ಲ ಅಥವಾ ನಿವೃತ್ತಿಯಾಗುವಂತೆ ಸೂಚಿಸಲಾಗಿದೆ. ಕಿರಿಯರಿಗೆ ಅವಕಾಶ ಕೊಟ್ಟು ಹಿರಿಯರು ಹಿಂದಕ್ಕೆ ಸರಿಯಿರಿ ಎಂಬ ಸೂತ್ರ ಎಲ್ಲರಿಗೂ ಅನ್ವಯವಾಗಿಲ್ಲ. ಯಡಿಯೂರಪ್ಪನವರಿಗೆ ಸಂಸದೀಯ ಮಂಡಳಿಯ ಸದಸ್ಯತ್ವ ನೀಡಿ, 'ಉನ್ನತ' ಸ್ಥಾನ ಕಲ್ಪಿಸಲಾಯಿತು ಎಂದು ಬಿಂಬಿಸಲಾಯಿತಾದರೂ ಅಭ್ಯರ್ಥಿ ಆಯ್ಕೆಯನ್ನು ಅಂತಿಮಗೊಳಿಸುವ ಪ್ರಮುಖ ಸಭೆಯಿಂದ ಅವರನ್ನು ಹೊರಗಿಡಲಾಯಿತು. ಹೀಗೆ, ಹಿರಿಯರನ್ನೆಲ್ಲ ಬದಿಗೆ ಸರಿಸುವಲ್ಲಿ ಜೋಶಿ, ಸಂತೋಷ್ ಪಾರಮ್ಯ ಮೆರೆದಿದ್ದಾರೆ. ಮೋದಿ–ಅಮಿತ್ ಶಾ ಜೋಡಿಯ ಪ್ರಭಾವದಿಂದಲಾದರೂ ಅರಳಬಹುದಾಗಿದ್ದ ಕಮಲ, ಈ ಇಬ್ಬರ ಹಟಕ್ಕೆ ಕನಲುತ್ತಿದೆ. ಇಷ್ಟೆಲ್ಲ ಆದರೂ 'ಶೆಟ್ಟರ್–ಸವದಿಯವರು ದ್ರೋಹ ಎಸಗಿದ್ದಾರೆ' ಎಂದು ಕೊರಳುಬ್ಬಿ ಅಬ್ಬರಿಸುವ ಯಡಿಯೂರಪ್ಪನವರ ಬೆನ್ನ ಹಿಂದಿನ 'ಈಟಿ' ಯಾವುದು ಎಂಬುದು ನಿಗೂಢ.

ಚುರುಮುರಿ

ಹಾರೋಪ್ಲೇನ್...

• ಲಿಂಗರಾಜು ಡಿ.ಎಸ್.

ಪಕ್ಷದ ವಾಕ್‌ದಾರರು ಪತ್ರಿಕಾಗೋಷ್ಠಿಯಲ್ಲಿ ಅಭ್ಯರ್ಥಿಗಳ ಪಟ್ಟಿ ಮತ್ತು ಅದರ ವಿವರ ನೀಡುತ್ತಿದ್ದರು.

'ನಮ್ಮ ಪಕ್ಷದಿಂದ ಸ್ಪರ್ಧಿಸಲಿರುವ ಸಭ್ಯರ್ಥಿಗಳ ಆಯ್ಕೆ ವಿಭಿನ್ನವಾಗಿ ನಡೆದಿದೆ. ಪಕ್ಷಕ್ಕೆ ಸಂ-ದಾನ ಮಾಡಿ ಬಂದವರಿಗೆ ಟಿಕೆಟ್ ಕೊಟ್ಟಿದ್ದೇವೆ. ಸಮ್ಮಿಲ್ಲದ ಅತೃಪ್ತರು ಮತ್ತು ಕಿತಾಪತಿಗಳಿಗೆ ಅವಮಾನ ಸಂಸ್ಕರಣಾ ಯೋಜನೆಯಡಿ ಟಿಕೆಟ್ ನಿರಾಕರಿಸಲಾಗಿದೆ'.

'ನಮ್ಮ ಸಭ್ಯರ್ಥಿಗಳ ಮತಬುಟ್ಟಿಯಿಂದ ಮತಜಾರಿಕೆ ಮಾಡುವ ಮಾಯಕಾರರಿಗೆ ಕ್ಷೇತ್ರ ಬಿಡಿ ಇಲ್ಲವೇ ಕಾಸು ಹಿಡಿ ಯೋಜನೆ ತಂದಿದ್ದೇವೆ. ಪಕ್ಷದ ಹಿತ ಕಾಯಲು ಲಾಂಗು, ಚೂರಿ, ಚಾಕು, ಕತ್ತರಿ ಬಳಸುವ ಕೊಲಾವಿದರನ್ನು ಹೊಡಿ-ಬಡಿ ಯೋಜನೆಯಲ್ಲಿ ಕಣಕ್ಕಿಳಿಸಿದ್ದೇವೆ. ಪಕ್ಷಕ್ಕೆ ಕಾಂಪೌಂಡ್ ಹಾಕಿ ಹದ್ದುಬಸ್ತು ಮಾಡಲು ಕಾಂಪೌಂಡರು ಮತ್ತು ಕಂಟ್ರಾಕ್ಟರುಗಳಿಗೆ ಟಿಕೆಟ್ ಕೊಟ್ಟಿದ್ದೇವೆ. ಹಗರಣ ಮಾಡಿ ಜೈಲಿಗೆ ಹೋಗಲಿರುವ ನಾಯಕರಿಗೆ ಜೈಲುಹಕ್ಕಿ ಯೋಜನೆಯಡಿ ಟಿಕೆಟ್ ಘೋಷಿಸಲಾಗಿದೆ'.

'ಕೆಲವು ನಾಯಕರ ಪಿತೃಹಿಂಸೆಯನ್ನು ಪರಿಗಣಿಸಿ ಪುತ್ರರತ್ನಗಳಿಗೆ ಮತ್ತು ಮಾತ್ರ ದೇವತೆಗಳಿಗೂ ಟಿಕೆಟ್ ಕೊಡಲಾಗಿದೆ. ಕುಟುಂಬ ಪರಂಪರೆ ಯೋಜನೆಯ ಹೊಸ ಪ್ರಯೋಗ ಇದು'.

'ಬೇರೆ ಪಕ್ಷಗಳಲ್ಲಿ ಟಿಕೆಟ್ ಸಿಗದ ನಿರಾಶ್ರಿತರು ತಮ್ಮ ಪಕ್ಷಗಳನ್ನು ಹೆದರಿಸಲು ಎರಡು ದಿನ ಕದ್ದು ನೋಡುವ ತಂತ್ರ ಅನುಸರಿಸಿದರೂ ನಾವು ಕಾದು ನೋಡುವುದಿಲ್ಲ! ಕೂಡಲೇ ಇಂತಹ ಅತಂತ್ರರನ್ನು ಬೇರೆ ಪಕ್ಷಗಳಿಂದ ಹಾರಿಸಿ ತರಲು ವಿಶೇಷ ಹಾರೋಪ್ಲೇನ್ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಡಂಬಾಯಗಾರರ ಮೇಲೆ ಕಣ್ಣಿಡಲು ಸ್ಪೈ ದ್ರೋಣರನ್ನು ನೇಮಿಸಲಾಗಿದೆ'.

'ಕಣದಲ್ಲಿರುವ ನಾಯಕರು ಚುನಾವಣಾ ಮಾನಪತ್ರದಲ್ಲಿ ಘೋಷಿಸಿರುವ ಸುಳ್ಳು ಆಸ್ತಿಯಲ್ಲಿ ಪಕ್ಷವು ಮೂಲದಲ್ಲೇ ಕಾಸು ವಸೂಲಿ ಮಾಡುವ ಹಫ್ತಾ ಡಿಮ್ಯಾಂಡೆಡ್ ಅಟ್ ಸೋರ್ಸ್ ಎಂಬ ನವೀನ ಯೋಜನೆ ಜಾರಿಗೆ ತಂದಿದೆ'.

'ಇವೆಲ್ಲಾ ವಿನೂತನ ಯೋಜನೆಗಳನ್ನು ನೋಡುವ ಜನ ನಮ್ಮ ಕೈ ಬಿಡುವುದಿಲ್ಲ ಎಂಬ ನಂಬಿಕೆ ನಮಗಿದೆ. ಈ ಬಾರಿಯ ಬನಾವಣೆಯಲ್ಲಿ ಗೆಲುವು ನಮ್ಮದೇ!'

ಸಂಗತ

ಮತದಾನ: ಋಣ ಸಂದಾಯದ ಪ್ರಕ್ರಿಯೆ?

ಹಣ ತೆಗೆದುಕೊಂಡು ಹಾಕಿದ ವೋಟು, ನಾಳೆ ನಾಯಕರಿಗೆ ಭ್ರಷ್ಟಾಚಾರ ಎಸಗಲು ನಾವು ಕೊಟ್ಟ ಪರವಾನಗಿಯಲ್ಲದೆ ಬೇರೇನೂ ಅಲ್ಲ

• ಸದಾಶಿವ್ ಸೊರಟೂರು

ಭ್ರಷ್ಟಾಚಾರವು ವ್ಯವಸ್ಥೆಯೊಂದರ ತುದಿಯಿಂದಲೂ ಆರಂಭವಾಗಬಹುದು ಮತ್ತು ಅದರ ಬುಡದಿಂದಲೂ ಶುರುವಾಗಬಹುದು. ಬುಡದಲ್ಲಿ ಸಣ್ಣಗೆ ಶುರುವಾದ ಅದು ತುದಿ ಮುಟ್ಟುವ ಸಮಯಕ್ಕೆ ದೈತ್ಯವಾಗಬಹುದು ಅಥವಾ ತುದಿಯಿಂದ ಶುರುವಾಗಿ ಬೇರಿನ ಕಡೆ ಬಿಸಿನೀರಂತೆ ಇಳಿಯುತ್ತ ಹೋಗಿ ವ್ಯವಸ್ಥೆಯನ್ನು ಹಾಳು ಮಾಡಬಹುದು. ಒಂದಂತೂ ಸತ್ಯ, ಭ್ರಷ್ಟಾಚಾರ ಎತ್ತ ಕಡೆಯಿಂದ ಶುರುವಾದರೂ ಕೆಡುವುದು ವ್ಯವಸ್ಥೆ, ಅನುಭವಿಸುವುದು ಮತ್ತದೇ ಜನ.

ಚುನಾವಣೆಯೊಂದು ಬಾಗಿಲ ಬಳಿ ನಿಂತಿದೆ. ಹಲವರು ಈ ಬಾರಿ ಒಂದು ವೋಟಿಗೆ ತನಗೆಷ್ಟು ಸಿಗಬಹುದೆಂಬ ಲೆಕ್ಕಾಚಾರದಲ್ಲಿ ತೊಡಗಿರಬಹುದು. ಈ ಬಾರಿ ಎಷ್ಟು ಸೀರೆಗಳು, ಕುಕ್ಕರುಗಳು, ಉಡುಗೊರೆಗಳು ದಕ್ಕಬಹುದೆಂದು ಯೋಚಿಸುತ್ತಿರಬಹುದು. ಒಂದು ವ್ಯವಸ್ಥೆಯ ಇಡೀ ಭ್ರಷ್ಟಾಚಾರಕ್ಕೆ ನಮ್ಮ ನಾಯಕರು ಒಂದು ಕಾರಣವಾದರೆ, ಅಷ್ಟೇ ತೂಕದಲ್ಲಿ ಪ್ರಜೆಗಳೂ ಕಾರಣ.

ಕೊಡುವವನು ಆಸೆ ಹುಟ್ಟಿಸುತ್ತಾನೆ, ತೆಗೆದುಕೊಳ್ಳುವವನು ತನ್ನನ್ನು ಮಾರಿಕೊಳ್ಳುತ್ತಾನೆ. ಭ್ರಷ್ಟಾಚಾರ ಹುಟ್ಟುವುದು ಈ ಕೊಡುವುದು-ತೆಗೆದುಕೊಳ್ಳುವುದರ ಗರ್ಭದಲ್ಲಿ. ಚುನಾವಣಾ ಆಯೋಗವು ಕೊಡುವವನನ್ನು ಹಿಡಿದುಹಾಕುವಂತೆ ತೆಗೆದುಕೊಳ್ಳುವವನ ಮೇಲೂ ಒಂದು ನಿಗಾ ಇಡಬೇಕಾಗುತ್ತದೆ.

ಪ್ಲೇಟೊ ಹೇಳುತ್ತಾನೆ, ಪ್ರಜೆಗಳು ಭ್ರಷ್ಟರಾಗುವುದು ವ್ಯವಸ್ಥೆ ಭ್ರಷ್ಟವಾಗುವ ಮೊದಲ ಮೆಟ್ಟಿಲು ಎಂದು. ಒಬ್ಬ ರಾಜಕಾರಣಿ ಭ್ರಷ್ಟಾಚಾರ ಎಸಗಿ ಜೈಲಿಗೆ ಹೋಗಿ ಆಚೆ ಬಂದಾಗ ಆತನನ್ನು ಬೆಂಬಲಿಸಲು ಸೇರುವ ಜನರಿಂದ ನಾವು ಈ ವ್ಯವಸ್ಥೆಯಲ್ಲಿ ಎಂತಹ ಒಳ್ಳೆಯ ಬದಲಾವಣೆಯನ್ನು ಬಯಸಬಹುದು? ಮತದಾರರ ಜಾಗೃತಿಗಾಗಿ ಒಂದು ಕಾರ್ಯಕ್ರಮ ಮಾಡಿದ್ದೆವು. ಮತದಾರರನ್ನು ಉದ್ದೇಶಿಸಿ, 'ನೀವು ಯಾವುದೇ ಆಮಿಷಕ್ಕೆ ಒಳಗಾಗದೆ ವೋಟು ಮಾಡಬೇಕು. ಮತದಾನ ಪವಿತ್ರವಾದದ್ದು' ಎಂದೆವು. ಈ ಮಾತು ಅವರ ಮೇಲೆ ಯಾವುದೇ ಪರಿಣಾಮ ಬೀರಿದಂತೆ ಕಾಣಲಿಲ್ಲ. ಅವರಲ್ಲೊಬ್ಬ ಎದ್ದು ನಿಂತು ಒಂದು ನ್ಯಾಯೋಚಿತ ಪ್ರಶ್ನೆ ಕೇಳಿದ. 'ನಾನೊಬ್ಬ ತೆಗೆದುಕೊಳ್ಳದೇ ಇದ್ದರೆ ಎಲ್ಲವೂ ಸರಿ ಹೋದೀತಾ? ನಾನು ತೆಗೆದುಕೊಳ್ಳದಿದ್ದರೆ ಕೊಡುವವನಿಗೆ ನನ್ನ ಬೆಂಬಲ ಅವನಿಗೆ ಇಲ್ಲ ಎಂಬುದನ್ನು ತೋರಿಸಿದಂತೆ ಆಗುವುದಿಲ್ಲವೇ?' ಅಂದ. ಜನರಲ್ಲಿ 'ಬಂದಷ್ಟು ಬರಲಿ' ಎಂಬ ಮನಃಸ್ಥಿತಿಯೊಂದಿದೆ.

ಒಮ್ಮೆ ಒಬ್ಬ ರೈತನನ್ನು ಯಾರೋ 'ನಿನ್ನ ಯಶಸ್ಸಿನ ಗುಟ್ಟೇನು?' ಎಂದು ಕೇಳಿದರು. 'ನಾನು ನನ್ನ ಹೊಲಕ್ಕೆ ಬಿತ್ತುವ ಬೀಜವನ್ನು ನನ್ನ ಸುತ್ತಲಿನ ಜಮೀನಿನವರಿಗೂ ವಿತರಿಸಿ ಬಿತ್ತುತ್ತೇನೆ' ಅಂದನಾತ. 'ಅದೇಕೆ?' ಎಂದು ಕೇಳಿದಾಗ ಆತ ಹೇಳಿದ್ದು, 'ನನ್ನ ಹೊಲದಲ್ಲಿ ಬೆಳೆದ ಬೆಳೆಗೆ ಪಕ್ಕದ ತೋಟದಲ್ಲಿನ ಬೆಳೆಯಿಂದ ಪರಾಗಸ್ಪರ್ಶ ನಡೆಯುತ್ತದೆ. ಪಕ್ಕದವರು ಕಳಪೆ ಬೀಜ ಬಿತ್ತಿದರೆ ಅದರ ಫಲ ನನ್ನ ಬೆಳೆಯ ಮೇಲೂ ಆಗುತ್ತದೆ. ನಾನು ಉತ್ತಮವಾದದ್ದನ್ನು ಬಿತ್ತಿದರೆ ಸುತ್ತಲಿನವರಿಗೆ ಒಳ್ಳೆಯದಾಗುತ್ತದೆ'. ಪರಾಗಸ್ಪರ್ಶದಂತೆ ಭ್ರಷ್ಟಾಚಾರ ಹರಡುವುದನ್ನು ತಪ್ಪಿಸಲು ಪ್ರತಿಯೊಬ್ಬರೂ ಸ್ವಚ್ಛವಾಗಿರಬೇಕು ಎಂದು ಈ ಕಥೆ ಹೇಳುತ್ತದೆ.

ಭ್ರಷ್ಟಾಚಾರವೆಂಬುದು ಮನುಷ್ಯನ ಮೂಲಗುಣದಷ್ಟೇ ಸಹಜವಾಗುತ್ತಿದೆ. ಬಸ್ಸಿನಲ್ಲಿ ಮಗುವಿನಿಂದ ವಯಸ್ಸನ್ನು ಸುಳ್ಳು ಹೇಳಿಸಿ ಅರ್ಧ ಟಿಕೆಟ್ ಕೊಳ್ಳುತ್ತೇವೆ. ನೌಕರ ಮೈಗಳ್ಳತನ ಮಾಡುತ್ತಾನೆ. ಸುಳ್ಳು ಹೇಳಿ ಬಿಪಿಎಲ್ ಕಾರ್ಡ್ ತೆಗೆದುಕೊಳ್ಳುತ್ತಾರೆ. ತಮ್ಮ ಕೆಲಸ ಆಗಲಿ ಅನ್ನುವ ಕಾರಣಕ್ಕೆ ಕೆಲವರು ಲಂಚ ಕೊಡುತ್ತಾರೆ. ಒಂದಲ್ಲ ಒಂದು ರೀತಿಯಲ್ಲಿ ಪ್ರಜೆಗಳು ಭ್ರಷ್ಟರಾಗುತ್ತಾ ಹೋಗುತ್ತಿದ್ದಾರೆ. ಅದು ಸಣ್ಣದಿರಬಹುದು, ದೊಡ್ಡದಿರಬಹುದು. ಆದರೆ ಅದೊಂದು ಸರಪಳಿಯನ್ನು ಸೃಷ್ಟಿಸುತ್ತದೆ. ಸಾಂಕ್ರಾಮಿಕದಂತೆ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಅಂಬೇಡ್ಕರ್ ಅವರು 'ಪ್ರಜಾಪ್ರಭುತ್ವದ ಯಶಸ್ಸು ನಾವು ಕೊಡುವ ಶಿಕ್ಷಣದ ಮೇಲಿದೆ' ಅಂದಿದ್ದರು. ಶಿಕ್ಷಿತರೇ ಅಪಾಯಕಾರಿ ಎಂದನಿಸುವ ಮಟ್ಟ ತಲುಪಿದ್ದೇವೆ. ಅಂದರೆ ನಮ್ಮ ಶಿಕ್ಷಣ ಕ್ರಮ ಸರಿ ಇಲ್ಲದಿರಬಹುದು. ನಾವು ಜ್ಞಾನವನ್ನು ತುಂಬುತ್ತಿದ್ದೇವೆ, ಪರಿಜ್ಞಾನವನ್ನಲ್ಲ. ಪರಿಜ್ಞಾನವಿಲ್ಲದವನ ಕೈಗೆ ವೋಟಿನ ಅಸ್ತ್ರ ಸಿಕ್ಕಾಗ ಎಂತಹ ನಾಯಕ ಆರಿಸಿ ಬರಬಹುದು ಎಂದು ಯೋಚಿಸಬೇಕಾಗುತ್ತದೆ. ಹಣ ತೆಗೆದುಕೊಂಡವರು ಭ್ರಷ್ಟರಲ್ಲದೆ ಮತ್ತೇನು?

ಈ ಭ್ರಷ್ಟ ವ್ಯವಸ್ಥೆಯನ್ನು ಸರಿಪಡಿಸಲು ಯಾರೋ ಮೇಲಿಂದ ಬರಲಾಗುವುದಿಲ್ಲ. ಈ ಕಾನೂನುಗಳು ಸಾಲುವುದಿಲ್ಲ. ಆಳುವವರೇ ದೋಚಲು ಕೂತಾಗ ಯಾವ ಭರವಸೆಗಳೂ ಉಳಿಯುವುದಿಲ್ಲ. ಜನರೂ ಅದಕ್ಕೆ ಕುಮ್ಮಕ್ಕು ನೀಡುವಂತೆ ವರ್ತಿಸಿದರೆ ಯಾರನ್ನು ದೂರುವುದು? ಸರಿಮಾಡುವವರು ಯಾರು? ಹಾಗಾದರೆ ಎಲ್ಲರೂ ಭ್ರಷ್ಟರೇ ಎಂದು ತೀರ್ಮಾನಿಸಿಬಿಡಬೇಕೇ? ಇಲ್ಲ, ಒಳ್ಳೆಯವರೂ ಇದ್ದಾರೆ, ಆದರೆ ಅವರ ಸಂಖ್ಯೆ ತೀರಾ ಕಡಿಮೆ. ಆ ಒಳ್ಳೆಯವರ ಕಡಿಮೆ ವೋಟಿನಿಂದ ಜಾದೂ ಆಗುವುದಿಲ್ಲ.

ಚುನಾವಣೆಯಲ್ಲಿ ಗೆಲ್ಲಬೇಕು ಅಂದವರಿಗೆ ಜನ ಭ್ರಷ್ಟರಾದಷ್ಟೂ ಒಳ್ಳೆಯದು. ಜನರು ಉಡುಗೊರೆ ಪಡೆದು 'ಋಣ'ಕ್ಕೆ ಬೀಳುತ್ತಾರೆ. ವೋಟು ನೀಡಿ ಅದನ್ನು ಕಳೆದುಕೊಳ್ಳುತ್ತಾರೆ. ಮತದಾನವೊಂದು ಋಣ ಸಂದಾಯದ ಪ್ರಕ್ರಿಯೆಯಾಗಿರುವುದು ವಿಷಾದಕರ. ಈ ಭಾವನಾತ್ಮಕ ವಿಚಾರವೇ ಗೆಲ್ಲುವವನಿಗೆ ಅಸ್ತ್ರ.

ಹಣ ಪಡೆದು ವೋಟು ಹಾಕುವುದು ಭ್ರಷ್ಟಾಚಾರದಲ್ಲಿ ನಾವೂ ಕೈ ಜೋಡಿಸಿದಂತೆ. ವೋಟು ಹಾಕದೇ ಇರುವುದು ಕೂಡ ಭ್ರಷ್ಟಾಚಾರಕ್ಕೆ ನಾವು ಕೊಡುವ ಪ್ರೋತ್ಸಾಹ. ಹೀಗಾದಾಗ ಭ್ರಷ್ಟ ಸರ್ಕಾರದ ಬಗ್ಗೆ ಮಾತನಾಡುವ ಯಾವ ನೈತಿಕತೆ ನಮಗೆ ಉಳಿಯುತ್ತದೆ? ಜನ ಸರಿಯಾದ ದಾರಿಯಲ್ಲಿದ್ದರೆ ಮಾತ್ರ ಸರಿಯಾದ ಸರ್ಕಾರವನ್ನು ತರಬಹುದು. ಭ್ರಷ್ಟತೆಗೊಂದು ಪಾಠವನ್ನೂ ಕಲಿಸಬಹುದು.

ವಾಚಕರ ವಾಣಿ

ಹಣವಿಲ್ಲದ ಎಟಿಎಂ: ಗ್ರಾಹಕರಿಗೆ ಸಿಗಲಿ ಪರಿಹಾರ

ಹಣ ತರಲು ಭಾನುವಾರ ಸಂಜೆ ನನ್ನ ಮನೆ ಸಮೀಪದ ಎಟಿಎಂಗೆ ಹೋಗಿದ್ದೆ. ಆದರೆ ಎಟಿಎಂನಲ್ಲಿ ಹಣ ಇರಲಿಲ್ಲ. ಇದೇ ರೀತಿ ಹಲವು ಮಂದಿ ಹಣ ಇಲ್ಲದ್ದನ್ನು ನೋಡಿ ಗೊಣಗುತ್ತಾ ಹೊರಹೋದರು. ತುರ್ತು ಅಗತ್ಯಕ್ಕಾಗಿ ಹಣ ಪಡೆಯಬೇಕಾಗಿದ್ದರೂ ಬೇಸರದಿಂದ ಮನೆಗೆ ವಾಪಸ್ ಬಂದೆ. ಇದು ನನ್ನೊಬ್ಬನ ಕತೆಯಲ್ಲ, ಪ್ರತಿದಿನ ಬಹಳಷ್ಟು ಮಂದಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಎಟಿಎಂನಲ್ಲಿ ಹಣವಿಲ್ಲದೆ ಎಟಿಎಂನಿಂದ ಎಟಿಎಂಗೆ ಅಲೆಯುವ ಪರದಾಟ ದೇಶದಾದ್ಯಂತ ಸಾಮಾನ್ಯವಾಗಿದೆ.

ಗ್ರಾಹಕರ ಖಾತೆಯಲ್ಲಿ ಕನಿಷ್ಠ ಠೇವಣಿ ಮೊತ್ತ ಇಲ್ಲ ಎಂಬ ಕಾರಣಕ್ಕೆ ದಂಡ ವಿಧಿಸುವ ಬ್ಯಾಂಕ್‌ಗಳು, ಗ್ರಾಹಕ ಹಣ ಡ್ರಾ ಮಾಡಲು ಹೋದಾಗ ಎಟಿಎಂನಲ್ಲಿ ಹಣವಿಲ್ಲದ ಹೊಣೆಯನ್ನೂ ಹೊರಬೇಕಲ್ಲವೇ? ಎಟಿಎಂನಲ್ಲಿ ಹಣವಿಲ್ಲದೆ ಗ್ರಾಹಕ ಎಟಿಎಂನಿಂದ ಎಟಿಎಂಗೆ ಅಲೆಯುವಾಗ ಆಗುವ ವೆಚ್ಚ, ಸಮಯದ ನಷ್ಟ, ಮಾನಸಿಕ ಒತ್ತಡ, ಸಕಾಲದಲ್ಲಿ ಹಣ ದೊರೆಯದಿದ್ದಾಗ ಆಗುವ ಸಮಸ್ಯೆಗಳಿಗೆ ಬ್ಯಾಂಕ್‌ಗಳು ಕಾರಣವಾಗುತ್ತಿವೆ. ಆದ್ದರಿಂದ ಒಂದುವೇಳೆ ಬ್ಯಾಂಕ್ ಎಟಿಎಂನಲ್ಲಿ ಹಣ ಇಲ್ಲದಿದ್ದ ಪಕ್ಷದಲ್ಲಿ ಗ್ರಾಹಕರಿಗೆ ಪರಿಹಾರದ ರೂಪದಲ್ಲಿ ₹ 250 ನೀಡಲಿ. ಈ ಮೂಲಕ ಗ್ರಾಹಕನಿಗೆ ನ್ಯಾಯ ದೊರೆಯಲಿ.

ಮುಳ್ಳೂರು ಪ್ರಕಾಶ್, ಮೈಸೂರು

ಆಗೊಂದು ಮಾತು, ಈಗೊಂದು ಮಾತು...

'ಕೆಜೆಪಿ ಕಟ್ಟಿದ್ದು ಅಕ್ಷಮ್ಯ' ಎಂದಿದ್ದಾರೆ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ (ಪ್ರ.ವಾ., ಏ. 17). ನಿಜವಿರಬಹುದು, ಆದರೆ ಹೀಗೆ ಹೇಳುತ್ತಾ ಹೋದರೆ ಅವರು ಆಡುವ ಮಾತಿಗೆ ಅರ್ಥವೇನು ಉಳಿಯುತ್ತದೆ?! ಆಗ ಮತ್ತು ಈಗಲೂ ಯಡಿಯೂರಪ್ಪ ಅವರು ಆಡುತ್ತಿರುವ ಮಾತುಗಳಲ್ಲಿ ಅವರ ಕುಟುಂಬದ ರಾಜಕೀಯ ಸ್ವಾರ್ಥವೂ ಇಲ್ಲವೇ? ಆಗೊಂದು ಮಾತು ಈಗೊಂದು ಮಾತು ಬದಲಿಸುತ್ತಾ ಹೋದರೆ ಮತದಾರರಿರಲಿ ಅವರ ಹತ್ತಿರದ ಸಹವರ್ತಿಗಳ ಗತಿ ಏನು?

ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ ಅವರು ಸಹ ಆಗ ಅವರ ಸಹವರ್ತಿಗಳಾಗಿದ್ದವರೇ ಅಲ್ಲವೇ? ಆಗ ಇವರಿಬ್ಬರ ಮಾತಿಗೆ ಯಡಿಯೂರಪ್ಪ ಕವಡೆ ಕಾಸಿನ ಬೆಲೆಯನ್ನೂ ನೀಡಿರಲಿಲ್ಲ ಎಂಬುದನ್ನು ಜನರಿನ್ನೂ ಮರೆತಿಲ್ಲ ಅಲ್ಲವೇ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಕಠಿಣ ಕ್ರಮ ಕೈಗೊಳ್ಳಬೇಕು

ಕಾರಿನ ಬಾನೆಟ್ ಮೇಲೆ ಸಂಚಾರ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರನ್ನು 20 ಕಿ.ಮೀ. ದೂರಕ್ಕೆ ಕೊಂಡೊಯ್ದ ಆಘಾತಕಾರಿ ಘಟನೆ ನವಿ ಮುಂಬೈ ಉಪನಗರದಲ್ಲಿ ಶನಿವಾರ ನಡೆದಿರುವ ಬಗ್ಗೆ ವರದಿಯಾಗಿದೆ (ಪ್ರ.ವಾ., ಏ. 17). ಇತ್ತೀಚಿನ ದಿನಗಳಲ್ಲಿ ಇಂತಹ ಪ್ರಕರಣಗಳು ಅಲ್ಲಲ್ಲಿ ಆಗಾಗ್ಗೆ ವರದಿಯಾಗುತ್ತಲೇ ಇವೆ.

ಇಂತಹ ಅಪರಾಧ ಎಸಗುವ ಚಾಲಕರ ವಿರುದ್ಧ ಅತ್ಯಂತ ಕಠಿಣ ಕ್ರಮ ಕೈಗೊಳ್ಳುವುದಲ್ಲದೆ ಅವರ ಚಾಲನಾ ಪರವಾನಗಿಯನ್ನು ಕೆಲವು ವರ್ಷಗಳ ಕಾಲ ರದ್ದುಪಡಿಸುವ ಕೆಲಸ ಆಗಬೇಕು. ಅತಿ ಮುಖ್ಯವಾಗಿ, ಕರ್ತವ್ಯನಿರತ ಪೊಲೀಸ್ ಸಿಬ್ಬಂದಿಯ ಪ್ರಾಣ ರಕ್ಷಣೆಗೆ ಬೇಕಾದ ಉಪಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು.

ಕೆ.ಪ್ರಭಾಕರ, ಬೆಂಗಳೂರು

ದುಡಿಯುವವರಿಗೆ ಸಿಗಲಿ ಫಲ

ಜಗದೀಶ ಶೆಟ್ಟರ್ ಅವರ ವಿಚಾರವಾಗಿ ಎಂ.ಎಸ್.ರಘುನಾಥ್ ಅವರ ಅಭಿಪ್ರಾಯ (ವಾ.ವಾ., ಏ. 17) ಪೂರ್ವಗ್ರಹದಿಂದ ಕೂಡಿದೆ. ಇಷ್ಟು ವರ್ಷ ಪಕ್ಷಕ್ಕಾಗಿ ದುಡಿದ ಶೆಟ್ಟರ್ ಅವರು ಕೇಳಿದ್ದಾದರೂ ಏನು? ಬರೀ ಶಾಸಕ ಸ್ಥಾನಕ್ಕೆ ಟಿಕೆಟ್. ಅದು ತಪ್ಪೇ? ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಓಡಾಡಿ ಪಕ್ಷ ಕಟ್ಟಿದ ಲಾಲ್‌ಕೃಷ್ಣ ಅಡ್ವಾಣಿ ಇಂದು ಅಂಗಳದಲ್ಲಿ ಆಕಾಶ ನೋಡುತ್ತಾ ಕೂತಿದ್ದಾರೆ. ಪಕ್ಷದಲ್ಲಿ ದುಡಿಯುವವರು ದುಡಿಯುತ್ತಲೇ ಇರಬೇಕು, ಫಲ ಬೇರೆಯವರಿಗೆ ಎನ್ನುವುದು ಯಾವ ನ್ಯಾಯ? ಪಕ್ಷಕ್ಕಾಗಿ ದುಡಿದವರು ಜೀತದಾಳುಗಳಲ್ಲ ಎಂಬುದನ್ನು ನಾಯಕರು ತಿಳಿಯಲಿ.

ಪಿ.ಎನ್.ಎಂ. ಗುಪ್ತ, ಬೆಂಗಳೂರು

ಮತದಾನ ನೆನಪಿಸುವ ಅಗತ್ಯವಿದೆಯೇ?

ಇತ್ತೀಚೆಗೆ ಒಂದು ಚೋದ್ಯವನ್ನು ಕಂಡೆ. ಶಿರಸಿ ಮುನಿಸಿಪಾಲಿಟಿಯ ಅಂಗಳದಿಂದ ಮೆರವಣಿಗೆಯೊಂದು ಹೊರಟ ದೃಶ್ಯ. ಅದು ಜನರಿಗೆ ಮತದಾನವನ್ನು ನೆನಪಿಸುವ ಸರ್ಕಾರದ ಕಾರ್ಯಕ್ರಮ! 70 ವರ್ಷಗಳಿಂದಲೂ ಇಲ್ಲಿನ ಜನ ಮತ ಹಾಕುತ್ತಲೇ ಬಂದಿದ್ದಾರೆ. ಎಂಟು– ಹತ್ತು ವರ್ಷದ ಹುಡುಗನಿಗೂ ಮತದಾನದ ಬಗೆಗೆ, ಚುನಾವಣೆಗಳ ಬಗೆಗೆ ಜ್ಞಾನ ಇದೆ. ಅದಕ್ಕಾಗಿ ಸರ್ಕಾರದ ಬೊಕ್ಕಸಕ್ಕೆ ಕೈ ಹಾಕುವ ಅವಶ್ಯಕತೆ ಇರಲಿಲ್ಲ.

ಡಾ. ಈಶ್ವರ ಶಾಸ್ತ್ರಿ ಮೋಟಿನಸರ, ಶಿರಸಿ

ಅಧಿಕಾರ– ಸೇವೆ ಪರಸ್ಪರ ಅವಲಂಬಿತವಲ್ಲ

'ನಿಮ್ಮ ಸೇವೆ ಮಾಡಲು ನನ್ನನ್ನು ಗೆಲ್ಲಿಸಿ' ಎಂದು ಜೆಡಿಎಸ್ ಅಭ್ಯರ್ಥಿಯೊಬ್ಬರು ಅಲವತ್ತುಕೊಂಡು, ಕಣ್ಣೀರು ಹಾಕುತ್ತ ಮತ ಯಾಚನೆ ಮಾಡಿದ ಸಂಗತಿ ವರದಿಯಾಗಿದೆ (ಪ್ರ.ವಾ., ಏ.17). ಅಧಿಕಾರಕ್ಕೂ ಸೇವೆಗೂ ಸಂಬಂಧವಿಲ್ಲ. ಸೇವಾ ಮನೋಭಾವ ಇರುವ ಯಾರು ಬೇಕಾದರೂ ಸ್ವಯಂಪ್ರೇರಿತರಾಗಿ ಸಮಾಜಸೇವೆಗೆ ತೊಡಗಿಕೊಳ್ಳುತ್ತಾರೆ.

ಅಧಿಕಾರದ ಅವಕಾಶಗಳಿದ್ದರೂ ಗಾಂಧೀಜಿ ಅದಕ್ಕೆ ಆಸೆಪಡದೆ ಸೇವೆಯಲ್ಲಿ ತೊಡಗಿಕೊಂಡಿದ್ದನ್ನು ಕಾಣುತ್ತೇವೆ. ಹಾಗೆಯೇ ಶರಣರ ಸೇವಾ ಕೈಂಕರ್ಯದಲ್ಲಿಯೇ ಸಾರ್ಥಕತೆ ಕಂಡ ಬಸವಣ್ಣನವರಿಗೆ, 'ದಲಿತರು ಓದು ಬರಹ ಕಲಿತು ದೊಡ್ಡ ಹುದ್ದೆಗೆ ಸೇರಿ ಕಾರಿನಲ್ಲಿ ಓಡಾಡಿದಾಗ ಕಾರಿನ ದೂಳು ನನ್ನ ತಲೆಗೆ ತಾಗಿದರೆ ಜನ್ಮ ಸಾರ್ಥಕ' ಎಂದು ದಲಿತರ ಏಳಿಗೆಗಾಗಿ ದುಡಿದ ಕುದ್ಮುಲ್ ರಂಗರಾಯರಿಗೆ, ದಲಿತರು ಮತ್ತು ಹೆಣ್ಣುಮಕ್ಕಳ ಶಿಕ್ಷಣಕ್ಕೆ ತಮ್ಮ ಜೀವವನ್ನು ಮುಡಿಪಾಗಿಟ್ಟು ಅವರ ಸೇವೆ ಮಾಡಿದ ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ ಅವರಿಗೆ ಯಾವ ಅಧಿಕಾರವೂ ಇರಲಿಲ್ಲ. ಆದರೆ ಸೇವೆ ಮಾಡಬೇಕೆಂಬ ತುಡಿತವಿತ್ತು. ಇಂಥ ಬಹಳಷ್ಟು ಉದಾಹರಣೆಗಳು ನಮ್ಮ ಕಣ್ಣ ಮುಂದೆ ಇರುವಾಗ, 'ಅಧಿಕಾರ ಕೊಡಿ, ನಿಮ್ಮ ಸೇವೆ ಮಾಡುತ್ತೇನೆ' ಎಂಬ ಮಾತಿಗೆ ಅರ್ಥವಿಲ್ಲ ಎನಿಸುತ್ತದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಧಾನಿಯ ಪದವಿ ಪ್ರಮಾಣಪತ್ರದ ಸುತ್ತ

ಭಾರತದಲ್ಲಿ ಚುನಾಯಿತ ಜನಪ್ರತಿನಿಧಿಯಾಗಲು ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿ ಮಾಡಿಲ್ಲ. ಯಾವುದೇ ಚುನಾಯಿತ ಪ್ರತಿನಿಧಿ ಮುಖ್ಯಮಂತ್ರಿಯಾಗಲು ಅಥವಾ ಪ್ರಧಾನಿಯಾಗಲು ಕನಿಷ್ಠ ವಿದ್ಯಾರ್ಹತೆ ಬೇಕಿಲ್ಲ. ಆದರೆ, ಭಾರತದಲ್ಲಿ ಈವರೆಗೆ ಪ್ರಧಾನಿಯಾದವರೆಲ್ಲರೂ ಉನ್ನತ ಶಿಕ್ಷಣ ಪಡೆದಿದ್ದವರೇ. ಕಲಾ ವಿಭಾಗದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದಿದ್ದೇನೆ ಎಂದು ಈಗಿನ ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭಾ ಚುನಾವಣೆಯ ತಮ್ಮ ನಾಮಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಮೋದಿ ಅವರು ಪಡೆದಿರುವ ಪದವಿಗಳ ಬಗ್ಗೆ ವಿರೋಧ ಪಕ್ಷಗಳು ಸಂದೇಹ ವ್ಯಕ್ತಪಡಿಸುತ್ತಲೇ ಇವೆ. ಮಾಹಿತಿ ಹಕ್ಕು ಕಾಯ್ದೆ ಅಡಿ ಮೋದಿ ಅವರ ಪದವಿ ಪ್ರಮಾಣಪತ್ರಗಳನ್ನು ಕೇಳಿದ್ದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಗುಜರಾತ್ ಹೈಕೋರ್ಟ್ ₹25,000 ದಂಡ ವಿಧಿಸಿದೆ. ಈ ಬೆಳವಣಿಗೆಯು ಪ್ರಧಾನಿಯ ವಿದ್ಯಾರ್ಹತೆಯ ಬಗ್ಗೆ ಈಗ ಹೊಸ ಚರ್ಚೆಯನ್ನು ಹುಟ್ಟುಹಾಕಿದೆ

ಭಾರತದ ಪ್ರಧಾನಿಗಳ ವಿದ್ಯಾರ್ಹತೆ

ಪ್ರಧಾನಿ ಕಾರ್ಯಾಲಯದ ಆರ್ಕೈವ್‌ಗಳಲ್ಲಿ ಇರುವ ಮಾಹಿತಿ

ಜವಾಹರಲಾಲ್ ನೆಹರೂ
1947-1964: ಪ್ರಧಾನಿಯಾಗಿದ್ದ ಅವಧಿ
- ಲಂಡನ್‌ನ ಕೇಂಬ್ರಿಜ್ ವಿಶ್ವವಿದ್ಯಾಲಯ ಟ್ರಿನಿಟಿ ಕಾಲೇಜು–ನ್ಯಾಚುರಲ್ ಸೈನ್ಸ್ ವಿಷಯದಲ್ಲಿ ಆನರ್ಸ್ ಪದವಿ
- ಲಂಡನ್‌ನ ಇನ್ನರ್ ಟೆಂಪಲ್–ಕಾನೂನು ಪದವಿ



ಲಾಲ್ ಬಹದ್ದೂರ್ ಶಾಸ್ತ್ರಿ
1964-1966: ಪ್ರಧಾನಿಯಾಗಿದ್ದ ಅವಧಿ
- ಕಾಶಿ ವಿದ್ಯಾಪೀಠ-ತತ್ವಶಾಸ್ತ್ರ ಮತ್ತು ನೀತಿಶಾಸ್ತ್ರದಲ್ಲಿ ಪದವಿ



ಗುಲ್ಜಾರಿಲಾಲ್ ನಂದಾ
1964 ಮತ್ತು ***1966:*** ಪ್ರಧಾನಿಯಾಗಿದ್ದ ಅವಧಿ
- ಅಲಹಾಬಾದ್ ವಿಶ್ವವಿದ್ಯಾಲಯ–ಸಂಶೋಧನಾ ವಿದ್ಯಾರ್ಥಿಯಾಗಿ ಕಾರ್ಮಿಕ ಸಮಸ್ಯೆಗಳ ಅಧ್ಯಯನ. ಮುಂಬೈನ ನ್ಯಾಷನಲ್ ಕಾಲೇಜಿನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಕೆಲಸ

ಇಂದಿರಾ ಗಾಂಧಿ
1966-1977 ಮತ್ತು ***1980-1984:*** ಪ್ರಧಾನಿಯಾಗಿದ್ದ ಅವಧಿ
- ಶಾಂತಿನಿಕೇತನದ ವಿಶ್ವಭಾರತಿ ವಿಶ್ವವಿದ್ಯಾಲಯ ಮತ್ತು ಆಕ್ಸ್‌ಫರ್ಡ್‌ನ ಸಮರ್‌ವಿಲ್ಲೆ ಕಾಲೇಜಿನಲ್ಲಿ ವ್ಯಾಸಂಗ

ಮೊರಾರ್ಜಿ ದೇಸಾಯಿ
1977-1978: ಪ್ರಧಾನಿಯಾಗಿದ್ದ ಅವಧಿ
- ಮುಂಬೈನ 'ವಿಲ್ಸನ್ ಸಿವಿಲ್ ಸರ್ವೀಸ್'–ಪದವಿ; ಜಿಲ್ಲಾಧಿಕಾರಿಯಾಗಿ 12 ವರ್ಷ ಕೆಲಸ



ಚರಣ್ ಸಿಂಗ್
1979-1980: ಪ್ರಧಾನಿಯಾಗಿದ್ದ ಅವಧಿ
- ಆಗ್ರಾ ವಿಶ್ವವಿದ್ಯಾಲಯ–ಪದವಿ ಮತ್ತು ಸ್ನಾತಕೋತ್ತರ ಪದವಿ
- ಮೀರಠ್ ಕಾಲೇಜು–ಕಾನೂನು ಪದವಿ

ರಾಜೀವ್ ಗಾಂಧಿ
1984-1989: ಪ್ರಧಾನಿಯಾಗಿದ್ದ ಅವಧಿ
- ಕೇಂಬ್ರಿಜ್ ವಿಶ್ವವಿದ್ಯಾಲಯ–ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ

ವಿ.ಪಿ. ಸಿಂಗ್
1989-1990 ಪ್ರಧಾನಿಯಾಗಿದ್ದ ಅವಧಿ
- ಅಲಹಾಬಾದ್ ವಿಶ್ವವಿದ್ಯಾಲಯ–ಕಾನೂನು ಪದವಿ
- ಪೂನಾ ವಿಶ್ವವಿದ್ಯಾಲಯ–ಬಿಎಸ್‌ಸಿ ಪದವಿ

ಚಂದ್ರಶೇಖರ್
1990-1991: ಪ್ರಧಾನಿಯಾಗಿದ್ದ ಅವಧಿ
- ಅಲಹಾಬಾದ್ ವಿಶ್ವವಿದ್ಯಾಲಯ–ರಾಜಕೀಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ



ಪಿ.ವಿ. ನರಸಿಂಹ ರಾವ್
1991-1996: ಪ್ರಧಾನಿಯಾಗಿದ್ದ ಅವಧಿ
- ಉಸ್ಮಾನಿಯಾ, ಬಾಂಬೆ ಮತ್ತು ನಾಗ್ಪುರ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ–ಕಾನೂನು ಪದವಿ

ಎಚ್.ಡಿ. ದೇವೇಗೌಡ
1996-1997: ಪ್ರಧಾನಿಯಾಗಿದ್ದ ಅವಧಿ
- ಡಿಪ್ಲೊಮಾ ಇನ್ ಸಿವಿಲ್ ಎಂಜಿನಿಯರಿಂಗ್

ಅಟಲ್ ಬಿಹಾರಿ ವಾಜಪೇಯಿ
1996 ಮತ್ತು ***1998-2004:*** ಪ್ರಧಾನಿಯಾಗಿದ್ದ ಅವಧಿ
- ಕಾನ್ಪುರದ ದೇವ್ ಕಾಲೇಜು–ಕಾನೂನು ಪದವಿ; ರಾಜಕೀಯ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ

ಐ.ಕೆ ಗುಜ್ರಾಲ್
1997-1998: ಪ್ರಧಾನಿಯಾಗಿದ್ದ ಅವಧಿ
- ಲಾಹೋರ್‌ನ ಡಿಎವಿ ಕಾಲೇಜ್, ಹೇಯ್ಲಿ ಕಾಲೇಜ್ ಆಫ್ ಕಾಮರ್ಸ್ ಮತ್ತು ಫಾರ್ಮನ್ ಕ್ರಿಶ್ಚಿಯನ್ ಕಾಲೇಜು–ಬಿ.ಕಾಂ ಮತ್ತು ಎಂ.ಎ ಪದವಿ

ಡಾ. ಮನಮೋಹನ್ ಸಿಂಗ್
2004-2014 ಪ್ರಧಾನಿಯಾಗಿದ್ದ ಅವಧಿ
- ಕೇಂಬ್ರಿಜ್ ವಿಶ್ವವಿದ್ಯಾಲಯ–ಅರ್ಥಶಾಸ್ತ್ರದಲ್ಲಿ ಆನರ್ಸ್ ಪದವಿ
- ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ನ್ಯೂಫೀಲ್ಡ್ ಕಾಲೇಜು–ಅರ್ಥಶಾಸ್ತ್ರ ವಿಷಯದಲ್ಲಿ ಡಿ.ಫಿಲ್

ಪ್ರಜಾವಾಣಿ ವಾರ್ತೆ

ನರೇಂದ್ರ ಮೋದಿ ಅವರು 2014ರ ಲೋಕಸಭಾ ಚುನಾವಣೆಗೆ ಸಲ್ಲಿಸಿದ್ದ ನಾಮಪತ್ರದಲ್ಲಿ ನಾನು, ದೆಹಲಿ ವಿಶ್ವವಿದ್ಯಾಲಯದಲ್ಲಿ ಬ್ಯಾಚುಲರ್ಸ್ ಆಫ್ ಆರ್ಟ್ಸ್ ಮತ್ತು ಗುಜರಾತ್ ವಿಶ್ವವಿದ್ಯಾಲಯದಿಂದ ಮಾಸ್ಟರ್ ಆಫ್ ಆರ್ಟ್ಸ್ ಪದವಿ ಪಡೆದಿದ್ದೇನೆ ಎಂದು ಘೋಷಿಸಿಕೊಂಡಿದ್ದರು. ಮೋದಿ ಅವರು ಪಡೆದ ಪದವಿಗಳ ಬಗ್ಗೆ ವಿರೋಧ ಪಕ್ಷಗಳು ಸಂದೇಹ ವ್ಯಕ್ತಪಡಿಸಿದ್ದವು. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಪದೇ ಪದೇ ಈ ಬಗ್ಗೆ ಸಾರ್ವಜನಿಕವಾಗಿ ಮೋದಿ ಅವರನ್ನು ಪ್ರಶ್ನಿಸಿದ್ದರು. ಅಲ್ಲದೆ, ಮಾಹಿತಿ ಹಕ್ಕು ಕಾಯ್ದೆ ಅಡಿಯೂ ಅವರ ಪದವಿ ಪ್ರಮಾಣ ಪತ್ರಗಳ ಬಗ್ಗೆ ಮಾಹಿತಿ ಕೇಳಿದ್ದರು. ಕೇಜ್ರಿವಾಲ್ ಅವರ ಅರ್ಜಿಯ ಹಿಂದಿರುವ ಹಿತಾಸಕ್ತಿ ಸಾರ್ವಜನಿಕವಾದುದಲ್ಲ ಎಂದು ಗುಜರಾತ್ ವಿಶ್ವವಿದ್ಯಾಲಯವು ಗುಜರಾತ್ ಹೈಕೋರ್ಟ್ ಮೊರೆ ಹೋಗಿತ್ತು. ಗುಜರಾತ್ ವಿಶ್ವವಿದ್ಯಾಲಯದ ಮನವಿಯನ್ನು ಮಾನ್ಯ ಮಾಡಿದ ಹೈಕೋರ್ಟ್, ಕೇಜ್ರಿವಾಲ್ ಅವರಿಗೆ ದಂಡ ವಿಧಿಸಿತ್ತು. ಪ್ರಧಾನಿ ಕಾರ್ಯಾಲಯವು ಪ್ರಧಾನಿಯ ವಿದ್ಯಾರ್ಹತೆಯನ್ನು ಬಹಿರಂಗಪಡಿಸಬೇಕಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು.

ಈ ತೀರ್ಪನ್ನು ಗುಜರಾತ್ ವಿಶ್ವವಿದ್ಯಾಲಯವು ಸ್ವಾಗತಿಸಿತ್ತು. 'ವಿದ್ಯಾರ್ಹತೆಯು ಯಾವುದೇ ವ್ಯಕ್ತಿಯ ಖಾಸಗಿ ವಿಚಾರವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ವಿದ್ಯಾರ್ಹತೆ ಮತ್ತು ಶೈಕ್ಷಣಿಕ ಪ್ರಮಾಣಪತ್ರಗಳನ್ನು ಕೇಳುವುದು, ಅವರ ಖಾಸಗಿತನಕ್ಕೆ ಧಕ್ಕೆ ತಂದಂತಾಗುತ್ತದೆ' ಎಂದು ಗುಜರಾತ್ ವಿಶ್ವವಿದ್ಯಾಲಯ ಪ್ರತಿಪಾದಿಸಿತ್ತು. ವಿಶ್ವವಿದ್ಯಾಲಯದ ಈ ಪ್ರತಿಪಾದನೆಯು ಚರ್ಚೆಗೆ ಕಾರಣವಾಗಿದೆ.

ಪ್ರಧಾನಿ ಹುದ್ದೆಗೆ ಕನಿಷ್ಠ ವಿದ್ಯಾರ್ಹತೆ ಬೇಕಿಲ್ಲ ಎಂದು ಕಾನೂನು ಹೇಳಿರಬಹುದು. ಆದರೆ, ನಾಮಪತ್ರದಲ್ಲಿ ಸಲ್ಲಿಸಿರುವ ವಿವರಗಳು ಸಾರ್ವಜನಿಕವಾಗಿ ಲಭ್ಯವಿವೆ. ಅವೇ ವಿವರಗಳನ್ನು ಕೇಳುವುದು ಖಾಸಗಿತನಕ್ಕೆ ಧಕ್ಕೆ ಹೇಗಾಗುತ್ತದೆ ಎಂದು ವಿರೋಧ ಪಕ್ಷಗಳು ಪ್ರಶ್ನಿಸಿವೆ.

ಗುಜರಾತ್ ವಿಶ್ವವಿದ್ಯಾಲಯದ ಪ್ರತಿಪಾದನೆಗೆ ಎಎಪಿ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು. ಪ್ರಧಾನಿ ತಮ್ಮ ವೈಯಕ್ತಿಕ ಬದುಕಿನ ಖಾಸಗಿ ವಿಚಾರಗಳನ್ನು ಸಾರ್ವಜನಿಕವಾಗಿ ಹೇಳಿಕೊಂಡಿದ್ದಾರೆ. ಹೀಗಿದ್ದಾಗ ಅವರ ಶೈಕ್ಷಣಿಕ ಪ್ರಮಾಣಪತ್ರಗಳನ್ನು ಬಹಿರಂಗಪಡಿಸಲು ಕೇಳುವುದು ಅವರ ಖಾಸಗಿತನಕ್ಕೆ ಧಕ್ಕೆ ಹೇಗಾಗುತ್ತದೆ ಎಂದು ಎಎಪಿಯ ಹಲವು ನಾಯಕರು ಟ್ವೀಟ್ ಮತ್ತು ಫೇಸ್‌ಬುಕ್ ಪೋಸ್ಟ್‌ಗಳಲ್ಲಿ ಪ್ರಶ್ನಿಸಿದ್ದರು. ಈ ಪೋಸ್ಟ್‌ಗಳ ವಿರುದ್ಧ ಗುಜರಾತ್ ವಿಶ್ವವಿದ್ಯಾಲಯವು ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದೆ. ಈ ಮೊಕದ್ದಮೆಯಲ್ಲಿ ಕೇಜ್ರಿವಾಲ್ ಮತ್ತು ಎಎಪಿ ಸಂಸದ ಸಂಜಯ್ ಸಿಂಗ್ ಅವರಿಗೆ ಅಹಮದಾಬಾದ್‌ನ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಸಮನ್ಸ್ ಜಾರಿ ಮಾಡಿದೆ.



We, the Chancellor, Vice Chancellor and Members of the Court of the Gujarat University certify that the withinsigned Narendra Damoderdas Modi having been examined for the degree of Master of Arts (External) ... First Class ... Master of Arts (External) with Entire Political Science has been conferred on him at Ahmedabad on the thirtieth day of the month of March in the year one thousand nine hundred & eighty three. In Testimony whereof are set the Seal of the said University and the Signature of the said Vice Chancellor.

Verified and issued as Duplicate
I/c REGISTRAR GUJARAT UNIVERSITY
Duplicate Copy
SD/- K.S.SHASTRI Vice Chancellor

ಬಿಜೆಪಿ ತನ್ನ ಅಧಿಕೃತ ಟ್ವೀಟರ್ ಖಾತೆಯಲ್ಲಿ, 2016ರಲ್ಲಿ ಟ್ವೀಟ್ ಮಾಡಿದ್ದ ಮೋದಿ ಅವರ ಎಂ.ಎ ಪ್ರಮಾಣ ಪತ್ರ

'ಎಂಟೈರ್ ಪಾಲಿಟಿಕಲ್ ಸೈನ್ಸ್'ನಲ್ಲಿ ಎಂ.ಎ ಪದವಿ

ಬಿಜೆಪಿಯು ತನ್ನ ಅಧಿಕೃತ ಟ್ವಿಟರ್ ಖಾತೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ಮತ್ತು ಎಂ.ಎ ಪದವಿ ಪ್ರಮಾಣಪತ್ರಗಳನ್ನು ಟ್ವೀಟ್ ಮಾಡಿತ್ತು. ಮೋದಿ ಅವರು 1983ರಲ್ಲಿ ಗುಜರಾತ್ ವಿಶ್ವವಿದ್ಯಾಲಯದಿಂದ 'ಎಂಟೈರ್ ಪಾಲಿಟಿಕಲ್ ಸೈನ್ಸ್'ನಲ್ಲಿ ಎಂ.ಎ ಪದವಿ ಪಡೆದಿದ್ದಾರೆ ಎಂದು ಅವರ ಎಂ.ಎ ಪ್ರಮಾಣ ಪತ್ರವು ಹೇಳುತ್ತದೆ. ಈ ಪ್ರಮಾಣಪತ್ರದ ಬಗ್ಗೆಯೂ ಸಾಮಾಜಿಕ ಜಾಲತಾಣಗಳಲ್ಲಿ ಹಲವು ಆಕ್ಷೇಪಗಳು ವ್ಯಕ್ತವಾಗಿದ್ದವು

ಆಕ್ಷೇಪಗಳು

- ಎಂಟೈರ್ ಪಾಲಿಟಿಕಲ್ ಸೈನ್ಸ್ ಎಂಬ ವಿಷಯವನ್ನು ಗುಜರಾತ್ ವಿಶ್ವವಿದ್ಯಾಲಯ ಯಾವಾಗ ಬೋಧಿಸಿತ್ತು?
- ಮೋದಿ ಅವರ ಎಂ.ಎ ಪ್ರಮಾಣಪತ್ರದಲ್ಲಿ, ಪ್ರಮಾಣಪತ್ರದ ಕ್ರಮ ಸಂಖ್ಯೆ ಏಕಿಲ್ಲ?
- 1983ರಲ್ಲಿ ಯಾರೂ ಮುದ್ರಿತ ರೂಪದಲ್ಲಿ ಪ್ರಮಾಣಪತ್ರ ನೀಡುತ್ತಿರಲಿಲ್ಲ. ಆದರೆ, ಮೋದಿ ಅವರಿಗೆ ಮುದ್ರಿತ ಪ್ರಮಾಣ ಪತ್ರ ದೊರೆತದ್ದು ಹೇಗೆ?
- ಎಂ.ಎ ಮುದ್ರಿತ ಪ್ರಮಾಣಪತ್ರದಲ್ಲಿ 'ಮ್ಯಾರೇಜ್' ಫಾಂಟ್ ಬಳಸಲಾಗಿದೆ. ಈ ಫಾಂಟ್ ಬಳಕೆಗೆ ಬಂದಿದ್ದೇ 1992ರಲ್ಲಿ. ಬಳಕೆಯಲ್ಲೇ ಇಲ್ಲದಿದ್ದ ಫಾಂಟ್ ಅನ್ನು 1983ರಲ್ಲಿ ಹೇಗೆ ಬಳಸಲು ಸಾಧ್ಯ?

ಮೋದಿ ಅವರ ಬಿ.ಎ ಪದವಿ ಪ್ರಮಾಣಪತ್ರದ ಬಗ್ಗೆಯೂ ಇಂಥದ್ದೇ ಆಕ್ಷೇಪಗಳು ವ್ಯಕ್ತವಾಗಿದ್ದವು. ಆ ಪ್ರಮಾಣ ಪತ್ರ ಅಧಿಕೃತ ಎಂದು ದೆಹಲಿ ವಿಶ್ವವಿದ್ಯಾಲಯವು ದೃಢಪಡಿಸಿತ್ತು.

ಫಲಿತಾಂಶ ಪುಟದಲ್ಲಿ ಭಿನ್ನ ಹೆಸರು

ಪ್ರಮಾಣಪತ್ರದ ಪ್ರತಿಯನ್ನು ಕೋರಿ ಕೇಜ್ರಿವಾಲ್ ಅವರು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಅರ್ಜಿ ಸಲ್ಲಿಸಿದ ನಂತರ, ಗುಜರಾತ್ ವಿಶ್ವವಿದ್ಯಾಲಯವು ಮೋದಿ ಅವರ ಎಂ.ಎ ಫಲಿತಾಂಶದ ಪುಟವನ್ನು ತನ್ನ ಜಾಲತಾಣದಲ್ಲಿ ಪ್ರಕಟಿಸಿತು. ಅದು ಇನ್ನೂ ಲಭ್ಯವಿದೆ.

ನರೇಂದ್ರ ದಾಮೋದರದಾಸ್ ಮೋದಿ ಅವರು 1981ರಲ್ಲಿ ಎಂ.ಎ ಪಾರ್ಟ್–1 ಮತ್ತು 1982ರಲ್ಲಿ ಎಂ.ಎ ಪಾರ್ಟ್–2 ಪರೀಕ್ಷೆ ಬರೆದು, ಪಾಸಾಗಿದ್ದಾರೆ ಎಂದು ಗುಜರಾತ್ ವಿಶ್ವವಿದ್ಯಾಲಯವು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. ವಿಶ್ವವಿದ್ಯಾಲಯವು ಪ್ರಕಟಿಸಿರುವ ಫಲಿತಾಂಶ ಪುಟದಲ್ಲಿ, 'ಎಂಟೈರ್ ಪಾಲಿಟಿಕ್ಸ್', 'ಇಂಡಿಯನ್ ಪಾಲಿಟಿಕ್ಸ್-ಇಂಟರ್‌ನ್ಯಾಷನಲ್ ರಿಲೇಷನ್ಸ್', 'ರೀಸೆಂಟ್ ಪಾಲಿಟಿಕಲ್ ಥಾಟ್ಸ್/ ಕಂಪೇರಿಟೀವ್ ಪಾಲಿಟಿಕ್ಸ್' ವಿಷಯಗಳಲ್ಲಿ ಪರೀಕ್ಷೆ ಬರೆದು, ಪಾಸಾಗಿದ್ದಾರೆ ಎಂದು ವಿವರಿಸಲಾಗಿದೆ.

ಮೋದಿ ಅವರ ಎಂ.ಎ ಪದವಿಗೆ ಸಂಬಂಧಿಸಿದಂತೆ ಗುಜರಾತ್ ವಿಶ್ವ-ವಿದ್ಯಾಲಯವು ಪ್ರಕಟಿಸಿರುವ ಫಲಿತಾಂಶ ಪುಟದಲ್ಲಿ, ಮೋದಿ ಅವರ ಹೆಸರು ಎರಡು ರೀತಿಯಲ್ಲಿದೆ.



4250 MODI NARENDRAKUMAR DAMODERDAS
4250 61 48 60 68
4250 ENTIRE POLITICS GR G
4250 INDIAN POLITICS/INTERNATIONAL RELA
4250 RECENT POL THOUGHTS/COMPARATIVE POLI

ಎಂ.ಎ ಪಾರ್ಟ್–1ರ ಫಲಿತಾಂಶ ಪುಟದಲ್ಲಿ 'ಮೋದಿ ನರೇಂದ್ರಕುಮಾರ್ ದಾಮೋದರದಾಸ್' ಎಂದು ಬರೆಯಲಾಗಿದೆ



1804 MODI NARENDRA DAMODERDAS
1804 64 62 69 67
1804 ENTIRE POLITICAL SCIENCE
1804 EUROPEAN AND SOC POL THOUGHTS IN
1804 MODERN INDIA/POL ANALYSIS
1804 CONCEPT TOOLS/POL PSY AND SOC

ಎಂ.ಎ ಪಾರ್ಟ್–2ರ ಫಲಿತಾಂಶ ಪುಟದಲ್ಲಿ 'ಮೋದಿ ನರೇಂದ್ರ ದಾಮೋದರದಾಸ್' ಎಂದು ಬರೆಯಲಾಗಿದೆ

ಆಧಾರ: ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ನಾಮಪತ್ರ ಮತ್ತು ಪ್ರಮಾಣಪತ್ರ, ಗುಜರಾತ್ ವಿಶ್ವವಿದ್ಯಾಲಯದ ಪ್ರಕಟಣೆಗಳು, ಪಿಟಿಐ, ಪ್ರಧಾನಿ ಕಾರ್ಯಾಲಯದ ಆರ್ಕೈವ್‌ಗಳು, ಬ್ರಿಟಾನಿಕಾ



ಬಹುಭಾಷಾ 'ಸೈಂಧವ್'ಗೆ ಶ್ರದ್ಧಾ ಶ್ರೀನಾಥ್ ನಾಯಕಿ

'ಯೂಟರ್ನ್' ಸಿನಿಮಾ ಮೂಲಕ ಜನಪ್ರಿಯರಾಗಿದ್ದ ನಟಿ ಶ್ರದ್ಧಾ ಶ್ರೀನಾಥ್ ಸದ್ಯ ಬಹುಭಾಷಾ ನಟಿಯಾಗಿ ಮಿಂಚುತ್ತಿದ್ದಾರೆ. ತೆಲುಗು ನಟ ವಿಕ್ಟರಿ ವೆಂಕಟೇಶ್ ಅವರ 75ನೇ ಬಹುಭಾಷಾ ಸಿನಿಮಾ 'ಸೈಂಧವ್'ಗೆ ನಾಯಕಿಯಾಗಿ ಶ್ರದ್ಧಾ ಆಯ್ಕೆಯಾಗಿದ್ದಾರೆ.

ಶೈಲೇಶ್ ಕೋಲನು ನಿರ್ದೇಶನದ ಈ ಚಿತ್ರದ ಮೊದಲ ಹಂತದ ಚಿತ್ರೀಕರಣ ಮುಕ್ತಾಯಗೊಂಡಿದ್ದು, ಸದ್ಯ ವೈಜಾಗ್‌ನಲ್ಲಿ ಎರಡನೇ ಹಂತದ ಚಿತ್ರೀಕರಣ ನಡೆಯುತ್ತಿದೆ. ವೆಂಕಟ್ ಬೋಯನಪಲ್ಲಿ ನಿರ್ಮಿಸುತ್ತಿರುವ ಚಿತ್ರದಲ್ಲಿ ವಿಕ್ಟರಿ ವೆಂಕಟೇಶ್‌ಗೆ ಜೋಡಿಯಾಗಿ ನಟಿಸುತ್ತಿರುವ ಶ್ರದ್ಧಾ ಅವರ ಮೊದಲ ನೋಟ ಬಿಡುಗಡೆ ಮಾಡಲಾಗಿದೆ.

'ಸೈಂಧವ್' ಸಿನಿಮಾದಲ್ಲಿ ಶ್ರದ್ಧಾ ಮನೋಜ್ಞಾ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಅವರ ಮೊದಲ ಪೋಸ್ಟರ್ ಗಮನಸೆಳೆಯುತ್ತಿದೆ. 'ಜೆರ್ಸಿ' ಸಿನಿಮಾದಲ್ಲಿ ಕಾಣಿಸಿಕೊಂಡಿದ್ದ ಶ್ರದ್ಧಾ ಕನ್ನಡದ ಜತೆಗೆ ತಮಿಳು, ತೆಲುಗು, ಮಾಲಯಾಳಂ ಹಾಗೂ ಹಿಂದಿ ಭಾಷೆಯಲ್ಲಿಯೂ ಸಕ್ರಿಯರಾಗಿದ್ದಾರೆ.

ಬಾಲಿವುಡ್ ನಟ ನವಾಜುದ್ದೀನ್ ಸಿದ್ದಿಕಿ ಈ ಚಿತ್ರದಲ್ಲಿ ಮುಖ್ಯ ಪಾತ್ರವೊಂದರಲ್ಲಿ ಅಭಿನಯಿಸುತ್ತಿದ್ದಾರೆ. ಸಂತೋಷ್ ನಾರಾಯಣನ್ ಸಂಗೀತ ನಿರ್ದೇಶನ, ಎಸ್. ಮಣಿಕಂದನ್ ಛಾಯಾಗ್ರಹಣ, ಗ್ಯಾರಿ ಬಿಎಚ್ ಸಂಕಲನವಿದೆ. ಈ ವರ್ಷ ಕ್ರಿಸ್‌ಮಸ್ ವೇಳೆಗೆ ಚಿತ್ರ ತೆರೆಗೆ ಬರಲಿದೆ.

'ನೋಡದ ಪುಟ'ಗಳನ್ನು ತಿರುವುತ್ತಾ...

ನಿಜ ಜೀವನದಲ್ಲಿ ನಡೆದ ಘಟನೆಗಳನ್ನು ಕಥೆಯಾಗಿ ತೆರೆ ಮೇಲೆ ತರುವ ಒಂದು ಪ್ರಯತ್ನಕ್ಕೆ ಕೈಹಾಕಿದೆ 'ನೋಡದ ಪುಟಗಳು' ಚಿತ್ರತಂಡ. 'ಜೀವನಪೂರ್ತಿ ತಿರುವುಗಳು ಬರುತ್ತವೆ. ನಿನ್ನ ತಿರುವು ಬರುವ ತನಕ ಕಾಯಬೇಕು' ಎಂಬ ಅಡಿಬರಹವಿರುವ ಈ ಚಿತ್ರದ ಟ್ರೈಲರ್‌ಗೆ ನಟ ಸುಚೇಂದ್ರಪ್ರಸಾದ್ ಧ್ವನಿ ನೀಡಿ ಚಿತ್ರದ ಬಗೆಗಿನ ಕುತೂಹಲ ಹೆಚ್ಚಿಸಿದ್ದಾರೆ.

ಎಸ್.ವಸಂತ್‌ಕುಮಾರ್ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದು, ರಚನೆಯೂ ಇವರದ್ದೇ. ಸ್ವೀಟ್ ಆ್ಯಂಡ್ ಸಾಲ್ಟ್ ಮೂವೀಸ್ ಮುಖಾಂತರ ಈ ಸಿನಿಮಾವನ್ನು ವಸಂತ್ ಅವರೇ ನಿರ್ಮಾಣ ಮಾಡಿದ್ದಾರೆ. ಮೂಲತಃ ಟೆಕ್ಕಿಯಾಗಿರುವ ಇವರು ಬಣ್ಣದ ಲೋಕದ ಬಗ್ಗೆ ಇದ್ದ ಅಭಿಲಾಷೆಯಿಂದ ನಿರ್ದೇಶನದ ತರಬೇತಿ ಪಡೆದು ಇದೀಗ ಸ್ವತಂತ್ರ ನಿರ್ದೇಶಕರಾಗಿ ತೆರೆ ಮೇಲೆ ಬರಲು ಸಜ್ಜಾಗಿದ್ದಾರೆ. 'ಯಕ್ಷ' ಎಂಬ ಚಿತ್ರಕ್ಕೆ ಸಹಾಯಕ ನಿರ್ದೇಶಕನಾಗಿ ದುಡಿದ ಅನುಭವ ಇರುವ ಇವರು ಕಿರುಚಿತ್ರಗಳಿಗೂ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ವರ್ಷ ವರ್ಷ ನಿರ್ದಿಷ್ಟ ಅವಧಿಯಲ್ಲಿ ಒಂದಷ್ಟು ಘಟನೆಗಳು ನಡೆಯುತ್ತವೆ. ನಾಲ್ಕು ವಯೋಮಾನದವರ ಸನ್ನಿವೇಶಗಳು ಇಲ್ಲಿ ಬಂದು ಹೋಗುತ್ತವೆ. ಎಲ್ಲವೂ ಸೇರಿದರೆ ಕ್ಲೈಮಾಕ್ಸ್ ಆಗುತ್ತದೆ. ಆದರೆ ಒಬ್ಬರನ್ನೊಬ್ಬರು ಭೇಟಿ ಆಗುವುದಿಲ್ಲ. ಹೀಗೆ ಭಿನ್ನವಾದ ಸ್ಕ್ರೀನ್‌ಪ್ಲೇ ಚಿತ್ರದಲ್ಲಿದೆ' ಎನ್ನುತ್ತಾರೆ ವಸಂತ್. ಚಿತ್ರದಲ್ಲಿ ಪ್ರೀತಂ ಮಕ್ಕಿಹಳ್ಳಿ ನಾಯಕನಾಗಿ, ಕಾವ್ಯ ರಮೇಶ್ ನಾಯಕಿಯಾಗಿ ನಟಿಸಿದ್ದಾರೆ. ವಾಸು, ವಿಲಾಸ್ ಕುಲಕರ್ಣಿ, ಗೌತಂ ಜಿ., ಅಶೋಕ್ ರಾವ್, ಪಿ.ಬಿ.ರಾಜುನಾಯಕ, ಶಾಂತಿ.ಎಸ್.ಗೌಡ, ಸೌಭಾಗ್ಯ, ಮೋಹನ್‌ಕುಮಾರ್, ರಘು ಶ್ರೀವತ್ಸ, ಅಮೃತೇಶ್, ರೇಣುಕಗೌಡ ತಾರಾಗಣದಲ್ಲಿದ್ದಾರೆ.

ಪ್ರೀತಂ ಮಕ್ಕಿಹಳ್ಳಿ, ಕಾವ್ಯ ರಮೇಶ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಏಪ್ರಿಲ್ 18, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಕೃಷ್ಣ ತ್ರಯೋದಶಿ ಗಂ. 13-28 ನಕ್ಷತ್ರ: ಉತ್ತರಾಭಾದ್ರಾ ಗಂ. 25-01 ಯೋಗ: ಐಂದ್ರ ಗಂ. 18-09, ಕರಣ: ವಣಿಜ ಗಂ. 13-28, ಮೇಷ ಮಾಸದ 04 ನೇ ದಿನ, ಮಳೆನಕ್ಷತ್ರ: ಅಶ್ವಿನಿ 2.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-19 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 26 ರಂಜಾನ್
ಅದೃಷ್ಟ ಸಂಖ್ಯೆ : 3, 7

ಮೇಷ: ಈ ದಿನದ ಸೋಲಿನಿಂದ ಜೀವನದ ಬಗ್ಗೆ ನಿರುತ್ಸಾಹ ತಾಳದಿರಿ. ಈ ದಿನದ ನಿಮ್ಮ ಲೇವಾದೇವಿ ವ್ಯವಹಾರದಲ್ಲಿ ಭಾಗಶಃ ಅನುಕೂಲವಿದೆ. ರೈತರು ಉತ್ತಮ ತಳಿಯ ಬೆಳೆಯಿಂದ ಹೆಚ್ಚಿನ ಸಂತೋಷ ಹೊಂದುವರು.

ವೃಷಭ: ಮಸಾಲೆ ಪದಾರ್ಥ ಅಥವಾ ಖಾದ್ಯ ವಸ್ತುಗಳ ಮಾರಾಟದ ಉದ್ಯೋಗದವರು ನೆಮ್ಮದಿ ಕಾಣಬಹುದು. ಮಕ್ಕಳ ಅಗತ್ಯ ಪೂರೈಸಿ. ನೂತನ ವಾಹನ ಕೊಳ್ಳುವುದನ್ನು ಮುಂದೂಡಿ. ಕೆಲಸಗಳಲ್ಲಿ ಬದಲಾವಣೆ ಇಲ್ಲ.

ಮಿಥುನ: ವ್ಯಾಪಾರದಲ್ಲಿ ಅನಿರೀಕ್ಷಿತ ಬದಲಾವಣೆಯನ್ನು ಕಾಣುವ ಸಾಧ್ಯತೆ ಇದೆ. ಅಕ್ಕ ಪಕ್ಕದವರಲ್ಲಿ ಅನುಕಂಪ ಮತ್ತು ಸಹಾಯ ತೋರುವಿರಿ. ಆತ್ಮವಿಶ್ವಾಸ ಹೆಚ್ಚಿಸುವ ಕೆಲಸಗಳಲ್ಲಿ ತೊಡಗುವಿರಿ.

ಕರ್ಕಾಟಕ: ಹಣಕಾಸಿನ ವಿಚಾರದಲ್ಲಿ ನಿಮ್ಮ ಪರಿಶ್ರಮಕ್ಕೆ ತಕ್ಕ ಫಲ ದೊರೆಯುವುದು. ಕಾರ್ಯ ನಿಮಿತ್ತ ದೂರದ ಸಂಚಾರ ಅಗತ್ಯವಾಗಲಿದೆ. ಕೆಲಸಕಾರ್ಯಗಳಿಗೆ ಅಪೇಕ್ಷಿಸಿದ ಬೆಂಬಲ ನಿಮಗೆ ದೊರೆಯಲಿದೆ.

ಸಿಂಹ: ಕೋರ್ಟು ಕಚೇರಿ ವಿವಾದಗಳಲ್ಲಿ ರಾಜಿ ಮಾಡಿಕೊಳ್ಳುವ ಮನೋಭಾವದಿಂದ ಮುಂದುವರಿದಲ್ಲಿ, ಶುಭ ಅಂತ್ಯವನ್ನು ತಲುಪಲಿದೆ. ವೃತ್ತಿ ನಿರ್ವಹಿಸುವವರಿಗೆ ಪರಸ್ಪರ ವರ್ಗಾವಣೆ ಮಾಡಿಕೊಳ್ಳುವ ಅವಕಾಶ ಸಿಗುವುದು.

ಕನ್ಯಾ: ಯೋಜಿತ ಕೆಲಸ ಕಾರ್ಯಗಳನ್ನು ಕಾರ್ಯರೂಪಕ್ಕೆ ತರಲು ಹೆಚ್ಚಿನ ಪರಿಶ್ರಮ ಅಗತ್ಯವಿದೆ. ಜೀವನದಲ್ಲಿದ್ದಂತಹ ದುಃಖಗಳೆಲ್ಲಾ ದೂರಾಗುವುವು. ನಿಜ ಮಾರ್ಗದಿಂದ ಕಾರ್ಯ ಪ್ರವೃತ್ತರಾದಲ್ಲಿ ಅಭಿವೃದ್ಧಿ ಅನುಭವಕ್ಕೆ ಬರಲಿದೆ.

ತುಲಾ: ತಂದೆ-ತಾಯಿಯ ಆರೋಗ್ಯದಲ್ಲಿ ಏರುಪೇರಾಗಲಿದೆ. ವ್ಯವಹರಿಸುವಾಗ ಎಲ್ಲಾ ವಿಚಾರದಲ್ಲೂ ಸಾವಧಾನವಾಗಿ ಮುಂದುವರಿಯುವುದು ಉತ್ತಮ. ಹಿಂದಿನ ಕೆಲಸ ಕಾರ್ಯ ಪೂರ್ಣಗೊಳಿಸುವ ಬಗ್ಗೆ ಗಮನ ನೀಡಿ.

ವೃಶ್ಚಿಕ: ಆತ್ಮವಿಶ್ವಾಸದಿಂದಾಗಿ ಕೆಲಸಕಾರ್ಯಗಳಲ್ಲಿ ಅತಿಯಾದ ಯಶಸ್ಸು ಹೊಂದುವಿರಿ. ಪರಿಣಾಮಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅಗತ್ಯ. ಮಹಾಗಣಪತಿಯನ್ನು ಆರಾಧಿಸಿ ಶುಭ ಫಲ ಹೊಂದುವಿರಿ.

ಧನು: ಈ ದಿನದಲ್ಲಿ ಅವಮಾನಿಸಿದ ವ್ಯಕ್ತಿಗಳಿಂದ ಗೌರವ ಪಡೆಯುವಂತಹ ಕಾಲವನ್ನು ನಿರೀಕ್ಷಿಸಬಹುದು. ಸಹೋದ್ಯೋಗಿಗಳೊಡನೆ ಪ್ರೀತಿಯಿಂದ ವರ್ತಿಸುವುದರಿಂದ ಕೆಲಸ ಸರಾಗವಾಗಿ ಸಾಗಲಿದೆ.

ಮಕರ: ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಬಿಡಿ ಯಂತ್ರೋಪಕರಣಗಳ ಮಾರಾಟದಿಂದ ಲಾಭವಾಗುವುದು. ಅಭಿರುಚಿಗೆ ಹೊಂದುವಂಥ ಜನರೊಂದಿಗೆ ಒಡನಾಟ ಬೆಳೆಸಿಕೊಳ್ಳುವಿರಿ.

ಕುಂಭ: ರಾಜಕೀಯ ವರ್ಗದವರು ಸಾರ್ವಜನಿಕರ ಮನ್ನಣೆ ಪಡೆದುಕೊಂಡು ಉತ್ತಮ ಶುಭ ಫಲ ಅನುಭವಿಸುವ ನಿರೀಕ್ಷೆಯನ್ನು ಮಾಡಬಹುದು. ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಖರ್ಚು ಉಂಟಾಗುತ್ತದೆ.

ಮೀನ: ವಿದೇಶದಲ್ಲಿರುವ ಮಕ್ಕಳಿಂದ ಅಚ್ಚರಿಯ ಸುದ್ದಿ ಕೇಳುವಿರಿ. ಉದ್ಯೋಗ ಬದಲಿಸುವ ವಿಚಾರದಲ್ಲಿ ಚೆನ್ನಾಗಿ ಯೋಚಿಸುವುದು ಉತ್ತಮ. ಸಂಗೀತ-ನಾಟ್ಯ ಸಾಧಕರಿಗೆ ಉತ್ತಮವಾದ ವೇದಿಕೆ ದೊರೆತು ವಿದ್ವತ್ ಪ್ರದರ್ಶನವಾಗುವುದು

ಬೆರಗಿನ ಬೆಳಕು

ಗುರುರಾಜ ಕರಜಗಿ

ಹಗೆತನದ ಬೆಂಕಿ

ಜಗದ ಸೊಗದರಸಿಕೆಯ ಫಲ, ನೋಡು, ಬರೀ ಕಲಹ |
ಮೃಗಗಳಾವೇಶಗೊಳಲಪ್ಪುದಿನ್ನೇನು ? ||
ಮುಗಿಯುವುದು ಕಾಳ್ಗಿಚ್ಚು ವನ ಬೂದಿಯಾದಂದು
ಹಗೆತನವುಮಂತು ಬಿಡು – ಮಂಕುತಿಮ್ಮ || 864

ಪದ-ಅರ್ಥ: ಸೊಗದರಸಿಕೆಯ = ಸೊಗದ + ಅರಸಿಕೆಯ(ಹುಡುಕುವಿಕೆಯ), ಮೃಗಗಳಾವೇಶಗೊಳಲಪ್ಪುದಿನ್ನೇನು = ಮೃಗಗಳ + ಆವೇಶಗೊಳಲು + ಅಪ್ಪುದು(ಆಗುವುದು) + ಇನ್ನೇನು, ಕಾಳ್ಗಿಚ್ಚು = ಕಾಡಿನ ಬೆಂಕಿ, ಹಗೆತನವುಮಂತು = ಹಗೆತನವು + ಅಂತು.

ವಾಚ್ಯಾರ್ಥ: ಸುಖದ, ಸಂತೋಷದ ಅರಸುವಿಕೆಯ ಫಲ ಕೇವಲ ಕಲಹ. ಆಗ ಕಾಣುವುದು ಪಶುಗಳ ಆವೇಶದ ನಡಿಗೆ. ಕಾಡಿನಲ್ಲಿ ಬೆಂಕಿ ಹರಡಿದರೆ ಅದು ಬೂದಿಯಾದಾಗಲೇ ಮುಗಿಯುವುದು. ದ್ವೇಷ ಸಾಧನೆಯೂ ಹಾಗೆಯೇ.

ವಿವರಣೆ: ಪ್ರತಿಯೊಬ್ಬರಿಗೂ ಸುಖದ ಆಸೆ ಇದೆ. ಅವುಗಳಿಗೆ ಅಂತ್ಯವಿಲ್ಲ. ದೊರಕಬಹುದಾದ ಸುಖದ ಬೆನ್ನಟ್ಟಿ ಮನುಷ್ಯ ಓಡುತ್ತಾನೆ. ಸಿಖ್ ಧರ್ಮದ ಪರಮಪವಿತ್ರ ಗ್ರಂಥ ಗುರ್ಬಾನಿ (ಶ್ರೀ ಗುರು ಗ್ರಂಥ ಸಾಹಿಬ್) ಹೇಳುತ್ತದೆ, "ಸುಖ ಕಾ ಮಾಗೈ ಶುಭು ಕೋ ದು:ಖ ನ ಮಾಗೈ ಕೋಯಿ | ಸುಖಿ ಕೌ ದು:ಖು ಅಗಲಾ ಮನಮುಖಿ ಬೂಜ್ ನ ಹೋ ಕೋಯಿ ||" "ಪ್ರತಿಯೊಬ್ಬರೂ ಸುಖಕ್ಕಾಗಿ ಕೇಳುತ್ತಾರೆ ಆದರೆ ದು:ಖವನ್ನು ಯಾರೂ ಕೇಳುವುದಿಲ್ಲ. ಆದರೆ ಸುಖದ ಹಿನ್ನೆಲೆಯಲ್ಲೇ ದು:ಖವಿದೆ. ಅದನ್ನು ತಿಳಿದುಕೊಳ್ಳುವ ಮನವಿದ್ದವರು ಇಲ್ಲ". ನನಗೆ ಸಾಮ್ರಾಜ್ಯದ ಸಂತೋಷ ಬೇಕು ಎಂದು ದುರ್ಯೋಧನ ಛಲತೊಟ್ಟ. ಅದು ನಮ್ಮದೇ ಸಾಮ್ರಾಜ್ಯವೆಂದರು ಪಾಂಡವರು. ರಾಜ್ಯ ದೊರಕಿದರೆ ಸಂತೋಷ ದಕ್ಕೀತು ಎಂದುಕೊಂಡು ಹದಿನೆಂಟು ದಿನ ಹೋರಾಡಿದರು. ಯುದ್ಧದ ಕೊನೆಯಲ್ಲಿ ಉಳಿದವರು ಕೆಲವೇ ಜನರು. ಇಡೀ ಸಾಮ್ರಾಜ್ಯ ಸ್ಮಶಾನವಾಗಿತ್ತು. ಅಪೇಕ್ಷಿಸಿದ ಸುಖ ದೊರಕಿತೇ? ಈ ದಳ್ಳುರಿಯಲ್ಲಿ ಅಮಾಯಕರಾದ ಲಕ್ಷಾಂತರ ಸೈನಿಕರು ಬೂದಿಯಾಗಿ ಹೋದರು. ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ ಆಸೆಯಿಂದ ಸಾಮ್ರಾಟ್ ಅಶೋಕ ದಂಡನ್ನು ಹುರಿಗೊಳಿಸಿ ದಂಡಯಾತ್ರೆ ಮಾಡಿದ. ಕಳಿಂಗವನ್ನು ನೆಲಸಮಮಾಡಿಬಿಟ್ಟ. ರಾಜ್ಯ ಗೆದ್ದ ಸುಖದ ಹಿಂದೆಯೇ ನುಗ್ಗಿ ಬಂತು ಅನಾಹುತವನ್ನು ಮಾಡಿದ ಅಪರಾಧಿ ಪ್ರಜ್ಞೆ. ಅದು ಅವನನ್ನು ಬುದ್ಧದಾಸನನ್ನಾಗಿಸಿತು. ಕಗ್ಗ ಹೇಳುತ್ತದೆ, ಸುಖವನ್ನು ಅರಸುತ್ತ ಹೋದರೆ ದೊರಕುವುದು ಕಲಹ, ಅಶಾಂತಿ. ಯಾಕೆಂದರೆ ಸುಖಸಾಧನೆಯ ಉನ್ಮಾದದಲ್ಲಿದ್ದವನಲ್ಲಿ ಜಾಗ್ರತವಾಗಿರುವುದು ಪಶುಗಳ ಆವೇಶ. ಈ ಮನಸ್ಥಿತಿಯಲ್ಲಿದ್ದವರಿಂದ ಏನನ್ನು ಅಪೇಕ್ಷಿಸಲು ಸಾಧ್ಯ? ಶಾಂತಿ, ನೆಮ್ಮದಿ, ಸಹಬಾಳ್ವೆಗಳು ಇಂಥ ಮನೋಭೂಮಿಕೆಯಲ್ಲಿ ಫಲ ಹೊರಹೊಮ್ಮುವುದು ಅಸಾಧ್ಯ. ಕಾಡಿನಲ್ಲಿ ಬೆಂಕಿಬಿದ್ದರೆ, ಇಡೀ ಕಾಡನ್ನು ತಿಂದು ಭಸ್ಮ ಮಾಡಿಬಿಡುತ್ತದೆ. ನಳನಳಿಸುತ್ತಿದ್ದ ಮರ, ಗಿಡಗಳು ಸುಟ್ಟು ಹೋಗುತ್ತವೆ. ಅಂತೆಯೇ ದ್ವೇಷದ ಬೆಂಕಿ ಹುಟ್ಟಿಕೊಂಡರೆ ಅದರಲ್ಲಿ ಭಾಗಿಯಾದವರನ್ನೆಲ್ಲ ನಾಶಮಾಡುತ್ತದೆ. ದ್ವೇಷ ಮಾಡಿದವನು, ದ್ವೇಷಕ್ಕೆ ಒಳಗಾದವನು ಇಬ್ಬರೂ ಆ ಬೆಂಕಿಯಲ್ಲಿ ಕರಕಾಗಿ ಹೋಗುತ್ತಾರೆ. ದ್ವೇಷವೆನ್ನುವುದು ಬೆಂಕಿ ಇದ್ದಂತೆ. ನಾವು ಅದನ್ನು ಬೊಗಸೆಯಲ್ಲಿ ಹಿಡಿದು ಮತ್ತೊಬ್ಬರ ತಲೆಯ ಮೇಲೆ ಹಾಕಲು ಹೋದಾಗ, ಅದು ಮೊದಲು ಸುಡುವುದು ನನ್ನ ಕೈಯನ್ನು. ನಂತರ ಅದು ಇನ್ನೊಬ್ಬರನ್ನು ಸುಡುತ್ತದೆ. ಹೇಗೆ ಕಾಡಿನ ಬೆಂಕಿ ನಿರಪರಾಧಿಗಳಾದ ಗಿಡಮರಗಳನ್ನು ನಾಶಮಾಡುತ್ತದೋ, ಹಾಗೆಯೇ ದ್ವೇಷ ಭಾಗೀದಾರರನ್ನು ಮಾತ್ರವಲ್ಲ, ಅವರ ಪರಿವಾರದವರನ್ನು, ಅನೇಕ ಮುಗ್ಧರನ್ನು ನಾಶ ಮಾಡುತ್ತದೆ.

ಪದಬಂಧ 5292

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಈತ ನೆಲೆಗೊಳಿಸುವವನು (3)
4.ಮನ ಕೊನೆಗಿಟ್ಟಾಗಿನ ನಿಗ್ರಹ (3)
5.ಒಂದು ಸಂಖ್ಯೆಯನ್ನು ಇನ್ನೊಂದರಿಂದ ಗುಣಿಸುವಿಕೆ (4)
6.ಉತ್ತರ ದಿಕ್ಕಿದು (4)
8. ತೆಪರ ಕಟ್ಟಿರುವ ಸುಂಕ (2)
10.ತರತಮ ತೋರಿದಾತನ ಅಜ್ಞಾನ (2)
13.ದಾರದಲ್ಲಿ ಗೋಚರಿಸಿದ ಶ್ರೀಕೃಷ್ಣ (4)
14.ಸುಮಾರು ಮೂರು ಮೈಲುಗಳ ಒಂದು ಅಳತೆ (4)
15.ದಿಟ್ಟತನ ಇಲ್ಲಿ ಕಾಣುತ್ತಿದೆ (3)
16.ಅವನಿರುವ ಭೂಮಿ (3)

ಮೇಲಿಂದ ಕೆಳಕ್ಕೆ
1.ಹೊಟ್ಟೆಯ ಪಾಡಿಗಾಗಿ ತೋರುವ ವೈರಾಗ್ಯ (6)
2.ಬೇರೆಡೆಗೆ ಹೋಗದಂತೆ ತಡೆಹಿಡಿಯುವಿಕೆ (5)
3.ನಶೆಯಲ್ಲಿ ನೋಡಿದ ಭೂಪಟ (3)
5.ಒಳ್ಳೆಯ ಗುಣಗಳಿಂದ ಕೂಡಿರುವವ (4)
7.ಹಿಂದಾದುದನ್ನು ಮತ್ತೊಮ್ಮೆ ವಿವರವಾಗಿ ನೋಡುವುದು (6)
9.ದಾರಿಯಲ್ಲಿ ಪಡೆದಿರುವ ಅಪ್ಪಣೆ ಚೀಟಿ (4)
11.ಉತ್ತರದವನ ಸೊಕ್ಕೆಪರದೆ (5)
12.ರಂಧ್ರ ಕೊರೆಯುವ ಸಾಧನ (3)

5291ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಶೈಶವ 4.ಓಗರ
6.ರವಾನಿಸು 8.ಖಲಿಂದರ
10.ನವೀನ 13.ಕಸೂತಿ
15.ಹಸುಗೂಸು 19.ಮದಗಜ
21.ಒನಕೆ 22.ಲಿಲಾವು

ಮೇಲಿಂದ ಕೆಳಕ್ಕೆ:
1.ಶೈಥಿಲ್ಯ 2.ವರಮಾನ
3.ಧ್ವನಿ 5.ಗರದ
7.ಸುಖ 9.ರಶೀದಿ 11.ನರಕ
12.ಸಂದೇಹ 14.ತಿಲಾಂಜಲಿ
16.ಸುಮ್ಮಾನ 17.ಸುಮ
18.ಚಡಾವು 20.ದಟ್ಟಿ

ಸುಡೊಕು 5678

					7		1	4
8		7	6		4			
	2			8			5	
	4			1		9		
		1	8		5		7	
7	5			9		3	4	
	8			7		4		3
	3		4		8			
9		4			2		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ

5677 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಶಾ ಹೇಳಿಕೆಗೆ ಮಮತಾ ಕಿಡಿ

ಕೋಲ್ಕತ್ತ (ಪಿಟಿಐ): 'ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯು ಪಶ್ಚಿಮ ಬಂಗಾಳದಲ್ಲಿ 35 ಸ್ಥಾನಗಳನ್ನು ಗೆದ್ದರೆ, 2025ರ ನಂತರ ರಾಜ್ಯದಲ್ಲಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸರ್ಕಾರವೇ ಇರುವುದಿಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ನುಡಿದಿದ್ದಾರೆ. ಅವರ ಹೇಳಿಕೆಯು ಅಸಾಂವಿಧಾನಿಕವಾದುದು. ಪ್ರಜಾಪ್ರಭುತ್ವ ವಿರೋಧಿ ಹೇಳಿಕೆ ನೀಡಿರುವ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆಗ್ರಹಿಸಿದ್ದಾರೆ.

ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಕೇಂದ್ರದಲ್ಲಿ ಗೃಹ ಸಚಿವರಾಗಿರುವವರೊಬ್ಬರು ರಾಜ್ಯವೊಂದರಲ್ಲಿ ಅಸ್ತಿತ್ವದಲ್ಲಿರುವ ಚುನಾಯಿತ ಸರ್ಕಾರವೊಂದನ್ನು ಉರುಳಿಸುವ ಬಗ್ಗೆ ಹೇಗೆ ಮಾತನಾಡುತ್ತಾರೆ. ಈ ದೇಶದ ಸಂವಿಧಾನ ಬದಲಾಗಿದೆಯೇ? ಜವಾಬ್ದಾರಿಯುತ ಹುದ್ದೆಯಲ್ಲಿರುವ ಅವರು ಈ ರೀತಿ ಮಾತನಾಡಬಾರದು' ಎಂದು ತಿಳಿಸಿದ್ದಾರೆ.

'ರಾಜ್ಯದ ಜನರು 2026ರವರೆಗೂ ಆಡಳಿತ ನಡೆಸುವಂತೆ ನಮ್ಮ ಸರ್ಕಾರಕ್ಕೆ ಬಹುಮತ ನೀಡಿದ್ದಾರೆ. ಶಾ ಅವರು ಯಾವ ಕಾನೂನಿನ ಅಡಿಯಲ್ಲಿ ಚುನಾಯಿತ ಸರ್ಕಾರವೊಂದನ್ನು ಬುಡಮೇಲು ಮಾಡುವ ಬಗ್ಗೆ ಮಾತನಾಡಿದ್ದಾರೆ. ಕೇಂದ್ರ ಸರ್ಕಾರವು ಒಕ್ಕೂಟ ವ್ಯವಸ್ಥೆಯನ್ನು ನಿರ್ನಾಮ ಮಾಡಲು ಹೊರಟಿದೆ' ಎಂದು ದೂರಿದ್ದಾರೆ.

ಟಿಎಂಸಿಯ ಜೀವನ್ ಕೃಷ್ಣ ಸಹಾ ಬಂಧನ

ಕೋಲ್ಕತ್ತ/ಮುರ್ಶಿದಾಬಾದ್ (ಪಿಟಿಐ): ಶಾಲಾ ಸಿಬ್ಬಂದಿ ನೇಮಕಾತಿ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಟಿಎಂಸಿ ಶಾಸಕ ಜೀವನ್ ಕೃಷ್ಣ ಸಹಾ ಅವರನ್ನು ಸಿಬಿಐ ಸೋಮವಾರ ಮುರ್ಶಿದಾಬಾದ್‌ನ ಅವರ ನಿವಾಸದಲ್ಲಿ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅವರ ನಿವಾಸದಲ್ಲಿ ಶೋಧ ನಡೆಸಿದ ನಂತರ ಏ.14ರಿಂದ ಸಹಾ ಅವರನ್ನು ಸಿಬಿಐ ವಿಚಾರಣೆ ನಡೆಸುತ್ತಿತ್ತು.

ಬಂಧನದ ನಂತರ ಸಹಾ ಅವರನ್ನು ಅಲಿಪುರ ವಿಶೇಷ ಸಿಬಿಐ ಕೋರ್ಟ್ ಎದುರು ಹಾಜರುಪಡಿಸಲಾಗಿತ್ತು. ಈ ವೇಳೆ ಸಹಾ ಅವರ ಜಾಮೀನು ಅರ್ಜಿ ತಿರಸ್ಕರಿಸಿದ ನ್ಯಾಯಾಲಯವು ಅವರನ್ನು ನಾಲ್ಕು ದಿನ ತನಿಖಾ ಸಂಸ್ಥೆಯ ವಶಕ್ಕೆ ನೀಡಿದೆ.

ಹಗರಣಕ್ಕೆ ಸಂಬಂಧಿಸಿದಂತೆ ಸಹಾ ಅವರ ನಿವಾಸದಲ್ಲಿ ವಶಕ್ಕೆ ಪಡೆದ ದಾಖಲೆಗಳನ್ನು ಸಲ್ಲಿಸಿ, ಐದು ದಿನ ಅವರನ್ನು ವಶಕ್ಕೆ ನೀಡುವಂತೆ ಸಿಬಿಐ ಪರ ವಕೀಲರು ಮನವಿ ಮಾಡಿದರು. ಶೋಧ ಕಾರ್ಯಾಚರಣೆ ವೇಳೆ ಸಹಾ ಸಾಕ್ಷ್ಯ ನಾಶಕ್ಕೆ ಯತ್ನಿಸಿದ್ದು, ಮೊಬೈಲ್ ಎಸೆದಿದ್ದರು ಎಂದೂ ತಿಳಿಸಿದರು.

ಪ್ರಕರಣ ಸಂಬಂಧ ಸಿಬಿಐ ಮತ್ತು ಜಾರಿ ನಿರ್ದೇಶನಾಲಯ (ಇ.ಡಿ) ರಾಜ್ಯದಲ್ಲಿ ಸಹಾ ಸೇರಿ ಮೂವರು ಶಾಸಕರನ್ನು ಬಂಧಿಸಿವೆ.

'ಈ ಬಗ್ಗೆ ಪ್ರತಿಕ್ರಿಯೆ ನೀಡುವುದಿಲ್ಲ. ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಿ' ಎಂದು ಟಿಎಂಸಿ ವಕ್ತಾರ ಕುನಾಲ್ ಘೋಷ್ ತಿಳಿಸಿದ್ದಾರೆ.

'ಪ್ರಕರಣದಲ್ಲಿ ಬಂಧಿತರಾಗಿರುವ ಮೂರನೇ ಶಾಸಕ ಸಹಾ. ಭ್ರಷ್ಟಾಚಾರದಲ್ಲಿ ಮುಳುಗಿರುವ ಟಿಎಂಸಿ ನಾಯಕ ಪಟ್ಟಿ ಇನ್ನೂ ದೊಡ್ಡದಿದೆ. ಜನಪ್ರತಿನಿಧಿಗಳು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂಬುದಕ್ಕೆ ಇದು ಸಾಕ್ಷಿ' ಎಂದು ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ ದಿಲೀಪ್ ಘೋಷ್ ಅವರು ಆರೋಪಿಸಿದ್ದಾರೆ.

ಅತೀಕ್, ಅಶ್ರಫ್ ಹತ್ಯೆ: ಪ್ರತ್ಯೇಕ ತನಿಖಾ ಸಮಿತಿ ರಚಿಸಲು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆ

ಎಸ್‌ಐಟಿ ಹೆಗಲಿಗೆ ತನಿಖೆಯ ಹೊಣೆ

ಲಖನೌ (ಪಿಟಿಐ): ಪಾತಕಿ, ಮಾಜಿ ಸಂಸದ ಅತೀಕ್ ಅಹ್ಮದ್ ಮತ್ತು ಆತನ ಸಹೋದರ ಅಶ್ರಫ್ ಅಹ್ಮದ್ ಹತ್ಯೆ ಪ್ರಕರಣದ ನ್ಯಾಯಯುತ ತನಿಖೆಗೆ ಉತ್ತರ ಪ್ರದೇಶ ಸರ್ಕಾರವು ಮೂವರು ಹಿರಿಯ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದೆ.

ಎಸ್‌ಐಟಿಗೆ ನೆರವಾಗಲು ಹಾಗೂ ತನಿಖೆಯ ಪ್ರಗತಿ ಪರಿಶೀಲನೆ, ಉಸ್ತುವಾರಿಗೆ ಹಿರಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಡಿ ತಂಡ ರಚಿಸಲಾಗಿದೆ.

'ಅಪರಾಧ ವಿಭಾಗದ ಹೆಚ್ಚುವರಿ ಉಪ ಆಯುಕ್ತ ಸತೀಶ್ ಚಂದ್ರ ಎಸ್‌ಐಟಿ ಮುಖ್ಯಸ್ಥರಾಗಿದ್ದಾರೆ. ಕೊಟ್ವಾಲಿ ಠಾಣೆಯ ಎಸಿಪಿ ಸತ್ಯೇಂದ್ರ ಪ್ರಸಾದ್ ತಿವಾರಿ ಹಾಗೂ ಕ್ರೈಮ್ ಬ್ರಾಂಚ್‌ನ (ತನಿಖಾ ವಿಭಾಗ) ಇನ್‌ಸ್ಪೆಕ್ಟರ್ ಓಂ ಪ್ರಕಾಶ್ ಈ ತಂಡದ ಇತರ ಸದಸ್ಯರು. ಪೊಲೀಸರ ಕಸ್ಟಡಿಯಲ್ಲಿ ಇದ್ದಾಗಲೇ ಇಬ್ಬರು ಪಾತಕಿಗಳು ಬಲಿಯಾದ ಬಗ್ಗೆ ಎಸ್‌ಐಟಿ ತನಿಖೆ ನಡೆಸಲಿದೆ' ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ವಿಶೇಷ ಡಿಜಿಪಿ ಪ್ರಶಾಂತ್‌ಕುಮಾರ್ ತಿಳಿಸಿದ್ದಾರೆ.

ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆಗಳು/ಸಾಕ್ಷ್ಯಗಳು, ಎಲೆಕ್ಟ್ರಾನಿಕ್ ಪುರಾವೆಗಳು, ವೈಜ್ಞಾನಿಕ ಮತ್ತು ವಿಧಿವಿಜ್ಞಾನ ಪುರಾವೆಗಳು, ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ನಡೆಯುವ ಪರೀಕ್ಷಾ ಪ್ರಕ್ರಿಯೆಗಳಿಗೆ ಅನುಗುಣವಾಗಿ ತಂಡ ತನಿಖೆ ನಡೆಸಲಿದೆ. ಕಾಲಮಿತಿಯಲ್ಲಿ ನ್ಯಾಯಯುತ ಹಾಗೂ ವೈಜ್ಞಾನಿಕ ರೀತಿಯಲ್ಲಿ ತನಿಖೆ ಪೂರ್ಣಗೊಳಿಸಲು ಎಸ್‌ಐಟಿಗೆ ಸೂಚಿಸಲಾಗಿದೆ ಎಂದರು.

'ಎಸ್‌ಐಟಿ ತನಿಖೆಯ ಪರಿಶೀಲನೆಗೆ ಮೇಲ್ವಿಚಾರಣೆ ತಂಡವನ್ನೂ ರಚಿಸಲಾಗಿದೆ. ಇದರಿಂದ ನಿಗದಿತ ಅವಧಿಯಲ್ಲಿ ಗುಣಾತ್ಮಕವಾಗಿ ತನಿಖೆ ಪೂರ್ಣಗೊಳಿಸಿ ಸೂಕ್ತ ಕಾನೂನು ಕ್ರಮವಹಿಸಲು ಸಹಕಾರಿಯಾಗಲಿದೆ. ಪ್ರಯಾಗ್‌ರಾಜ್‌ನ ಎಡಿಜಿಪಿ ಈ ಮೇಲ್ವಿಚಾರಣಾ ಸಮಿತಿಯ ಮುಖ್ಯಸ್ಥರಾಗಿದ್ದಾರೆ' ಎಂದು ಡಿಜಿಪಿ ಆರ್.ಕೆ. ವಿಶ್ವಕರ್ಮ ಪತ್ರಕರ್ತರಿಗೆ ತಿಳಿಸಿದರು.

ಆರೋಪಿಗಳ ವಿರುದ್ಧ ಐಪಿಸಿ 302 (ಕೊಲೆ), 307 (ಕೊಲೆ ಯತ್ನ) ಹಾಗೂ ಶಸ್ತ್ರಾಸ್ತ್ರ ಕಾಯ್ದೆಯಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಗುಂಡಿನ ದಾಳಿ ಪ್ರಕರಣದ ಬಗ್ಗೆ ಈಗಾಗಲೇ ಯೋಗಿ ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶಿಸಿದೆ. ತನಿಖೆ ನಡೆಸಿ ಎರಡು ತಿಂಗಳೊಳಗೆ ಸರ್ಕಾರಕ್ಕೆ ವರದಿ ಸಲ್ಲಿಸಲು ಮೂವರು ಸದಸ್ಯರನ್ನು ಒಳಗೊಂಡ ನ್ಯಾಯಾಂಗ ಆಯೋಗಕ್ಕೆ ಸೂಚಿಸಲಾಗಿದೆ.

ಸುಪ್ರೀಂ ಕೋರ್ಟ್‌ಗೆ ಅರ್ಜಿ: ಅತೀಕ್, ಅಶ್ರಫ್ ಹತ್ಯೆ ತನಿಖೆಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಪರಿಣತರನ್ನು ಒಳಗೊಂಡ ಸ್ವತಂತ್ರ ತನಿಖಾ ಸಮಿತಿ ರಚಿಸುವಂತೆ ಕೋರಿ ವಕೀಲ ವಿಶಾಲ್ ತಿವಾರಿ ಎಂಬುವವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

2017ರಿಂದ ಉತ್ತರ ಪ್ರದೇಶದಲ್ಲಿ ನಡೆದಿರುವ 183 ಎನ್‌ಕೌಂಟರ್‌ಗಳ ಬಗ್ಗೆಯೂ ಈ ಸಮಿತಿಯಿಂದಲೇ ತನಿಖೆ ನಡೆಸಬೇಕು ಎಂದು ಅರ್ಜಿಯಲ್ಲಿ ಕೋರಿದ್ದಾರೆ.

ಅತೀಕ್, ಅಶ್ರಫ್ ಹತ್ಯೆ ಮತ್ತು ಅಸಾದ್ ಎನ್‌ಕೌಂಟರ್ ಹೊರತುಪಡಿಸಿ 183 ಕ್ರಿಮಿನಲ್‌ಗಳನ್ನು ಯೋಗಿ ಸರ್ಕಾರದ ಅವಧಿಯಲ್ಲಿ ಎನ್‌ಕೌಂಟರ್ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಇದು ಜನತಂತ್ರ ವ್ಯವಸ್ಥೆಗೆ ಅಪಾಯಕಾರಿ. ಕಾನೂನಿನಡಿ ನಕಲಿ ಎನ್‌ಕೌಂಟರ್‌ಗಳಿಗೆ ಅವಕಾಶವಿಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟ್‌ನ ಮೇಲ್ವಿಚಾರಣೆಯಲ್ಲಿಯೇ ತನಿಖೆ ನಡೆಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಪತ್ರಕರ್ತರ ರಕ್ಷಣೆಗೆ ಕ್ರಮ: ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರ ನಿರ್ದೇಶನದ ಮೇರೆಗೆ ಪತ್ರಕರ್ತರ ಸುರಕ್ಷತೆ ಮತ್ತು ರಕ್ಷಣೆಗೆ ಪ್ರತ್ಯೇಕ ಮಾರ್ಗಸೂಚಿಯನ್ನು ಸಿದ್ಧಪಡಿಸಲು ಕೇಂದ್ರ ಗೃಹ ಇಲಾಖೆಗೆ ಮುಂದಾಗಿದೆ.

ಪತ್ರಕರ್ತರ ಸೋಗಿನಲ್ಲಿ ಆರೋಪಿಗಳು ಕುಕೃತ್ಯ ಎಸಗಿದ್ದಾರೆ. ಘಟನೆ ವೇಳೆ ಸಂಭವಿಸಿದ ಕಾಲ್ತುಳಿತಕ್ಕೆ ಸಿಲುಕಿ ಪತ್ರಕರ್ತರೊಬ್ಬರು ಗಾಯಗೊಂಡಿದ್ದಾರೆ. ಹಾಗಾಗಿ, ಪತ್ರಕರ್ತರ ಸುರಕ್ಷತೆ ಮತ್ತು ಭದ್ರತೆಗೆ ಸರ್ಕಾರವು ಹೊಸ ಮಾರ್ಗಸೂಚಿ ರೂಪಿಸಲು ಮುಂದಾಗಿದೆ.

ಎರಡು ಪ್ರಕರಣ: ಆರೋಪಿಗಳಾದ ಲವ್ಲೇಶ್ ತಿವಾರಿ, ಸನ್ನಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿವೆ. ಅರುಣ್ ಮೌರ್ಯ ವಿರುದ್ಧವೂ ಅಕ್ರಮವಾಗಿ ಶಸ್ತ್ರಾಸ್ತ್ರ ಹೊಂದಿದ್ದ ಆರೋಪದ ಮೇಲೆ ಕಳೆದ ವರ್ಷ ಹರಿಯಾಣದ ಪಾಣಿಪತ್‌ನಲ್ಲಿ ಎರಡು ಪ್ರಕರಣ ದಾಖಲಾಗಿದ್ದು, ಆತನಿಗೆ ಜಾಮೀನು ಸಿಕ್ಕಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅತೀಕ್ ಪುತ್ರನಿದ್ದ ಜೈಲಿನಿಂದ ಆರೋಪಿಗಳ ಸ್ಥಳಾಂತರ

ಮೂವರು ಆರೋಪಿಗಳು ನ್ಯಾಯಾಂಗ ವಶದಲ್ಲಿದ್ದು, ಅವರನ್ನು ಪ್ರಯಾಗ್‌ರಾಜ್ ಕೇಂದ್ರ ಕಾರಾಗೃಹದಿಂದ ಪ್ರತಾಪಗಢ ಜಿಲ್ಲಾ ಕಾರಾಗೃಹಕ್ಕೆ ಸೋಮವಾರ ಮಧ್ಯಾಹ್ನ ಸ್ಥಳಾಂತರಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕೃತ್ಯ ಎಸಗಿದ ತಕ್ಷಣವೇ ಮೂವರನ್ನೂ ಪೊಲೀಸರು ವಶಕ್ಕೆ ಪಡೆದಿದ್ದರು. ಬಳಿಕ ಅವರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಪ್ರಯಾಗ್‌ರಾಜ್ ಜೈಲಿಗೆ ಕಳುಹಿಸಲಾಗಿತ್ತು.

ಪ್ರಕರಣವೊಂದರಲ್ಲಿ ಭಾಗಿಯಾದ ಆರೋಪದ ಹಿನ್ನೆಲೆಯಲ್ಲಿ ಅತೀಕ್ ಅಹ್ಮದ್‌ನ ಪುತ್ರ ಅಲಿ ಎಂಬಾತ ಪ್ರಯಾಗ್‌ರಾಜ್ ಕಾರಾಗೃಹದಲ್ಲಿಯೇ ಇದ್ದಾನೆ. ಹಾಗಾಗಿಯೇ, ಮುಂಜಾಗ್ರತಾ ಕ್ರಮವಾಗಿ ಆತನ ಅಪ್ಪನನ್ನು ಹತ್ಯೆ ಮಾಡಿದ ಆರೋಪಿಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ ಎನ್ನಲಾಗಿದೆ.

ಇದೊಂದು 'ಸಂಹಾರದ ಕಲೆ'!

ಅತೀಕ್, ಅಶ್ರಫ್ ಹತ್ಯೆ ಸಂಬಂಧ ಪೊಲೀಸರ ವೈಫಲ್ಯಗಳ ಬಗ್ಗೆ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಹಲವು ಪ್ರಶ್ನೆಗಳನ್ನು ಎತ್ತಿದ್ದಾರೆ. 'ರಾತ್ರಿ 10ಗಂಟೆಗೆ ಪಾತಕಿಗಳನ್ನು ವೈದ್ಯಕೀಯ ತಪಾಸಣೆಗೆ ಕರೆದೊಯ್ಯುವ ತುರ್ತು ಅಗತ್ಯ ಏನಿತ್ತು' ಎಂದು ಅವರು ಪ್ರಶ್ನಿಸಿದ್ದಾರೆ.

'ಪೊಲೀಸರು ಇಬ್ಬರನ್ನೂ ನಡುರಸ್ತೆಯಲ್ಲಿಯೇ ನಡೆಸಿಕೊಂಡು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆ ವೇಳೆ ಮಾಧ್ಯಮದವರು ಗುಂಪುಗೂಡಿದ್ದಾರೆ. ಆ ಗುಂಪಿನಲ್ಲಿಯೇ ಹಂತಕರು ಇದ್ದಾರೆ. ಆರೋಪಿಗಳಿಂದ ವಶಪಡಿಸಿಕೊಂಡಿರುವ ಪಿಸ್ತೂಲ್‌ಗಳ ಮೌಲ್ಯ ₹ 7 ಲಕ್ಷವಾಗಿದೆ. ಜೊತೆಗೆ, ಅವರು ಪರಿಣತ ಶೂಟರ್‌ಗಳಾಗಿದ್ದಾರೆ. ದಾಳಿ ಬಳಿಕ ಪೊಲೀಸರು ನಾಟಕೀಯವಾಗಿ ಅವರನ್ನು ವಶಕ್ಕೆ ಪಡೆದಿದ್ದಾರೆ. ಈ ಎಲ್ಲಾ ಬೆಳವಣಿಗೆಯನ್ನು ಅವಲೋಕಿಸಿದರೆ ಇದೊಂದು 'ಸಂಹಾರದ ಕಲೆ'ಯ ಭಾಗವಲ್ಲದೆ ಮತ್ತೇನು' ಎಂದು ಅವರು ಪ್ರಶ್ನಿಸಿದ್ದಾರೆ.

ಕಳಚಿದ ಬಿಜೆಪಿ ಮುಖವಾಡ: ಟೀಕೆ

ಅತೀಕ್, ಅಶ್ರಫ್ ಹತ್ಯೆ ಹಿನ್ನೆಲೆಯಲ್ಲಿ ಯೋಗಿ ಆದಿತ್ಯನಾಥ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವುದನ್ನು ಪ್ರತಿಪಕ್ಷಗಳು ಮುಂದುವರಿಸಿವೆ.

'ಪ್ರಯಾಗ್‌ರಾಜ್‌ನಲ್ಲಿ ನಡೆದ ಘಟನೆಯಿಂದ ಬಿಜೆಪಿಯ ನಿಜವಾದ ಮುಖವಾಡ ಕಳಚಿ ಬಿದ್ದಿದೆ' ಎಂದು ಜೆಡಿಯು ರಾಷ್ಟ್ರೀಯ ಅಧ್ಯಕ್ಷ ರಾಜೀವ್ ರಂಜನ್ (ಲಲನ್ ಸಿಂಗ್) ಟೀಕಿಸಿದ್ದಾರೆ.

'ಉತ್ತರ ಪ್ರದೇಶವು 'ಜಂಗಲ್ ರಾಜ್' ಹಿಡಿತದಲ್ಲಿರುವುದು ಸಾಬೀತಾಗಿದೆ. ಅಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದು ಬಿದ್ದಿದೆ. ಈ ಬಗ್ಗೆ ಬಿಜೆಪಿ ವರಿಷ್ಠರು ಮಾತನಾಡದೇ ಮೌನವಹಿಸಿದ್ದಾರೆ. 2024ರ ಲೋಕಸಭಾ ಚುನಾವಣೆಯಲ್ಲಿ ಜನರು ಇದಕ್ಕೆ ತಕ್ಕ ಉತ್ತರ ನೀಡಲಿದ್ದಾರೆ' ಎಂದಿದ್ದಾರೆ.

ಗುಂಡು ಹಾರಿಸಿ ವಿದ್ಯಾರ್ಥಿನಿ ಹತ್ಯೆ

ಜಲೌನ್ (ಉತ್ತರಪ್ರದೇಶ): ಪರೀಕ್ಷೆ ಮುಗಿಸಿ ಮರಳುತ್ತಿದ್ದ ಕಾಲೇಜು ವಿದ್ಯಾರ್ಥಿನಿಯನ್ನು ಸೋಮವಾರ ಇಲ್ಲಿ ಗುಂಡು ಹಾರಿಸಿ ಹತ್ಯೆ ಮಾಡಿದ್ದು, ಈ ಸಂಬಂಧ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

'ದ್ವಿತೀಯ ಬಿ.ಎ. ವಿದ್ಯಾರ್ಥಿನಿ ರೋಶನಿ ಎಂಬಾಕೆಯನ್ನು ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಗುಂಡು ಹಾರಿಸಿ ಕೊಂದು ಹಾಕಿದರು' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'ದುಷ್ಕರ್ಮಿಗಳು ರೋಶನಿ ಅವರ ತಲೆಗೆ ಗುಂಡು ಹಾರಿಸಿ ಪರಾರಿಯಾಗಿದ್ದರು. ಆಕೆಯ ಪೋಷಕರು ನೀಡಿರುವ ದೂರಿನ ಆಧಾರದಲ್ಲಿ ರಾಜ್ ಅಹಿರ್ವಾರ್ ಎಂಬಾತನನ್ನು ಬಂಧಿಸಿದ್ದೇವೆ' ಎಂದಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಬಟಿಂಡಾದಲ್ಲಿ ಸೈನಿಕರ ಹತ್ಯೆ ಪ್ರಕರಣ: ಯೋಧನ ಬಂಧನ

ಚಂಡೀಗಢ/ನವದೆಹಲಿ (ಪಿಟಿಐ): ಪಂಜಾಬ್‌ನ ಬಟಿಂಡಾ ಸೇನಾ ನೆಲೆಯಲ್ಲಿ ಗುಂಡಿನ ದಾಳಿ ನಡೆಸಿ ನಾಲ್ವರು ಯೋಧರನ್ನು ಹತ್ಯೆ ಮಾಡಿರುವ ಆರೋಪದಲ್ಲಿ ಯೋಧರೊಬ್ಬರನ್ನು ಕದ್ದ ರೈಫಲ್‌ನೊಂದಿಗೆ ಬಂಧಿಸಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ದೇಸಾಯಿ ಮೋಹನ್ ಬಂಧಿತ ಯೋಧ. ಗುಂಡಿನ ದಾಳಿ ನಡೆದಿದ್ದ ಸ್ಥಳದಲ್ಲಿ ರೈಫಲ್ ಮತ್ತು ಕೊಡಲಿ ಹಿಡಿದಿದ್ದ ಇಬ್ಬರನ್ನು ನೋಡಿರುವುದಾಗಿ ಮೋಹನ್ ಈ ಹಿಂದೆ ಹೇಳಿಕೆ ನೀಡಿದ್ದರು.

'ನಾಲ್ವರನ್ನು ತಾನೇ ಹತ್ಯೆ ಮಾಡಿರುವುದಾಗಿ ಮೋಹನ್ ತಪ್ಪೊಪ್ಪಿಕೊಂಡಿದ್ದಾರೆ' ಎಂದು ಬಟಿಂಡಾದ ಪೊಲೀಸ್ ವರಿಷ್ಠಾಧಿಕಾರಿ ಗುಲ್‌ನೀತ್ ಸಿಂಗ್ ಖುರಾನ ತಿಳಿಸಿದ್ದಾರೆ.

'ಕೃತ್ಯದ ಹಿಂದಿನ ಕಾರಣವನ್ನು ಬಹಿರಂಗಪಡಿಸಲಾಗದು. ಹತ್ಯೆಗೀಡಾಗಿರುವ ನಾಲ್ವರ ಯೋಧರೊಂದಿಗೆ ಮೋಹನ್‌ಗೆ ವೈಯಕ್ತಿಕ ದ್ವೇಷ ಇತ್ತು' ಎಂದಿದ್ದಾರೆ. ಗುಂಡಿನ ದಾಳಿ ನಡೆಯುವುದಕ್ಕೂ ಎರಡು ದಿನಗಳ ಮೊದಲು ಸೇನಾ ನೆಲೆಯಿಂದ ಇನ್ಸಾಸ್ ರೈಫಲ್ ಹಾಗೂ 28 ಸುತ್ತು ಮದ್ದುಗುಂಡುಗಳು ಕಾಣೆಯಾಗಿದ್ದವು.

ಸೇನಾ ನೆಲೆಯಿಂದ ಕದ್ದ ರೈಫಲ್ ಮತ್ತು ಮದ್ದುಗುಂಡುಗಳಿಂದಲೇ ಈ ಕೃತ್ಯ ಎಸಗಲಾಗಿದೆ ಎಂಬುದು ತನಿಖೆಯಿಂದ ತಿಳಿದು ಬಂದಿರುವುದಾಗಿ ಖುರಾನ ಅವರು ಹೇಳಿದ್ದಾರೆ.

'ಪೊಲೀಸರು ವಿಚಾರಣೆ ನಡೆಸಿದ ಬಳಿಕ ಫಿರಂಗಿ ದಳದ ದೇಸಾಯಿ ಮೋಹನ್ ಅವರು ತಾನು ಇನ್ಸಾಸ್ ರೈಫಲ್ ಕದ್ದು, ನಾಲ್ವರು ಸಹೋದ್ಯೋಗಿಗಳನ್ನು ಹತ್ಯೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ' ಎಂದು ಸೇನೆಯು ಹೇಳಿಕೆಯಲ್ಲಿ ತಿಳಿಸಿದೆ.

ನೀರಿಗೆ ಹಾಹಾಕಾರ

ಕೆರೆಯಂಗಳವೇ ಬಿರುಕು ಬಿಟ್ಟಿರುವಾಗ ಕುಡಿಯಲು ನೀರೆಲ್ಲಿ? ಪಶ್ಚಿಮ ಬಂಗಾಳದ ನಾಡಿಯಾ ಪ್ರದೇಶದಲ್ಲಿ ಬರ ಪರಿಸ್ಥಿತಿ ತಲೆದೋರಿದ್ದು ದೂರದ ಜಲಮೂಲದಿಂದ ಮಹಿಳೆಯರು ಕುಡಿಯುವ ನೀರು ಹೊತ್ತುತರುವ ಇಂಥ ದೃಶ್ಯ ಈಗ ಸಾಮಾನ್ಯ –ಪಿಟಿಐ ಚಿತ್ರ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಶಿಕ್ಷಣ
General
ಉಚಿತ ಶಿಕ್ಷಣ ಪಲೋಮ ಪಿ ಯು ಕಾಲೇಜು AS0983ಉಚಿತ ಪಿ ಯು ಕಾಮರ್ಸ್:EBACs, EBABm.ದಾಖಲಾತಿಗಳು ಪ್ರಾರಂಭವಾಗಿವೆ.ಉಚಿತ ಬಸ್ ಸೌಲಭ್ಯ.ಹೆಣ್ಣು ಮಕ್ಕಳಿಗೆ ಉಚಿತ ಹಾಸ್ಟೆಲ್ ಇರುತ್ತದೆ.ಮೋ:9902865643 ,9916805667ವಿಳಾಸ:ಬಂಡಾಪುರ ರಸ್ತೆ, ಗುಡ್ಡಹಟ್ಟಿ ಗೇಟ್, ಚಂದಾಪುರ, ಆನೇಕಲ್ ತಾಲ್ಲೂಕು. ಬೆಂಗಳೂರು.

ಇತರೆ
Books & Periodicals
ಪರಸ್ಪರರನ್ನು ಅರಿಯಿರಿ, ಸೌಹಾರ್ದದಿಂದ ಬಾಳಿರಿ, ಪವಿತ್ರ ಕುರ್ ಆನ್ ಓದಲಿಚ್ಛಿಸುವಿರಾ? ಇಸ್ಲಾಮನ್ನು ಅರಿಯಲಿಚ್ಛಿಸುವಿರಾ? ಓದಲು ಪುಸ್ತಕಗಳನ್ನು ರವಾನಿಸಲಾಗುವುದು.ಪೂರ್ಣ ಹೆಸರು, ಸ್ಪಷ್ಟ ವಿಳಾಸ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ಬರೆಯಿರಿ. ಇಸ್ಮಿಕಾ, ಪಿ.ಬಿ.ನಂ. 229, ಮಂಗಳೂರು–1, ಮೊಬೈಲ್:9060341799. Email:info@ismika.com, Web:www.ismika.com

ಭವಿಷ್ಯ
Astrology
★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ,ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು ನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

ಪ್ರವಾಸ
Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 08/06 ಚಾರ್ಧಾಮ್ ಯಾತ್ರ 17/05 ಕಾಶಿ,ಗಯ, ಅಯೋಧ್ಯ 29/05 ದೆಹಲಿ, ವೈಷ್ಣೋದೇವಿ, ಅಮೃತ್ಸರ್ 9591017782, 9964527782
ಸುವರ್ಣಯಾತ್ರ. 21/05/23.ಚಾರ್ಧಾಮ್ ಯಾತ್ರ .23/04/23 ಕಾಶಿ ಪ್ರವಾಸ 9/06/23 ನೇಪಾಳ ಪ್ರವಾಸ.19/06/23 ವೈಷ್ಣೋದೇವಿ, ಸಿಮ್ಲಾ, ಮನಾಲಿ.9019462508, 9008381022

CONNECT

DH DECCAN HERALD ಪ್ರಜಾವಾಣಿ
REAL ESTATE
BOOK YOUR REAL ESTATE AD IN DECCAN HERALD ALL KARNATAKA & PRAJAVANI ALL KARNATAKA
@800/-* Per Sqcm Single Column
@900/-* Per Sqcm Multi Column
For More Details Contact:
9731810277 | 9901641752
9845114560 | 9886213331
080- 45557163 | 45557164
conditions apply*

ಉದ್ಯೋಗಾವಕಾಶ
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಬೆಂಗಳೂರಿನ ಮನೆಗಳಲ್ಲಿ ಚಿಕ್ಕಮಕ್ಕಳನ್ನು /ವಯಸ್ಕರನ್ನು ನೋಡಿಕೊಳ್ಳಲು/ ಮನೆಕೆಲಸ / ಅಡಿಗೆ ಮಾಡಲು ಮಹಿಳೆಯರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ 13000-20000 ಉಚಿತ ಆಹಾರ, ವಸತಿ ನೀಡಲಾಗುತ್ತದೆ. 7338556119, 7259450815, 8197566700

Wanted
ಹೊಸ ಉದ್ಯಮ ಹಾಗೂ ಹಳೆಯ ಉದ್ಯಮಕ್ಕೆ ಆರ್ಥಿಕ ಸಹಾಯ ಹಾಗೂ ಸಲಹೆಗಳಿಗೆ ಸಂಪರ್ಕಿಸಿರಿ. Ph:9113972476, 8310891968, 8197534032.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಾವಿನ ಸಂಖ್ಯೆ 13ಕ್ಕೆ– ಇನ್ನಷ್ಟು ಜನ ಆಸ್ಪತ್ರೆಗೆ

ಬಿಸಿಲಿನಲ್ಲಿ ಸಮಾರಂಭ: ಸರ್ಕಾರದ ವಿರುದ್ಧ ಪ್ರತಿಪಕ್ಷಗಳ ಟೀಕಾಪ್ರಹಾರ

ಠಾಣೆ (ಪಿಟಿಐ): 'ಸಮಾಜ ಸುಧಾರಕ ಅಪ್ಪಾಸಾಹೇಬ್ ಧರ್ಮಾಧಿಕಾರಿ ಅವರಿಗೆ 'ಮಹಾರಾಷ್ಟ್ರ ಭೂಷಣ' ಪ್ರಶಸ್ತಿ ಪ್ರದಾನ ಮಾಡಲು ಮಹಾರಾಷ್ಟ್ರ ಸರ್ಕಾರ ಆಯೋಜಿಸಿದ್ದ ಸಮಾರಂಭದ ವೇಳೆ ಬಿಸಿಲಿನ ಝಳ ಹಾಗೂ ನಿರ್ಜಲೀಕರಣದಿಂದ ಬಳಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದವರ ಪೈಕಿ ಸೋಮವಾರ ಮತ್ತೆ ಇಬ್ಬರು ಅಸುನೀಗಿದ್ದಾರೆ. ಇದರೊಂದಿಗೆ ಮೃತರ ಸಂಖ್ಯೆ 13ಕ್ಕೆ ಏರಿಕೆಯಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಾರಾಷ್ಟ್ರದ ರಾಯಗಢ ಜಿಲ್ಲೆಯ ಖಾರ್‌ಘರ್ ಪ್ರದೇಶದಲ್ಲಿ ನಡೆದಿದ್ದ ಸಮಾರಂಭದಲ್ಲಿ ಲಕ್ಷಾಂತರ ಮಂದಿ ಪಾಲ್ಗೊಂಡಿದ್ದರು. ಈ ಪೈಕಿ ಭಾನುವಾರ 11 ಜನ ಮೃತಪಟ್ಟಿದ್ದರು.

'ಕಾಮೋಟೆಯಲ್ಲಿರುವ ಎಂಜಿಎಂ ಆಸ್ಪತ್ರೆಯಲ್ಲಿ ಎಂಟು ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ನೊಬ್ಬರಿಗೆ ಮತ್ತೊಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಎಲ್ಲರ ಆರೋಗ್ಯವೂ ಸ್ಥಿರವಾಗಿದೆ. ಹಲವರು ಗುಣಮುಖರಾಗಿದ್ದು ಅವರನ್ನು ಮನೆಗೆ ಕಳುಹಿಸಲಾಗಿದೆ' ಎಂದು ಪನ್ವೆಲ್ ಪುರಸಭೆಯ ಆಯುಕ್ತ ವಿಠಲ್ ಡಾಕೆ ಸೋಮವಾರ ತಿಳಿಸಿದ್ದಾರೆ.

'ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಹಿಳೆಯರು ಹಾಗೂ ಮಕ್ಕಳು ಬಿಸಿಲಿನ ತಾಪದಿಂದ ಬಳಲಿದ್ದರು. ಕುಡಿಯಲು ನೀರಿಲ್ಲದೆ ಪರಿತಪಿಸುತ್ತಿದ್ದರು. ಸ್ಥಳದಲ್ಲಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಹಾಗೂ ಅವರ ತಂಡದವರು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರು. ಕಾರ್ಯಕ್ರಮದ ವೇಳೆ ಕಾಲ್ತುಳಿತ ಉಂಟಾಗಿಲ್ಲ' ಎಂದು ನವಿ ಮುಂಬೈ ಪೊಲೀಸ್ ಪ್ರಕಟಣೆ ತಿಳಿಸಿದೆ. 'ವಿಪರೀತ ಬಿಸಿಲಿನಿಂದಾಗಿ ಹಲವು ಮಹಿಳೆಯರು ಕುಸಿದು ಬಿದ್ದಿದ್ದರು. ಕರ್ತವ್ಯದಲ್ಲಿದ್ದ ಪೊಲೀಸ್ ಸಿಬ್ಬಂದಿ ಬೈಕ್‌ಗಳ ಮೂಲಕ ಅವರನ್ನು ಜನಸಂದಣಿ ಪ್ರದೇಶದಿಂದ ವೈದ್ಯಕೀಯ ಕೇಂದ್ರಗಳಿಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದರು' ಎಂದು ಪ್ರಕಟಣೆ ಹೇಳಿದೆ.

ಕಾರ್ಯಕ್ರಮ ನಡೆದಿದ್ದ ಕಾಮೋಟೆಯಲ್ಲಿ ಭಾನುವಾರ ಗರಿಷ್ಠ 38 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು.

₹5 ಲಕ್ಷ ಪರಿಹಾರ: ರಾಜ್ಯ ಸರ್ಕಾರವು ಮೃತರ ಕುಟುಂಬದವರಿಗೆ ತಲಾ ₹5 ಲಕ್ಷ ಪರಿಹಾರ ಪ್ರಕಟಿಸಿದೆ. ಪ್ರಧಾನಿ ನರೇಂದ್ರ ಮೋದಿಯವರು ಮೃತರ ಕುಟುಂಬದವರಿಗೆ ತಲಾ ₹2 ಲಕ್ಷ ಪರಿಹಾರ ಹಾಗೂ ಅಸ್ವಸ್ಥರಾಗಿ ಆಸ್ಪತ್ರೆ ಸೇರಿರುವವರಿಗೆ ತಲಾ ₹50 ಸಾವಿರ ನೆರವು ಘೋಷಿಸಿದ್ದಾರೆ.

ತನಿಖೆಗೆ ಪವಾರ್ ಆಗ್ರಹ: 'ಮಧ್ಯಾಹ್ನದ ವೇಳೆಯಲ್ಲಿ ತಾಪಮಾನ ಅಧಿಕವಾಗಿರುತ್ತದೆ ಎಂಬುದು ಗೊತ್ತಿದ್ದರೂ ಕೂಡ ಆ ಸಮಯದಲ್ಲೇ ಕಾರ್ಯಕ್ರಮ ಆಯೋಜಿಸಿದ್ದರ ಹಿಂದಿನ ಉದ್ದೇಶವೇನು. ಈ ಕುರಿತು ತನಿಖೆಯಾಗಬೇಕು' ಎಂದು ಮಹಾರಾಷ್ಟ್ರ ವಿಧಾನಸಭೆ ವಿರೋಧ ಪಕ್ಷದ ನಾಯಕ ಅಜಿತ್ ಪವಾರ್ ಆಗ್ರಹಿಸಿದ್ದಾರೆ.

ಭಾನುವಾರ ರಾತ್ರಿ ಎಂಜಿಎಂ ಆಸ್ಪತ್ರೆಗೆ ಭೇಟಿ ನೀಡಿದ್ದ ಅವರು ಅಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದವರ ಆರೋಗ್ಯ ವಿಚಾರಿಸಿದ್ದಾರೆ.

ನಾಗರಿಕರ ಆಕ್ರೋಶ

ಮುಂಬೈ (ಪಿಟಿಐ): ಬಿಸಿಲು ಅಧಿಕವಾಗಿರುವ ಸಮಯದಲ್ಲಿ ಕಾರ್ಯಕ್ರಮ ಆಯೋಜಿಸಿ, ನಾಗರಿಕರ ಸಾವಿಗೆ ಕಾರಣವಾಗಿರುವ ರಾಜ್ಯ ಸರ್ಕಾರದ ವಿರುದ್ಧ ಹಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಏಪ್ರಿಲ್ ಅವಧಿಯಲ್ಲಿ ತಾಪಮಾನ ಹೆಚ್ಚಿರುತ್ತದೆ. ಈ ಸಮಯದಲ್ಲಿ ಕನಿಷ್ಠ 5 ನಿಮಿಷ ಹೊರಗೆ ಕೂರುವುದೂ ಕಷ್ಟ. ಹೀಗಿರುವಾಗ ಜನರು ಗಂಟೆಗಟ್ಟಲೆ ಕುಳಿತು ಕಾರ್ಯಕ್ರಮ ವೀಕ್ಷಿಸಿದ್ದಾರೆ. ಅವರಿಗೆ ಬಿಸಿಲಿನಿಂದ ರಕ್ಷಣೆ ಒದಗಿಸುವುದಕ್ಕಾಗಿ ಮೈದಾನದಲ್ಲಿ ತಾತ್ಕಾಲಿಕವಾಗಿ ಚಾವಣಿಯ ವ್ಯವಸ್ಥೆಯನ್ನಾದರೂ ಮಾಡಬೇಕಿತ್ತಲ್ಲವೇ. ಕುಡಿಯುವ ನೀರನ್ನಾದರೂ ಒದಗಿಸಬೇಕಿತ್ತಲ್ಲವೇ' ಎಂದು ನಾಗರಿಕರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

'ಸರ್ಕಾರದ ವಿವೇಚನಾರಹಿತ ನಿರ್ಧಾರದಿಂದಾಗಿ ಅಮಾಯಕರು ಜೀವ ಕಳೆದುಕೊಳ್ಳುವಂತಾಗಿದೆ' ಎಂದು ಕಿಡಿಕಾರಿದ್ದಾರೆ.

ಪೂರ್ವ ಭಾಗದಲ್ಲಿ ಬಿಸಿಗಾಳಿ ಮುಂದುವರಿಕೆ

'ದೇಶದ ಪೂರ್ವ ಭಾಗದ ಹಲವೆಡೆ ಮುಂದಿನ ನಾಲ್ಕು ದಿನ ಹಾಗೂ ವಾಯವ್ಯ ಭಾಗದಲ್ಲಿ ಮುಂದಿನ ಎರಡು ದಿನ ಬಿಸಿಗಾಳಿಯ ಪರಿಸ್ಥಿತಿ ಮುಂದುವರಿಯುವ ಸಾಧ್ಯತೆ ಇದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಪಶ್ಚಿಮ ಬಂಗಾಳ ಹಾಗೂ ಬಿಹಾರದಲ್ಲಿ ಮುಂದಿನ ನಾಲ್ಕು ದಿನ ಹಾಗೂ ಸಿಕ್ಕಿಂ, ಒಡಿಶಾ ಮತ್ತು ಜಾರ್ಖಂಡ್‌ನಲ್ಲಿ ಮುಂದಿನ ಎರಡು ದಿನ ಬಿಸಿಗಾಳಿಯ ಪರಿಸ್ಥಿತಿ ತಲೆದೋರಬಹುದು' ಎಂದು ಹೇಳಿದೆ.

> **ಬಿಸಿಲಿನ ತಾಪ ಅಧಿಕವಾಗಿರುವ ಅವಧಿಯಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಬಾರದೆಂಬ ಕನಿಷ್ಠ ಜ್ಞಾನವೂ ರಾಜ್ಯ ಸರ್ಕಾರಕ್ಕೆ ಇರಲಿಲ್ಲವೇ**
> **ಸಂಜಯ್ ರಾವುತ್,** ಶಿವಸೇನಾ ಸಂಸದ

> **ಈ ಘಟನೆ ಸರ್ಕಾರದ ನಿರ್ಲಕ್ಷ್ಯಕ್ಕೆ ಸಾಕ್ಷಿ. ಸ್ಥಳದಿಂದ ಹೊರಹೋಗಲು ಜನ ಧಾವಂತ ತೋರಿದ್ದರಿಂದ ಕಾಲ್ತುಳಿತ ಉಂಟಾಗಿದೆ ಎಂದು ಪ್ರತ್ಯಕ್ಷದರ್ಶಿಗಳೇ ಹೇಳಿದ್ದಾರೆ**
> **ಅಜಿತ್ ಪವಾರ್,** ವಿರೋಧ ಪಕ್ಷದ ನಾಯಕ

ಗೆಹಲೋತ್ ಸಭೆಗೆ ಸಚಿನ್ ಗೈರು

ಜೈಪುರ (ಪಿಟಿಐ): ಮುಂಬರುವ ರಾಜಸ್ಥಾನದ ವಿಧಾನಸಭಾ ಚುನಾವಣೆಗೆ ಸಿದ್ಧತೆ ನಡೆಸಲು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಸೋಮವಾರ ಕರೆದಿದ್ದ ಅಜ್ಮೀರ್ ಮತ್ತು ಜೋಧ್‌ಪುರ ಭಾಗದ ಶಾಸಕರ ಸಭೆಗೆ ಮುಖಂಡ ಸಚಿನ್ ಪೈಲಟ್ ಗೈರುಹಾಜರಾಗುವ ಮೂಲಕ ತಮ್ಮದೇ ಸರ್ಕಾರದ ವಿರುದ್ಧ ಹೋರಾಟವನ್ನು ಮುಂದುವರಿಸಿದ್ದಾರೆ.

ರಾಜಸ್ಥಾನದ ಕಾಂಗ್ರೆಸ್ ಉಸ್ತುವಾರಿ ಸುಖಜಿಂದರ್ ಸಿಂಗ್ ರಾಂಧವಾ, ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಗೋವಿಂದ್ ಸಿಂಗ್ ಡೊಟಾಸರಾ ಸಭೆಯಲ್ಲಿ ಪಾಲ್ಗೊಂಡಿದ್ದರು.

ಗೆಹಲೋತ್, ವರಿಷ್ಠರು ಚುನಾವಣೆಗೆ ರಣತಂತ್ರ ಹೆಣೆಯುವ ಸಂಬಂಧ ಪ್ರತಿಯೊಬ್ಬ ಶಾಸಕರನ್ನು ಪ್ರತ್ಯೇಕವಾಗಿ ಕರೆದು ಮಾತುಕತೆ ನಡೆಸಿದರು. ಈ ಸಭೆಯಲ್ಲಿ ಸಚಿನ್ ಕೂಡ ಭಾಗವಹಿಸಬೇಕಿತ್ತು. ಅವರು ಗೈರಾಗುವ ಮೂಲಕ ಬಂಡಾಯ ಮುಂದುವರಿಸಿದ್ದಾರೆ.

ಅಮರನಾಥ ಯಾತ್ರೆ: ನೋಂದಣಿ ಆರಂಭ

ಜಮ್ಮು (ಪಿಟಿಐ): ವಾರ್ಷಿಕ ಅಮರನಾಥ ಯಾತ್ರೆಯ ನೋಂದಣಿ ದೇಶದಾದ್ಯಂತ ಸೋಮವಾರ ಆರಂಭವಾಯಿತು. ನೋಂದಣಿ ಮಾಡಿಕೊಳ್ಳಲು ಜನರು ನಿಗದಿತ ಬ್ಯಾಂಕ್‌ನ ಶಾಖೆಗಳ ಮುಂದೆ ಸರತಿ ಸಾಲಿನಲ್ಲಿ ನಿಂತಿದ್ದರು.

62 ದಿನಗಳ ಯಾತ್ರೆ ಇದಾಗಿದ್ದು, ಜುಲೈ 1ರಿಂದ ಆಗಸ್ಟ್ 31ರ ವರೆಗೆ ನಡೆಯಲಿದೆ.

ದೇಶದಾದ್ಯಂತ ಪಿಎನ್‌ಬಿ 316 ಶಾಖೆಗಳು ಸೇರಿ ನಿಗದಿತ ಬ್ಯಾಂಕ್‌ಗಳ ಸುಮಾರು 542 ಶಾಖೆಗಳಲ್ಲಿ ಯಾತ್ರೆಗೆ ನೋಂದಣಿ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.

ಸಂಕ್ಷಿಪ್ತ ಸುದ್ದಿ

ವಝುಗೆ ಅನುಮತಿ; ಸಭೆ ನಡೆಸಲು ಜಿಲ್ಲಾಧಿಕಾರಿಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ವಾರಾಣಸಿಯ ಜ್ಞಾನವಾಪಿ ಮಸೀದಿ ಆವರಣದಲ್ಲಿ ಮುಸ್ಲಿಮರಿಗೆ ವಝುಗೆ (ಅಂಗ ಶುದ್ಧಿ ಆಚರಣೆ) ಅವಕಾಶ ನೀಡುವ ಕುರಿತು ಸಭೆ ನಡೆಸುವಂತೆ ವಾರಾಣಸಿ ಜಿಲ್ಲಾಧಿಕಾರಿಗೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ಮಂಗಳವಾರ ಸಭೆ ನಡೆಯಲಿದೆ. ಮಸೀದಿ ಆವರಣದಲ್ಲಿ ಹಿಂದೂ ಮತ್ತು ಮುಸ್ಲಿಮರಿಗೆ ಹೊಂದಿಕೆಯಾಗುವಂಥ ವ್ಯವಸ್ಥೆಯನ್ನು ರೂಪಿಸುವ ನಿಟ್ಟಿನಲ್ಲಿ ಸಭೆಯಲ್ಲಿ ತೆಗೆದುಕೊಳ್ಳಲಾಗುವ ನಿರ್ಧಾರವನ್ನು ಜಾರಿಗೊಳಿಸಲಾಗುವುದು ಎಂದು ಉತ್ತರ ಪ್ರದೇಶ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ಅವರು ಕೋರ್ಟ್‌ಗೆ ತಿಳಿಸಿದರು.

ರಂಜಾನ್ ಮಾಸಾಚರಣೆ ವೇಳೆ ಜ್ಞಾನವಾಪಿ ಆವರಣದಲ್ಲಿ ವಝುಗೆ ಅವಕಾಶ ನೀಡುವಂತೆ ಕೋರಿ ಅಂಜುಮಾನ್ ಇಂತೆಝಾಮಿಯಾ ಮಸ್ಜಿದ್ ಸಮಿತಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಸಂಘವೇ ಸಮಾಜ ಆಗಲಿದೆ: ಭಾಗವತ್

ಬುರಹಾನ್‌ಪುರ (ಮಧ್ಯಪ್ರದೇಶ) (ಪಿಟಿಐ): 'ರಾಷ್ಟ್ರೀಯ ಸ್ವಯಂಸೇವಕ ಸಂಘವು ಪ್ರತಿಯೊಬ್ಬರನ್ನೂ ತನ್ನವರೆಂದು ಭಾವಿಸುತ್ತದೆ. ಸಂಘದ ವಿಸ್ತರಣೆಯು ತ್ವರಿತಗತಿಯಲ್ಲಿ ನಡೆಯುತ್ತಿದ್ದು, ಮುಂದೊಂದು ದಿನ ಸಂಘವೇ ಒಂದು ಸಮಾಜವಾಗಿ ರೂಪುಗೊಳ್ಳಲಿದೆ. ಆಗ ಪ್ರತ್ಯೇಕ ಆರೆಸ್ಸೆಸ್‌ನ ಅಗತ್ಯವೇ ಇರುವುದಿಲ್ಲ' ಎಂದು ಆರೆಸ್ಸೆಸ್ ಸರಸಂಘಚಾಲಕ ಮೋಹನ್ ಭಾಗವತ್ ಸೋಮವಾರ ಹೇಳಿದ್ದಾರೆ.

ಹೆಡಗೇವಾರ್ ಸ್ಮಾರಕ ಸಮಿತಿಯ ಜಿಲ್ಲಾ ಕಚೇರಿ ಉದ್ಘಾಟಿಸಿದ ಬಳಿಕ ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಸಂಘವು ಇಡೀ ಸಮಾಜವನ್ನು ತನ್ನದೆಂದು ಭಾವಿಸುತ್ತದೆ. ಮುಂದೊಂದು ದಿನ ಇದು ಸಮಾಜದ ರೂಪ ತಳೆಯಲಿದೆ. ಆರೆಸ್ಸೆಸ್ ಕೈಗೊಂಡಿರುವ ಕೆಲಸಗಳು ಧರ್ಮ ರಕ್ಷಣೆ ಹಾಗೂ ಶಾಂತಿ ಪ್ರಿಯ ಜನರಲ್ಲಿ ಭದ್ರತೆಯ ಭಾವನೆ ಮೂಡಿಸುವ ಗುರಿಯನ್ನು ಹೊಂದಿವೆ. ಭಯೋತ್ಪಾದಕ ಮನಸ್ಥಿತಿಯುಳ್ಳವರಲ್ಲಿ ಭಯ ಹುಟ್ಟಿಸುವ ಉದ್ದೇಶವನ್ನೂ ಒಳಗೊಂಡಿದೆ' ಎಂದು ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,828
ಇಂದಿನ ಅಂತ್ಯ	17,707
▼	121
ದಿನದ ಕನಿಷ್ಠ	17,574

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹400
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹405

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1695 (1700)
ಸೋಯಾ (ರಿಫೈನ್ಡ್)	₹1015 (1030)
ಸೂರ್ಯಕಾಂತಿ (ರಿಫೈನ್ಡ್)	₹1070(1060)
ಪಾಮೋಲಿನ್	₹955 (947)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹131

(ಪ್ರತಿ ಕೆ.ಜಿಗೆ)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1000-1500
ಮಧ್ಯಮ	₹700-1000
ಸಣ್ಣ	₹300-700

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15200
ಎಸಿ	₹7980
ಆರ್‌ಪಿ	₹10500
ಆರ್‌ಸಿ	₹5610

ಸುಧಾರಿತ ಸೂಪರ್ ಕ್ಯಾರಿ ಬಿಡುಗಡೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ದೇಶದ ಮಾರುಕಟ್ಟೆಗೆ ಲಘು ವಾಣಿಜ್ಯ ವಾಹನ ಸೂಪರ್ ಕ್ಯಾರಿಯ ಸುಧಾರಿತ ಆವೃತ್ತಿಯನ್ನು ಬಿಡುಗಡೆ ಮಾಡಿದೆ.

1.2 ಲೀಟರ್ ಪೆಟ್ರೋಲ್ ಎಂಜಿನ್ ಹೊಂದಿರುವ ವಾಹನದ ಬೆಲೆ ₹ 5.30 ಲಕ್ಷದಿಂದ ₹ 6.30 ಲಕ್ಷದವರೆಗೆ ಇದೆ. ಸಿಎನ್‌ಜಿ ಆವೃತ್ತಿಯ ಬೆಲೆ ₹ 6.15 ಲಕ್ಷದಿಂದ ₹ 6.30 ಲಕ್ಷದವರೆಗಿದೆ.

ಹೊಸ ಎಂಜಿನ್ ಸುಧಾರಿತ 5 ಸ್ಪೀಡ್ ಮ್ಯಾನುಯಲ್ ಟ್ರಾನ್ಸ್‌ಮಿಷನ್ ಒಳಗೊಂಡಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತದ ಮಿನಿ-ಟ್ರಕ್ ಗ್ರಾಹಕರ ಅಗತ್ಯಗಳನ್ನು ಈಡೇರಿಸುವ ಉದ್ದೇಶದಿಂದ ಸೂಪರ್ ಕ್ಯಾರಿ ನಿರ್ಮಿಸಲಾಗಿದೆ. 2016ರಲ್ಲಿ ಬಿಡುಗಡೆ ಆದಾಗಿನಿಂದ ಈವರೆಗೆ 1.5 ಲಕ್ಷ ವಾಹನಗಳ ಮಾರಾಟ ಆಗಿದೆ ಎಂದು ಕಂಪನಿಯ ಮಾರುಕಟ್ಟೆ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ಗೆ ದಂಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆವೈಸಿ ನಿಯಮಗಳನ್ನು ಪಾಲಿಸದೇ ಇರುವ ಕಾರಣಕ್ಕಾಗಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ಗೆ ₹ 23.23 ಲಕ್ಷ ದಂಡ ವಿಧಿಸಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ಹೇಳಿದೆ.

ಬೆಂಗಳೂರು ಮೂಲದ ಬ್ಯಾಂಕ್‌ಗೆ ಈ ಕುರಿತು ಆರ್‌ಬಿಐ ಏಪ್ರಿಲ್ 11ರಂದು ಆದೇಶ ಹೊರಡಿಸಿದೆ.

ಮುಂಬೈ ಧಾರಣೆ

ಶೇಂಗಾ

17-4-2023

ಜಾವಾ 70/80(ಹೊಸ)	11550-11600
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1705 (1710)
ಒಂದು ವಾರದ ಡೆಲಿವರಿ	1700 (1705)
ಸೋಯಾ ಕಚ್ಚಾ	905 (905)
ಪಾಮ್ ವಾರದ ಡೆಲಿವರಿ	953 (945)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,250 (60,300)
ಬೆಳ್ಳಿ ಕೆ.ಜಿ 75,450 (75,300)

ಆವರಣದಲ್ಲಿ ಶನಿವಾರದ ಧಾರಣೆ

ಮುಕ್ತ ವ್ಯಾಪಾರ ವಹಿವಾಟು ಭಾರತ, ರಷ್ಯಾ ಮಾತುಕತೆ

ನವದೆಹಲಿ (ರಾಯಿಟರ್ಸ್): ಭಾರತ ಮತ್ತು ರಷ್ಯಾ ನಡುವೆ ಮುಕ್ತ ವ್ಯಾಪಾರ ವಹಿವಾಟು ಕುರಿತು ಮಾತುಕತೆ ನಡೆಯುತ್ತಿದೆ ಎಂದು ಎರಡೂ ದೇಶಗಳು ಹೇಳಿವೆ. ರಷ್ಯಾ-ಉಕ್ರೇನ್ ಸಮರ ಆರಂಭವಾದ ನಂತರದಲ್ಲಿ ಭಾರತ-ರಷ್ಯಾ ನಡುವೆ ಹುಲುಸಾಗಿ ಬೆಳೆದಿರುವ ವಾಣಿಜ್ಯ ಸಂಬಂಧಗಳನ್ನು ಈ ಮಾತುಕತೆಯು ಇನ್ನಷ್ಟು ಗಟ್ಟಿಗೊಳಿಸುವ ನಿರೀಕ್ಷೆ ಇದೆ.

ಕೇಂದ್ರ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ನವದೆಹಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ, ವಾಣಿಜ್ಯ ಒಪ್ಪಂದದ ವಿಚಾರವಾಗಿ ಭಾರತವು 'ಮುಂದಕ್ಕೆ ಸಾಗಿದೆ' ಎಂದು ಹೇಳಿದ್ದಾರೆ. ಮುಕ್ತ ವ್ಯಾಪಾರ ವಹಿವಾಟು ಒಪ್ಪಂದವು ಎರಡೂ ದೇಶಗಳ ಪಾಲಿಗೆ ಹೂಡಿಕೆಯನ್ನು ಖಾತರಿಪಡಿಸಲಿದೆ ಎಂದು ರಷ್ಯಾದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಡೆನಿಸ್ ಮಂಟುರೊವ್ ಹೇಳಿದ್ದಾರೆ.

ಉಕ್ರೇನ್ ಮೇಲಿನ ರಷ್ಯಾ ಆಕ್ರಮಣವನ್ನು ಭಾರತವು ಸ್ಪಷ್ಟವಾಗಿ ಟೀಕಿಸಿಲ್ಲ. ಆದರೆ ಬಿಕ್ಕಟ್ಟನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕು ಎಂದು ಕರೆಕೊಟ್ಟಿದೆ.

ಭಾರತಕ್ಕೆ ಹಿಂದಿನಿಂದಲೂ ರಕ್ಷಣಾ ಉಪಕರಣಗಳನ್ನು ಪೂರೈಸುತ್ತಿರುವ ರಷ್ಯಾ, ಈಗ ಭಾರತಕ್ಕೆ ಅತಿಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲವನ್ನು ಕೂಡ ಪೂರೈಕೆ ಮಾಡುತ್ತಿದೆ.

ಕಾರು, ವಿಮಾನ ಮತ್ತು ರೈಲು ಸೇರಿದಂತೆ ಪ್ರಮುಖ ವಲಯಗಳ ಐನೂರಕ್ಕೂ ಹೆಚ್ಚಿನ ಉತ್ಪನ್ನಗಳನ್ನು ಭಾರತದಿಂದ ಆಮದು ಮಾಡಿಕೊಳ್ಳಲು ರಷ್ಯಾ ಉತ್ಸುಕವಾಗಿದೆ ಎಂದು ರಾಯಿಟರ್ಸ್ ಕಳೆದ ವರ್ಷದ ನವೆಂಬರ್‌ನಲ್ಲಿ ವರದಿ ಮಾಡಿತ್ತು. ಭಾರತವು ರಷ್ಯಾ ಜೊತೆಗಿನ ವ್ಯಾಪಾರ ವಹಿವಾಟಿನಲ್ಲಿ ವ್ಯಾಪಾರ ಕೊರತೆ ಅಂತರವನ್ನು ಕಡಿಮೆ ಮಾಡಿಕೊಳ್ಳಲು ಬಯಸಿದೆ.

'ಗೋ ಫಸ್ಟ್'ನಿಂದ ಹೊರಬರಲು ವಾಡಿಯಾ ಸಮೂಹ ಚಿಂತನೆ?

ಬೆಂಗಳೂರು (ರಾಯಿಟರ್ಸ್): ನಷ್ಟದಲ್ಲಿರುವ 'ಗೋ ಫಸ್ಟ್' ವಿಮಾನಯಾನ ಕಂಪನಿಯಲ್ಲಿ ಹೊಂದಿರುವ ಷೇರುಗಳಲ್ಲಿ ಹೆಚ್ಚಿನ ಪಾಲನ್ನು ಮಾರಾಟ ಮಾಡಲು ಅಥವಾ ಕಂಪನಿಯಿಂದ ಸಂಪೂರ್ಣವಾಗಿ ಹೊರಬರಲು ವಾಡಿಯಾ ಸಮೂಹವು ಮಾತುಕತೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

ಕಾರ್ಯಾಚರಣೆಯ ಸಮಸ್ಯೆ ಗಳು ಬಗೆಹರಿಯದ ಹೊರತು ಹೆಚ್ಚಿನ ಹೂಡಿಕೆ ಮಾಡಲು ಸಮೂಹವು ಸಿದ್ಧವಿಲ್ಲ. ಕಂಪನಿಯ ಕಾರ್ಯಾಚರಣೆಗೆ ಅನುಕೂಲ ಆಗುವಂತೆ ಸಮೂಹವು 15 ತಿಂಗಳುಗಳಲ್ಲಿ ₹ 3 ಸಾವಿರ ಕೋಟಿ ಹೂಡಿಕೆ ಮಾಡಿದೆ ಎಂದು ಮೂಲಗಳು ಹೇಳಿವೆ. ಕುರಿತು ವಾಡಿಯಾ ಸಮೂಹ ಮತ್ತು 'ಗೋ ಫಸ್ಟ್' ಪ್ರತಿಕ್ರಿಯೆ ಲಭ್ಯವಾಗಿಲ್ಲ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-53000
ಕುಂದಾಪುರ	
ಹಳೆಚಾಲಿ	44000-44500
ಹೊಸಚಾಲಿ	35000-36000
ಕಾರ್ಕಳ	
ಹೊಸತು	30000-38000
ಹಳತು	40000-53000
ಕುಮಟಾ	
ಬಿಳಿಗೋಟು	27069-31045
ಕೋಕ	17869-29999
ಫ್ಯಾಕ್ಟರಿ	12089-20840
ಹಳೆಚಾಲಿ	36099-38499
ಹೊಸಚಾಲಿ	3339-36099
ಸಾಗರ	
ಬಿಳಿಗೋಟು	23611-30009
ಚಾಲಿ	32099-36500
ಕೋಕ	12099-32501
ಕೆಂಪುಗೋಟು	26599-36239
ರಾಶಿ	31899-47670
ಸಿಪ್ಪೆಗೋಟು	5091-47670
ಶಿವಮೊಗ್ಗ	
ಬೆಟ್ಟೆ	46299-52299
ಗೊರಬಲು	20000-35699
ರಾಶಿ	35009-47450
ಸರಕು	47599-82730
ಶಿರಸಿ	
ಬೆಟ್ಟೆ	31699-41699
ಬಿಳಿಗೋಟು	24628-31699
ಚಾಲಿ	33099-36899
ಕೆಂಪುಗೋಟು	23601-32899
ರಾಶಿ	41399-44608
ಯಲ್ಲಾಪುರ	
ಬಿಳಿಗೋಟು	26499-38868
ಚಾಲಿ	33499-38868
ಕೋಕ	16299-28929
ಕೆಂಪುಗೋಟು	27399-34210
ರಾಶಿ	40309-49395
ತಟ್ಟಿಬೆಟ್ಟೆ	36600-44090

ಮಾರ್ಚ್‌ನಲ್ಲಿ ಶೇ 1.34ಕ್ಕೆ ಇಳಿಕೆ: ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಾಹಿತಿ

ಸಗಟು ಹಣದುಬ್ಬರ 29 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ಸಗಟು ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರ ಪ್ರಮಾಣವು ಮಾರ್ಚ್ ತಿಂಗಳಲ್ಲಿ, 29 ತಿಂಗಳ ಕನಿಷ್ಠ ಮಟ್ಟವಾದ ಶೇಕಡ 1.34ಕ್ಕೆ ತಲುಪಿದೆ. ತಯಾರಿಸಿದ ಉತ್ಪನ್ನಗಳು ಮತ್ತು ಇಂಧನ ಉತ್ಪನ್ನಗಳ ಬೆಲೆ ಏರಿಕೆ ಪ್ರಮಾಣ ಕಡಿಮೆ ಆಗಿದ್ದು ಈ ಇಳಿಕೆಗೆ ಕಾರಣ.

ಮಾರ್ಚ್ ತಿಂಗಳನ್ನು ಪರಿಗಣಿಸಿದರೆ, ಸಗಟು ಹಣದುಬ್ಬರ ಪ್ರಮಾಣವು ಸತತ ಹತ್ತು ತಿಂಗಳುಗಳಿಂದ ಕಡಿಮೆ ಆಗುತ್ತಿದೆ. ಫೆಬ್ರುವರಿಯಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 3.85 ಆಗಿತ್ತು. ಇದು ಹಿಂದಿನ ವರ್ಷದ ಮಾರ್ಚ್ ತಿಂಗಳಲ್ಲಿ ಶೇ 14.3ರಷ್ಟು ಇತ್ತು.

ಮುಖ್ಯಾಂಶಗಳು

- ಸತತ ಹತ್ತು ತಿಂಗಳಿನಿಂದ ಇಳಿಮುಖ
- ತಯಾರಿಸಿದ ಉತ್ಪನ್ನ, ಇಂಧನ ಬೆಲೆ ಇಳಿಕೆ

'ಮೂಲ ಲೋಹಗಳು, ಆಹಾರ ಉತ್ಪನ್ನಗಳು, ಜವಳಿ, ಆಹಾರೇತರ ವಸ್ತುಗಳು, ಖನಿಜಗಳು, ರಬ್ಬರ್ ಮತ್ತು ಪ್ಲಾಸ್ಟಿಕ್ ಉತ್ಪನ್ನಗಳು, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಕಾಗದ ಮತ್ತು ಕಾಗದದ ಉತ್ಪನ್ನಗಳ ಬೆಲೆ ಇಳಿಕೆಯು ಸಗಟು ಹಣದುಬ್ಬರ ಇಳಿಕೆಗೆ ಕೊಡುಗೆ ನೀಡಿವೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಹೇಳಿದೆ.

2020ರ ಅಕ್ಟೋಬರ್‌ನಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 1.31ರಷ್ಟು ಇತ್ತು. ಈ ತಿಂಗಳ ನಂತರದ ಅತ್ಯಂತ ಕನಿಷ್ಠ ಪ್ರಮಾಣದ ಸಗಟು ಹಣದುಬ್ಬರವು ಈಗ ಮಾರ್ಚ್‌ನಲ್ಲಿ ದಾಖಲಾಗಿದೆ.

'ಆಹಾರ ವಸ್ತುಗಳ ಬೆಲೆ ಹೆಚ್ಚಾಗುತ್ತಿರುವುದು ತುಸು ಸಮಸ್ಯೆ ಉಂಟುಮಾಡಬಹುದು. ಗೋಧಿಯನ್ನು ಹೊರತುಪಡಿಸಿದರೆ, ಸಜ್ಜೆ, ಜೋಳ ಮತ್ತು ಬಾರ್ಲಿಯ ಬೆಲೆಯು ಇನ್ನಷ್ಟೇ ಕಡಿಮೆ ಆಗಬೇಕಿದೆ. ದ್ವಿದಳ ಧಾನ್ಯಗಳು, ಹಾಲು, ತರಕಾರಿಗಳು, ಹಣ್ಣುಗಳು, ಮಸಾಲೆ ಪದಾರ್ಥಗಳ ಬೆಲೆಯು ತಿಂಗಳಿನಿಂದ ತಿಂಗಳಿಗೆ ಹೆಚ್ಚಾಗುತ್ತಿದೆ. ಇದರ ಅರ್ಥ, ಏಕದಳ ಧಾನ್ಯಗಳನ್ನು ಹೊರತುಪಡಿಸಿದ ಆಹಾರ ಧಾನ್ಯಗಳ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ನಿಯಂತ್ರಿಸುವುದು ಸವಾಲಿನ ಕೆಲಸ ಆಗಬಹುದು' ಎಂದು ಎಕ್ವಿರಸ್ ಸೆಕ್ಯುರಿಟೀಸ್ ಹೇಳಿದೆ.

ಮಾರ್ಚ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ದರ ಕೂಡ ಕಡಿಮೆ ಆಗಿದೆ.

ಸಗಟು ಹಣದುಬ್ಬರ ಪ್ರಮಾಣವು ಕಡಿಮೆ ಆಗಿರುವುದು ಅದಕ್ಕೆ ಪೂರಕವಾಗಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಮಾರ್ಚ್ ತಿಂಗಳಲ್ಲಿ ಶೇ 5.66ಕ್ಕೆ ಇಳಿಕೆ ಆಗಿದೆ. ಇದು 15 ತಿಂಗಳ ಕನಿಷ್ಠ ಮಟ್ಟ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ ರೆಪೊ ದರವನ್ನು ನಿರ್ಧರಿಸುವಾಗ ಚಿಲ್ಲರೆ ಹಣದುಬ್ಬರ ದರವನ್ನು ಪರಿಗಣಿಸುತ್ತದೆ. ಹಣದುಬ್ಬರ ಪ್ರಮಾಣವು ಮುಂದಿನ ದಿನಗಳಲ್ಲಿ ಯಾವ ಮಟ್ಟಕ್ಕೆ ತಲುಪಬಹುದು ಎಂಬುದರ ಮೇಲೆ ಹವಾಮಾನ ಪರಿಸ್ಥಿತಿಯು ಹೆಚ್ಚಿನ ಪರಿಣಾಮ ಬೀರಲಿದೆ. ಬೇಸಿಗೆಯಲ್ಲಿ ಹಾಲಿನ ದರವು ಕಡಿಮೆ ಆಗುವ ಸಾಧ್ಯತೆ ಇಲ್ಲ ಎಂದು ಅಂದಾಜು ಮಾಡಿದೆ.

ಐ.ಟಿ., ತಂತ್ರಜ್ಞಾನ, ದೂರಸಂಪರ್ಕ ಷೇರುಗಳ ಮಾರಾಟ

ಒಂಬತ್ತು ದಿನಗಳ ಗೂಳಿ ಓಟಕ್ಕೆ ತಡೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಒಂಬತ್ತು ದಿನಗಳಿಂದ ನಡೆದದಿದ್ದ ಗೂಳಿ ಓಟಕ್ಕೆ ಸೋಮವಾರ ತಡೆ ಬಿದ್ದಿದೆ. ಐ.ಟಿ., ತಂತ್ರಜ್ಞಾನ ಮತ್ತು ದೂರಸಂಪರ್ಕ ವಲಯದ ಷೇರುಗಳು ಅತಿಯಾದ ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್, 520 ಅಂಶ ಇಳಿಕೆ ಕಂಡು 59,911 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ವಹಿವಾಟಿನ ಒಂದು ಹಂತದಲ್ಲಿ 988 ಅಂಶಗಳವರೆಗೂ ಇಳಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 121 ಅಂಶ ಇಳಿಕೆಯಾಗಿ 17,707 ಅಂಶಗಳಿಗೆ ತಲುಪಿತು.

ಐ.ಟಿ. ಕಂಪನಿಗಳ ತ್ರೈಮಾಸಿಕ ಫಲಿತಾಂಶವು ಮಾರುಕಟ್ಟೆ ನಿರೀಕ್ಷೆಗಿಂತಲೂ ಕಡಿಮೆ ಆಗಿರುವುದು ಮತ್ತು ಅವುಗಳ ಮುನ್ನೋಟದ ಬಗ್ಗೆ ಆತಂಕ ಇರುವುದು ಷೇರುಪೇಟೆಗಳಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮುಂಬರುವ ದಿನಗಳಲ್ಲಿಯೂ ಐ.ಟಿ. ಮತ್ತು ಬ್ಯಾಂಕಿಂಗ್ ವಲಯಗಳ ತ್ರೈಮಾಸಿಕ ವರದಿಯು ವಹಿವಾಟಿನ ಮೇಲೆ ಪರಿಣಾಮ ಉಂಟುಮಾಡಲಿದೆ. ಬ್ಯಾಂಕಿಂಗ್, ಹಣಕಾಸು, ವಾಹನ, ದೂರಸಂಪರ್ಕ ಮತ್ತು ಎಫ್‌ಎಂಸಿಜಿ ಷೇರುಗಳ ಗಳಿಕೆಯಿಂದಾಗಿ 2022–23ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ನಿಫ್ಟಿ–50 ಶೇ 10ರಷ್ಟು ಏರಿಕೆ ಕಾಣುವ ನಿರೀಕ್ಷೆ ಇದೆ ಎಂದೂ ಅವರು ತಿಳಿಸಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.31ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 86.04 ಡಾಲರ್‌ಗೆ ತಲುಪಿತು.

ರೂಪಾಯಿ 16 ಪೈಸೆ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸೋಮವಾರ 16 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹82.01ರಂತೆ ವಿನಿಮಯಗೊಂಡಿತು.

ಅಮೆರಿಕದ ಡಾಲರ್ ಮೌಲ್ಯ ಹೆಚ್ಚಾಗಿರುವುದು ಹಾಗೂ ದೇಶಿ ಷೇರುಪೇಟೆಗಳಲ್ಲಿ ನಡೆದ ನಕಾರಾತ್ಮಕ ವಹಿವಾಟಿನ ಪರಿಣಾಮದಿಂದಾಗಿ ರೂಪಾಯಿ ಮೌಲ್ಯ ಇಳಿಕೆ ಕಂಡಿತು.

ಕಚ್ಚಾ ತೈಲ ದರವು ಸ್ಥಿರವಾಗಿರುವುದ ಸಹ ರೂಪಾಯಿ ಮೇಲೆ ಪರಿಣಾಮ ಉಂಟುಮಾಡಿತು ಎಂದು ವರ್ತಕರು ಅಭಿಪ್ರಾಯಪಟ್ಟಿದ್ದಾರೆ.

ಇನ್ಫೊಸಿಸ್: ₹ 59,349 ಕೋಟಿ ನಷ್ಟ

ನವದೆಹಲಿ: ಇನ್ಫೊಸಿಸ್ ಕಂಪನಿಯ ನಿವ್ವಳ ಲಾಭವು ನಾಲ್ಕನೇ ತ್ರೈಮಾಸಿಕದಲ್ಲಿ ಮಾರುಕಟ್ಟೆ ನಿರೀಕ್ಷೆಗಿಂತ ಕಡಿಮೆ ಆಗಿದೆ. ಇದರಿಂದಾಗಿ ಕಂಪನಿಯ ಷೇರು ಮೌಲ್ಯವು ಸೋಮವಾರ ಶೇ 9ಕ್ಕೂ ಹೆಚ್ಚು ಕುಸಿತ ಕಂಡಿತು.

ಕಂಪನಿಯ ಮಾರುಕಟ್ಟೆ ಮೌಲ್ಯ ₹ 59,349 ಕೋಟಿಯಷ್ಟು ಕರಗಿ, ಒಟ್ಟು ಮಾರುಕಟ್ಟೆ ಮೌಲ್ಯ ₹ 5.21 ಲಕ್ಷ ಕೋಟಿಗೆ ಇಳಿಕೆ ಕಂಡಿತು.

ಬಿಎಸ್‌ಇನಲ್ಲಿ ಕಂಪನಿಯು ಷೇರು ಮೌಲ್ಯ ಶೇ 9.4ರಷ್ಟು ಇಳಿಕೆ ಕಂಡು ₹ 1,258ಕ್ಕೆ ತಲುಪಿತು. ದಿನದ ವಹಿವಾಟಿನ ಒಂದು ಹಂತದಲ್ಲಿ ಶೇ 12.21ರಷ್ಟು ಇಳಿಕೆ ಕಂಡು 52 ತಿಂಗಳ ಕನಿಷ್ಠ ಮಟ್ಟವಾದ ₹ 1,219ಕ್ಕೆ ತಲುಪಿತ್ತು. ಎನ್‌ಎಸ್‌ಇನಲ್ಲಿ ಷೇರು ಮೌಲ್ಯ ಶೇ 9.37ರಷ್ಟು ಕಡಿಮೆ ಆಗಿ ₹ 1,259ಕ್ಕೆ ತಲುಪಿತು.

ಟೆಕ್ ಮಹೀಂದ್ರ, ಎಚ್‌ಸಿಎಲ್ ಟೆಕ್ನಾಲಜೀಸ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಮತ್ತು ವಿಪ್ರೊ ಷೇರುಗಳು ಶೇ 1–5.25ರವರೆಗೂ ಇಳಿಕೆ ಕಂಡಿವೆ. ಐ.ಟಿ. ಸೂಚ್ಯಂಕವು ಶೇ 4.77ರಷ್ಟು ಕಡಿಮೆ ಆಗಿ 26,887ಕ್ಕೆ ತಲುಪಿತು.

ನಿಯಮ ಉಲ್ಲಂಘಿಸಿದ ಭಾರತ: ಡಬ್ಲ್ಯುಟಿಒ ಸಮಿತಿ

ಜಿನೀವಾ (ರಾಯಿಟರ್ಸ್): ಭಾರತವು ಜಾಗತಿಕ ವ್ಯಾಪಾರ ನಿಯಮಗಳನ್ನು ಉಲ್ಲಂಘಿಸಿದೆ ಎಂದು ಐ.ಟಿ. ಉತ್ಪನ್ನಗಳ ಆಮದು ಸುಂಕಕ್ಕೆ ಸಂಬಂಧಿಸಿದಂತೆ ಐರೋಪ್ಯ ಒಕ್ಕೂಟ, ಜಪಾನ್ ಮತ್ತು ತೈವಾನ್ ಜೊತೆಗಿನ ವಿವಾದವೊಂದರಲ್ಲಿ ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ಸಮಿತಿಯೊಂದು ಹೇಳಿದೆ.

'ಭಾರತವು ತನ್ನ ಬದ್ಧತೆಗಳಿಗೆ ಅನುಗುಣವಾಗಿ ಕ್ರಮಗಳನ್ನು ತರಬೇಕು ಎಂದು ನಾವು ಶಿಫಾರಸು ಮಾಡುತ್ತೇವೆ' ಎಂದು ಸಮಿತಿಯ ವರದಿಯು ಹೇಳಿದೆ.

ಮೊಬೈಲ್ ಫೋನ್‌ಗಳು ಮತ್ತು ಅದರ ಬಿಡಿಭಾಗಗಳಿಗೆ, ಏಕೀಕೃತ ಸರ್ಕಿಟ್‌ಗಳಿಗೆ ಕೇಂದ್ರವು ಶೇ7.50ರಿಂದ ಶೇ 20ರವರೆಗೆ ಆಮದು ಸುಂಕ ವಿಧಿಸಿದ್ದನ್ನು ಐರೋಪ್ಯ ಒಕ್ಕೂಟವು 2019ರಲ್ಲಿ ಪ್ರಶ್ನಿಸಿತ್ತು. ಈ ಸುಂಕವು ಗರಿಷ್ಠ ಮಟ್ಟಕ್ಕಿಂತಲೂ ಹೆಚ್ಚು ಎಂದು ಹೇಳಿತ್ತು. ಇದೇ ಬಗೆಯ ದೂರುಗಳನ್ನು ಜಪಾನ್ ಮತ್ತು ತೈವಾನ್ ಕೂಡ ಸಲ್ಲಿಸಿದ್ದವು. ಡಬ್ಲ್ಯುಟಿಒ ನೀಡಿರುವ ಆದೇಶವನ್ನು ಪ್ರಶ್ನಿಸಲಾಗುತ್ತದೆಯೇ ಎಂಬುದಕ್ಕೆ ಜಿನಿವಾದಲ್ಲಿ ಇರುವ ಭಾರತದ ದೂತಾವಾಸ ಕಚೇರಿಯಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

ಟೆಸ್ಟ್ ಕ್ರಿಕೆಟ್: ದಿನೇಶ್ ಚಾಂಡಿಮಲ್, ಸದೀರ ಶತಕ

ಜಯಸೂರ್ಯ ದಾಳಿಗೆ ಐರ್ಲೆಂಡ್ ತತ್ತರ

ಗಾಲ್, ಶ್ರೀಲಂಕಾ (ಎಎಫ್‌ಪಿ): ದಿನೇಶ್ ಚಾಂಡಿಮಲ್ ಮತ್ತು ಸದೀರ ಸಮರವಿಕ್ರಮ ಅವರು ಅಜೇಯ ಶತಕ ಗಳಿಸಿದರೆ, ಪ್ರಭಾತ್ ಜಯಸೂರ್ಯ ಐದು ವಿಕೆಟ್ ಪಡೆದು ಮಿಂಚಿದರು. ಐರ್ಲೆಂಡ್ ವಿರುದ್ಧದ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದ ಎರಡನೇ ದಿನವೂ ಶ್ರೀಲಂಕಾ ಪಾರಮ್ಯ ಮೆರೆಯಿತು.

6 ವಿಕೆಟ್‌ಗೆ 591 ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡ ಆತಿಥೇಯ ತಂಡ, ಸೋಮವಾರದ ಆಟದ ಅಂತ್ಯಕ್ಕೆ ಐರ್ಲೆಂಡ್ ತಂಡವನ್ನು 7 ವಿಕೆಟ್‌ಗಳಿಗೆ 117 ರನ್‌ಗಳಿಗೆ ನಿಯಂತ್ರಿಸಿದೆ. ಪ್ರವಾಸಿ ತಂಡ ಇದೀಗ 474 ರನ್‌ಗಳ ಹಿನ್ನಡೆಯಲ್ಲಿದೆ. 42 ರನ್‌ಗಳಿಗೆ ಐದು ವಿಕೆಟ್ ಪಡೆದ ಸ್ಪಿನ್ನರ್ ಜಯಸೂರ್ಯ ಅವರು ಐರ್ಲೆಂಡ್ ತಂಡದ ಪತನಕ್ಕೆ ಕಾರಣರಾದರು.

ಇದಕ್ಕೂ ಮುನ್ನ 4 ವಿಕೆಟ್‌ಗಳಿಗೆ 386 ರನ್‌ಗಳಿಂದ ಆಟ ಮುಂದುವರಿಸಿದ ಲಂಕಾ, ಬೃಹತ್ ಮೊತ್ತ ಪೇರಿಸಿತು. ದಿಮುತ್ ಕರುಣರತ್ನೆ ಮತ್ತು ಕುಸಾಲ್ ಮೆಂಡಿಸ್ ಮೊದಲ ದಿನ ಶತಕ ಗಳಿಸಿದ್ದರೆ, ಚಾಂಡಿಮಲ್ (ಅಜೇಯ 102, 155 ಎ) ಹಾಗೂ ಸಮರವಿಕ್ರಮ (ಅಜೇಯ 104, 114 ಎ.) ಸೋಮವಾರ ಮೂರಂಕಿಯ ಗಡಿ ದಾಟಿದರು. ಇವರು ಮುರಿಯದ ಏಳನೇ ವಿಕೆಟ್‌ಗೆ 183 ರನ್ ಸೇರಿಸಿದರು.

ಶ್ರೀಲಂಕಾ ತಂಡದ ಪ್ರಭಾತ್ ಜಯಸೂರ್ಯ (ಎಡ) ಸಹ ಆಟಗಾರರ ಜತೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ ಮೊದಲ ಇನಿಂಗ್ಸ್ 6 ವಿಕೆಟ್‌ಗೆ 591 ಡಿಕ್ಲೇರ್ಡ್ (ದಿನೇಶ್ ಚಾಂಡಿಮಲ್ ಔಟಾಗದೆ 102, ಸದೀರ ಸಮರವಿಕ್ರಮ ಔಟಾಗದೆ 104, ಕರ್ಟಿಸ್ ಕ್ಯಾಂಫರ್ 84ಕ್ಕೆ 2) ಐರ್ಲೆಂಡ್ ಮೊದಲ ಇನಿಂಗ್ಸ್ 45 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 117 (ಜೇಮ್ಸ್ ಮೆಕ್‌ಕಲಮ್ 35, ಹ್ಯಾರಿ ಟೆಕ್ಟರ್ 34, ಲೋರ್ಕನ್ ಟಕರ್ ಔಟಾಗದೆ 21, ಪ್ರಭಾತ್ ಜಯಸೂರ್ಯ 42ಕ್ಕೆ 5, ವಿಶ್ವ ಫೆರ್ನಾಂಡೊ 22ಕ್ಕೆ 2)

ಪ್ಯಾರಾ ಬ್ಯಾಡ್ಮಿಂಟನ್: ನಿತ್ಯಾ, ನಿತೇಶ್‌ಗೆ ಚಿನ್ನದ ಪದಕ

ಸಾವೊ ಪಾಲೊ (ಪಿಟಿಐ): ಭಾರತದ ನಿತ್ಯಾ ಶ್ರೀ ಸುಮತಿ ಶಿವನ್ ಅವರು ಇಲ್ಲಿ ನಡೆಯುತ್ತಿರುವ ಬ್ರೆಜಿಲ್ ಪ್ಯಾರಾ ಬ್ಯಾಡ್ಮಿಂಟನ್ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಎರಡು ಚಿನ್ನದ ಪದಕ ಜಯಿಸಿದರು.

ಮಹಿಳಾ ಸಿಂಗಲ್ಸ್‌ನ ಎಸ್‌ಎಚ್6 ವಿಭಾಗದ ಫೈನಲ್‌ನಲ್ಲಿ, 18 ವರ್ಷದ ನಿತ್ಯಾ 22-20, 21-11ರಿಂದ ಪೆರುವಿನ ಗಿಲಿಯಾನಾ ಪೊವೆದಾ ಅವರನ್ನು ಮಣಿಸಿದರು. ಮಿಶ್ರ ಡಬಲ್ಸ್‌ನಲ್ಲಿ ಶಿವರಾಜನ್ ಸೊಲೈಮಲೈ ಜೊತೆಗೂಡಿದ ನಿತ್ಯಾ 21-11, 21-17ರಿಂದ ಹಾಂಗ್‌ಕಾಂಗ್‌ನ ಚು ಮನ್ ಕಾಯ್- ಚೊಯಿ ವಿಂಗ್ ಕೀಯ್ ಅವರ ವಿರುದ್ಧ ಗೆದ್ದರು.

ಪುರುಷರ ಎಸ್‌ಎಲ್3 ವಿಭಾಗದ ಸಿಂಗಲ್ಸ್ ಫೈನಲ್‌ನಲ್ಲಿ ನಿತೇಶ್ 21–12, 21–13ರಿಂದ ಭಾರತದವರೇ ಆದ ಪ್ರಮೋದ್ ಅವರನ್ನು ಮಣಿಸಿ ಚಿನ್ನದ ಪದಕಕ್ಕೆ ಮುತ್ತಿಟ್ಟರು.

ಎಸ್‌ಎಲ್3 –ಎಸ್‌ಎಲ್4 ವಿಭಾಗದ ಡಬಲ್ಸ್‌ನಲ್ಲಿ ಪ್ರಮೋದ್ –ಸುಕಾಂತ್ ಕದಂ ಅವರಿಗೆ ಚಿನ್ನ ಒಲಿಯಿತು. ಈ ಜೋಡಿಯು ಫೈನಲ್‌ನಲ್ಲಿ 22-20, 21-19ರಿಂದ ಕೊರಿಯಾದ ಜೂ ಡೊಂಗ್‌ಜೆ- ಶಿನ್ ಕಯುಂಗ್ ಹವಾನ್ ಎದುರು ಗೆದ್ದಿತು.

ಆರ್ಚರಿ: ಭಾರತ ತಂಡಕ್ಕೆ ಬೇಕ್ ಕೋಚ್

ಕೋಲ್ಕತ್ತ (ಪಿಟಿಐ): 2024ರ ಪ್ಯಾರಿಸ್ ಒಲಿಂಪಿಕ್ ಸಿದ್ಧತೆಯಲ್ಲಿ ತೊಡಗಿರುವ ಭಾರತ ರಿಕರ್ವ್ ಆರ್ಚರಿ ತಂಡಕ್ಕೆ ಕೊರಿಯಾದ ಬೇಕ್ ವೂಂಗ್ ಕಿ ಅವರನ್ನು ಕೋಚ್ ಆಗಿ ಭಾರತ ಆರ್ಚರಿ ಸಂಸ್ಥೆ ನೇಮಿಸಿದೆ.

2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಬೇಕ್ ಅವರ ಮಾರ್ಗದರ್ಶನದಲ್ಲಿ ದಕ್ಷಿಣ ಕೊರಿಯಾದ ಮಹಿಳಾ ತಂಡವು ವೈಯಕ್ತಿಕ, ತಂಡ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿತ್ತು.

ಟರ್ಕಿಯ ಅಂತ್ಯಲ್ಯಾದಲ್ಲಿ ಮಂಗಳವಾರದಿಂದ ವಿಶ್ವಕಪ್ ಸ್ಟೇಜ್ 1 ಆರ್ಚರಿ ಟೂರ್ನಿಯಲ್ಲಿ ನಡೆಯಲಿದ್ದು, ಭಾರತ ತಂಡದೊಂದಿಗೆ ಬೇಕ್ ತಮ್ಮ ಜವಾಬ್ದಾರಿ ನಿಭಾಯಿಸಲಿದ್ದಾರೆ.

ಹಾಕಿ: ಆಗಸ್ಟ್ 3ರಿಂದ 12ರವರೆಗೆ ಚೆನ್ನೈನಲ್ಲಿ ಟೂರ್ನಿ

ಏಷ್ಯನ್ ಚಾಂಪಿಯನ್‌ಷಿಪ್‌ಗೆ ಭಾರತ ಆತಿಥ್ಯ

ಚೆನ್ನೈ (ಪಿಟಿಐ): ಏಷ್ಯನ್ ಪುರುಷರ ಹಾಕಿ ಚಾಂಪಿಯನ್‌ಷಿಪ್ ಮೊದಲ ಬಾರಿ ಭಾರತದಲ್ಲಿ ಆಯೋಜನೆಯಾಗಲಿದೆ. ಆಗಸ್ಟ್ 3ರಿಂದ 12ರವರೆಗೆ ಇಲ್ಲಿ ಟೂರ್ನಿ ನಡೆಯಲಿದೆ.

ಚೆನ್ನೈನ ಮೇಯರ್ ರಾಧಾಕೃಷ್ಣನ್ ಕ್ರೀಡಾಂಗಣದಲ್ಲಿ ನಡೆಯಲಿರುವುದು ಪ್ರತಿಷ್ಠಿತ ಟೂರ್ನಿಯ ಏಳನೇ ಆವೃತ್ತಿ.

ಮೂರು ಬಾರಿಯ ಚಾಂಪಿಯನ್ ಪಾಕಿಸ್ತಾನ ಹಾಗೂ ಚೀನಾ ತಂಡಗಳು ಟೂರ್ನಿಯಲ್ಲಿ ಪಾಲ್ಗೊಳ್ಳುವುದನ್ನು ಏಪ್ರಿಲ್ 25ಕ್ಕೆ ಖಚಿತಪಡಿಸಲಿವೆ ಎಂದು ಟೂರ್ನಿಯ ಸಂಘಟಕರು ತಿಳಿಸಿದ್ದಾರೆ.

'2023ರ ಏಷ್ಯಾ ಹಾಕಿ ಚಾಂಪಿಯನ್‌ಷಿಪ್ ಆಯೋಜಿಸುವುದು ಸಂತೋಷ ಮತ್ತು ಹೆಮ್ಮೆಯ ಸಂಗತಿ. ಇದರಿಂದಾಗಿ ದಕ್ಷಿಣ ಭಾರತದಲ್ಲಿ ಹಾಕಿ ಕ್ರೀಡೆಯ ಪುನರುತ್ಥಾನವಾಗಲಿದೆ' ಎಂದು ತಮಿಳುನಾಡು ಕ್ರೀಡಾ ಸಚಿವ ಉದಯನಿಧಿ ಸ್ಟಾಲಿನ್ ಹೇಳಿದ್ದಾರೆ.

ಚೆನ್ನೈ ನಗರವು 16 ವರ್ಷಗಳ ಬಳಿಕ ಅಂತರರಾಷ್ಟ್ರೀಯ ಪಂದ್ಯಗಳಿಗೆ ಆತಿಥ್ಯ ವಹಿಸಲಿದೆ. ಇಲ್ಲಿ ಕೊನೆಯ ಬಾರಿ ಅಂತರರಾಷ್ಟ್ರೀಯ ಪಂದ್ಯಗಳು ನಡೆದಿದ್ದು 2007ರಲ್ಲಿ. ಆಗ ನಡೆದ ಏಷ್ಯಾಕಪ್ ಟೂರ್ನಿಯ ಫೈನಲ್‌ನಲ್ಲಿ ಭಾರತ 7–2ರಿಂದ ಕೊರಿಯಾ ತಂಡವನ್ನು ಸೋಲಿಸಿ ಚಾಂಪಿಯನ್ ಆಗಿತ್ತು.

ಭಾರತವೂ ಮೂರು ಬಾರಿ (2011, 2016 ಮತ್ತು 2018ರಲ್ಲಿ ಪಾಕಿಸ್ತಾನದೊಂದಿಗೆ ಜಂಟಿ) ಏಷ್ಯನ್ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ತೀವ್ರಗೊಂಡ ದಾಳಿ; 100ಕ್ಕೆ ಏರಿದ ಮೃತರ ಸಂಖ್ಯೆ

ಸುಡಾನ್: ನಿಲ್ಲದ ಸಂಘರ್ಷ

ಖಾರ್ಟೂಮ್ (ಎ.ಪಿ): ಸುಡಾನ್‌ನ ರಾಜಧಾನಿ ಖಾರ್ಟೂಮ್ ಮತ್ತು ಒಂಡರ್ಮನ್ ನಗರದಲ್ಲಿ ಸೇನೆ ಮತ್ತು ಅರೆಸೇನಾ ಪಡೆ ನಡುವಣ ಘರ್ಷಣೆ ಸೋಮವಾರವೂ ಮುಂದುವರಿದಿದ್ದು, ಮೃತರ ಸಂಖ್ಯೆ 100ಕ್ಕೆ ಏರಿದೆ. ಗಾಯಾಳುಗಳ ಸಂಖ್ಯೆಯು 942ಕ್ಕೆ ಏರಿದೆ ಎಂದು ವರದಿ ತಿಳಿಸಿದೆ.

ಉಭಯ ನಗರಗಳಲ್ಲಿ ವಾಯುದಾಳಿ ಮತ್ತು ಶೆಲ್ ಪ್ರಯೋಗ ತೀವ್ರಗೊಂಡಿದೆ. ಸೇನಾ ನೆಲೆಯಿಂದ ದಾಳಿಯ ಶಬ್ದ ನಿರಂತರವಾಗಿ ಕೇಳಿ ಬರುತ್ತಿದೆ. ಆ ಸ್ಥಳದಲ್ಲಿ ದಟ್ಟವಾದ ಹೊಗೆ ಆಗಸವನ್ನು ಆವರಿಸಿಕೊಂಡಿದೆ. ನಿವಾಸಿಗಳು ಆತಂಕದಿಂದ ಮನೆಗಳಲ್ಲಿ ಅಡಗಿಕೊಂಡಿದ್ದಾರೆ.

ಸೇನೆಯ ಕಮಾಂಡರ್ ಜನರಲ್ ಅಬ್ದೆಲ್ ಫತಾಹ್ ಬುರ್ಹಾನ್ ಮತ್ತು ಅರೆಸೇನಾ ಪಡೆಯಾದ ರ್‍ಯಾಪಿಡ್ ಸಪೋರ್ಟ್ ಫೋರ್ಸ್‌ನ ಜನರಲ್ ಮೊಹಮ್ಮದ್ ಹಮ್ದನ್ ಡಾಗಲೊ ನಡುವೆ ಅಧಿಕಾರದ ಮೇಲೆ ಪ್ರಾಬಲ್ಯ ಹೊಂದಲು ನಡೆದಿರುವ ತಿಕ್ಕಾಟ ಈ ಘರ್ಷಣೆಗೆ ಕಾರಣವಾಗಿದೆ. ಈ ಇಬ್ಬರೂ ಸಂಧಾನದಿಂದ ವಿಮುಖರಾಗಿದ್ದು, ಪರಸ್ಪರ ವಾಗ್ದಾಳಿಯಲ್ಲಿ ತೊಡಗಿದ್ದಾರೆ. ಎದುರಾಳಿಯೇ ಶರಣಾಗಲಿ ಎಂದು ಪಟ್ಟುಹಿಡಿದಿದ್ದಾರೆ. ಇಬ್ಬರಿಗೂ ಕೆಲ ದೇಶಗಳ ಬೆಂಬಲವಿದೆ.

ಒಪ್ಪಂದಕ್ಕೆ ಸಿದ್ಧ?: ಅಂತರರಾಷ್ಟ್ರೀಯ ಸಮುದಾಯದ ಒತ್ತಡದ ಕಾರಣ ಸೇನೆ ಮತ್ತು ಅರೆಸೇನಾ ಪಡೆ ಮುಖ್ಯಸ್ಥರು ರಾಜಕೀಯ ಪಕ್ಷಗಳ ಜೊತೆಗೂಡಿ ಒಪ್ಪಂದ ಅಂತಿಮಗೊಳಿಸಲು ಒಪ್ಪಿದ್ದಾರೆ ಎಂದು ವರದಿ ತಿಳಿಸಿದೆ ಆದರೆ, ಬಿಕ್ಕಟ್ಟು ಹೇಗೆ ಇತ್ಯರ್ಥವಾಗಲಿದೆ ಎಂಬುದು ಒಪ್ಪಂದದ ಷರತ್ತುಗಳನ್ನು ಆಧರಿಸಿದೆ. ಸೇನೆಯಲ್ಲಿ ಅರೆಸೇನಾ ಪಡೆಯ ವಿಲೀನ ಹಾಗೂ ನಿಯಂತ್ರಣ ಯಾರಲ್ಲಿರಬೇಕು ಎಂಬುದು ಬಿಕ್ಕಟ್ಟಿನ ಮೂಲವಾಗಿದೆ.

ಸುಡಾನ್‌ನ ಸೇನೆ ಮುಖ್ಯಸ್ಥ ಅಬ್ದೆಲ್ ಫತ್ತಾ ಅಲ್ ಬುರ್ಹಾನ್ ಅವರಿಗೆ ನಿಷ್ಠರಾದ ಯೋಧರು ರೆಡ್ ಸೀ ಪಟ್ಟಣದಲ್ಲಿ ಶಸ್ತ್ರಾಸ್ತ್ರಗಳೊಂದಿಗೆ ಕಾಣಿಸಿಕೊಂಡಿದ್ದು ಹೀಗೆ –ಎಎಫ್‌ಪಿ ಚಿತ್ರ

ಕದನವಿರಾಮಕ್ಕೆ ಒತ್ತಾಯ

ಈ ಮಧ್ಯೆ ಅಮೆರಿಕದ ವಿದೇಶಾಂಗ ಇಲಾಖೆಯ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು, 'ಕದನವಿರಾಮ ಘೋಷಿಸಬೇಕು ಹಾಗೂ ಜಪಾನ್‌ನಲ್ಲಿ ನಡೆಯಲಿರುವ ಏಳು ಶ್ರೀಮಂತ ರಾಷ್ಟ್ರಗಳ ಪ್ರತಿನಿಧಿಗಳ ಸಭೆಯಲ್ಲಿಯೇ ಸಂಧಾನ ಮಾತುಕತೆಗೆ ಬರಬೇಕು' ಎಂದು ಒತ್ತಾಯಿಸಿದ್ದಾರೆ.

'ಪ್ರಜಾಪ್ರಭುತ್ವ ಮರಳಿ ಅಸ್ತಿತ್ವಕ್ಕೆ ಬರಬೇಕು ಎಂದು ಸುಡಾನ್‌ನ ಜನ ಬಯಸುತ್ತಿದ್ದಾರೆ. ಜನರಿಂದಲೇ ಆಯ್ಕೆಯಾದ ಸರ್ಕಾರದ ಆಡಳಿತ ಅವರಿಗೆ ಬೇಕಾಗಿದೆ. ಸುಡಾನ್ ಆ ದಿಸೆಯಲ್ಲಿ ಹೆಜ್ಜೆ ಇಡಬೇಕಿದೆ' ಎಂದು ಹೇಳಿದರು.

'ಕಾನೂನು ಕ್ರಮ ಎದುರಿಸಲು ಸಿದ್ಧ'

ಚೆನ್ನೈ (ಪಿಟಿಐ): ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿರುವುದಕ್ಕೆ ₹500 ಕೋಟಿ ಮಾನನಷ್ಟ ಪರಿಹಾರ ನೀಡುವಂತೆ ಆಡಳಿತಾರೂಢ ಡಿಎಂಕೆ ನ್ಯಾಯಾಂಗ ನೋಟಿಸ್ ಜಾರಿ ಮಾಡಿರುವುದಕ್ಕೆ ಪ್ರತಿಕ್ರಿಯಿಸಿರುವ ತಮಿಳುನಾಡು ಬಿಜೆಪಿ ಮುಖ್ಯಸ್ಥ ಕೆ. ಅಣ್ಣಾಮಲೈ,'ಕಾನೂನು ಕ್ರಮ ಎದುರಿಸಲು ಸಿದ್ಧನಿದ್ದೇನೆ' ಎಂದಿದ್ದಾರೆ. ತಮ್ಮ ವಿರುದ್ಧ ಆಧಾರರಹಿತ ಆರೋಪ ಮಾಡಿರುವುದಕ್ಕೆ ಸಮಾನ ಮೊತ್ತ ಪರಿಹಾರ ನೀಡುವಂತೆ ಡಿಎಂಕೆಗೆ ನ್ಯಾಯಾಂಗ ನೋಟಿಸ್ ನೀಡುವುದಾಗಿಯೂ ಅವರು ಸೋಮವಾರ ಹೇಳಿದ್ದಾರೆ. 'ಡಿಎಂಕೆ ಈ ಹಿಂದೆ ಆಡಳಿತದಲ್ಲಿದ್ದಾಗ ನಡೆದಿರುವ ಮೆಟ್ರೊ ರೈಲು ಯೋಜನೆ ಹಗರಣದ ಕುರಿತು ದಾಖಲೆಗಳಿವೆ. ನಾವು ಅದನ್ನು ಸಿಬಿಐಗೆ ಸಲ್ಲಿಸುತ್ತೇವೆ' ಎಂದು ಟ್ವೀಟ್ ಮಾಡಿದ್ದಾರೆ

ಎಂಸಿಡಿ ಮೇಯರ್ ಚುನಾವಣೆ 26 ಕ್ಕೆ

ನವದೆಹಲಿ (ಪಿಟಿಐ): ದೆಹಲಿ ಮೇಯರ್ ಮತ್ತು ಉಪಮೇಯರ್ ಚುನಾವಣೆ ಇದೇ 26ರಂದು ನಡೆಯಲಿದ್ದು, ಎಎಪಿಯ ಮೇಯರ್ ಶೆಲ್ಲಿ ಒಬೆರಾಯ್ ಮತ್ತು ಉಪ ಮೇಯರ್ ಆಲೆ ಮಹಮ್ಮದ್ ಇಕ್ಬಾಲ್ ಪುನರ್ ಆಯ್ಕೆ ಕೋರಿ ಸೋಮವಾರ ನಾಮಪತ್ರ ಸಲ್ಲಿಸಿದರು.

ಬಿಜೆಪಿಗೆ ಎನ್‌ಸಿಪಿ ಮುಖಂಡ ಅಜಿತ್ ಪವಾರ್?

ಪ್ರಜಾವಾಣಿ ವಾರ್ತೆ

ಮುಂಬೈ: ನ್ಯಾಷನಲ್ ಕಾಂಗ್ರೆಸ್ ಪಾರ್ಟಿ (ಎನ್‌ಸಿಪಿ) ಹಿರಿಯ ಮುಖಂಡ ಅಜಿತ್ ಪವಾರ್ ಅವರು ಬಿಜೆಪಿಗೆ ಹತ್ತಿರವಾಗುತ್ತಿದ್ದಾರೆ ಎನ್ನಲಾಗಿದ್ದು, ಅವರ ರಾಜಕೀಯ ನಡೆ ಮಹಾರಾಷ್ಟ್ರದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಅವರು ಸೋಮವಾರ ಪುಣೆಯಲ್ಲಿ ನಡೆಯಬೇಕಿದ್ದ ಪೂರ್ವನಿಗದಿತ ಸಭೆ ರದ್ದುಪಡಿಸಿದ್ದರು. ಇದರ ಬಳಿಕವೇ ಅವರು ಶರದ್ ಪವಾರ್ ನೇತೃತ್ವದ ಪಕ್ಷದ ಶಾಸಕರ ಸಭೆ ಕರೆದಿದ್ದಾರೆ ಎಂಬ ಮಾತು ಕೇಳಿಬಂದಿದ್ದವು.

ಆದರೆ, ಸಭೆ ಕರೆಯಲಾಗಿದೆ ಎಂಬುದನ್ನು ಸ್ವತಃ ಅಜಿತ್ ಪವಾರ್ ಸಂಜೆ ನಿರಾಕರಿಸಿದರು. 63 ವರ್ಷದ ಅವರು ಈಗ ವಿಧಾನಸಭೆ ವಿರೋಧಪಕ್ಷದ ನಾಯಕರಾಗಿದ್ದಾರೆ. ಅವರು ನಾಲ್ಕು ಬಾರಿ ಉಪ ಮುಖ್ಯಮಂತ್ರಿ ಆಗಿದ್ದರು.

ಬಿಜೆಪಿಗೆ ಹತ್ತಿರವಾಗುತ್ತಿದ್ದಾರೆ ಎಂಬ ವರದಿ ಸೋಮವಾರ ವ್ಯಾಪಕವಾಗಿತ್ತು. 'ನಾನು ನವೀ ಮುಂಬೈನ ಎಂಜಿಎಂ ಆಸ್ಪತ್ರೆಯಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದೆ. ಎನ್‌ಸಿಪಿ ಶಾಸಕರ ಸಭೆ ಕರೆದಿದ್ದೇನೆ ಎಂಬುದು ಸಂಪೂರ್ಣವಾಗಿ ಸತ್ಯಕ್ಕೆ ವಿರುದ್ಧವಾದುದು' ಎಂದು ಸಂಜೆ ಈ ಸಂಬಂಧ ಪ್ರತಿಕ್ರಿಯಿಸಿದರು.

ಶರದ್ ಪವಾರ್ ಅವರ ಪುತ್ರಿ, ಸಂಸದೆ ಸುಪ್ರಿಯಾ ಸುಳೆ, 'ಮಾಧ್ಯಮಗಳು ಬೇಗನೇ ನಿರ್ಧಾರಕ್ಕೆ ಬರುತ್ತವೆ. ಕೆಲ ಕಾರ್ಯಕ್ರಮಗಳು ರದ್ದಾದರೆ ಅದರರ್ಥ ಏನೋ ಆಗುತ್ತಿದೆ ಎಂದಲ್ಲ' ಎಂದು ಪ್ರತಿಕ್ರಿಯಿಸಿದರು.

ಮಹಾವಿಕಾಸ ಆಘಾಡಿ (ಎಂವಿಎ) ಸರ್ಕಾರ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ರಾಜ್ಯಸಭೆ ಸದಸ್ಯ ಸಂಜಯ್ ರಾವುತ್, 'ಅಜಿತ್ ಪವಾರ್ ಎನ್‌ಸಿಪಿ ತೊರೆಯುತ್ತಾರೆ ಎಂದು ನಾನು ನಂಬುವುದಿಲ್ಲ' ಎಂದರು.

ರಾಜ್ಯ ಬಿಜೆಪಿ ಅಧ್ಯಕ್ಷ ಚಂದ್ರಶೇಖರ ಭವನ್‌ಕುಳೆ ಮತ್ತು ಮುಂಬೈ ಘಟಕದ ಅಧ್ಯಕ್ಷ ಆಶೀಶ್ ಶೆಲ್ಲರ್ ಅವರು ಸೋಮವಾರ ನವದೆಹಲಿಗೆ ಭೇಟಿ ನೀಡಿದ್ದು, ಅದರ ವಿವರ ಇನ್ನೂ ಬರಬೇಕಿದೆ.

'ರಾಜಕೀಯ ಬೆಳವಣಿಗೆ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. ಆದರೆ, ಮುಂದಿನ ಒಂದು ತಿಂಗಳಲ್ಲಿ ಹಲವರು ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ' ಎಂದು ಚಂದ್ರಶೇಖರ ಭವನ್‌ಕುಳೆ ಸುದ್ದಿಗಾರರಿಗೆ ತಿಳಿಸಿದರು.

ರಿಷಿ ಸುನಕ್ ವಿರುದ್ಧ ತನಿಖೆ

ಲಂಡನ್ (ಪಿಟಿಐ): ಬಜೆಟ್‌ನಲ್ಲಿ ಪ್ರಕಟಿಸಿದ ಯೋಜನೆಯ ಹಿಂದೆ ಪತ್ನಿ ಅಕ್ಷತಾ ಮೂರ್ತಿ ಷೇರುದಾರರಾಗಿರುವ ಉದ್ಯಮ ಸಂಸ್ಥೆಗೆ ನೆರವಾಗುವ ಉದ್ದೇಶ ಇತ್ತು ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಬ್ರಿಟನ್‌ನ ಪ್ರಧಾನಿ ರಿಷಿ ಸುನಕ್ ಅವರ ವಿರುದ್ಧ ತನಿಖೆ ನಡೆಯಲಿದೆ.

ಬ್ರಿಟನ್‌ನ ಸಂಸದೀಯ ಸನ್ನಡತೆ ಆಯೋಗದ ಕಮಿಷನರ್ ಅವರು ಈ ಕುರಿತ ತನಿಖೆಗೆ ಆದೇಶಿಸಿದ್ದಾರೆ. ಜನಪ್ರತಿನಿಧಿ ಸಭೆಯ ಪ್ರತಿ ಸದಸ್ಯನ ವಿರುದ್ಧ ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದಂತೆ ಲಭ್ಯವಾಗುವ ಸಾಕ್ಷ್ಯ ಮತ್ತು ಆರೋಪ ಕುರಿತಂತೆ ತನಿಖೆಯನ್ನು ನಡೆಸುವ ಬ್ರಿಟನ್‌ನ ಸ್ವತಂತ್ರ ಸಂಸ್ಥೆ ಇದಾಗಿದೆ.

ತನಿಖೆಗೆ ಸಂಬಂಧಿಸಿದ ನಿಯಮಗಳ 6ನೇ ಪ್ಯಾರಾದ ಅಂಶಗಳಿಗೆ ಪೂರಕವಾಗಿ ತನಿಖೆ ನಡೆಸಲು ಆಯೋಗವು ಕಳೆದ ಗುರುವಾರ ಪ್ರಕಟಿಸಿದ ಅಂತಿಮಪಟ್ಟಿಯಲ್ಲಿ ದಾಖಲಿಸಲಾಗಿದೆ.

'ಜನಪ್ರತಿನಿಧಿ ಸಭೆ ಮತ್ತು ಅದರ ಸಮಿತಿಗಳ ಯಾವುದೇ ಕಲಾಪಕ್ಕೆ ಸಂಬಂಧಿಸಿದಂತೆ ಅಥವಾ ಯಾವುದೇ ಸಚಿವರು, ಸದಸ್ಯರು, ಅಧಿಕಾರಿಗಳ ಜೊತೆಗಿನ ಸಂವಹನದಲ್ಲಿ ತಮ್ಮ ಆಸಕ್ತಿಯನ್ನು ಪ್ರಕಟಿಸುವಾಗ ಸದಸ್ಯರು ಮುಕ್ತ ಮನೋಭಾವ ಹೊಂದಿರಬೇಕು' ಎಂದು 6ನೇ ಪ್ಯಾರಾದಲ್ಲಿ ಉಲ್ಲೇಖಿಸಲಾಗಿದೆ.



ರಿಷಿ ಸುನಕ್

ಬಿಬಿಸಿ ವರದಿಯ ಪ್ರಕಾರ, ರಿಷಿ ಸುನಕ್ ಅವರ ಪತ್ನಿ ಅಕ್ಷತಾ ಮೂರ್ತಿ ಆಸಕ್ತಿ ಹೊಂದಿರುವ ಕೊರು ಕಿಡ್ಸ್ ಲಿಮಿಟೆಡ್‌ಗೆ ನೆರವಾಗುವ ಉದ್ದೇಶ ಯೋಜನೆಯ ಹಿಂದೆ ಇದೆ. ರಿಷಿ ಸುನಕ್ ಅವರು ಕಳೆದ ಬಜೆಟ್‌ನಲ್ಲಿ ಪ್ರಕಟಿಸಿದ ನೂತನ ಯೋಜನೆಯ ಲಾಭ ಈ ಸಂಸ್ಥೆಗೆ ಆಗಲಿದೆ ಎಂದು ಆರೋಪಿಸಲಾಗಿದೆ.

ಅಕ್ಷತಾ ಮೂರ್ತಿ ಅವರು ಉಲ್ಲೇಖಿತ ಕೊರು ಕಿಡ್ಸ್ ಸಂಸ್ಥೆಯ ಷೇರುದಾರರು. ಈ ಸಂಸ್ಥೆಯು ಒಳಗೊಂಡಂತೆ ಇಂಗ್ಲೆಡ್‌ನ ಒಟ್ಟು ಆರು ಏಜೆನ್ಸಿಗಳ ಹೆಸರು, ವಿವರಗಳನ್ನು ಸರ್ಕಾರಿ ವೆಬ್‌ನಲ್ಲಿ ಪ್ರಕಟಿಸಲಾಗಿತ್ತು.

ಅಗ್ನಿ ಅವಘಡ: ಮೃತರ ಕುಟುಂಬಕ್ಕೆ ಪರಿಹಾರ

ಚೆನ್ನೈ (ಪಿಟಿಐ): ದುಬೈನ ವಸತಿ ಸಂಕೀರ್ಣವೊಂದರಲ್ಲಿ ಭಾನುವಾರ ಸಂಭವಿಸಿದ್ದ ಅಗ್ನಿ ಅವಘಡದಲ್ಲಿ ಮೃತಪಟ್ಟಿದ್ದ ತಮಿಳುನಾಡಿನ ಇಬ್ಬರ ಕುಟುಂಬದ ಸದಸ್ಯರಿಗೆ ತಮಿಳುನಾಡು ಸರ್ಕಾರ ತಲಾ ₹ 10 ಲಕ್ಷ ಪರಿಹಾರವನ್ನು ಘೋಷಿಸಿದೆ.

ಮೃತಪಟ್ಟವರ ಅಗಲಿಕೆಗೆ ಸಂತಾಪ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಪರಿಹಾರ ಘೋಷಿಸಿದರು. ತಮಿಳುನಾಡಿನ ಕಲ್ಲಕುರಿಚಿ ಜಿಲ್ಲೆಯ ಶಂಕರಪುಂನ ಇಮಾಂ ಖಾಸಿಂ (43) ಮತ್ತು ಎಸ್.ಮೊಹಮ್ಮದ್ ರಫೀಕ್ (49) ಅವಘಡದಲ್ಲಿ ಮೃತಪಟ್ಟಿದ್ದರು.

ಅವಘಡದಲ್ಲಿ ಒಟ್ಟು ನಾಲ್ವರು ಭಾರತೀಯರು ಅಸುನೀಗಿದ್ದು, ಇನ್ನಿಬ್ಬರು ಕೇರಳದ ದಂಪತಿಯಾಗಿದ್ದರು. ಒಟ್ಟು 16 ಜನರು ಅಗ್ನಿ ದುರಂತದಲ್ಲಿ ಮೃತಪಟ್ಟಿದ್ದರು

ರನ್ ಹೊಳೆಯಲ್ಲಿ ತೇಲಿದ ಅಭಿಮಾನಿಗಳು; ಮ್ಯಾಕ್ಸ್‌ವೆಲ್ ಅಬ್ಬರ; ಡೆವೊನ್ ಅಂದದ ಬ್ಯಾಟಿಂಗ್

ಧೋನಿ ಬಳಗದ ಜಯಭೇರಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಹಳದಿ ವರ್ಣದ ಪೋಷಾಕು ಧರಿಸಿ ಬಂದಿದ್ದ ತನ್ನ ಅಭಿಮಾನಿಗಳಿಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಗೆಲುವಿನ ಕಾಣಿಕೆ ನೀಡಿತು. ಅದೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಗ್ಲೆನ್ ಮ್ಯಾಕ್ಸ್‌ವೆಲ್ ಹಾಗೂ ಫಫ್ ಡುಪ್ಲೆಸಿ ಆಟವು ನೋಡುಗರ ಮನಗೆದ್ದಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಐಪಿಎಲ್ ಪಂದ್ಯದಲ್ಲಿ ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ತಂಡವು 8 ರನ್‌ಗಳಿಂದ ಜಯಿಸಿತು. ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದ ಆರ್‌ಸಿಬಿ ಬೌಲರ್‌ಗಳನ್ನು ದಂಡಿಸಿದ ಚೆನ್ನೈನ ಆರಂಭಿಕ ಬ್ಯಾಟರ್ ಡೇವೊನ್ ಕಾನ್ವೆ (83; 45ಎ, 4X6, 6X6) ಹಾಗೂ ಶಿವಂ ದುಬೆ (52; 27ಎ, 4X2, 6X5) ಅವರ ಬಲದಿಂದ ಚೆನ್ನೈ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 226 ರನ್ ಗಳಿಸಿತು.

ಈ ಬೃಹತ್ ಮೊತ್ತಕ್ಕೆ ಆತಿಥೇಯ ತಂಡವು ಪ್ರತಿ ಹೋರಾಟ ತೋರಿತು. 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 218 ರನ್ ಗಳಿಸಿತು. ಆರ್‌ಸಿಬಿ ನಾಯಕ, ಆರಂಭಿಕ ಬ್ಯಾಟರ್ ಫಫ್ ಡುಪ್ಲೆಸಿ (62; 33ಎ, 4X5, 6X4) ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ (76; 36ಎ, 4X3, 6X8) ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 126 ರನ್ ಗಳಿಸಿದರು.ವಿರಾಟ್ ಕೊಹ್ಲಿ ಮೊದಲ ಓವರ್‌ನಲ್ಲಿ ಔಟಾಗಿದ್ದರಿಂದ ಮೂಡಿದ್ದ ಆತಂಕವನ್ನು ಈ ಜೋಡಿ ನಿವಾರಿಸಿತು.

ಇವರಿಬ್ಬರ ಅಬ್ಬರದ ಆಟದಿಂದಾಗಿ ಇನಿಂಗ್ಸ್‌ನ ಮೊದಲ ಪವರ್‌ಪ್ಲೇ-ನಲ್ಲಿ 75 ರನ್‌ಗಳು ತಂಡದ ಖಾತೆ ಸೇರಿದವು. ಕೇವಲ 8.2 ಓವರ್‌ಗಳಲ್ಲಿ ತಂಡದ ಮೊತ್ತ 100 ರ ಗಡಿ ದಾಟಿತು.

ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಅವರು ಆರ್‌ಸಿಬಿ ತಂಡದ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಕ್ಯಾಚ್ ಪಡೆಯಲು ಮುಂದಾದರು (ಎಡಚಿತ್ರ) ಚೆನ್ನೈ ತಂಡದ ಡೇವೊನ್ ಕಾನ್ವೆ ಬ್ಯಾಟಿಂಗ್ ವೈಖರಿ ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌.ಜಿ.

ಚೆನ್ನೈ ಫೀಲ್ಡರ್‌ಗಳು ಕೈಚೆಲ್ಲಿದ ಕ್ಯಾಚ್‌ಗಳಿಂದಾಗಿ ತಂಡದ ಗೆಲುವಿನ ಹಾದಿ ತುಸು ಕಠಿಣವಾಯಿತು. ಫಫ್ ಡುಪ್ಲೆಸಿ 52 ರನ್ ಗಳಿಸಿದ್ದ ಸಂದರ್ಭದಲ್ಲಿ ತೀಕ್ಷಣ ತಮ್ಮದೇ ಬೌಲಿಂಗ್‌ನಲ್ಲಿ ಕ್ಯಾಚ್ ಕೈಚೆಲ್ಲಿದರು.

ಧೋನಿ ಎರಡು ಕ್ಯಾಚ್: 13ನೇ ಓವರ್‌ನಲ್ಲಿ ತೀಕ್ಷಣ ಬೌಲಿಂಗ್‌ನಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಕ್ಯಾಚ್ ಅನ್ನು ಧೋನಿ ಪಡೆಯುವುದರೊಂದಿಗೆ ಇನಿಂಗ್ಸ್‌ಗೆ ತಿರುವು ಲಭಿಸಿತು. ಎರಡು ಓವರ್‌ಗಳ ನಂತರ ಮೋಯಿನ್ ಅಲಿ ಬೌಲಿಂಗ್‌ನಲ್ಲಿ ಫಫ್ ಕೂಡ ಧೋನಿ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು.

ತುಸು ಹೋರಾಟ ತೋರಿದ ದಿನೇಶ್ ಕಾರ್ತಿಕ್ (28 ರನ್) ಅವರ ವಿಕೆಟ್ ಗಳಿಸುವುದರೊಂದಿಗೆ ತುಷಾರ್ ದೇಶಪಾಂಡೆ ಚೆನ್ನೈ ಬಳಗದಲ್ಲಿ ವಿಶ್ವಾಸ ಇಮ್ಮಡಿಸುವಂತೆ ಮಾಡಿದರು. ಆದರೆ ಕೊನೆಯ ಓವರ್‌ನಲ್ಲಿ ಬೆಂಗಳೂರು ತಂಡಕ್ಕೆ 19 ರನ್ ಅಗತ್ಯವಿದ್ದಾಗ ಇಂಪ್ಯಾಕ್ಟ್ ಪ್ಲೇಯರ್ ಬ್ಯಾಟರ್ ಸುಯಶ್ ಒಂದು ಸಿಕ್ಸರ್ ಹೊಡೆದು ಭರವಸೆ ಮೂಡಿಸಿದ್ದರು. ಆದರೆ ಕಡೆಗೂ ಬೌಲರ್ ಪಥಿರಾಣಾ ಮೇಲುಗೈ ಸಾಧಿಸಿದರು. ಕೇವಲ 10 ರನ್ ಬಿಟ್ಟುಕೊಟ್ಟರು.

ಸ್ಪೈಡರ್ ಕ್ಯಾಮ್- ದೂರು: ಆರ್‌ಸಿಬಿ ಬ್ಯಾಟರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಬ್ಯಾಟ್‌ಗೆ ಬಡಿದ ಚೆಂಡು ಎತ್ತರಕ್ಕೆ ಚಿಮ್ಮಿದಾಗ ಮಹೇಂದ್ರಸಿಂಗ್ ಧೋನಿ ಕ್ಯಾಚ್ ಮಾಡಿದರು. ಆದರೆ ಈ ಸಂದರ್ಭದಲ್ಲಿ ಸ್ಪೈಡರ್ ಕ್ಯಾಮೆರಾದ ಚಲನವಲನದಿಂದ ಅಸಮಾಧಾನಗೊಂಡರು. ಕೂಡಲೇ ಅಂಪೈರ್‌ಗೆ ಈ ಬಗ್ಗೆ ದೂರು ನೀಡಿದರು.

ಬ್ಯಾಟರ್‌ಗಳ ಅಬ್ಬರ: ಚೆನ್ನೈ ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಔಟಾದ ಋತುರಾಜ್ ಗಾಯಕವಾಡ ಹಾಗೂ ಕೊನೆಯ ಓವರ್‌ನಲ್ಲಿ ಕ್ರೀಸ್‌ಗೆ ಬಂದು ಅಜೇಯ 1 ರನ್ ಹೊಡೆದ ಮಹೇಂದ್ರಸಿಂಗ್ ಧೋನಿ ಬಿಟ್ಟರೆ ಚೆನ್ನೈ ತಂಡದ ಎಲ್ಲ ಉಳಿದ ಬ್ಯಾಟರ್‌ಗಳು ಸಿಕ್ಸರ್ ಗಳಿಸಿದರು.

ಸ್ಕೂಪ್, ಅಪ್ಪರ್ ಕಟ್, ಫ್ಲಿಕ್ ಹಾಗೂ ಡ್ರೈವ್‌ಗಳ ಭರ್ಜರಿ ಆಟವಾಡಿದ ನ್ಯೂಜಿಲೆಂಡ್‌ನ ಡೇವೊನ್ ಅಭಿಮಾನಿಗಳಿಗೆ ರಸದೌತಣ ನೀಡಿದರು. 16ನೇ ಓವರ್‌ನಲ್ಲಿ ಹರ್ಷಲ್ ಪಟೇಲ್‌ಗೆ ಕ್ಲೀನ್‌ಬೌಲ್ಡ್ ಆಗುವ ಮುನ್ನ ಡೇವೊನ್ ಎರಡು ಮಹತ್ವದ ಜೊತೆಯಾಟವಾಡಿದರು.

ಅಜಿಂಕ್ಯ ರಹಾನೆ (37; 20ಎ) ಅವರೊಂದಿಗೆ ಎರಡನೇ ವಿಕೆಟ್‌ಗೆ 74 ರನ್ ಸೇರಿಸಿದರು. ನಂತರ ಡೇವೊನ್ ಅವರು ಶಿವಂ ದುಬೆಯೊಂದಿಗೆ ಮೂರನೇ ವಿಕೆಟ್‌ಗೆ 80 ರನ್ ಸೇರಿಸಿ ತಂಡವನ್ನು ದ್ವಿಶತಕದ ಸಮೀಪ ತಂದು ನಿಲ್ಲಿಸಿದರು. ಸ್ಥಳೀಯ ಹುಡುಗ, ಆರ್‌ಸಿಬಿಯ ವೈಶಾಖ ವಿಜಯಕುಮಾರ್ ಈ ಪಂದ್ಯದಲ್ಲಿ ದುಬಾರಿಯಾದರು.

ಆತ್ಮವಿಶ್ವಾಸದಲ್ಲಿ ಮುಂಬೈ

ಹೈದರಾಬಾದ್ (ಪಿಟಿಐ): ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿರುವ ಮುಂಬೈ ಇಂಡಿಯನ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ಮಂಗಳವಾರ ಹಣಾಹಣಿ ನಡೆಸಲಿವೆ.

ಮೊದಲ ಎರಡು ಪಂದ್ಯಗಳನ್ನು ಸೋತಿದ್ದ ಉಭಯ ತಂಡಗಳು, ಬಳಿಕದ ಎರಡೂ ಪಂದ್ಯಗಳನ್ನು ಗೆದ್ದು ಆತ್ಮ-ವಿಶ್ವಾಸದಲ್ಲಿವೆ. ಆದ್ದರಿಂದ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗ-ಣದಲ್ಲಿ ಜಿದ್ದಾಜಿದ್ದಿನ ಹೋರಾಟ ನಿರೀ-ಕ್ಷಿಸಬಹುದು.

ಸೂರ್ಯಕುಮಾರ್ ಯಾದವ್ ಕೊನೆಗೂ ಲಯ ಕಂಡುಕೊಂಡಿರುವುದು ಮುಂಬೈ ಇಂಡಿಯನ್ಸ್ ತಂಡದ ಬಲವನ್ನು ಹೆಚ್ಚಿಸಿದೆ. ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಭಾನುವಾರ ನಡೆದಿದ್ದ ಪಂದ್ಯದಲ್ಲಿ ಅವರು 25 ಎಸೆತಗಳಲ್ಲಿ 43 ರನ್ ಗಳಿಸಿದ್ದರು. ಇಶಾನ್ ಕಿಶನ್ ಕೂಡಾ ಅಬ್ಬರದ ಆಟವಾಡಿದ್ದರು. ಕೋಲ್ಕತ್ತ ನೀಡಿದ್ದ 186 ರನ್‌ಗಳ ಗುರಿಯನ್ನು ಇನ್ನೂ 14 ಎಸೆತಗಳು ಇರುವಂತೆಯೇ ತಲುಪಿ, ಐದು ವಿಕೆಟ್‌ಗಳಿಂದ ಗೆದ್ದಿತ್ತು.

ಮೊದಲ ಎರಡು ಪಂದ್ಯಗಳಲ್ಲಿ ನೀರಸ ಆಟವಾಡಿದ್ದ ರೋಹಿತ್ ಶರ್ಮಾ ಬಳಗ, ಇದೀಗ ಪ್ರಬಲ ತಂಡವಾಗಿ ರೂಪುಗೊಳ್ಳುತ್ತಿದೆ. ತಿಲಕ್ ವರ್ಮಾ, ಗ್ರೀನ್ ಮತ್ತು ಟಿಮ್ ಡೇವಿಡ್ ಅವರೂ ಉತ್ತಮ ಲಯದಲ್ಲಿದ್ದಾರೆ.

ಸೂರ್ಯಕುಮಾರ್ ಯಾದವ್

ಅನುಭವಿ ಸ್ಪಿನ್ನರ್ ಪೀಯೂಷ್ ಚಾವ್ಲಾ ಮತ್ತು ಯುವ ಬೌಲರ್ ಹೃತಿಕ್ ಶೋಕೀನ್ ಅವರು ಪರಿಣಾಮಕಾರಿ ಬೌಲಿಂಗ್ ಮೂಲಕ ಗಮನ ಸೆಳೆದಿದ್ದಾರೆ. ಜೋಫ್ರಾ ಅರ್ಚರ್ ಅವರ ಅನುಪಸ್ಥಿತಿ-ಯಲ್ಲಿ ವೇಗದ ಬೌಲಿಂಗ್ ವಿಭಾಗದ ಶಕ್ತಿ ಅಲ್ಪ ಕುಂದಿದೆ. ಮೊದಲ ಪಂದ್ಯದಲ್ಲಿ ಮೊಣಕೈ ಗಾಯಕ್ಕೆ ಒಳಗಾಗಿದ್ದ ಅವರು ಬಳಿಕ ಕಣಕ್ಕಿಳಿದಿಲ್ಲ.

ಭಾನುವಾರ ಪದಾರ್ಪಣೆ ಮಾಡಿದ್ದ ಅರ್ಜುನ್ ತೆಂಡೂಲ್ಕರ್ ಅವರಿಗೆ ಮತ್ತೊಂದು ಅವಕಾಶ ನೀಡುವುದೇ ಎಂಬುದನ್ನು ನೋಡಬೇಕು.

ಏಡನ್ ಮರ್ಕರಂ ನೇತೃತ್ವದ ಹೈದರಾಬಾದ್ ತಂಡವೂ ಗೆಲುವಿನ ಓಟ ಮುಂದುವರಿಸುವ ತವಕದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್

ಅರ್ಜುನ್ ಸಹಜ ಆಟ ಆಡಬೇಕೆಂದು ಬಯಸಿದ್ದೆ: ಸಚಿನ್

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ತಂಡದ ಮೆಂಟರ್, ದಿಗ್ಗಜ ಆಟಗಾರ ಸಚಿನ್ ತೆಂಡೂಲ್ಕರ್ ಅವರು ಭಾನುವಾರ ನಡೆದ ಐಪಿಎಲ್ ಪಂದ್ಯದ ವೇಳೆ ಕೆಲಹೊತ್ತು ಡ್ರೆಸಿಂಗ್ ಕೊಠಡಿಯಲ್ಲಿ ಕುಳಿತಿದ್ದರು.

ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧದ ಪಂದ್ಯದೊಂದಿಗೆ ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದ ಮಗ ಅರ್ಜುನ್ ಅವರು ಒತ್ತಡಕ್ಕೆ ಒಳಗಾಗದೆ ಸಹಜ ಆಟ ಆಡಬೇಕು ಎಂಬುದು ಇದರ ಹಿಂದಿನ ಉದ್ದೇಶವಾಗಿತ್ತು.

ಮುಂಬೈ ಇಂಡಿಯನ್ಸ್‌ನ ಇತರ ಪಂದ್ಯಗಳ ವೇಳೆ ಸಚಿನ್ ಡಗ್‌ಔಟ್‌ನಲ್ಲಿ ಕುಳಿತಿರುತ್ತಿದ್ದರು. ಆದರೆ ಭಾನುವಾರದ ಪಂದ್ಯದಲ್ಲಿ ಕೆಕೆಆರ್ ಇನಿಂಗ್ಸ್‌ನ ಆರಂಭದ ಕೆಲವು ಓವರ್‌ಗಳಲ್ಲಿ ಅವರು ಡಗ್‌ಔಟ್‌ನಲ್ಲಿ ಕಾಣಿಸಿಕೊಳ್ಳಲಿಲ್ಲ.

'ಡಗ್‌ಔಟ್‌ನಲ್ಲಿ ಕುಳಿತರೆ ನನ್ನನ್ನು ಅಂಗಳದ ಬೃಹತ್ ಪರದೆಯಲ್ಲಿ ತೋರಿಸುತ್ತಿದ್ದರು. ನಾನು ಗಮನಿಸು-ತ್ತಿದ್ದೇನೆ ಎಂಬ ಕಾರಣ ಅರ್ಜುನ್ ತನ್ನ ಸಹಜ ಆಟದಿಂದ ದೂರ ಹೋಗುವ ಸಾಧ್ಯತೆಯಿತ್ತು. ಆದ್ದರಿಂದ ಡ್ರೆಸಿಂಗ್ ಕೊಠಡಿಯೊಳಗೆ ಕುಳಿತೆ' ಎಂದು ಸಚಿನ್ ಹೇಳಿದರು.

'ಇದು ಹೊಸ ಅನುಭವ ನೀಡಿತು. ಅರ್ಜುನ್ ಸ್ಪರ್ಧಾತ್ಮಕ ಪಂದ್ಯದಲ್ಲಿ ಆಡುವುದನ್ನು ನಾನು ಇದುವರೆಗೆ ನೋಡಿರಲಿಲ್ಲ' ಎಂದು ತಿಳಿಸಿದರು.

ಪ್ರಸಾರ ಹಕ್ಕು: ₹ 78 ಕೋಟಿ ಮನ್ನಾ?

ನವದೆಹಲಿ (ಪಿಟಿಐ): ಸ್ಟಾರ್ ಇಂಡಿಯಾ ವಾಹಿನಿಯೊಂದಿಗೆ ಮಾಧ್ಯಮ ಪ್ರಸಾರ ಹಕ್ಕು ಒಪ್ಪಂದ (ಎಂಆರ್‌ಎ) ಮಾಡಿಕೊಂಡಿದ್ದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಒಂದು ಪಂದ್ಯದ ಶುಲ್ಕವಾದ ₹ 78.90 ಕೋಟಿ ಮನ್ನಾ ಮಾಡಲು ನಿರ್ಧರಿಸಿದೆ.

2018–2023ರ ಐದು ವರ್ಷಗಳ ಅವಧಿಗೆ 102 ಪಂದ್ಯಗಳಿಗೆ ₹ 6,138.1 ಕೋಟಿ ಪಾವತಿಸಲು ಸ್ಟಾರ್, ಬಿಸಿಸಿಐ ಜೊತೆಗೆ ಒಪ್ಪಂದ ಮಾಡಿಕೊಂಡಿತ್ತು. ಆದರೆ ಮಾರ್ಚ್ 31ಕ್ಕೆ ಅಂತ್ಯವಾದ ಈ ಅವಧಿಯಲ್ಲಿ ಬಿಸಿಸಿಐ 103 ಪಂದ್ಯಗಳನ್ನು ಆಡಿಸಿದೆ.

'ಸ್ಟಾರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನೊಂದಿಗೆ 2018ರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಈಗ ಒಂದು ಪಂದ್ಯದ ಶುಲ್ಕವನ್ನು ಮನ್ನಾ ಮಾಡಲು ನಿರ್ಧರಿಸಲಾಗಿದೆ' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆದಾಗ್ಯೂ, ಒಪ್ಪಂದದ ಪ್ರಕಾರ ಬಿಸಿಸಿಐ 102 ಪಂದ್ಯಗಳನ್ನೇ ಆಡಿಸುವ ನಿರೀಕ್ಷೆಯಿತ್ತು. ಹೀಗಾಗಿ ಒಂದು ಪಂದ್ಯದ ಶುಲ್ಕ ಮನ್ನಾ ಮಾಡುವ ಸನ್ನಿವೇಶವೇ ಉದ್ಭವಿಸದು ಎಂದು ಸ್ಟಾರ್ ಇಂಡಿಯಾದ ಮೂಲಗಳು ಹೇಳಿವೆ.

ಹರ್ಷಲ್ ಓವರ್ ಮೊಟಕು

ಇನಿಂಗ್ಸ್‌ನ ಕೊನೆಯ ಓವರ್ ಬೌಲಿಂಗ್ ಮಾಡಿದ ಹರ್ಷಲ್ ಪಟೇಲ್ ಎರಡು ನೋಬಾಲ್ ಹಾಗೂ ಒಂದು ವೈಡ್ ಹಾಕಿದರು. ಬ್ಯಾಟರ್ ಭುಜದೆ-ತ್ತರಕ್ಕೆ ಎರಡು ಎಸೆತ ಹಾಕಿದರು. ಇದರಿಂದಾಗಿ 'ಹಂಗಾಮಿ ನಾಯಕ' ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಹರ್ಷಲ್ ಓವರ್ ಮೊಟಕುಗೊಳಿಸಿದರು. ಉಳಿದ ನಾಲ್ಕು ಎಸೆತಗಳನ್ನು ತಾವೇ ಬೌಲ್ ಮಾಡಿದರು.

ಧೋನಿ ಒಂದು ರನ್: ಕೊನೆಯ ಓವರ್‌ನ ನಾಲ್ಕನೇ ಎಸೆತದಲ್ಲಿ ಜಡೇಜ ಔಟಾದಾಗ ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂತಸದ ಅಲೆಗಳು ಎದ್ದವು. ಇದಕ್ಕೆ ಕಾರಣ ಮಹೇಂದ್ರಸಿಂಗ್ ಧೋನಿ ಕ್ರೀಸ್‌ಗೆ ಬಂದಿದ್ದು. ಮುಗಿಲು ಮುಟ್ಟಿದ ಘೋಷಣೆಗಳು ಪ್ರತಿಧ್ವನಿಸಿದವು. ಧೋನಿ ಒಂದು ರನ್ ಗಳಿಸಿದರು.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	5	4	1	0	8	1.354
ಲಖನೌ	5	3	2	0	6	0.761
ಚೆನ್ನೈ	5	3	2	0	6	0.265
ಗುಜರಾತ್	5	3	2	0	6	0.192
ಪಂಜಾಬ್	5	3	2	0	6	-0.109
ಕೋಲ್ಕತ್ತ	5	2	3	0	4	0.320
ಬೆಂಗಳೂರು	5	2	3	0	4	-0.318
ಮುಂಬೈ	4	2	2	0	4	-0.389
ಹೈದರಾಬಾದ್	4	2	2	0	4	-0.822
ಡೆಲ್ಲಿ	5	0	5	0	0	-1.488

* ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	259

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಚಾಹಲ್	ರಾಜಸ್ಥಾನ	11

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 6ಕ್ಕೆ 226 (20 ಓವರ್‌ಗಳಲ್ಲಿ)

ಋತುರಾಜ್ ಸಿ ಪಾರ್ನೆಲ್ ಬಿ ಸಿರಾಜ್ 3(6ಎ)
ಡೇವೊನ್ ಬಿ ಹರ್ಷಲ್ 83 (45ಎ, 4X6, 6X6)
ಅಜಿಂಕ್ಯ ಬಿ ಹಸರಂಗಾ 37 (20ಎ, 4X3, 6X2)
ದುಬೆ ಸಿ ಸಿರಾಜ್ ಬಿ ಪಾರ್ನೆಲ್ 52 (27ಎ, 4X2, 6X5)
ರಾಯುಡು ಸಿ ದಿನೇಶ್ ಬಿ ವೈಶಾಖ 14 (6ಎ, 4X1, 6X1)
ಮೋಯಿನ್ ಔಟಾಗದೆ 19 (9ಎ, 6X2)
ಜಡೇಜ ಸಿ (ಬದಲಿ ಫೀಲ್ಡರ್) ಪ್ರಭುದೇಸಾಯಿ ಬಿ ಮ್ಯಾಕ್ಸ್‌ವೆಲ್ 10 (8ಎ, 6X1)
ಧೋನಿ ಔಟಾಗದೆ 1 (1ಎ)
ಇತರೆ: 7 (ಲೆಗ್‌ಬೈ 1, ವೈಡ್ 4, ನೋಬಾಲ್ 2)
ವಿಕೆಟ್ ಪತನ: 1–16 (ಋತುರಾಜ್ ಗಾಯಕವಾಡ್;2.2), 2–90 (ಅಜಿಂಕ್ಯ ರಹಾನೆ; 9.3), 3–170 (ಡೇವೊನ್ ಕಾನ್ವೆ;15.4), 4–178 (ಶಿವಂ ದುಬೆ; 16.3), 5–198 (ಅಂಬಟಿ ರಾಯುಡು; 17.4), 6–224 (ರವೀಂದ್ರ ಜಡೇಜ; 19.4)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–30–1, ವೇಯ್ನ್ ಪಾರ್ನೆಲ್ 4–0–48–1, ವೈಶಾಖ ವಿಜಯಕುಮಾರ್ 4–0–62–1, ಗ್ಲೆನ್ ಮ್ಯಾಕ್ಸ್‌ವೆಲ್ 2.4–0–28–1, ವಣಿಂದು ಹಸರಂಗಾ 2–0–21–1, ಹರ್ಷಲ್ ಪಟೇಲ್ 3.2–0–36–1

ರಾಯಲ್ ಚಾಲೆಂಜರ್ಸ್ ಬೆಂಗಳೂರು 8ಕ್ಕೆ 218 (20 ಓವರ್)

ವಿರಾಟ್ ಕೊಹ್ಲಿ ಬಿ ಆಕಾಶ್ 6 (4ಎ, 4X1)
ಡುಪ್ಲೆಸಿ ಸಿ ಧೋನಿ ಬಿ ಮೋಯಿನ್ 62 (33ಎ, 4X5, 6X4)
ಲೊಮ್ರೊರ್ ಸಿ ಋತುರಾಜ್ ಬಿ ತುಷಾರ್ 0 (5ಎ)
ಮ್ಯಾಕ್ಸ್‌ವೆಲ್ ಸಿ ಧೋನಿ ಬಿ ತೀಕ್ಷಣ 76 (36ಎ, 4X3, 6X8)
ಶಾಬಾಜ್ ಸಿ ಋತುರಾಜ್ ಬಿ ಪಥಿರಾಣ 12 (10ಎ, 6X1)
ದಿನೇಶ್ ಸಿ ತೀಕ್ಷಣ ಬಿ ತುಷಾರ್ 28 (14ಎ, 4X3, 6X1)
ಸುಯಶ್ ಸಿ ಜಡೇಜ ಬಿ ಪಥಿರಾಣಾ 19 (11ಎ, 6X2)
ಪಾರ್ನೆಲ್ ಸಿ ದುಬೆ ಬಿ ತುಷಾರ್ 2 (5ಎ)
ಹಸರಂಗ ಔಟಾಗದೆ 2 (2ಎ)
ಇತರೆ: 11 (ಲೆಗ್‌ಬೈ 5, ವೈಡ್ 6)
ವಿಕೆಟ್ ಪತನ: 1-6 (ವಿರಾಟ್ ಕೊಹ್ಲಿ, 0.4), 2-15 (ಮಹಿಪಾಲ್ ಲೊಮ್ರೊರ್, 1.6), 3-141 (ಗ್ಲೆನ್ ಮ್ಯಾಕ್ಸ್‌ವೆಲ್, 12.1), 4-159 (ಫಫ್ ಡುಪ್ಲೆಸಿ, 13.6), 5-191 (ದಿನೇಶ್ ಕಾರ್ತಿಕ್, 16.5), 6-192 (ಶಾಬಾಜ್ ಅಹಮದ್,17.1), 7-197 (ವೇಯ್ನ್ ಪಾರ್ನೆಲ್, 18.1), 8-218 (ಸುಯಶ್ ಪ್ರಭುದೇಸಾಯಿ, 19.6)
ಬೌಲಿಂಗ್: ಆಕಾಶ್ ಸಿಂಗ್ 3–0–35–1, ತುಷಾರ್ ದೇಶಪಾಂಡೆ 4–0–45–3, ಮಹೀಶ್ ತೀಕ್ಷಣ 4–0–41–1, ರವೀಂದ್ರ ಜಡೇಜ 4–0–37–0, ಮತೀಶ ಪಥಿರಾಣಾ 4–0–42–2, ಮೋಯಿನ್ ಅಲಿ 1–0–13–1
ಪಂದ್ಯಶ್ರೇಷ್ಠ: ಡೇವೊನ್ ಕಾನ್ವೆ (ಚೆನ್ನೈ ಸೂಪರ್ ಕಿಂಗ್ಸ್)

ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ 8 ರನ್ ಗೆಲುವು

ಮ್ಯಾರಥಾನ್: ಚೆಬೆಟ್‌ಗೆ ಕಿರೀಟ

ಬೋಸ್ಟನ್, ಅಮೆರಿಕ (ಎಎಫ್‌ಪಿ): ಕೆನ್ಯಾದ ಇವಾನ್ಸ್ ಚೆಬೆಟ್ ಅವರು ಬೋಸ್ಟನ್ ಮ್ಯಾರಥಾನ್‌ನ ಪುರುಷರ ವಿಭಾಗದಲ್ಲಿ ಸೋಮವಾರ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಚೆಬೆಟ್

2022ರ ಚಾಂಪಿಯನ್ ಚೆಬೆಟ್, 2 ತಾಸು 5 ನಿಮಿಷ 54 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇಲ್ಲಿ ಸತತ ಎರಡನೇ ಬಾರಿ ಪ್ರಶಸ್ತಿ ಜಯಿಸಿದ ಎರಡನೇ ಅಥ್ಲೀಟ್ ಎನಿಸಿಕೊಂಡರು ಚೆಬೆಟ್. ಈ ಹಿಂದೆ ಅವರದೇ ದೇಶದ ಕಿಪ್ರೊಯಿಚ್ ಚೆರುಯಿಯೊಟ್ ಹ್ಯಾಟ್ರಿಕ್ (2006–2008) ಸಾಧಿಸಿದ್ದರು.

ತಾಂಜಾನಿಯಾದ ಗೇಬ್ರಿಯಲ್ ಗಿಯ್ (2 ತಾಸು 6.04 ನಿ.) 2ನೇ ಹಾಗೂ ಕೆನ್ಯಾದ ಬೆನ್ಸನ್ ಕಿಪ್ರುಟೊ (2 ತಾಸು 6.04 ನಿ.) 3ನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಕೆನ್ಯಾದ ಹೆಲೆನ್ ಒಬಿರಿ ಚಾಂಪಿಯನ್ ಆದರು.

ಟೆನಿಸ್: ಮಲ್ಲೇಶ್ವರಂ ಕ್ಲಬ್ ಪಾರಮ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರಂ ಕ್ಲಬ್ ತಂಡದ ಆಟಗಾರರು ರೋಲಿಂಗ್ ಶೀಲ್ಡ್ ಬೌರಿಂಗ್ ಇನ್‌ಸ್ಟಿಟ್ಯೂಟ್ ಆಯೋಜಿಸಿದ್ದ ಅಂತರ ಕ್ಲಬ್ ಟೆನಿಸ್ ಟೂರ್ನಿಯ 45 ಮತ್ತು 55 ವರ್ಷಕ್ಕಿಂತ ಮೇಲಿನವರ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಭಾನುವಾರ ಕೊನೆಗೊಂಡ ಟೂರ್ನಿಯ 45 ವರ್ಷಕ್ಕಿಂತ ಮೇಲಿನವರ ವಿಭಾಗದ ಫೈನಲ್‌ನಲ್ಲಿ ಮಲ್ಲೇಶ್ವರಂ ಕ್ಲಬ್‌ನ ಶೇಷಗಿರಿ/ ಲೋಕೇಶ್ 3-6, 6-3, 10-5ರಿಂದ ಸದಾಶಿವನಗರ ಕ್ಲಬ್‌ನ ಮದನ್/ ಸಂದೇಶ್ ಅವರನ್ನು ಪರಾಭವಗೊಳಿ-ಸಿದರು. 55 ವರ್ಷಕ್ಕಿಂತ ಮೇಲಿನವರ ಪ್ರಶಸ್ತಿ ಸುತ್ತಿನಲ್ಲಿ ಶಶಿಧರ್ ಲೋಕೇಶ್ ಅವರಿಗೆ 6-4, 5-7, 10-8ರಿಂದ ಸದಾ-ಶಿವನಗರದ ಶಶಿಕುಮಾರ್–ಮಹೇಶ್ ಕಾರ್ಲೊ ವಿರುದ್ಧ ಜಯ ಒಲಿಯಿತು.

35 ವರ್ಷಕ್ಕಿಂತ ಮೇಲಿನವರ ವಿಭಾಗದಲ್ಲಿ ಮಲ್ಲೇಶ್ವರಂ ಕ್ಲಬ್ ರನ್ನರ್ಸ್‌ಅಪ್ ಆಯಿತು. ಫೈನಲ್‌ನಲ್ಲಿ ಸದಾಶಿವನಗರ ಕ್ಲಬ್‌ನ ಮಹೇಶ್ ರಾವ್–ರವಿಕಿರಣ್ ಭಟ್ 6-0, 6-1ರಿಂದ ಮಲ್ಲೇಶ್ವರಂನ ಶ್ರೀನಿವಾಸ–ಕೇಶವಕುಮಾರ್ ವಿರುದ್ಧ ಗೆದ್ದರು.

ಸಿಂಗಲ್ಸ್ ವಿಭಾಗದಲ್ಲಿ ಸಿಟಿ ಇನ್‌ಸ್ಟಿ-ಟ್ಯೂಟ್‌ನ ಅಜಯ್ ಸಿ.ಡಿ. 9–3ರಿಂದ ಇಂಡಿಯನ್ ಜಿಮ್‌ಖಾನಾ ಕ್ಲಬ್‌ನ ಅಂಕುಶ್ ಎಸ್. ಅವರನ್ನು ಸೋಲಿಸಿ ಪ್ರಶಸ್ತಿ ಜಯಿಸಿದರು.

ಟೈಗರ್ ಕಪ್ ಕ್ರಿಕೆಟ್: ಪಿಇಎಸ್‌ಸಿಎಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಇಎಸ್‌ಸಿಎ ತಂಡವು ಇಲ್ಲಿ ಆರಂಭವಾದ ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ರಾಜರಾಜೇಶ್ವರಿ ನಗರದ ಗ್ಲೋಬಲ್ ತಾಂತ್ರಿಕ ಅಕಾಡೆಮಿ ಕಾಲೇಜು ಮೈದಾನದಲ್ಲಿ ಸೋಮವಾರ ನಡೆದ 12 ವರ್ಷದೊಳಗಿನ-ವರ ಪಂದ್ಯದಲ್ಲಿ ಪಿಇಎಸ್‌ಸಿಎ 40 ರನ್‌ಗಳಿಂದ ಸೆಂಟರ್ ಫಾರ್ ಕ್ರಿಕೆಟ್ ಎಕ್ಸ್‌ಲೆನ್ಸ್ (ಸಿಸಿಇ) ತಂಡವನ್ನು ಸೋಲಿಸಿತು.

ಆಲ್‌ರೌಂಡ್ (40 ರನ್, 20ಕ್ಕೆ 2 ವಿಕೆಟ್) ಆಟವಾಡಿದ ಪಿಇಎಸ್‌ಸಿಎ ತಂಡದ ಫಹೀಂ ಅವರು 'ಟೈಗರ್ ಆಫ್ ದ ಮ್ಯಾಚ್' ಗೌರವ ಪಡೆದರು.

ಸಂಕ್ಷಿಪ್ತ ಸ್ಕೋರು: ಪಿಇಎಸ್‌ಸಿಎ: 17.3 ಓವರ್‌ಗಳಲ್ಲಿ 157 (ಫಹೀಮ್ 40, ಕಾರ್ತಿಕೇಯ 33, ಚಿರಂತನ್ 43ಕ್ಕೆ 4, ರಾಘವ್ ಆಚಾರ್ 20ಕ್ಕೆ 3). ಸಿಸಿಇ: 25.3 ಓವರ್‌ಗಳಲ್ಲಿ 117 (ಮೋಹಿತ್ 30, ಕಿಶನ್ 24; ಫಹೀಂ 24ಕ್ಕೆ 2, ಕಾರ್ತಿಕೇಯ 12ಕ್ಕೆ 2). ಫಲಿತಾಂಶ: ಪಿಇಎಸ್‌ಸಿಎ ತಂಡಕ್ಕೆ 40 ರನ್‌ಗಳ ಜಯ